ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 2
ಸಂಚಿಕೆ 11
ಜನವರಿ – ಮಾರ್ಚ್ 1973

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore.
Vol 2. No. 1. January-March 1973. pp. 166+iv.

Chief Editor : Dr. G. S. Sivarudrappa

ಪ್ರಧಾನ ಸಂಪಾದಕರು :
ಡಾ. ಜಿ. ಎಸ್. ಶಿವರುದ್ರಪ್ಪ

ಸಂಪಾದಕರು:
ಡಾ. ಎಂ. ಚಿದಾನಂದ ಮೂರ್ತಿ
ಡಾ. ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
ಡಾ. ಸೂರ್ಯನಾಥ ಕಾಮತ್

ವಾರ್ಷಿಕ ಚಂದಾ : ರೂ. 6-00
ರೂ. 4-00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-1

ಮುದ್ರಕರು : ಎಂ. ಎಸ್. ಚಿಂತಾಮಣಿ, ಈಸ್ಟರ್ನ್ ಪ್ರೆಸ್, ಬೆಂಗಳೂರು-560029

ಪರಿವಿಡಿ

'ಓಣಂ' ದೀಪಗಳು

ಕೆ. ಎಸ್. ನ.

ತಿರುಚ್ಚೂರ್, ಕೋಟಿಕೋಡ್, ಕೊಚ್ಚಿ, ಕೊಟ್ಟಾಯಂ ;
ಅಲ್ಲಿಂದ ನೇರ ತ್ರಿವೇಂದ್ರಮಿಗೆ. — ಬಿಸಿಲರ್ಧ,
ಮಳೆಯರ್ಧ ಈ ಪಯಣದಲ್ಲಿ : ಎರಡೂ ಕಡೆಗೆ
ಮನೆಮನೆಗಳಲ್ಲಿ ಕೊಕ್ಕರೆ – ಬಿಳಿಯ ಪತ್ತಲದ
ಸೆರಗ ಸರಿಪಡಿಸುತ್ತ ಕೆಂಪು ಹೂಹಸೆಯಿಡುವ
ಮೀನಾಕ್ಷಿಯರ ಕಣ್ಣ ಹೊರಳು, ನಸುಗೆಂಪು ನಗೆ ;
ಹಸಿರ ತೋರಣದಲ್ಲಿ ಕೆಂಪಿನಕ್ಷರ ಮಾಲೆ ;
ಕವಿ, ವಾಗ್ಮಿ, ಪಂಡಿತರ ಸ್ನೇಹಮಯ ಕೈಕುಲುಕು ;
ಕಡಲ ತಡಿಯಲ್ಲಿ ಕಿರಿದೋಣಿಗಳ ದೀಪಗಳ
ಬಿಡುವಿರದ ಓಡಾಟ ದೂರ ನೌಕೆಯವರೆಗೆ.
ಎಲ್ಲೆಲ್ಲು ಹಸೆ, ದೀಪ, ಹೂವು, ಬೆಳಕಿನ ಹೊನಲು ;
ಬೆಳಕಿನಕ್ಷತೆ ಚೆಲ್ಲಿದಲೆಯ ನೀಲಿಯ ಉರುಳು ;
ಓನ್ನೀರ ಕನ್ನಡಿಗೆ ಇಳಿದ ತೆಂಗಿನ ನೆರಳು ;
ಬೆಳ್ದಿಂಗಳಲ್ಲಿ ಹಬ್ಬಿತ್ತು 'ಓಣಂ' ಇರುಳು.

ವಾಸ್ತವವಾದ ಮತ್ತು ಸ್ವಭಾವೋಕ್ತಿ

ಜಿ. ಎಸ್. ಶಿವರುದ್ರಪ್ಪ

ವಾಸ್ತವವಾದ (Realism) ಎಂಬುದು, ಒಂದು ಉದ್ದೇಶಪೂರ್ವಕವಾದ ಸಾಹಿತ್ತಿಕ ಚಳುವಳಿಯಾಗಿ ಕಾಣಿಸಿಕೊಂಡದ್ದು ಕ್ರಿ. ಶ. 1830ರ ಫ್ರಾನ್ಸ್ ಮಹಾಕ್ರಾಂತಿಯ ನಂತರ. ಕ್ರಿ. ಶ. 1850 ರಿಂದ 1880ರ ಅವಧಿಯೊಳಗೆ ಅದು ಇಡೀ ಪಾಶ್ಚಾತ್ಯ ಸಾಹಿತ್ಯವನ್ನೆಲ್ಲ ತುಂಬಿಕೊಂಡಿತು. ಇದು ವಿಶೇಷವಾಗಿ ಪ್ರಕಟವಾದದ್ದು, ಕಾದಂಬರಿ ಹಾಗೂ ನಾಟಕಗಳಲ್ಲಿ.

ವಾಸ್ತವವಾದ ಎಂದರೆ, ಸುತ್ತಣ ಬದುಕನ್ನು ಹಾಗೂ ನಿಸರ್ಗವನ್ನು, ಅತ್ಯಂತ ಸಾಧ್ಯವಾದಷ್ಟು ಯಥಾವತ್ತಾಗಿ ಚಿತ್ರಿಸಬೇಕೆನ್ನುವ ಒಂದು ಮನೋಧರ್ಮ. ಸಾಹಿತ್ಯದಲ್ಲಿ ಕಂಡದ್ದನ್ನು ಕಂಡಹಾಗೆ ಚಿತ್ರಿಸಬೇಕೆನ್ನುವ ಈ ಮನೋಧರ್ಮ ಎಲ್ಲ ಕಾಲದ ಸಾಹಿತ್ಯದ ಉದ್ದೇಶಕ್ಕೆ ಹೊರತಾದುವಲ್ಲವಾದರೂ, ಹತ್ತೊಂಬತ್ತನೆಯ ಶತಮಾನದ ವೇಳೆಗೆ ಅದೊಂದು ವಿಶಿಷ್ಟವಾದ ಪಂಥವಾಗಿ ರೂಪುಗೊಂಡಿತು. ಅಲ್ಲದೆ ಇದು ಹಿಂದಿನ ಸಾಹಿತ್ಯೋದ್ದೇಶಗಳಿಂದ ಭಿನ್ನವಾದ, ಗಾಢವಾದ ಸಾಮಾಜಿಕ ಸಂಪರ್ಕವನ್ನು ಹಾಗೂ ಅರಿವನ್ನು ಸ್ಥಾಪಿಸಿಕೊಂಡು ಸಾಹಿತಿಗಳ ವಿಶಿಷ್ಟ ದೃಷ್ಟಿಕೋನವನ್ನು ಪ್ರತಿಪಾದಿಸುತ್ತದೆ.

ಪಾಶ್ಚಿಮಾತ್ಯ ಸಾಹಿತ್ಯ ಹಾಗೂ ಕಲೆಯಲ್ಲಿ ವಾಸ್ತವವಾದಕ್ಕೆ ಹಿಂದೆ ಮತ್ತು ಹಿನ್ನೆಲೆಯಾಗಿ ನಾವು ಎರಡು ಪ್ರಮುಖ ಮನೋಧರ್ಮಗಳನ್ನು ಗುರುತಿಸಬಹುದು. 'ಕ್ಲಾಸಿಕಲ್' ಮತ್ತು 'ರೊಮ್ಯಾಂಟಿಕ್' ಎಂದು ಅವುಗಳನ್ನು ಹೆಸರಿಸಲಾಗಿದೆ. 'ಕ್ಲಾಸಿಕಲ್' ಎಂದರೆ ಮಹಾಕಾವ್ಯ ಪರಂಪರೆಯ ಸಾಹಿತ್ಯ ನಿರ್ಮಿತಿಯ ಕಾಲ. ಆ ಕಾಲದ ಕವಿಗಳ ಕಾವ್ಯದ ವಸ್ತು ಪ್ರಧಾನವಾಗಿ ವೀರಾಧಿವೀರರ, ರಾಜಾಧಿರಾಜರ, ಮಾನವವರ್ಗದಲ್ಲಿ ವಿಶಿಷ್ಟ ಗೌರವಗಳನ್ನು ಗಳಿಸಿಕೊಂಡವರ ಕಥನ, ಅಲ್ಲಿನ ವ್ಯಕ್ತಿಗಳು ಅಂದಂದಿನ ಸಮಾಜದ ವಾಸ್ತವ ಸ್ಥಿತಿಯನ್ನು ಪ್ರತಿನಿಧಿಸುವರೆನ್ನುವುದಕ್ಕಿಂತ, ಆ ಸಮಾಜದ ಎತ್ತರದ ಸ್ತರವೊಂದನ್ನು ಹಾಗೂ ಅಂದಿನ ಸಾಮಾಜಿಕ ಮೌಲ್ಯಗಳನ್ನು ಆದರ್ಶಗಳನ್ನು ಪ್ರತಿನಿಧಿಸುವಂತೆ ಇರುತ್ತಾರೆ ಎನ್ನುವುದು ಹೆಚ್ಚು ಸಮರ್ಪಕ. ಒಂದು ರೀತಿಯಲ್ಲಿ ದೈನಂದಿನ ಸರಳ-ಸಾಧಾರಣ ಜೀವನ ಚಿತ್ರಣದ ಕಡೆಗೆ ಇಲ್ಲಿ ಗಮನ ಕಡಿಮೆ. ಇಂಥ 'ಮಾರ್ಗ ಸಾಹಿತ್ಯ'ದ ಕವಿಗಳು ಬಳಸುವ ಭಾಷೆ ಸಾಕಷ್ಟು ಪ್ರೌಢವೂ, ಗಂಭೀರವೂ ಆಗಿರುವುದೇ ಹೊರತು, ಅಂದಂದಿನ ಜನದ ಯಥಾವತ್ತಾದ ಭಾಷೆಯ

ಬಳಕೆಯನ್ನು ಅವುಗಳಲ್ಲಿ ಕಾಣುವುದು ಅಪರೂಪ. ಕನ್ನಡ ಕಾವ್ಯ ಪರಂಪರೆಯಲ್ಲೂ ಈ ಬಗೆಯ ಮಾರ್ಗ ಕಾವ್ಯಗಳ ಕಾಲವನ್ನು ಕಾಣಬಹುದು. ಎಲ್ಲಿ ಕಾವ್ಯದ ಭಾಷೆ ಆಲಂಕಾರಿಕವೂ ಪ್ರೌಢವೂ ಆಗಿ ಯಾವುದೋ ಒಂದು ಎತ್ತರದಲ್ಲಿ ನಿಂತಂತೆ ತೋರುತ್ತದೆಯೋ, ಮತ್ತು ಅದಕ್ಕನುಸಾರವಾದ ರಾಜ-ಮಹಾರಾಜರ ಸಿದ್ಧ ಪ್ರಸಿದ್ಧ ಐತಿಹಾಸಿಕ-ಪೌರಾಣಿಕ ವ್ಯಕ್ತಿಗಳ 'ಉದಾತ್ತ ನಾಯಕ'ರ ಕಥನದಲ್ಲಿ ತೊಡಗುತ್ತದೋ ಆಗ ಅದು ಸಹಜವಾಗಿಯೇ 'ಪಂಡಿತರುಂ ವಿವಿಧ ಕಳಾಮಂಡಿತರುಂ' ಕೇಳತಕ್ಕ ಕೃತಿಯಾಗುತ್ತದೆ. ಸಾಹಿತ್ಯ ಈ ಬಗೆಯ ಆದರ್ಶದ ನಿಲುವಿಗೇರಿ, ವಾಸ್ತವದ ಸಂಪರ್ಕವನ್ನು ಕಡಿದುಕೊಳ್ಳತೊಡಗಿದಾಗ, ಸಹಜವಾಗಿಯೇ ವಿಚಾರವಂತರಿಂದ ಪ್ರತಿಭಟನೆ ಮೊದಲಾಗುತ್ತದೆ. ಆಗ ಕಾವ್ಯದ ವಸ್ತುವನ್ನು ಪೌರಾಣಿಕ ಐತಿಹಾಸಿಕ ಸ್ತರಗಳಿಂದ, ನಮಗೆ ಚಿರಪರಿಚಿತವಾದ ನೆಲದ ನೆಲೆಗೆ ತರುವ, ದೈನಂದಿನ ಸರಳ ಸಾಮಾನ್ಯವಾದ ಭಾಷೆಯನ್ನು ಕಾವ್ಯಭಾಷೆಯನ್ನಾಗಿ ರೂಢಿಸುವ ಚಳುವಳಿಯೊಂದು ರೂಪುತಾಳುವುದು ಅನಿವಾರ್ಯ. ಪಾಶ್ಚಾತ್ಯ ಸಾಹಿತ್ಯದಲ್ಲಿ ಈ ಅನಿವಾರ್ಯತೆ ಪ್ರಾಪ್ತವಾದದ್ದು ಹತ್ತೊಂಬತ್ತನೆ ಶತಮಾನದ ಮೊದಲ ಭಾಗದಲ್ಲಿ ಕಾಣಿಸಿಕೊಂಡ ರೊಮ್ಯಾಂಟಿಕ್ ಚಳುವಳಿಯಿಂದ. ಈ ಚಳುವಳಿಯ ಮುಖ್ಯ ಲಕ್ಷಣ, ದೈನಂದಿನ ಸರಳ ಸಾಧಾರಣ ಸಂಗತಿಗಳನ್ನು ಕಾವ್ಯವಸ್ತುವನ್ನಾಗಿ ಮಾಡಿಕೊಳ್ಳುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಜನದ ಆಡುಮಾತನ್ನೆ ಸಾಹಿತ್ಯ ಭಾಷೆಯನ್ನಾಗಿ ಮಾಡುವುದು. ಈ ಒಂದು ಪ್ರಯತ್ನ ತಕ್ಕಷ್ಟು ಸಫಲವಾದರೂ, ಈ 'ರೊಮ್ಯಾಂಟಿಕ್' ಸಾಹಿತಿಗಳು ನಿಸರ್ಗದ ಚೆಲುವುಗಳ ಕಡೆಗೆ ಮತ್ತು ಆದರ್ಶಗಳನ್ನು ಎತ್ತಿಹಿಡಿಯುವ ಕಡೆಗೆ ಹೆಚ್ಚು ಗಮನವನ್ನು ಕೇಂದ್ರೀಕರಿಸಿದರು. ಹಿಂದಿನ 'ಕ್ಲಾಸಿಕಲ್' ಸಾಹಿತಿಗಳಿಗಿಂತ ಇವರು ಹೆಚ್ಚು ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸುವಂತೆ ತೋರಿದರೂ, ಅವರು ವಾಸ್ತವವನ್ನು, ಒಂದು ಬಗೆಯ ಆದರ್ಶಕ್ಕೇರಿಸುವ ತಾತ್ವಿಕ ಹಾಗೂ ಅಲೌಕಿಕ ಸಿದ್ಧಾಂತಗಳಿಂದ ಬಿಡಿಸಿಕೊಂಡು ನೋಡಲು ಸಾಧ್ಯವಾಗಲಿಲ್ಲ. "ರೊಮ್ಯಾಂಟಿಕ್ ಧೋರಣೆ ಏನಾದರೂ, ಸಾಮಾಜಿಕ ಅಸಂಗತಿಗಳನ್ನು ಸಮಗ್ರವಾಗಿ ಗ್ರಹಿಸಲಾರದೆ, ವ್ಯಕ್ತಿಯ ಪಾತ್ರವನ್ನು ಉತ್ಪ್ರೇಕ್ಷಿಸಿ, ಆತನ ಅಂತರನುಭವವವೇ ಸರ್ವಸ್ವವೆಂಬ ಭ್ರಮೆಯಲ್ಲಿ, ಹೊರಜಗತ್ತಿನೊಂದಿಗೆ ಸಂಬಂಧವನ್ನು ಕಡಿದುಕೊಳ್ಳುವಂತೆ ಮಾಡಿತು".[1] ಆದಕಾರಣ ರೊಮ್ಯಾಂಟಿಕ್ ಧೋರಣೆಗೆ ಪ್ರತಿಯಾಗಿ, ಅದರ ಮುಂದಿನ ಕಾಲದಲ್ಲಿ ಬಂದ ವಾಸ್ತವವಾದ (Realism) ಫ್ರೆಂಚ್ ಹಾಗೂ ರಷ್ಯನ್ ಲೇಖಕರಿಂದ ಒಂದು ಹೊಸ ತಿರುವನ್ನು ಪಡೆಯಿತು ಫ್ರಾನ್ಸಿನಲ್ಲಿ ಬಾಲ್‌ಜಾಕ್ ಮತ್ತು ಫ್ಲಾಬರ್ಟ್; ರಷ್ಯಾದಲ್ಲಿ ಟರ್ಗನೀವ್, ಟಾಲ್‌ಸ್ಟಾಯ್ ಡೊಸ್ಟೊವಸ್ಕಿ; ಇಂಗ್ಲೆಂಡಿನಲ್ಲಿ ಥ್ಯಾಕರೆ, ಜಾರ್ಜ್ ಇಲಿಯೆಟ್, ಆರ್ನಾಲ್ಡ್ ಬೆನೆಟ್; ಜರ್ಮನಿಯಲ್ಲಿ ಕೆಲ್ಲರ್, ಫಾಂಟೇಯನ್. ಗೋಥೆಲ್ಫ್ ಥಾಮಸ್‌ಮಾನ್ — ಈ

---

1 Boris Suchkao: Realism and its Historical development : Problems of Modern Aesthetics. Ed : Prof. S. Mozhnyagun, p. 325.

ಸಾಹಿತಿಗಳಿಂದ ಹೀಗೆ ಇಡೀ ಪಾಶ್ಚಾತ್ಯ ಸಾಹಿತ್ಯದಲ್ಲಿ 'ವಾಸ್ತವವಾದ' ಪ್ರಚಲಿತ ವಾಯಿತು. ಮನುಷ್ಯನಾದವನು ತಾನು ಕಾಣದ ಆ ದೈವಕ್ಕಿಂತ, ಕಾಣುವ ಈ ನೆಲಕ್ಕೆ ಸೇರಿದವನೆಂಬ ಭಾವನೆಯನ್ನು ಯಾವಾಗ ವೈಜ್ಞಾನಿಕ ಆವಿಷ್ಕಾರಗಳೂ ವಿಚಾರಗಳೂ ಮೂಡಿಸಿದವೊ, ಆಗ ಸಾಹಿತಿಯು ಗಮನ ತನ್ನ ಸುತ್ತ ಇರುವ ಸಮಾಜದ ಒಂದು ಭಾಗ ತಾನು, ಆ ಸಾಮಾಜಿಕ ಜೀವನದ ಯಥಾವತ್ತಾದ ಚಿತ್ರವನ್ನು ಕೊಡುವುದೇ ತನ್ನ ಮೊದಲ ಕರ್ತವ್ಯ ಎಂಬ ನಂಬಿಕೆ. ಸಾಹಿತಿ-ಕಲಾವಿದ ರಲ್ಲಿ ದೃಢವಾದದ್ದರ ಪರಿಣಾಮವೇ ವಾಸ್ತವವಾದ. ರೊಮ್ಯಾಂಟಿಕ್ ಮಾರ್ಗದ ವ್ಯಕ್ತಿನಿಷ್ಠತೆಯ ಬದಲು, ಒಂದು ಬಗೆಯ ವಸ್ತುನಿಷ್ಠವಾಗಿ ನಿಂತು, "ಸಾಹಿತಿ ತನ್ನ ಸುತ್ತಣ ಸಾಮಾಜಿಕ ಪರಿಸರವನ್ನು, ಇದ್ದುದನ್ನು ಇದ್ದಹಾಗೆ, ಯಾವ ಉತ್ಪ್ರೇಕ್ಷೆ-ಆದರ್ಶಗಳ ಸೋಂಕೂ ಇಲ್ಲದಂತೆ, ಯಾವ ಬಗೆಯ ನಾಸ್ತಿಕ್ಯ ಅಥವಾ ಆಶಾವಾದ ಗಳ ಸ್ಪರ್ಶವಿಲ್ಲದಂತೆ, ಚಿತ್ರಿಸುವುದು ತನ್ನ ಉದ್ದೇಶವೆಂದು ಭಾವಿಸಿದನು."[2] "ವಾಸ್ತವ ವಾದೀ ವಿಧಾನದ ಮುಖ್ಯ ಸತ್ವವೆಂದರೆ, ಸಾಮಾಜಿಕ ಪರಿಸರದಲ್ಲಿ ವ್ಯಕ್ತಿಯ ಪರಿಶೀಲನೆ ಹಾಗೂ ಚಿತ್ರಣ."[3] ಹಾಗೆ "ಯಥಾವತ್ತಾದ ಮತ್ತು ಸಮಗ್ರವಾದ ಸಾಮಾಜಿಕ ಜೀವನದ ವಿಶ್ಲೇಷಣೆಯೆ ವಾಸ್ತವವಾದೀ ಮಹಾಸಾಹಿತಿಗಳ ಮುಖ್ಯ ಉದ್ದೇಶ."[4] ಇದರಿಂದ ಸ್ಪಷ್ಟವಾಗುವುದು ಇಷ್ಟು : ಸಾಹಿತ್ಯಕ್ಕೆ ಸಮಾಜದೊಂದಿಗೆ ಇರುವ ಸಂಬಂಧದ ಗಾಢತೆಯೆ ಇಲ್ಲಿ ಪ್ರಧಾನ : ಸಾಮಾಜಿಕ ಜವಾಬ್ದಾರಿಯೊಂದಿಗೆ ಇಷ್ಟರವಟ್ಟಿಗೆ ಹಿಂದಿನ ಸಾಹಿತ್ಯಮಾರ್ಗಗಳು ಬೆಸೆದುಕೊಂಡಿರಲಿಲ್ಲ. ಆದ್ದರಿಂದ ವಾಸ್ತವವಾದ ಎಂದರೆ, ಬದುಕನ್ನು ಆದರ್ಶೀಕರಿಸಿ, ವೈಭವಿಸಿ ನೋಡುವ ಹಾಗೂ ಚಿತ್ರಿಸುವ ಕ್ಲಾಸಿಕ್ ಹಾಗೂ ರೊಮ್ಯಾಂಟಿಕ್ ಮನೋಧರ್ಮಕ್ಕೆ ವಿರುದ್ಧವಾದದ್ದು : ಇದ್ದುದನ್ನು ಇದ್ದ ಹಾಗೆ ಚಿತ್ರಿಸಬೇಕೆನ್ನುವ ಮತ್ತು ವ್ಯಕ್ತಿಯನ್ನು ಸಾಮಾಜಿಕ ಪರಿ ಸರದ ಚೌಕಟ್ಟಿನಲ್ಲಿಯೇ ನೋಡಬೇಕೆನ್ನುವ ಉದ್ದೇಶವುಳ್ಳದ್ದು.

ಇದ್ದುದನ್ನು ಇದ್ದಹಾಗೆ ಹೇಳಬೇಕೆನ್ನುವ ಈ ಪ್ರವೃತ್ತಿ, ಇದ್ದುದನ್ನು ಬಿಟ್ಟು ಬೇರಾ ವುದೋ ಆದರ್ಶದತ್ತ ಕೈತೋರಿಸುವ ಮತ್ತು ಇದ್ದುದನ್ನೇ ಆದರ್ಶೀಕರಿಸುವ ಅಥವಾ ಉತ್ಪ್ರೇಕ್ಷಿಸುವ ಮನೋಧರ್ಮಕ್ಕೆ ವಿರುದ್ಧವೆಂಬ ಮಾತನ್ನು ಒಪ್ಪಿದರೂ, ಇರುವು ದನ್ನು ಸಾಂಕೇತಿಸಿ, ಪ್ರತಿಮಿಸಿ ಹೇಳುವುದು ವಾಸ್ತವವಾದ ಆಗುವುದಿಲ್ಲವೆ, ಇದ್ದು ದನ್ನು ಇದ್ದಹಾಗೆ ಹೇಳಿದರೆ ಮಾತ್ರ ವಾಸ್ತವವಾದಕ್ಕೆ ಸಮ್ಮತವೆ—ಎಂಬ ಪ್ರಶ್ನೆ

---

[2] Realism, p. 143: Cassel's Encyclopaedia of Literature.
Ed: by S. H. Steinberg

[3] Boris Suchkao: Realism and its Historical development; Problems of Modern Aesthetics, p. 321

[4] Nikolai Leizerovr: The Scope and Limits of Realism: Problems of Modern Aesthetics, p. 306.

ವಿಳುತ್ತದೆ. ವಾಸ್ತವವಾದೀ ಚಳುವಳಿಗೆ ಹಿನ್ನಲೆಯಾದ ಸಾಹಿತ್ತಿಕ ಪುನರುಜ್ಜೀವನ (Renaissance) ಕಾಲದಲ್ಲಿ. ವಾಸ್ತವವಾದ ಬಹುಶಃ ಎರಡು ಬಗೆಯಾಗಿ ಕವಲೊಡೆಯಿತೆಂದು ಕೆಲವರು ಅಭಿಪ್ರಾಯಪಡುತ್ತಾರೆ: ಒಂದು, 'ವಾಸ್ತವವಾದ' (Realism) ಇನ್ನೊಂದು. 'ಯಥಾಸ್ಥಿತಿವಾದ' (Naturalism). ಡಾರ್ವಿನ್ನನ ಜೀವವಿಜ್ಞಾನ ಸಿದ್ಧಾಂತಗಳಿಂದ ಪ್ರೇರಣೆಪಡೆದ ಒಂದು ದೃಷ್ಟಿ ವಸ್ತುವಿನ ಸ್ವರೂಪವನ್ನು 'ಯಥಾವತ್ತಾಗಿ ಚಿತ್ರಿಸಿದರೆ ಅದು ಕಲೆಯಾಗುತ್ತದೆ' ಎಂದು ಭಾವಿಸಿತು. ಇದನ್ನೇ "ಯಥಾಸ್ಥಿತಿವಾದ" (Naturalism) ಎಂದು ಗುರುತಿಸಲಾಗಿದೆ.[5] ಆದರೆ ವಾಸ್ತವವಾದದ ಪ್ರತಿಪಾದಕರು. ವಾಸ್ತವವಾದವೆಂದರೆ ಕೇವಲ ಇದ್ದುದನ್ನು ಇದ್ದ ಹಾಗೆ ಚಿತ್ರಿಸುವ 'ಯಥಾಸ್ಥಿತಿವಾದ'ವೆಂದು ತಿಳಿಯಬಾರದು, ವಾಸ್ತವವಾದ ಇದಕ್ಕೂ ಮಿಗಿಲಾದುದನ್ನು ಸಾಧಿಸುತ್ತದೆ – ಎನ್ನುತ್ತಾರೆ. ಯಾಕೆಂದರೆ 'ಯಥಾಸ್ಥಿತಿವಾದ' ಇದ್ದುದನ್ನು ಇದ್ದಹಾಗೆ ಚಿತ್ರಿಸುವಲ್ಲಿ ಯಾವ ವಿವೇಚನೆಯನ್ನೂ ಮಾಡುವುದಿಲ್ಲ, ಆದರೆ ವಾಸ್ತವವಾದದಲ್ಲಿ "ಕಲಾವಿದನಿಗೆ ತಾನು ಕಂಡ ಪರಿಸರದಲ್ಲಿ ಬೇಕಾದ್ದನ್ನು ಆಯ್ಕೆ ಮಾಡಿಕೊಳ್ಳುವ. ಯಾವುದು ಉಚಿತ ಯಾವುದು ಅನುಚಿತವೆಂದು ತೂಗಿನೋಡಿ ಅನಂತರ ಚಿತ್ರಿಸುವ ಸಾಮಾನ್ಯ ನಿಯಮವೊಂದಿದೆ…; ಇದ್ದುದನ್ನು ಇದ್ದಹಾಗೆ ಚಿತ್ರಿಸಬೇಕೆಂಬುದು ಅತನ ಪಾಲಿಗೆ ಒಂದು ನಿಯಮದಂತೆ ಕಂಡರೂ. ಅವನು ಚಿತ್ರಿಸುವ ಉದ್ದೇಶಕ್ಕೆ ಸಮರ್ಪಕವಾದ ಮಾಧ್ಯಮವಾಗಿ. ಸಾಂಕೇತಿಕ ರೂಪಗಳನ್ನು ಬಳಸಲು ಅಡ್ಡಿಯೇನಿಲ್ಲ"[6] ಎಂಬ ಉದಾರತೆಗೂ ಅವಕಾಶವಿದೆ. ಈ ದೃಷ್ಟಿಯಿಂದ ನೋಡಿದರೆ 'ಆಧುನಿಕವಾದ' (Modernism) ಎಂದು ಇಪ್ಪತ್ತನೆಯ ಶತಮಾನದಂದು ಯಾವುದನ್ನು ನಾವು ಸಾಹಿತ್ಯ–ಕಲೆಗಳಲ್ಲಿ ಗುರುತಿಸುತ್ತೇವೆಯೋ ಅದು, ತನ್ನ ಅಭಿವ್ಯಕ್ತಿ ಮಾಧ್ಯಮವನ್ನು, ಪ್ರತೀಕ–ಸಂಕೇತ–ಪ್ರತಿಮಾ ವಿಧಾನಗಳಲ್ಲಿ ರೂಪಿಸುವುದರಲ್ಲಿ ವಿಶಿಷ್ಟವಾದುದೆಂದು ಭಾವಿಸಿದರೂ. ಇದೂ ಸಹ ವಾಸ್ತವವದವಾದದ ಸತ್ವವನ್ನು ಒಳಗೊಂಡಿದೆ. ವಾಸ್ತವವಾದದ ಮುಖ್ಯಧೋರಣೆಯಾದ 'ಸಾಮಾಜಿಕತೆಯ ಅರಿವು' ಮತ್ತು ಜನದ ಯಥಾವತ್ತಾದ ಭಾಷೆಯನ್ನು ಸಾಹಿತ್ಯ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ಕಳಕಳಿ, ಈ ಎರಡೂ ಆಧುನಿಕರಿಗೆ ಇರುವುದಾದರೂ 'ಆಧುನಿಕವಾದ'ದ ಪ್ರಧಾನವಾದ ಗಮನ 'ಇದ್ದುದನ್ನು ಇದ್ದಹಾಗೆ ಚಿತ್ರಿಸುವ 'ವಾಸ್ತವವಾದ'ದ ವಿಧಾನಕ್ಕಿಂತ. ಆ ಇದ್ದುದು ತಮ್ಮ ಸಂವೇದನೆಯ ವಸ್ತುವಾದಾಗ, ತಮಗೊದಗಿದ ಅನುಭವದ ಸಂಕೀರ್ಣತೆಯನ್ನು ಸಂಕೇತ. ಪ್ರತೀಕ, ಪ್ರತಿಮೆಗಳ ಮೂಲಕ ಚಿತ್ರಿಸುವುದರ ಕಡೆಗೆ ವಿಶೇಷವಾಗಿದೆ. ಆದಕಾರಣ 'ಆಧುನಿಕತಾವಾದಿ

---

5 Naturalism: Cassel's Encyclopaedia of Literature: p. 377, Ed., S. H. Steinberg.

6 Same as Foot-Note 4.

ಗಳು 'ವಾಸ್ತವ'ವನ್ನು ಚಿತ್ರಿಸುತ್ತಾರಾದರೂ, 'ವಾಸ್ತವ'ವಾದಿಗಳು 'ವಾಸ್ತವ'ವನ್ನು ನೋಡುವ ಹಾಗೂ ಚಿತ್ರಿಸುವ ವಿಧಾನದಿಂದ ಇದು ಬೇರೆಯೇ ಆಗುತ್ತದೆ.

ರಷ್ಯಾದ ಮಹಾವಿಪ್ಲವದ (1917) ನಂತರ 'ವಾಸ್ತವವಾದ' ಬೇರೊಂದು ನಿಲುಗಡೆಯನ್ನು ಹಾಗೂ ಮಹತ್ವವನ್ನು ಪಡೆಯಿತು. ಮಾರ್ಕ್ಸ್ ಹಾಗೂ ಲೆನಿನ್ ಅವರ ತತ್ವಗಳಿಗನುಸಾರವಾಗಿ, ಬದಲಾದ ಜೀವನ ಕ್ರಮವನ್ನು ಸೋವಿಯತ್ ಕ್ರಾಂತಿ–ಸಾಹಿತ್ಯ ಚಿತ್ರಿಸುವಲ್ಲಿ 'ಸಮಾಜವಾದಿ ವಾಸ್ತವತೆ' (Socialist Realism) ಎಂಬ ವಿಧಾನ ಹುಟ್ಟಿಕೊಂಡಿತು. ಇದು ತನ್ನ ಸಮೀಪಕಾಲದ, ಹಿಂದಿನ ವಾಸ್ತವವಾದದ ಬೇರೊಂದು ರೂಪವೇ ಆದರೂ, ಇದು ಇದ್ದುದನ್ನು ಇದ್ದ ಹಾಗೆ ಮಾತ್ರ ಹೇಳುವ 'ಯಥಾಸ್ಥಿತಿವಾದ' (Naturalism) ದಿಂದ ಭಿನ್ನವಾದದ್ದು. ರಷ್ಯಾದ ಮಹಾವಿಪ್ಲವಕ್ಕೆ ಮೊದಲೆ 'ವಾಸ್ತವವಾದ (Realism) ರಷ್ಯನ್ ಸಾಹಿತ್ಯದಲ್ಲಿ ಟಾಲ್‌ಸ್ಟಾಯ್ ಮೊದಲಾದ ಲೇಖಕರಿಂದ ಪ್ರಬುದ್ಧಸ್ಥಿತಿಗೆ ಬಂದಿತ್ತಾದರೂ, ರಷ್ಯಾ ವಿಪ್ಲವದ ನಂತರ ಬಂದ 'ಸಮಾಜವಾದೀ ವಾಸ್ತವತಾ ಪಂಥ' (Socialist Realism) ದವರು, ಅದನ್ನು 'ಬೂರ್ಜ್ವಾವಾಸ್ತವವಾದ'ವೆಂದೂ ಅದೇನಿದ್ದರೂ ಯಥಾಸ್ಥಿತಿವಾದ (Naturalism) ಕ್ಕೆ ಸೇರತಕ್ಕದ್ದೆಂದೂ. ಸಾರಿದರು. ಸಮಾಜವಾದಿವಾಸ್ತವತಾ ಪಂಥದವರು. ತಮಗಿಂತ ಹಿಂದಿನ, 'ಯಥಾಸ್ಥಿತಿವಾದಿ' ಗಳನ್ನು ಮತ್ತು 'ಆಧುನಿಕತಾವಾದಿ'ಗಳನ್ನು ಕುರಿತು ಹೀಗೆ ಹೇಳುತ್ತಾರೆ: "ಹತ್ತೊಂಬತ್ತನೆ ಶತಮಾನದ 'ಯಥಾಸ್ಥಿತಿವಾದ' (Naturalism) ದ ಪ್ರತಿಪಾದಕರು ಮತ್ತು ಇಂದಿಗೂ ಅದೇ ಪಂಥದವರು, ಕಲೆಯಿಂದ ವ್ಯಕ್ತಿನಿಷ್ಠತೆಯ ಅಂಶವನ್ನು ಸಂಪೂರ್ಣವಾಗಿ ಬೇರ್ಪಡಿಸಿ, ಯಾವ ಬಗೆಯ ವ್ಯಕ್ತಿಸ್ಪರ್ಶವೂ ಇಲ್ಲದ, ವಸ್ತುಸ್ಥಿತಿ ಹೇಗಿದೆಯೋ ಹಾಗೆ ಮಾತ್ರ ಚಿತ್ರಿಸಬೇಕೆಂಬ ಧೋರಣೆಯನ್ನು ಎತ್ತಿಹಿಡಿಯುತ್ತಾರೆ... ಆದರೆ ಈ ಧೋರಣೆ ಎಷ್ಟು ಹುಸಿಯಾದುದೆಂಬುದನ್ನು ಲೆನಿನ್ನನ ಕೃತಿಗಳು ತೋರಿಸುತ್ತವೆ... ಆಧುನಿಕರು (Modernist) ಕಲೆಗಾರನ ಕೆಲಸವೇನಿದ್ದರೂ, ವಾಸ್ತವ ಪರಿಸ್ಥಿತಿಯನ್ನು ಚಿತ್ರಿಸುವುದಕ್ಕಿಂತ ಕಲೆಗಾರನ ಮನಸ್ಸಿನ ಹುಚ್ಚಾಟಿಕೆಗಳನ್ನು ಚಿತ್ರಿಸುವುದೇ ಮುಖ್ಯವೆಂದು ನಂಬುತ್ತಾರೆ. ಲೆನಿನ್ನನ ಕೃತಿಗಳು ಈ 'ಆಧುನಿಕವಾದ'ದ ದಾರಿದ್ರ್ಯವನ್ನೂ ಎತ್ತಿತೋರಿಸುತ್ತವೆ." [7]

ಲೆನಿನ್ ಪ್ರಕಾರ ಕಲೆಗಾರನಾದವನು ಸತ್ಯಸ್ಥಿತಿಯನ್ನು. ಹಿಂದಿನ 'ಬೂರ್ಜ್ವಾ ವಾಸ್ತವತಾವಾದಿ'ಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾದ ರೀತಿಯಲ್ಲಿ ಚಿತ್ರಿಸುತ್ತಾ. ತನ್ನ ಕಾಲದ ಸಾಮಾಜಿಕ ಬದಲಾವಣೆ ಹಾಗೂ ಹೋರಾಟವಲ್ಲಿ ಸಕ್ರಿಯವಾದ

---

7 Socialist Realism in Literature and Art : Pub : Progress Publishers Moscow ; Foreword, p. 14

ಪಾತ್ರವನ್ನು ವಹಿಸುವುದರ ಮೂಲಕ 'ಸಮಾಜವಾದೀವಾಸ್ತವತೆ' (Socialist Realism) ಯನ್ನು ಯಶಸ್ವಿಯಾಗಿ ತರಬಲ್ಲನೆಂಬುದೇ. ರಷ್ಯಾ ಸಾಹಿತ್ಯದ ಬದಲಾದ ಧೋರಣೆಯಾಗಿದೆ. ಮ್ಯಾಕ್ಸಿಂಗಾರ್ಕಿ 1927 ರಲ್ಲಿ ಬರೆಯುತ್ತಾ "ಸಾಹಿತಿಯಾದವನು ಹಿಂದಿನ 'ಯಥಾಸ್ಥಿತಿವಾದಿ' (Naturalist) ಗಳಂತೆ ಕೇವಲ ಇದ್ದುದನ್ನು ಇದ್ದಹಾಗೆ ಚಿತ್ರಿಸುವಷ್ಟರಲ್ಲೇ ಮುಳುಗುಬಾರದು : ಅಥವಾ ಆಧುನಿಕರಂತೆ (Modernist) ಯಥಾವತ್ತಾದುದನ್ನು ಚಿತ್ರಿಸುವ ಪ್ರವೃತ್ತಿಯಿಂದ ಸಿಡಿದು ದೂರ ನಿಲ್ಲಬಾರದು. ಅತ ಈ ಎರಡನ್ನೂ ಮೀರಿನಿಂತು, ವಾಸ್ತವ ಪರಿಸ್ಥಿತಿಯ ಪ್ರಭುವಾಗಬೇಕು"[8]— ಎನ್ನುತ್ತಾನೆ. ಈ ಹಿನ್ನೆಲೆಯಿಂದ ನೋಡಿದಾಗ, 'ಸಮಾಜವಾದೀ ವಾಸ್ತವವಾದ (Socialist Realism) ಎನ್ನುವುದು ಮಾರ್ಕ್ಸ್ ಹಾಗೂ ಲೆನಿನ್ ತತ್ತ್ವದಿಂದ. ಆಧುನಿಕ ರಷ್ಯಾದ ಜೀವನದಲ್ಲಿ ಯಾವ ಕ್ರಾಂತಿಕಾರಕ ಬದಲಾವಣೆ ಆಗಿದೆಯೋ ಅವರಲ್ಲಿ, ಸಾಹಿತಿಯಾದವನು ಸಕ್ರಿಯವಾಗಿ ಪಾಲುಗೊಳ್ಳುವುದರ ಮೂಲಕ ಕಲಾತ್ಮಕವಾದ ರೀತಿಯಲ್ಲಿ ವಾಸ್ತವತೆಯನ್ನು ಚಿತ್ರಿಸುವುದು. ಎಂದರೆ ಇದ್ದುದನ್ನು ಆದರ್ಶೀಕರಿಸುವ- ವೈಭವಿಸುವ ಪಲಾಯನ ಪ್ರವೃತ್ತಿಯನ್ನು, ಇದ್ದುದನ್ನು ಇದ್ದಹಾಗೆ ಹೇಳುವುದೆ ವಾಸ್ತವವಾದ ಎಂಬ ಭ್ರಮೆಯನ್ನು, ಮತ್ತು ಇದ್ದುದನ್ನು ಗ್ರಹಿಸಿದರೂ ಅದನ್ನು ಚಿತ್ರಿಸುವ ಬದಲು ತಮ್ಮ ಮನಸ್ಸಿನ ಅನ್ನಿಸಿಕೆ ಹಾಗೂ ಅನುಭವದ ಸಂಕೀರ್ಣತೆಗೆ ಪ್ರಾಧಾನ್ಯವನ್ನು ನೀಡುವ 'ತಟಸ್ಥ' ನಿಲುವನ್ನು ತಿರಸ್ಕರಿಸಿ, ತನ್ನ ಕಾಲದ ಆಶೋತ್ತರಗಳಿಗೆ, ತನ್ನ ಸುತ್ತ ನಡೆಯುವ ಸಾಮಾಜಿಕ ಬದಲಾವಣೆಗಳಿಗೆ ಕಲಾತ್ಮಕವಾದ ಅಭಿವ್ಯಕ್ತಿಯನ್ನು ನೀಡುತ್ತಾ, ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಭಾಗವಹಿಸಬೇಕೆಂಬುದು ಸಮಾಜವಾದೀ ವಾಸ್ತವವಾದದ ತಿರುಳೆಂದು ಹೇಳಬಹುದು. ಈ ವಾದದ ಪ್ರಕಾರ 'ವಾಸ್ತವವಾದ'ದ ನೆಪದಲ್ಲಿ ಕಲಾವಿದನಾದವನು ತನ್ನ ಪರಿಸರದ ಸಾಮಾಜಿಕ ಲೋಪದೋಷಗಳನ್ನು ವಿಡಂಬಿಸುವುದು, ಬದಲಾಗುವ ಹಂತದಲ್ಲಿರುವ ಸಾಮಾಜಿಕ ಜೀವನದಲ್ಲಿರುವ ಅರೆ-ಕೊರೆಗಳನ್ನು ಇದ್ದಹಾಗೆ ಚಿತ್ರಿಸುವುದು, ಪ್ರಗತಿ ವಿರೋಧಿ ಬೂರ್ಜ್ವಾ ಮನೋಧರ್ಮವೆಂದು ಪರಿಗಣಿತವಾಗಿದೆ. ಸಮಾಜವಾದೀವಾಸ್ತವವಾದಕ್ಕೆ ಸೇರಿದ ಸಾಹಿತಿ ತನ್ನ ಸುತ್ತ ನಡೆಯುವ ಮಹಾಪರಿವರ್ತನೆಯಲ್ಲಿರುವ ಅರೆ-ಕೊರೆಗಳನ್ನು ಕಂಡರೂ, 'ಪ್ರಗತಿ ವಿರೋಧಿ' ಯಂತೆ ವಿಡಂಬಿಸದೆ ಅಥವಾ ಇರುವ ದೋಷಗಳನ್ನು ದೊಡ್ಡದುಮಾಡಿ ತೋರಿಸದೆ, ಇವೆಲ್ಲವೂ ನಾಳಿನ ಸಿದ್ಧಿಯ ಹಾದಿಯಲ್ಲಿರುವ ಪ್ರಗತಿಯ ಹಂತಗಳೆಂದು ಭಾವಿಸುತ್ತಾನೆ... ಹಾಗಾದರೆ ಇದೂ ಒಂದು ಬಗೆಯ 'ರೊಮ್ಯಾಂಟಿಸಿಸಂ' ಆಗುವುದಿಲ್ಲವೆ, ಯಾಕೆಂದರೆ ಇಲ್ಲೂ ಒಂದು ಬಗೆಯ ಆದರ್ಶದ ಕಲ್ಪನೆಯಿದೆ – ಎಂದರೆ, ಈ ವಾದದವರು ಹೇಳುತ್ತಾರೆ, "ಹೌದು, ಇಲ್ಲಿರುವ ವ್ಯಕ್ತಿನಿಷ್ಠತೆ ರೊಮ್ಯಾಂಟಿಕ್ ಮಾದರಿಯದೆ : ಆದರೆ ಈ ರೊಮ್ಯಾಂ

---

8 Ibid : p. 16

ಟಿಕ್ ಮನೋಧರ್ಮ, ಸಮಾಜವಾದೀ ವಾಸ್ತವವಾದದ ಒಂದು ಭಾಗವೆ; ಇದು. ವಾಸ್ತವವಾದದೊಂದಿಗೆ ಕೂಡಿದ ಉತ್ಸಾಹ ಹಾಗೂ ಹೋರಾಟದ ಭಾವನೆ".[9] "ಇಂದಿನ ಸೋವಿಯತ್ ಸಾಹಿತಿ ಸದ್ಯದ ಪರಿಸ್ಥಿತಿಯ ಬಗ್ಗೆ ಅತೃಪ್ತನಾಗಿದ್ದಾನೆ. ಈ ದೃಷ್ಟಿಯಿಂದ ಆತನ ಮನೋಧರ್ಮಕ್ಕೂ ರೊಮ್ಯಾಂಟಿಕ್ ಮನೋಧರ್ಮಕ್ಕೂ ಸಾಮ್ಯವಿದೆ. ಆದರೆ ಇದ್ದುದರ ಬಗೆಗಿನ ಈ ಅತೃಪ್ತಿ ಇದ್ದರೂ, ಇದನ್ನು ಬೇರೊಂದು ಉತ್ತಮಸ್ಥಿತಿಗೆ ಬದಲಾಯಿಸುವ ಉದ್ದೇಶ ಅವನಿಗಿದೆ. ಹಾಗೆಯೇ ಈ ಬದಲಾವಣೆಯನ್ನು ಹೇಗೆ ತರಬೇಕೆನ್ನುವುದೂ ಅವನಿಗೆ ಗೊತ್ತಿದೆ".[10] ಈ ನಿಲುವನ್ನು ನೋಡಿದರೆ ಯಾಕೆ ಸೋವಿಯತ್ ಸಾಹಿತ್ಯದಲ್ಲಿ ವಾಸ್ತವಸ್ಥಿತಿಯ ಚಿತ್ರವನ್ನು ಯಥಾವತ್ತಾಗಿ ನೀಡುವ 'ಸ್ವತಂತ್ರ ಮನೋಧರ್ಮ'ದ ಲೇಖಕರಿಗೆ ಪುರಸ್ಕಾರವಿಲ್ಲ ಎಂಬುದು ಅರ್ಥವಾಗುತ್ತದೆ. ಸಮಾಜವಾದೀ ವಾಸ್ತವವಾದದ ಉದ್ದೇಶ ಘನವಾದದ್ದೇ: ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು, ವ್ಯಕ್ತಿಗೆ ತತ್ಕಾಲದಲ್ಲಿ ವಾಸ್ತವಸ್ಥಿತಿಯನ್ನು ಕಂಡು ಅನಿಸುವ ಅನ್ನಿಸಿಕೆಗಳ ಮುಂದೆ, ರಾಷ್ಟ್ರನಿರ್ಮಾಣ ಕಾರ್ಯದ ಕನಸು ದೊಡ್ಡದು. ಆದರೆ, ಸಾಹಿತಿಯಾದ ವ್ಯಕ್ತಿಯ ಅನ್ನಿಸಿಕೆಗಳನ್ನು, ಭಾವನೆಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ, ಅಂಥ ಪ್ರಾಮಾಣಿಕವಾದ ಅನಿಸಿಕೆ ಭಾವನೆಗಳನ್ನು 'ಪ್ರಗತಿವಿರೋಧಿ' ಎಂದು ಕೀಳ್ಗಳೆಯುವುದಾಗಲಿ, ಸದ್ಯದ ಪರಿಸ್ಥಿತಿಯನ್ನು ಯಥಾವತ್ತಾಗಿ, ಇದ್ದುದನ್ನು ಇದ್ದಹಾಗೆ, ಅದರ ದೋಷ ದೌರ್ಬಲ್ಯಗಳೊಂದಿಗೆ ಚಿತ್ರಿಸುವುದೂ ಕೂಡಾ ರಾಷ್ಟ್ರನಿರ್ಮಾಣದ ಉದ್ದೇಶದಲ್ಲಿ ನೇತ್ಯಾತ್ಮಕವಾದ ರೀತಿಯಲ್ಲಿ ಸಾಹಿತಿ ಪಾಲುಗೊಳ್ಳುವ ವಿಧಾನವೆಂದು ತಿಳಿಯದಿರುವುದಾಗಲಿ ನಮಗೆ, ಭಾರತೀಯ ಪ್ರಜಾಪ್ರಭುತ್ವದಂಥ ಪರಿಸರದಲ್ಲಿರುವವರಿಗೆ ವಿಲಕ್ಷಣವಾಗಿ ತೋರುತ್ತದೆ. ಇದನ್ನು ಸದ್ಯಕ್ಕೆ ಬದಿಗಿರಿಸಿ 'ಸಮಾಜವಾದಿ ವಾಸ್ತವವಾದ'ದ ಸಾರವನ್ನು ಹೀಗೆ ಸೂತ್ರೀಕರಿಸಬಹುದು.

"(1) ಕಲೆ ವಾಸ್ತವಸತ್ಯವನ್ನು ಪ್ರತಿಬಿಂಬಿಸುತ್ತದೆ. ಮತ್ತು ವಿಷಯಕ್ಕೆ ಅನುಸಾರವಾದ ಭಾಷೆಯ ಬಳಕೆಯ ಕಡೆಗೆ ಗಮನ ಕೊಡುತ್ತದೆ. (2) ಕುಶಲ ಕಲೆಗಾರ, ಒಂದು ನಿರ್ದಿಷ್ಟ ಜಗತ್ತಿನ ಅರಿವುಳ್ಳವನಾಗಿ ಇದ್ದುದನ್ನು ಇದ್ದಹಾಗೆ ಸಾಹಿತ್ಯಕ್ಕೆ ವರ್ಗಾಯಿಸುವ ಜಡ ಮಾಧ್ಯಮವಾಗದೆ, ತಾನು ಕಂಡದ್ದನ್ನು, ನಾಳಿನ ಆದರ್ಶದೊಂದಿಗೆ ಹೋಲಿಸಿಕೊಂಡು, ಸೃಜನಾತ್ಮಕವಾದ ರೀತಿಯಲ್ಲಿ ರೂಪ ಕೊಡುತ್ತಾನೆ. (3) ಈ ಅಭಿವ್ಯಕ್ತಿ ಇದ್ದುದನ್ನು ಇದ್ದಹಾಗೆ ಅನುಕರಿಸುವ ಕ್ರಿಯೆಯಲ್ಲ: ಅದೊಂದು, ಜೀವನವನ್ನು ವಿಶೇಷ ರೀತಿಯಲ್ಲಿ ನೋಡುವ, ಅಭ್ಯಸಿಸುವ, ಹಾಗೂ

---

9 On Socialist Realism ; Anatoly Lunacharsky ; Socialist Realism in Literature and Art. p. 57

10 Ibid. p. 58

ಗ್ರಹಿಸುವ ಮತ್ತು ಪರಿವರ್ತಿಸುವ ವಿಶೇಷ ಸಾಮರ್ಥ್ಯ. (4) ಒಂದು ಕಲಾಕೃತಿ ನಿಜವಾಗಿಯೂ ಸಾಚಾ ಆಗುವುದು, ಅದು ಏನನ್ನಾದರೂ ಹೊಸತನ್ನು ಹೇಳಿದಾಗ: ಜನತೆಯ ಭಾವನೆ, ಬುದ್ಧಿ, ಸಂಕಲ್ಪಗಳನ್ನು ಶ್ರೀಮಂತಗೊಳಿಸಿದಾಗ; ಜನತೆಯಲ್ಲಿನ ಕಲಾವಿದನನ್ನು ಎಚ್ಚರಿಸಿದಾಗ"[11]

2

ಆಧುನಿಕ ಭಾರತೀಯ ಸಾಹಿತ್ಯದಲ್ಲಿ, ಪಾಶ್ಚಾತ್ಯ ಪ್ರಭಾವಗಳಿಂದ 'ವಾಸ್ತವವಾದ'ವನ್ನು ಪ್ರತಿಪಾದಿಸುವ ಕೃತಿಗಳೂ ಪಂಥಗಳೂ ಇದ್ದರೂ, ಭಾರತೀಯ ಕಾವ್ಯಮೀಮಾಂಸೆಯಲ್ಲಿ 'ಸ್ವಭಾವೋಕ್ತಿ'ಯನ್ನು ಕುರಿತ ವಿಚಾರ ಆಶ್ಚರ್ಯಕರವಾಗಿ 'ವಾಸ್ತವವಾದ'ದ ಕೆಲವಂಶಗಳನ್ನು ಒಳಗೊಳ್ಳುವಂತೆ ತೋರುವುದು ಸ್ವಾರಸ್ಯವಾದ ಸಂಗತಿಯಾಗಿದೆ.

ಇದ್ದುದನ್ನು ಇದ್ದಹಾಗೆ ಹೇಳುವ ಅಭಿವ್ಯಕ್ತಿಯನ್ನು ಕಾವ್ಯದಲ್ಲಿ ಸ್ವಭಾವೋಕ್ತಿ ಎಂದು ನಮ್ಮ ಆಲಂಕಾರಿಕರು ಗುರುತಿಸಿದರು. ಕಾವ್ಯಕ್ಕೆ ಏನು ಬೇಕಾದರೂ ವಸ್ತುವಾಗಬಹುದು ಎಂಬ ಧಾರಾಳವಾದ ಹೇಳಿಕೆ ಇದ್ದರೂ[12], ನಮ್ಮ ಹಿಂದಿನ ಕವಿಗಳು ಮಾತ್ರ ಕಾವ್ಯಕ್ಕೆ ಕೇವಲ ಕೆಲವೇ ಕೆಲವು ಮಾತ್ರ ವಸ್ತುಗಳಾಗಬಲ್ಲವೆಂಬಂತೆ. ಕಾವ್ಯದ ಭಾಷೆ ಪ್ರೌಢವೂ ಆಲಂಕಾರಿಕವೂ ಆಗುವುದರಿಂದಲೇ ಅದು ಕಾವ್ಯವಾಗುತ್ತದೆಂಬಂತೆ ಭಾವಿಸಿದ ನಿಲುವೇ ಪ್ರಧಾನವಾಗಿದೆ. 'ಕಾವ್ಯಂ ಗ್ರಾಹ್ಯಂ ಅಲಂಕಾರಾತ್' ಎಂಬ ಮಾತಿನ ಮೂಲಾರ್ಥವೇನೇ ಇರಲಿ. ಕಾವ್ಯದ ಭಾಷೆ ಸಾಲಂಕೃತವಾದದ್ದು ಎಂಬುದೇ ಇದರ ಮುಖ್ಯಾರ್ಥವಾಗಿ ಪರಿಗಣಿತವಾಯಿತು. ಹೀಗಾಗಿ ಕಾವ್ಯದ ಭಾಷೆಯೆಂದರೆ ಅತಿಶಯವಾದ ಭಾಷೆ, ವಕ್ರೋಕ್ತಿಯಿಂದ ಕೂಡಿದ ಭಾಷೆ ಎಂದೇ ಪರಿಗಣಿತವಾದ ಸಂದರ್ಭದಲ್ಲಿ, ಕೆಲವೆಡೆ ಕಾವ್ಯದಲ್ಲಿ ಯಾವ ಅಲಂಕಾರವೂ ಇಲ್ಲದೆ, ಇದ್ದುದನ್ನು ಇದ್ದಹಾಗೆ ಹೇಳಿದ ಅಭಿವ್ಯಕ್ತಿಗಳನ್ನು ಕಂಡಾಗ, ಇದನ್ನು ಕಾವ್ಯವೆಂದು ಕರೆಯಬೇಕೇ ಬೇಡವೇ ಎಂಬ ಸಮಸ್ಯೆ

11 Socialist Realism in Literature and Art : Progress Publishers, Moscow Foreword. p. 19

12 ದಶರೂಪಕ : IV-85 'ರಮ್ಯ, ಅಸಭ್ಯ, ಉದಾರ, ನೀಚ, ಉಗ್ರ, ಪ್ರಸನ್ನ, ಕ್ಲಿಷ್ಟ, ವಿಕೃತ-ವಸ್ತು ಹೀಗೆ ಯಾವುದಾದರೂ ಆಗಿರಲಿ, ಕಡೆಗೆ ವಸ್ತುವಲ್ಲದ್ದೇ ಆಗಿರಲಿ : ಕವಿ ಭಾವಕರ ಭಾವನೆಗೆ ವಿಷಯವಾದ ಮೇಲೆ ರಸಮಯವಾಗದ್ದು ಲೋಕದಲ್ಲಿ ಏನೊಂದೂ ಇಲ್ಲ.

ಉದ್ಭವಿಸಿದಾಗ, ಅದನ್ನು 'ಸ್ವಭಾವೋಕ್ತಿ' ಎಂದು ಗುರುತಿಸಿ, ಅದಕ್ಕೂ ಕಾವ್ಯದಲ್ಲಿ ಸ್ಥಾನವಿದೆ ಎಂದು ಹೇಳಿದ್ದು ಮಹತ್ವದ ಸಂಗತಿಯಾಗಿದೆ.[13]

'ವಾಸ್ತವವಾದ' ಹಾಗೂ 'ಸ್ವಭಾವೋಕ್ತಿ' - ಈ ಎರಡರಲ್ಲೂ 'ಇದ್ದುದನ್ನು ಇದ್ದ ಹಾಗೆ ಹೇಳುವುದು' ಎಂಬ ಬಗ್ಗೆ ಇರುವ ಸಾಮ್ಯವನ್ನು ಒಡೆದು, ತೌಲನಿಕವಾಗಿ ನೋಡುವಮುನ್ನ ಒಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಅದೇನೆಂದರೆ: ಇಂದು ಯಾವುದನ್ನು ನಾವು 'ವಾಸ್ತವವಾದ' ಎಂದು ತಿಳಿದುಕೊಂಡಿದ್ದೇವೋ, ಆ ಒಂದು ಮನೋಧರ್ಮಕ್ಕೆ ಭಾರತೀಯ ಸಾಹಿತ್ಯದಲ್ಲಿ ಅಂತಹ ಪುರಸ್ಕಾರವಿರಲಿಲ್ಲ: ಈ ಕಾರಣದಿಂದ 'ವಾಸ್ತವವಾದ'ವನ್ನು ಕೆಲವಂಶಗಳಲ್ಲಿ ಹೋಲುವ 'ಸ್ವಭಾವೋಕ್ತಿ' ಒಂದು ವಾದವಾಗಿ ಅಥವಾ ಪಂಥವಾಗಿ ಪ್ರತಿಪಾದನೆಯಾಗಲಿಲ್ಲ. ಎರಡನೆಯದಾಗಿ, ಭಾರತೀಯ ಕಾವ್ಯ ಮೀಮಾಂಸೆ, ಸಾಹಿತ್ತಿಕ ಚಳುವಳಿಗಳನ್ನು, ಹಾಗೂ ಸಾಹಿತಿಗಳ ಧೋರಣೆಗಳನ್ನು ಮೂಲಮಾನವನ್ನಾಗಿರಿಸಿಕೊಂಡು ಸಾಹಿತ್ಯದ ಚರ್ಚೆಯನ್ನು ಮಾಡಿಲ್ಲ. ಅದೇನಿದ್ದರೂ ವಸ್ತುನಿಷ್ಠವಾಗಿ ಕಾವ್ಯ ಅಥವಾ ಸಾಹಿತ್ಯಾಭಿವ್ಯಕ್ತಿಯನ್ನು ವಿಶ್ಲೇಷಿಸಿ, ಅಭಿವ್ಯಕ್ತಿಯ ಪ್ರಮುಖ ಲಕ್ಷಣಗಳನ್ನು ವಿಂಗಡಿಸಿತು. ಈ ದೃಷ್ಟಿಯಿಂದ ಸ್ವಭಾವೋಕ್ತಿಯನ್ನು ಕುರಿತ ಚರ್ಚೆಯಲ್ಲಿ, ಆ ಬಗೆಯ ಅಭಿವ್ಯಕ್ತಿಯನ್ನು ಕುರಿತ ಚರ್ಚೆ ಪ್ರಧಾನವಾಗಿದೆಯೆ ಹೊರತು, ಅದಕ್ಕೆ ಹಿನ್ನೆಲೆಯಾದ ಸಾಹಿತ್ತಿಕ ಧೋರಣೆಯನ್ನು ಕುರಿತು ಅಲ್ಲ.

ಕಾವ್ಯಾಭಿವ್ಯಕ್ತಿಯಲ್ಲಿ ಕೆಲವೆಡೆ, ನಿರಲಂಕಾರವೆಂಬಂಥ, 'ಇದ್ದುದನ್ನು ಇದ್ದಹಾಗೆ' ಹೇಳಿದಂತೆ ತೋರುವ ಅಭಿವ್ಯಕ್ತಿಯನ್ನು ಗುರುತಿಸಿದ ನಮ್ಮ ಪ್ರಾಚೀನ ಆಲಂಕಾರಿಕರಿಗೆ ಬಂದ ಸಮಸ್ಯೆ ಇದು: ಇದ್ದುದನ್ನು ಇದ್ದಹಾಗೆ ಹೇಳಿದರೆ ವಾರ್ತೆ (News Report) ಆಗುವುದಿಲ್ಲವೆ ?, ಇದ್ದುದನ್ನು ಇದ್ದಹಾಗೆ ಹೇಳುವುದು ವಾರ್ತೆಯಾಗದೆ ಕಾವ್ಯ ಹೇಗಾದೀತು ?, ಕಾವ್ಯವಾಗಬೇಕಾದರೆ ವಕ್ರೋಕ್ತಿ ಇರಬೇಕು: ವಕ್ರೋಕ್ತಿಯಿಲ್ಲದ್ದು ಕಾವ್ಯವಾದೀತೆ?[14] ಎನ್ನುವುದು ಪ್ರಶ್ನೆ. ಆದರೆ ಎಷ್ಟೋ ವೇಳೆ ಇದ್ದುದನ್ನು ಇದ್ದಹಾಗೆ ಹೇಳಿದಂತೆ ತೋರಿದರೂ, ಅಲ್ಲಿ ಏನೋ ಸೊಗಸು ಇದೆಯಲ್ಲ ? ಈ ಸೊಗಸು ಕಾವ್ಯದ್ದಲ್ಲವೆಂದು ಹೊರ ಹಾಕಬಹುದೆ ? ಕಾವ್ಯ ಎಂದು ಒಳಗೆ ಸೇರಿಸಿಕೊಳ್ಳಬೇಕಾದರೆ ಅದು ಅಲಂಕಾರತ್ವವನ್ನು ಪಡೆದಿರಬೇಕು: ಆದರೆ ಎಷ್ಟೋ ವೇಳೆ ಕಾವ್ಯವೆಂದು ತೋರುವ ಸೊಗಸು ನಿರಲಂಕಾರವೆಂದು ತೋರುತ್ತದೆಯಲ್ಲ: ಅದನ್ನೂ ಒಂದು ಅಲಂಕಾರವೆಂದು ಕರೆದು ಸಮಸ್ಯೆಯನ್ನು ಬಗೆಹರಿಸಬಹುದಲ್ಲ ?

---

13 'ಕೆಲವೆಡೆ ಅಲಂಕಾರಗಳಿಲ್ಲದಿದ್ದರೂ ಕಾವ್ಯವಾಗುತ್ತದೆ' ಎಂಬ ಧೈರ್ಯದ ಮಾತನ್ನು ಹೇಳಿದವನು ಮಮ್ಮಟ. ನೋಡಿ, 'ಕಾವ್ಯಪ್ರಕಾಶ' 1–4

14 ಭಾಮಹ: ಕಾವ್ಯಾಲಂಕಾರ: 2–85, 86, 87

ಈ ಬಗೆಯಾದ ಹಲವು ಪ್ರಶ್ನೆಗಳು ನಮ್ಮ ಆಲಂಕಾರಿಕರಲ್ಲಿ ಎದ್ದದ್ದು ಗಮನಿಸಬೇಕಾದ ಸಂಗತಿಯಾಗಿದೆ. ಇದ್ದುದನ್ನು ಇದ್ದಹಾಗೆ ಹೇಳುವ ಅಭಿವ್ಯಕ್ತಿಯನ್ನು ಕುರಿತು ನಮ್ಮ ಆಲಂಕಾರಿಕರು ಬಳಸಿದ ಪಾರಿಭಾಷಿಕ ಪದಗಳು ಇವು: ವಾರ್ತೆ. ಜಾತಿ. ವಾಸ್ತವ, ಸ್ವಭಾವೋಕ್ತಿ. ಇದ್ದುದನ್ನು ಇದ್ದಹಾಗೆ ಹೇಳುವುದು ಎನ್ನುವುದಕ್ಕೆ ಬಳಸಿದ ಈ ಪದಗಳಲ್ಲಿ 'ವಾಸ್ತವ' ಎಂಬುದೂ ಒಂದೆಂಬುದು ಗಮನಿಸಬೇಕಾದ ಅಂಶವಾಗಿದೆ. 'ವಾಸ್ತವ' ವೆಂದರೆ ವಸ್ತುಸ್ವರೂಪ ಕಥನವೆಂದು ರುದ್ರಟನೆಂಬ ಆಲಂಕಾರಿಕನು ಹೇಳುತ್ತಾನೆ.[15]

ನಮ್ಮ ಆಲಂಕಾರಿಕರ ಪ್ರಕಾರ ಕಾವ್ಯಾಭಿವ್ಯಕ್ತಿ ಸಾಲಂಕೃತಾಭಿವ್ಯಕ್ತಿ. ಲೋಕ ಹಾಗೂ ಶಾಸ್ತ್ರ ಭಾಷೆಗಳಿಗಿಲ್ಲದ ಒಂದು ವಕ್ರತೆ ಕಾವ್ಯದ ಭಾಷೆಗಿದೆ. ಲೋಕವ್ಯವಹಾರದಲ್ಲಿ ಹಾಗೂ ಶಾಸ್ತ್ರ ನಿರೂಪಣೆಯಲ್ಲಿ ಭಾಷೆಯನ್ನು ನೇರವಾಗಿ ಬಳಸಲಾಗುತ್ತದೆ; ಆದರೆ ಕಾವ್ಯದಲ್ಲಿ ಹಾಗಲ್ಲ. ಹೀಗಿರುವಾಗ ಕಾವ್ಯದಲ್ಲೂ ಇದ್ದುದನ್ನು ಇದ್ದಹಾಗೆ ಹೇಳುವ ಕ್ರಮ. ಕಾವ್ಯವಾಗದೆ ವಾರ್ತೆಯಾಗುತ್ತದೆ. ವಾರ್ತೆಯೆಂದರೆ ಯಥಾ ಸ್ವರೂಪ ಕಥನವಷ್ಟೆ *

ಕಾವ್ಯಾಭಿವ್ಯಕ್ತಿಯನ್ನು ಕುರಿತ ಚರ್ಚೆಯಲ್ಲಿ 'ಕಾವ್ಯ' ವನ್ನು 'ವಾರ್ತೆ' ಯಿಂದ ಬೇರ್ಪಡಿಸಿ ನೋಡುವ ಈ ಪ್ರಯತ್ನ, ವಿಶೇಷವಾದ ಪರಿಗಣನೆಯಾಗಿದೆ - ಎಂದು ನಮ್ಮ ಅಭಿಪ್ರಾಯ. ಯಾಕೆಂದರೆ 'ಇದ್ದುದನ್ನು ಇದ್ದಹಾಗೆ ಹೇಳುವುದು' ಒಂದು ಪಂಥವೇ ಆದರೆ. ಅದಕ್ಕೆ 'ವಾರ್ತೆ' ಯಾಗುವ ಅಪಾಯ ತಪ್ಪಿದ್ದಲ್ಲ. † ಹೀಗೆಂದ ಮಾತ್ರಕ್ಕೆ 'ಯಥಾಸ್ವರೂಪ ಕಥನ'ವೆಲ್ಲ ವಾರ್ತೆಯೇ ಆಗುತ್ತದೆಂದೇನೂ ಅರ್ಥವಲ್ಲ. ಕವಿಯಾದವನು ಅದನ್ನು 'ಕೇವಲ ವಾರ್ತೆಯಾಗದಂತೆ ಮಾಡಬಲ್ಲ' - ಎಂಬುದನ್ನೂ ನಮ್ಮ ಅಲಂಕಾರ ಶಾಸ್ತ್ರ ಗಮನಿಸಿದೆ. ಜಯಮಂಗಲವೆಂಬ ಕೃತಿ, ಇದ್ದುದನ್ನು ಇದ್ದಹಾಗೆ ವರದಿಮಾಡುವ 'ಲೋಕವಾರ್ತೆ' ಹಾಗೂ 'ಶಾಸ್ತ್ರವಾರ್ತೆ' ಯಿಂದ ಕಾವ್ಯಾಭಿವ್ಯಕ್ತಿಯನ್ನು ಪ್ರತ್ಯೇಕಿಸಿ, ಕಾವ್ಯದ್ದು 'ವಿಶಿಷ್ಟ ವಾರ್ತೆ' ಎಂದು ಕರೆದದ್ದು ಸ್ವಾರಸ್ಯವಾಗಿದೆ.[16] ಎಂದರೆ ಇದ್ದುದನ್ನು ಇದ್ದಹಾಗೆ ಹೇಳಿದರೆ ಅದು ವಾರ್ತೆಯಂತೆ ತೋರುತ್ತದೆಂಬುದೇನೋ ನಿಜವೆ: ಆದರೆ ಕವಿಯಾದವನು ಹೇಳಿದಾಗ ಅದು ಬೇರೆಯಾಗುತ್ತದೆ.

---

15. ರುದ್ರಟ: ಕಾವ್ಯಾಲಂಕಾರ: VIII-10

* 'ಯಥಾ ಸ್ವರೂಪ ಕಥನಂ ವಾರ್ತೇತಿ ಪರಿಕೀರ್ತಿತಮ್': ವಿಷ್ಣುಧರ್ಮೋತ್ತರ.

† ಇದು 'ವಾಸ್ತವವಾದ'ಕ್ಕೆ ಒಂದು ಎಚ್ಚರಿಕೆ ಮಾತಾಗಿದೆ. 'ವಾಸ್ತವವಾದ' ಇದ್ದುದಿದ್ದ ಹಾಗೆ ಹೇಳುವ ಧೋರಣೆಯನ್ನೇ ಅತಿರೇಕಕ್ಕೆ ಒಯ್ದರೆ, ಅದು ಕೇವಲ 'ವರದಿ' ಅಥವಾ 'ವಾರ್ತೆ' ಯಾಗುವ ಅಪಾಯ ಅದಕ್ಕೆ ತಪ್ಪಿದ್ದಲ್ಲ. ಆದ್ದರಿಂದ ಹೀಗೆ ವಾರ್ತೆಯಾದದ್ದರಿಂದಲೆ, ವಾಸ್ತವವಾದವನ್ನು, 'ನ್ಯಾಚುರಲಿಸಂ' ಎಂದು ಕಡೆಗಣಿಸಿ ನೋಡಿದಂತೆ ತೋರುತ್ತದೆ.

16. V. Raghavan : Some Concepts of Alankara Sastra : p. 96

ಅಷ್ಟೇ ಅಲ್ಲ ಕಾವ್ಯವಾಗುತ್ತದೆ. ಆದರೆ ಬಾಣನು ಈ ಬಗೆಯ ಉಕ್ತಿಯನ್ನು 'ಜಾತಿ' ಎಂದು ಕರೆದಿದ್ದಾನೆ. 'ಜಾತಿ' ಎಂದರೆ, ಕವಿಯಾದವನು ಇದ್ದುದನ್ನು ಇದ್ದಹಾಗೆ ಹೇಳಿದ ಒಂದು ಅಭಿವ್ಯಕ್ತಿ.[17] 'ಜಾತಿ' ಎಂಬುದು 'ಸ್ವಭಾವೋಕ್ತಿ' ಎಂದು ಮುಂದಿನವರು ಕರೆದವರ ಹಳೆಯ ಹೆಸರು. ಇದ್ದುದನ್ನು ಇದ್ದಹಾಗೆ ಹೇಳುವ. 'ಜಾತಿ' ಎಂದು ಗುರುತಿಸಲಾದ ಈ ಅಭಿವ್ಯಕ್ತಿ 'ಅಗ್ರಾಮ್ಯ'ವಾಗಿರಬೇಕು ಎಂದು ಬಾಣನು ಹೇಳುತ್ತಾನೆ. ಇದೊಂದು ಬಹು ಮುಖ್ಯವಾದ ಸಂಗತಿ. ಇದ್ದುದನ್ನು ಇದ್ದಹಾಗೆ ಹೇಳುವುದು ಕಾವ್ಯಕ್ಕೆ ವಿರೋಧವಾದುದೇನೂ ಅಲ್ಲ; ಆದರೆ ಹಾಗೆ ಹೇಳಿದ್ದು 'ಅಗ್ರಾಮ್ಯ'ವಾಗಿರಬೇಕು - ಎಂದು ಬಾಣನ ಅಭಿಪ್ರಾಯ. ಇದು ಮುಖ್ಯವಾಗಿ ಲೋಕವ್ಯವಹಾರದ ಭಾಷೆಗೂ. ಕಾವ್ಯಾಭಿವ್ಯಕ್ತಿಯ ಭಾಷೆಗೂ ಇರಬೇಕಾದ ವ್ಯತ್ಯಾಸವನ್ನು ಕುರಿತದ್ದು. ದೈನಂದಿನ ವ್ಯವಹಾರದ ಭಾಷೆ ಬಹುಮಟ್ಟಿಗೆ 'ಗ್ರಾಮ್ಯ'ವಾಗಿರುತ್ತದೆ. ಯಾಕೆಂದರೆ ಅದಕ್ಕೆ ವ್ಯಾವಹಾರಿಕ ಪ್ರಯೋಜನವೊಂದಲ್ಲದೆ ಬೇರೆಯದೇನೂ ಇರುವುದಿಲ್ಲ. ಆದಕಾರಣ ಇದ್ದುದನ್ನು ಇದ್ದಹಾಗೆ ಹೇಳುವಾಗ ಅದು 'ವಾರ್ತೆ'ಯಾಗದೆ. 'ಕಾವ್ಯ'ವಾಗಬೇಕಾದರೆ, ಅದು 'ಅಗ್ರಾಮ್ಯ'ವಾಗಬೇಕು ಅಥವಾ ಒಂದಷ್ಟು ಪರಿಷ್ಕಾರ ಹೊಂದಿರಬೇಕು - ಎನ್ನುವ ಸೂಚನೆ ಇಲ್ಲಿದೆ.

ಮುಂದೆ 'ಇದ್ದುದನ್ನು ಇದ್ದಹಾಗೆ ಹೇಳುವ' ಈ ಅಭಿವ್ಯಕ್ತಿಗೆ 'ಸ್ವಭಾವೋಕ್ತಿ' ಎಂಬ ಸಾರ್ಥಕವಾದ ಹೆಸರು ಪ್ರಚಲಿತವಾಯಿತು - ನಮ್ಮ ಆಲಂಕಾರಿಕರಲ್ಲಿ. ನಮ್ಮ ಆಲಂಕಾರಿಕರು ಇದೂ ಒಂದು ಕಾವ್ಯಾಭಿವ್ಯಕ್ತಿ ಎಂದು ಅಂಗೀಕರಿಸಿದ್ದಲ್ಲದೆ. ಇದನ್ನೂ ಇತರ ಉಕ್ತಿವಿನ್ಯಾಸದಂತೆ ಒಂದು ಅಲಂಕಾರವೆಂದು ಕರೆದು. ಅಲಂಕಾರಗಳ ಪಟ್ಟಿಯಲ್ಲಿ ಸೇರಿಸಿಕೊಂಡರು. ಅಲಂಕಾರವೆಂಬ ಪದದ ಸಂಕುಚಿತಾರ್ಥದ ಯಾವ ಲಕ್ಷಣಗಳೂ 'ಸ್ವಭಾವೋಕ್ತಿ'ಗೆ ಇಲ್ಲದಿದ್ದರೂ. ಅಲಂಕಾರವೆಂದರೆ ಸೌಂದರ್ಯವೆಂಬ ವಿಶಾಲಾರ್ಥಕ್ಕೆ ಸಲ್ಲುವ ಲಕ್ಷಣ 'ಸ್ವಭಾವೋಕ್ತಿ'ಗೆ ಇರುವ ಕಾರಣ, ಅದನ್ನೊಂದು ಅಲಂಕಾರವೆಂದು ಭಾವಿಸಿದ್ದು ತಪ್ಪೇನಲ್ಲ. ಅಂತೂ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ. ಇಂದಿನ 'ವಾಸ್ತವವಾದ'ವನ್ನು ಅಭಿವ್ಯಕ್ತಿಯ ವಿಷಯದಲ್ಲಿ. ಹೋಲುವ 'ಸ್ವಭಾವೋಕ್ತಿ' ಪ್ರಾಸಂಗಿಕವಾಗಿ ಚರ್ಚಿತವಾಗಿರುವುದು ಗಮನೀಯವಾದ ಸಂಗತಿಯಾಗಿದೆ.

ಆದರೆ. ಸ್ವಭಾವೋಕ್ತಿಯ ವಿಚಾರದಲ್ಲಿ ಕುಂತಕನೆಂಬ ಆಲಂಕಾರಿಕನ ವಿಚಾರಗಳು ಈ ಬಗ್ಗೆ ಪ್ರಾಸಂಗಿಕವಾಗಿ ಚರ್ಚಿಸಿದ ಇತರ ಆಲಂಕಾರಿಕರಿಂದ ಭಿನ್ನವೂ. ವಿಶಿಷ್ಟವೂ ಆಗಿವೆ. ಉಳಿದ ಆಲಂಕಾರಿಕರು. ಕಾವ್ಯದಲ್ಲಿ ಎಲ್ಲೋ ಕೆಲವೆಡೆ ಬರುವ ನಿರಲಂಕಾರವೆಂಬಂತೆ ತೋರುವ. ಇದ್ದುದನ್ನು ಇದ್ದಹಾಗೆ ಹೇಳಿದ ಅಭಿವ್ಯಕ್ತಿಗಳನ್ನು 'ಸ್ವಭಾವೋಕ್ತಿ' ಎಂದು ಕರೆದರೆ. ಕುಂತಕನು ಮಾತ್ರ ಸ್ವಭಾವೋಕ್ತಿಯೇ ಕಾವ್ಯ ಕ್ರಿಯೆಯ ಮೂಲವೆಂದೂ, ಕವಿಯ ಕಾವ್ಯವೆಲ್ಲವೂ ಸ್ವಭಾವೋಕ್ತಿಯೇ ಎಂದೂ ಪ್ರತಿಪಾದಿಸಿದ್ದು ಮಹ

17. ಅಲ್ಲೇ: ಪು. 93

ತ್ವದ ಸಂಗತಿಯಾಗಿದೆ. 'ಸ್ವಭಾವೋಕ್ತಿ'ಯನ್ನು ಕಾವ್ಯಾಭಿವ್ಯಕ್ತಿಯಲ್ಲಿ ಕ್ವಚಿತ್ತಾಗಿ ಗುರುತಿಸಿದ ಇತರ ಆಲಂಕಾರಿಕರು, ಅದೂ ಕಾವ್ಯ ಹೌದೆ ಅಲ್ಲವೆ ಎಂಬ ಶಂಕೆ ಯನ್ನು ವ್ಯಕ್ತಪಡಿಸಿದಾಗ, ಕುಂತಕ ಅವರುಗಳಿಂದ ಭಿನ್ನವಾದ ನಿಲುವನ್ನು ತಳೆದು, ಅದು ಇತರ ಅಲಂಕಾರಗಳಂತೆ ಒಂದು ಅಲಂಕಾರವಲ್ಲ; ಅದೇ ಮೂಲಾಲಂಕಾರ; ಅದು ಕಾವ್ಯದಲ್ಲಿ ಅಲ್ಲಲ್ಲಿ ಇರತಕ್ಕದ್ದಲ್ಲ. ಇಡೀ ಕಾವ್ಯವೇ ಅದಾಗಿದೆ – ಎಂದು ಹೇಳಿದನು.[18] ಅವನ ಪ್ರಕಾರ ಸ್ವಭಾವೋಕ್ತಿ ಎಂದರೆ ಕವಿಸ್ವಭಾವದ ಉಕ್ತಿ. ಕವಿಸ್ವಭಾವ ಇದ್ದುದನ್ನು ಇದ್ದಹಾಗೆ ಹೇಳುವಾಗ, ಹಾಗೆ ಹೇಳಿದ್ದನ್ನು ಕಾವ್ಯವೆಂದು ಹೊರಗಿನಿಂದ ಗುರುತಿಸುವ ನಮಗೆ ಅದು 'ವಕ್ರೋಕ್ತಿ'ಯಂತೆ ತೋರುತ್ತದೆ. ಕಾವ್ಯ ವೆಂದರೆ ಮೂಲತಃ ಕವಿಯ ಸ್ವಭಾವದ ಉಕ್ತಿಯೇ. ಕವಿಯ ಕಣ್ಣು ಪ್ರತಿ ಯೊಂದು ವಸ್ತುವಿನ ವಿಶಿಷ್ಟ ಸ್ವಭಾವವನ್ನು ಗ್ರಹಿಸಿ ಅಭಿವ್ಯಕ್ತಪಡಿಸಬಲ್ಲದು. ಹಾಗೆ ಗ್ರಹಿಸಿ ಅಭಿವ್ಯಕ್ತಪಡಿಸುವಾಗ ಕವಿಸ್ವಭಾವವೂ ಮುಖ್ಯವಾದ ಪಾತ್ರವನ್ನು ವಹಿಸಬಲ್ಲದು.[19] ಈ ಕಾರಣದಿಂದ ಕುಂತಕನ ಪ್ರಕಾರ ಕಾವ್ಯದಲ್ಲಿ ಎಲ್ಲೋ ಕೆಲವೆಡೆ ಇದ್ದುದನ್ನು ಇದ್ದಹಾಗೆ ಹೇಳಿದ್ದು ಮಾತ್ರ 'ಸ್ವಭಾವೋಕ್ತಿ' ಅಲ್ಲ. ಎಲ್ಲ ಕಾವ್ಯಾಭಿವ್ಯಕ್ತಿಯೂ ಸ್ವಭಾವೋಕ್ತಿಯೇ – ಅದು ಆಲಂಕಾರಿಕವಾಗಿರಲಿ, ನಿರಲಂಕಾರಿಕ ವಾಗಿರಲಿ. ಯಾಕೆಂದರೆ, ಕುಂತಕನ ಪ್ರಕಾರ ಇದ್ದುದನ್ನು ಇದ್ದಹಾಗೆ ಹೇಳುವುದೇ ಕವಿಸ್ವಭಾವ. ಎಲ್ಲ ಕಾವ್ಯಾಭಿವ್ಯಕ್ತಿಯೂ, ಕವಿ ತಾನು ಕಂಡದ್ದನ್ನು ಕಂಡಹಾಗೆ ಹೇಳಿ ದ್ದಲ್ಲದೆ ಮತ್ತಿನ್ನೇನು ? ಕುಂತಕನ ಈ ನಿಲುವು ಇದ್ದುದನ್ನು ಇದ್ದಹಾಗೆ ಹೇಳಿದರೆ ಮಾತ್ರ ಸಾಹಿತ್ಯವೆಂಬ ವಾಸ್ತವವಾದೀ ಧೋರಣೆಯನ್ನೂ ಒಳಗೊಂಡು ಇನ್ನೂ ಮುಂದೆ ಹೋಗುತ್ತದೆ.

3

ಭಾರತೀಯ ಸ್ವಭಾವೋಕ್ತಿತತ್ವ ಮುಖ್ಯವಾಗಿ ಗಮನಿಸುವುದು ಕಾವ್ಯಾಭಿ ವ್ಯಕ್ತಿಯನ್ನು ; ಪಾಶ್ಚಾತ್ಯ 'ವಾಸ್ತವವಾದ' ಗಮನಿಸುವುದು ಮುಖ್ಯವಾಗಿ ಗದ್ಯಾಭಿ ವ್ಯಕ್ತಿಯನ್ನು. 'ಸ್ವಭಾವೋಕ್ತಿ' ಕಾವ್ಯದ ನೆಲೆಯಲ್ಲಿ ಪ್ರಾಸಂಗಿಕವಾಗಿ ಕಂಡುಬಂದ ಯಥಾವತ್ತಾದ ಚಿತ್ರಣಗಳು ಕಾವ್ಯವಾಗುತ್ತದೆಯೆ ಇಲ್ಲವೆ ಎಂಬುದನ್ನು ಕುರಿತ ವಿಚಾರವೆ ಹೊರತು. ಪಾಶ್ಚಾತ್ಯ ವಾಸ್ತವವಾದಿಗಳಲ್ಲಿನ ಹಾಗೆ ಇದ್ದುದನ್ನು ಇದ್ದ ಹಾಗೆ ಚಿತ್ರಿಸಬೇಕು' ಎನ್ನುವ ಸಾಹಿತ್ತಿಕ ಧೋರಣೆಯನ್ನು ಕುರಿತ ವಿಚಾರವಲ್ಲ. ಯಾವುದೋ ಒಂದು ರೀತಿಯಲ್ಲಿ, ಆಲಂಕಾರಿಕವಾಗಿ ಬರೆದರೆ ಮಾತ್ರ ಕಾವ್ಯವಾ

---

18 ಅಲ್ಲೇ : ಪು. 110.

19 ಅಲ್ಲೇ : ಪು. 115.

ಗುತ್ತಿವೆ ಎಂಬ ಭಾವನೆ ಪ್ರಬಲವಾಗಿದ್ದ ಕಾಲದಲ್ಲಿ, ನಮ್ಮ ಆಲಂಕಾರಿಕರು, 'ಇದ್ದು ದನ್ನು ಇದ್ದಹಾಗೆ' ಹೇಳಿದಂತೆ ತೋರುವ ಅಭಿವ್ಯಕ್ತಿಗಳೂ ಕಾವ್ಯವಾಗಬಲ್ಲವು ಎಂಬುದನ್ನು ಒಪ್ಪಿಕೊಂಡದ್ದು ಮಹತ್ವದ ವಿಚಾರವಾಗಿದೆ. ನಮ್ಮವರು ಇದೇ ಕಾವ್ಯಾಭಿವ್ಯಕ್ತಿಯೇ ಹೀಗಿರಬೇಕೆಂದಾಗಲಿ. ಇದ್ದುದನ್ನು ಇದ್ದಹಾಗೆ ಹೇಳಿದ್ದು ಮಾತ್ರ ಕಾವ್ಯವಾಗುತ್ತದೆ – ಎಂದಾಗಲಿ. ಎಂದೂ ವಾದಿಸಿದ ಹಾಗೆ ತೋರುವುದಿಲ್ಲ. ಅಲ್ಲದೆ 'ಸ್ವಭಾವೋಕ್ತಿ'ಯ ಚರ್ಚೆ ನಡೆದ ಆ ಹಿಂದಿನ ಕಾಲದಲ್ಲಿ – ಇಂಗ್ಲಿಷಿನ ಕ್ಲಾಸಿಕಲ್ ಯುಗಕ್ಕೆ ಸಂವಾದಿಯಾಗುವ ಆ ಕಾಲದಲ್ಲಿ. ಇಂದಿನ ಹಾಗೆ ಕಾವ್ಯಕ್ಕೆ ಸಾಮಾಜಿಕ ಸಂಬಂಧಿಯಾದ ತೀವ್ರವಾದ ಯಾವ ಧೋರಣೆಯೂ ಇರಲಿಲ್ಲ. ಆದುದರಿಂದಲೇ, 'ಸ್ವಭಾವೋಕ್ತಿ'ಗೆಂದು ನಮ್ಮವರು ಕೊಡುವ ಬಿಡಿ ಬಿಡಿ ನಿದರ್ಶನಗಳನ್ನು ನೋಡಿದರೆ, ಅಲ್ಲಿ ಸಾಮಾಜಿಕ ಸಂದರ್ಭ ಹಾಗೂ ಮಾನವಭಾವ ಸಂಬಂಧಿಯಾದ ಪರಿಸರಕ್ಕಿಂತ, ಕೇವಲ ನಿಸರ್ಗವ್ಯಾಪಾರಗಳ ವರ್ಣನೆಗಳ ತುಣುಕುಗಳನ್ನೆ ವಿಶೇಷವಾಗಿ ನಾವು ಕಾಣುವುದು. ಈ ಕಾರಣದಿಂದ ಪಾಶ್ಚಾತ್ಯ 'ವಾಸ್ತವವಾದ'ವನ್ನು ನಮ್ಮವರ 'ಸ್ವಭಾವೋಕ್ತಿ'ಯೊಂದಿಗೆ ಇರಿಸಿ ನೋಡುವುದು ಎಷ್ಟು ಸಂಗತ ಎಂಬ ಪ್ರಶ್ನೆ ಉದ್ಭವಿಸುತ್ತದೆ.

'ವಾಸ್ತವವಾದ'ದ ಲಕ್ಷ್ಯ. ಯಥಾವತ್ತಾದ ಸ್ಥಿತಿಯನ್ನು ಯಥಾವತ್ತಾದ ಭಾಷೆಯಲ್ಲಿ ಹೇಳಬೇಕೆನ್ನುವುದರ ಕಡೆಗೆ. ಪಾಶ್ಚಾತ್ಯ 'ವಾಸ್ತವವಾದ' ಕಾದಂಬರಿ. ನಾಟಕ ಹಾಗೂ ಕಲೆ – ಎಂದರೆ ಚಿತ್ರ, ಶಿಲ್ಪ – ಗಳಲ್ಲಿ ಯಶಸ್ವಿಯಾದ ಹಾಗೆ, ಕಾವ್ಯಾಭಿವ್ಯಕ್ತಿಯಲ್ಲಿ ಆಗಲು ಸಾಧ್ಯವಾಗಲಿಲ್ಲ. ಸಾಹಿತ್ಯ ಎಂದಾಗ 'ಗದ್ಯ' 'ಪದ್ಯ'ಗಳೆಂಬ ಭೇದವನ್ನೆಣಿಸುವುದು ಅಷ್ಟು ಸಮರ್ಪಕವಲ್ಲವಾದರೂ, ಈ ಎರಡರ ಮಾಧ್ಯಮದಿಂದಾಗಿ, ಅಭಿವ್ಯಕ್ತಿಯಲ್ಲಿನ ಸಾಧ್ಯತೆಗಳು ಬೇರೆಬೇರೆಯ ಸ್ತರದ್ದಾಗುವುದು ಅನಿವಾರ್ಯ. ಗದ್ಯಾಭಿವ್ಯಕ್ತಿಯಲ್ಲಿ, ಅಂದಂದಿನ ಸಾಮಾಜಿಕ ಪರಿಸರವನ್ನು ಇದ್ದುದಿದ್ದಹಾಗೆ, ಯಥಾವತ್ತಾದ ಆಡುಭಾಷೆಯಲ್ಲಿ ತರಲು ಸಾಧ್ಯವಿರುವಂತೆ, ಪದ್ಯದ ಭಾಷೆಯಲ್ಲಿ ತರಲು ಸಾಧ್ಯವಾಗುವುದಿಲ್ಲ. ಕಾವ್ಯದ ಭಾಷೆ ಯಾವಾಗಲೂ ಗದ್ಯದ ಭಾಷೆಗಿಂತ ಭಿನ್ನವಾದ ನಿಲುವಿನಲ್ಲಿ, ಪ್ರಾಸ-ಲಯ-ಛಂದೋವಿನ್ಯಾಸದಲ್ಲಿ ರೂಪು ತಾಳುವುದರಿಂದ, ಅಲ್ಲಿ ಯಥಾವತ್ತಾದುದನ್ನು ಯಥಾವತ್ತಾದ ರೀತಿಯಲ್ಲಿ ಹೇಳುವುದು ಕಷ್ಟ. ಎಂದರೆ, ಕಾವ್ಯ ಯಥಾವತ್ತಾದ ಭಾಷೆಯನ್ನು ಬಳಸಲು ಸಾಧ್ಯವಾಗದ ಕಾರಣ, ಯಥಾವತ್ತಾದ ಪರಿಸ್ಥಿತಿಯನ್ನು ಹೇಳಲಾಗುವುದಿಲ್ಲ ಎಂದು ಅರ್ಥವಲ್ಲ. ಹಾಗೆ ನೋಡಿದರೆ ಕವಿ ತನ್ನ ಪರಿಸರದ ಯಥಾವತ್ತಾದ ಸ್ಥಿತಿಯನ್ನು, ಯಥಾವತ್ತಾದ ಭಾಷೆಯಲ್ಲಿ ನೇರವಾಗಿ ಹೇಳುವ ಗದ್ಯವಿಧಾನಕ್ಕಿಂತ ಹೆಚ್ಚು ತೀವ್ರವಾಗಿ ಮತ್ತು ಪರಿಣಾಮಕಾರಿಯಾಗಿ ಕಾವ್ಯ ಭಾಷೆಯ ಸಾಲಂಕೃತ ವಿಧಾನದಲ್ಲಿ. ಸಂಕೇತ, ಪ್ರತೀಕ. ಪ್ರತಿಮಾ ವಿಧಾನದಲ್ಲಿ ಹೇಳಲು ಸಾಧ್ಯವಿದೆ. ಆಧುನಿಕ ಕಾವ್ಯವನ್ನು ನೋಡಿ

ವರೆ ಈ ಮಾತಿನ ಯಥಾರ್ಥತೆ ತಿಳಿಯುತ್ತದೆ. ಆದುದರಿಂದ 'ವಾಸ್ತವವಾದ' ವೆಂದರೆ ಇದ್ದುದನ್ನು ಇದ್ದಹಾಗೆಯೇ ಯಥಾವತ್ತಾದ ಭಾಷೆಯಲ್ಲಿ ಹೇಳುವುದು– ಎಂಬ ಅಭಿಪ್ರಾಯವನ್ನು ಕೈಬಿಡಬೇಕು. ಇದು ವಾಸ್ತವವಾದ ಹೌದೆ ಅಲ್ಲವೆ ಎಂಬುದನ್ನು ನಿರ್ಣಯಿಸುವ ಮೊದಲ ಸಾಧನ, ಅಭಿವ್ಯಕ್ತಿ ಅಲ್ಲ. ಅದರ ಹಿಂದಿರುವ ಧೋರಣೆ ಹಾಗೂ ಅನುಭವ. ಈ ಕಾರಣದಿಂದ 'ವಾಸ್ತವವಾದ'ವನ್ನು ಕುರಿತು ಮಾತನಾಡುವಾಗ 'ಗದ್ಯಾಭಿವ್ಯಕ್ತಿ'ಯಲ್ಲಿ ಅದಕ್ಕೆ ಯಾವ ಅರ್ಥವನ್ನು ಕೊಡುತ್ತೇವೋ. ಅದರಿಂದ ಬೇರೆಯಾದ ಅರ್ಥವನ್ನು 'ಪದ್ಯಾಭಿವ್ಯಕ್ತಿ'ಯನ್ನು ಕುರಿತು ಮಾತನಾಡುವಾಗ ಇಟ್ಟುಕೊಳ್ಳಬೇಕಾಗಿದೆ. 'ವಾಸ್ತವವಾದ' ನಿಜವಾಗಿ ನೋಡಿದರೆ, ಆಗಲೇ ಹೇಳಿದಂತೆ ಒಂದು ಧೋರಣೆ; ಕೇವಲ ಅಭಿವ್ಯಕ್ತಿ ಮಾಧ್ಯಮವನ್ನು ಹಿಡಿದು ಅದರ ಮೇಲಿನಿಂದ ಈ ಒಂದು ಧೋರಣೆ ಇದೆ ಅಥವಾ ಇಲ್ಲ ಎಂಬುದನ್ನು ನಿರ್ಣಯಿಸುವುದು ಅಸಾಧು. ಈ ದೃಷ್ಟಿಯಿಂದ ನೋಡಿದರೆ ಭಾರತೀಯ ಆಲಂಕಾರಿಕರು, 'ಸ್ವಭಾವೋಕ್ತಿ'ಯನ್ನು ಗುರುತಿಸಿದ್ದು ಒಂದು ಅಭಿವ್ಯಕ್ತಿ ಮಾತ್ರ ಎಂದೇ. ಧ್ವನಿತತ್ತ್ವ ಪ್ರತಿಪಾದನೆಯಾದ ಮೇಲಂತೂ, ಕಾವ್ಯಾಭಿವ್ಯಕ್ತಿ ನೇರವಾಗಿದೆಯೆ. ವಕ್ರವಾಗಿದೆಯೆ, ಸಾಲಂಕೃತವಾಗಿದೆಯೆ, ನಿರಲಂಕಾರವಾಗಿದೆಯೆ – ಎಂಬ ಪ್ರಶ್ನೆಗಳು ಮುಖ್ಯವೇ ಅಲ್ಲ ಎಂದು ಬದಿಗೊತ್ತಿ, ಯಾವ ಅಭಿವ್ಯಕ್ತಿಯಲ್ಲಿ 'ಧ್ವನಿ' ಇದೆಯೋ, ಒಂದು ಅಭಿವ್ಯಕ್ತಿಯಲ್ಲಿ ಮೇಲೆ ಕಾಣುವ ಅರ್ಥಕ್ಕಿಂತ, ಬೇರೆಯಾದ ಹಾಗೂ ಮಿಗಿಲಾದ ಅರ್ಥಪರಂಪರೆಯನ್ನು ಸಹೃದಯನಲ್ಲಿ ಸ್ಫುರಿಸುವ ಸಾಮರ್ಥ್ಯವಿದೆಯೋ ಅದು ನಿಜವಾದ ಕಾವ್ಯ ; ಎಲ್ಲಿ ಧ್ವನಿ ಪ್ರಧಾನವಲ್ಲವೋ, ಅದು ಉತ್ತಮ ಕಾವ್ಯವಲ್ಲ : ಎಲ್ಲಿ ಧ್ವನಿ ಅಪ್ರಧಾನವಾಗಿ ಕೂಡ ಇಲ್ಲವೋ ಅದು ಕಾವ್ಯವೇ ಅಲ್ಲ – ಎಂದು ಹೇಳಿದರು, 'ಸ್ವಭಾವೋಕ್ತಿ' ಕೂಡಾ ಧ್ವನಿತತ್ತ್ವದ ಸವಾಲನ್ನೆದುರಿಸಲೇಬೇಕು. *

---

* ಯಥಾವತ್ತಾದ ವರ್ಣನೆಯನ್ನು, 'ಸ್ವಭಾವೋಕ್ತಿ' ಎಂದು ಕರೆಯುವ ಮುನ್ನ ಅದನ್ನು 'ವಾರ್ತೆ' ಎಂದು ಕೀಳ್ಗಳೆದು ನೋಡಿದ್ದುಂಟು. ಭಾಮಹನೆಂಬ ಆಲಂಕಾರಿಕ 'ಗತೋಽಸ್ತಮರ್ಕೋ ಭಾತೀಂದುಃ ಯಾಂತಿ ವಾಸಾಯ ಪಕ್ಷಿಣಃ'– ಎಂಬುದನ್ನು ಹೇಳಿ 'ಇತ್ಯೇವಮಾದಿ ಕಿಂ ಕಾವ್ಯಂ ವಾರ್ತಾಮೇನಾಂ ಪ್ರಚಕ್ಷತೇ (ಕಾವ್ಯಾಲಂಕಾರ 2-87) ಎನ್ನುತ್ತಾನೆ. ಹೊತ್ತು ಮುಳುಗಿತು. ಚಂದ್ರ ಬೆಳಗಿತು, ಹಕ್ಕಿ ಗೂಡಿಗೆ ಸೇರಿತು - ಎಂಬುದು ತನಗೆ ತಾನೇ 'ವಾರ್ತೆ' ಯೆಂಬುದೇನೋ ನಿಜವೆ. ಆದರೆ ಇದೇ ಯಥಾವತ್ತಾದ ಮಾತು, ಕಾವ್ಯದ ಸಂದರ್ಭವೊಂದರಲ್ಲಿ ಬಂದಾಗ ಅದಕ್ಕೊದಗುವ 'ಧ್ವನಿ'ಯೇ ಬೇರೆ. ಉದಾಹರಣೆಗೆ ಅರ್ಜುನನು ಸೈಂಧವನನ್ನು ಕೊಲ್ಲುವೆನೆಂದು ಪ್ರತಿಜ್ಞೆಮಾಡಿದ ದಿನದ ಸಂಜೆಯ ಸೂಚನೆಯಾಗಿ 'ಗತೋಽಸ್ತಮರ್ಕೋ' ಎಂಬ ಮಾತು ಬಂದರೆ, ಸತ್ಯವಾನ ಸಾಯುವ ದಿನದಂದು, ಸಂಜೆ ಸಾವಿತ್ರಿಯ ಕಿವಿಗೆ 'ಗತೋಽಸ್ತಮರ್ಕೋ' ಎಂಬ ಧ್ವನಿ, ಹಿನ್ನೆಲೆಯಿಂದ ಘೋಷಿತವಾದಂತೆ ಚಿತ್ರಿತವಾದ ಸಂದರ್ಭದಲ್ಲಿ – ಈ ಒಂದು ವಾರ್ತೆಗೆ ಒದಗುವ ಧ್ವನಿಶಕ್ತಿಯೇ ಬೇರೆ. ನಿಜವಾದ ಕವಿಕೃತಿಗಳಲ್ಲಿ ಹೇಳಿಕೆ (Statement) ಗಳಂತೆ ತೋರುವ, ಎಷ್ಟೋ 'ಸ್ವಭಾವೋಕ್ತಿ'ಗಳಿಗೆ ಸಮಯ-ಸಂದರ್ಭಗಳಿಗೆ ಅನುಸಾರವಾಗಿ 'ಧ್ವನಿಪ್ರತಿಮೆ'ಗಳಾಗುವ ಸಾಮರ್ಥ್ಯ ಉಂಟು. ನಮ್ಮವರು ಹೇಳಿದ 'ವಸ್ತುಧ್ವನಿ'ಯೊಳಗೆ, ಈ 'ಸ್ವಭಾವೋಕ್ತಿ'ಯನ್ನು ಅಡಗಿಸಬಹುದು.

4

'ವಾಸ್ತವವಾದ' ಮತ್ತು 'ಸ್ವಭಾವೋಕ್ತಿ' ಈ ಎರಡಕ್ಕೂ ಸಮಾನವಾದ ಒಂದು ಮಾತೆಂದರೆ 'ಇದ್ದುದನ್ನು ಇದ್ದಹಾಗೆ ಚಿತ್ರಿಸುವುದು' - ಎನ್ನುವುದು. 'ಇದ್ದುದನ್ನು ಇದ್ದ ಹಾಗೆ ಹೇಳುವುದು' ಎಂಬ ಮಾತನ್ನು ಬೇರೊಂದು ನಿಲುವಿನಿಂದ ಪರಿಶೀಲಿಸಿದರೆ 'ಇದ್ದುದನ್ನು ಇದ್ದಹಾಗೆ ಹೇಳುವುದು' ಯಾರಿಂದಲೂ ಸಾಧ್ಯವಿಲ್ಲವೇನೋ ಎನ್ನಿಸುತ್ತದೆ ! ಯಾಕೆಂದರೆ ಯಾವುದೇ ಘಟನೆಯನ್ನು, ಸಂಗತಿಯನ್ನು, ಅನುಭವವನ್ನು ಯಾರಾದರೂ ಮತ್ತೊಬ್ಬರಿಗೆ ಹೇಳಲು ಹೊರಟರೆ, ಅಲ್ಲಿ ಅದು ಹೇಳುವವನ ಅನುಭವ ಹಾಗೂ ವ್ಯಕ್ತಿತ್ವದ ಮೂಲಕವೇ ಹಾದು ಬರಬೇಕಾಗುತ್ತದೆ. ಎಲ್ಲ ಬಗೆಯ 'ಉಕ್ತಿ'ಗಳೂ, ಒಂದು ವ್ಯಕ್ತಿಮಾಧ್ಯಮದ ಮೂಲಕ ಬಂದ ಅನುಭವದ ಪರಿಣಾಮವಾದ್ದರಿಂದ, ಆ ಅನುಭವ ವ್ಯಕ್ತಿಯ ಸ್ವಭಾವಾನುಸಾರಿಯಾಗಿ ಒಂದಷ್ಟು ವ್ಯತ್ಯಾಸವೋ, ಪರಿವರ್ತನವೋ ಆಗಿ ಬರುವುದು ಅನಿವಾರ್ಯ. ಒಂದು ಕುತೂಹಲಕರವಾದ ಘಟನೆಯನ್ನು ಕುರಿತ ಪತ್ರಿಕಾವರದಿ ಕೂಡ ಬೇರೆ ಬೇರೆ ಪತ್ರಿಕೆಗಳನ್ನು ನೋಡಿದರೆ ವಾರ್ತಾವಿನ್ಯಾಸಕ್ರಮದಲ್ಲಿ ಒಂದೇ ರೀತಿ ಇರುವುದಿಲ್ಲವೆಂಬುದು ತಿಳಿದ ಸಂಗತಿ. ಆಯಾ ಪತ್ರಿಕೆಯಲ್ಲಿ ವರದಿಯನ್ನು ಸಿದ್ಧಪಡಿಸುವವನ ರುಚಿ, ಸಂಸ್ಕಾರ, ಸ್ವಭಾವಾದಿಗಳು ಅದರಲ್ಲಿ ಬೆರೆತಿರುತ್ತವೆ. ಹೀಗಿರುವಲ್ಲಿ ಸಾಹಿತಿಯಾದವನು, ಅದರಲ್ಲೂ ವಿಶಿಷ್ಟವ್ಯಕ್ತಿತ್ವ ಉಳ್ಳವನು, ಒಂದು ವಿಶಿಷ್ಟ ಸ್ವಭಾವದ ಮೂಲಕ ಜಗತ್ತನ್ನು ನೋಡಿ ಅಭಿವ್ಯಕ್ತಪಡಿಸಬಲ್ಲವನು, 'ಇದ್ದುದನ್ನು ಇದ್ದಹಾಗೆ' ಹೇಳುತ್ತೇನೆಂಬುದನ್ನು, ಒಂದು ಧೋರಣೆಯನ್ನಾಗಿ ಮಾಡಿಕೊಂಡರೂ ಕೂಡ ಅವನ 'ವಾಸ್ತವವಾದ' ಅನಿವಾರ್ಯವಾಗಿ ಅವನ 'ಸ್ವಭಾವೋಕ್ತಿ'ಯಾಗುತ್ತದೆ. ಈ ಅರಿವು ವಾಸ್ತವವಾದಿಗಳಿಗೆ ಬಂದದ್ದರಿಂದಲೋ ಏನೋ 'ವಸ್ತುನಿಷ್ಠವಾಸ್ತವವಾದ'ವನ್ನು 'ಯಥಾಸ್ಥಿತಿವಾದ' (Naturalism) ಎಂದು ಕರೆದು, ಅದನ್ನು ಮೆಚ್ಚದೆ, ನಿಜವಾದ 'ವಾಸ್ತವವಾದ' (Realism) ವ್ಯಕ್ತಿನಿಷ್ಠತೆಗೆ ವಿರೋಧವೇನಲ್ಲ - ಎಂದು ರಷ್ಯಾದ ಪರಿಸರದಲ್ಲಿ ಬೇರೊಂದು ರೂಪತಾಳಿದ 'ಸಮಾಜವಾದೀ ವಾಸ್ತವವಾದ'ದವರೂ ಹೇಳತೊಡಗಿ, ಸಾಹಿತಿಯಾದವನಿಗೆ ತನ್ನ ಪರಿಸರದ ವಾಸ್ತವ ಪರಿಸ್ಥಿತಿಯಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು, ಯಾವುದನ್ನು ಬಿಡಬೇಕು, ಹೇಗೆ ಚಿತ್ರಿಸಬೇಕು ಎಂಬ ವಿವೇಚನೆಗೆ ಅವಕಾಶವಿದೆ - ಎಂಬುದನ್ನು ಒಪ್ಪುತ್ತಾರೆ. ಆದರೆ, 'ಈ ವ್ಯಕ್ತಿನಿಷ್ಠತೆ' ರೊಮ್ಯಾಂಟಿಕ್ ಮನೋಧರ್ಮದೊಳಗಿನ 'ವ್ಯಕ್ತಿನಿಷ್ಠತೆ'ಯಿಂದ ಭಿನ್ನವಾದದ್ದೆಂಬುದನ್ನು ಮರೆಯಬಾರದು. ರೊಮ್ಯಾಂಟಿಕ್ ಮನೋಧರ್ಮದಲ್ಲಿನ 'ವ್ಯಕ್ತಿನಿಷ್ಠತೆ'ಗಿದ್ದ ಅನಿರ್ಬಂಧತೆ, 'ಸಮಾಜವಾದಿ ವಾಸ್ತವವಾದ' (Socialist Realism)ದಲ್ಲಿನ ಸಾಹಿತಿಗಳಿಗೆ ಇಲ್ಲ. ಈ ವ್ಯಕ್ತಿತ್ವವೇನಿದ್ದರೂ, ಬದಲಾದ ಪರಿಸರದ ರಾಷ್ಟ್ರನಿರ್ಮಾಣೋದ್ದೇಶದ ಒಂದು ಉಪಕರಣ ಮಾತ್ರ. ಆದರೆ ಈ ಕಾರಣದಿಂದಾಗಿ, ಸಾಹಿತ್ಯಾಭಿವ್ಯಕ್ತಿ ಕೇವಲ ಪ್ರಚಾರ

ಮಾಧ್ಯಮವಾಗದೆ, ನಿಜವಾದ ಅರ್ಥದಲ್ಲಿ ಕಲೆಯಾಗಬೇಕೆಂದೂ, ಓದುಗರಲ್ಲಿ ಹೊಸ ತೇನನನ್ನಾದರೂ ಕೊಡುವಂತಿಬೇಕೆಂದೂ, ಜನತೆಯ ಭಾವ, ಬುದ್ಧಿ ಸಂಕಲ್ಪಶಕ್ತಿಗಳನ್ನು ಶ್ರೀಮಂತಗೊಳಿಸಿ, ಅವರೊಳಗಿನ ಕಲಾವಿದನನ್ನು ಎಚ್ಚರಿಸಬೇಕೆಂದೂ 'ಸಮಾಜವಾದಿ ವಾಸ್ತವವಾದ' (Socialist Realism)[20] ಹೇಳುತ್ತದೆ. ವ್ಯಕ್ತಿಯ ಸೃಜನಾತ್ಮಕ ಸಾಮರ್ಥ್ಯವನ್ನು ಹೀಗೆ ಘನವಾದ ಉದ್ದೇಶದ ನಿರ್ಬಂಧದೊಳಗಿರಿಸಿಯೂ, ಅಂಥ ಸಾಹಿತಿಗಳ ಅಭಿವ್ಯಕ್ತಿ ನಿಜವಾದ ಕಲೆಯಾಗಬೇಕು ಎಂಬ ಆಶಯವನ್ನಿರಿಸಿಕೊಂಡಿರುವ ಈ ಧೋರಣೆ ಆಶ್ಚರ್ಯ ಹಾಗೂ ಕುತೂಹಲದ ಒಂದು ಸವಾಲಿನಂತೆ ತೋರುತ್ತದೆ.

---

20 Socialist Realism in Literature : Pub : Progress Publishers, Moscow Foreword : p. 19.

ನೊಬೆಲ್ ಪಾರಿತೋಷಕ ಗಳಿಸಿದ ತಂದೆ ಮಕ್ಕಳು: "ಸರ್ ವಿಲಿಯಮ್ ಹೆನ್ರಿಬ್ರಾಗ್" ಮತ್ತು "ಸರ್ ವಿಲಿಯಮ್ ಲಾರೆನ್ಸ್ ಬ್ರಾಗ್"

ಕೆ. ಎಸ್. ಲಕ್ಷ್ಮಣರಾವ್


ಬಾಲ್ಯದಿಂದಲೂ ವೈಜ್ಞಾನಿಕ ಪ್ರಸಂಗಗಳಲ್ಲಿ ಆಸಕ್ತಿ ಇದ್ದು. ಸಂಶೋಧನೆಗಳ ಕುತೂಹಲವಿದ್ದರೆ, ಅವು ಒಂದು ಕಾಲದಲ್ಲಿ ಫಲಕಾರಿಯಾಗುವುದು ಖಂಡಿತ. ವಿಜ್ಞಾನ ಸಂಶೋಧನೆಗಳಲ್ಲಿ ನಾವು ನಿರೀಕ್ಷಿಸುವ ಫಲಿತಾಂಶವು ಒದಗದೇ ಇರಬಹುದು. ಆದರೂ ಅವು ಯಾವುದಾದರೂ ಉತ್ತಮತರದ ವಿಷಯಾನ್ವೇಷಣೆಗೆ ಮಾರ್ಗದರ್ಶಕವಾಗಬಹುದು. ವೈಜ್ಞಾನಿಕ ಸಂಶೋಧಕರು, ಮೊದಲು ತಾವು ಯಾವ ವಿಷಯವನ್ನು ಆರಿಸಿಕೊಂಡಿರುತ್ತಾರೋ, ಅದನ್ನು ಕಾಲಕ್ರಮೇಣ ತ್ಯಜಿಸಿ, ಹೊಸ ವಿಷಯಗಳಲ್ಲಿ ನಿರತರಾಗಿ ಆ ವಿಷಯಗಳಲ್ಲಿ ಜಯಶೀಲರಾಗಿ ಕೀರ್ತಿಗಳಿಸಿದ ಸಂದರ್ಭಗಳು ಅನೇಕವಿವೆ, ಈ ವಿಷಯದಲ್ಲಿ ಸರ್ ವಿಲಿಯಮ್ ಹೆನ್ರಿ ಬ್ರಾಗ್. ಮತ್ತು ಸರ್ ವಿಲಿಯಮ್ ಲಾರೆನ್ಸ್ ಬ್ರಾಗ್ ಎಂಬ ಗಣ್ಯವ್ಯಕ್ತಿಗಳು ಆಧಾರ ಪುರುಷರೇ ಸರಿ. ತಂದೆ ಮಕ್ಕಳಿಬ್ಬರೂ ಏಕರೀತಿಯ ಸಂಶೋಧನೆಗಳನ್ನು ಮುಂದುವರಿಸುವುದು ಅಪರೂಪ. ಆದರೆ, ಇವರಿಬ್ಬರೂ ಜರ್ಮನಿ ದೇಶದ ಭೌತ ವಿಜ್ಞಾನಿಯಾಗಿದ್ದ ವಿಲಿಯಮ್ ಕೋನ್ರಾಡ್ ರಾಂಟ್ಜನ್ ಕಂಡುಹಿಡಿದಿದ್ದ ಕ್ಷ-ಕಿರಣಗಳನ್ನು ಬಳಸಿ. ಸ್ಫಟಿಕ ವಸ್ತುಗಳಲ್ಲಿರುವ ಪರಮಾಣುಗಳ ಆಂತರಿಕ ರಚನೆಯನ್ನು (Structure) ಹೇಗೆ ಕಂಡುಹಿಡಿಯಬಹುದು ಎಂಬುದರ ವಿಷಯವಾಗಿ ಸಂಶೋಧನೆಗಳನ್ನು ನಡೆಸಿ. 1915ರಲ್ಲಿ. ಈ ವಿಧಾನವನ್ನು ಕಂಡುಹಿಡಿದುದರಿಂದ ಇವರಿಬ್ಬರಿಗೂ ನೊಬೆಲ್ ಪಾರಿತೋಷಕ ದೊರಕಿತು. ಆಗ ಮಗನಾದ ಸರ್ ವಿಲಿಯಮ್ ಲಾರೆನ್ಸ್ ಬ್ರಾಗ್‌ಗೆ ಕೇವಲ 25 ವರ್ಷಗಳೇ ತುಂಬಿದ್ದವು. ಈತನ ಪ್ರತಿಭಾ ಶಕ್ತಿಯು ಹಲವಾರು ಹೊಸ ಸಂಶೋಧನೆಗಳಿಗೆ ಕಾರಣವಾಯಿತು. ಭೌತಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಕ ಗಳಿಸಿದ್ದ ವಿಜ್ಞಾನಿಗಳ ಪೈಕಿ ಈತನೇ ಅತ್ಯಂತ ಕಿರಿಯವ. ತನ್ನ ನೊಬೆಲ್ ಪಾರಿತೋಷಕದ 50ನೆಯ ವಾರ್ಷಿಕೋತ್ಸವವನ್ನು ಆಚರಿಸಿದ್ದು ಈತನೊಬ್ಬನೇ. ಇವನು ತನ್ನ 81ನೆಯ ವಯಸ್ಸಿನಲ್ಲಿ 1971ನೆಯ ಜುಲೈ ತಿಂಗಳು ಒಂದನೆಯ ದಿನ ಮರಣ ಹೊಂದಿದನೆಂಬ ಸುದ್ದಿಯು ವೈಜ್ಞಾನಿಕ ಪ್ರಪಂಚಕ್ಕೆ ಕ್ಲೇಶವನ್ನುಂಟುಮಾಡಿದೆ.

ಈತನ ಸಂಶೋಧನೆಯು, ಅನೇಕ ವೈಜ್ಞಾನಿಕ ಸಂಶೋಧನೆಗಳಿಗೆ ಆಧಾರಸ್ತಂಭವಾಗಿವೆ. ಇವರಿಬ್ಬರ ಸಂಶೋಧನೆಗಳ ವಿಚಾರ ಇಲ್ಲಿ ತಿಳಿಸಿದೆ.

ಸರ್ ವಿಲಿಯಮ್ ಹೆನ್ರಿಬ್ರಾಗ್ (1862-1942)

ಈತನು ಇಂಗ್ಲಂಡಿನ ಕಂಬರ್ಲೇಂಡಿನಲ್ಲಿ ವಿಗ್ಟನ್ ಪ್ರದೇಶದಲ್ಲಿ 1862 ಜುಲೈ ತಿಂಗಳಲ್ಲಿ ಜನಿಸಿದನು. ತನ್ನ 18ನೆಯ ವರ್ಷದ ವರೆಗೂ ಇವನ ಪ್ರತಿಭಾ ಶಕ್ತಿಯು ಗುಪ್ತವಾಗಿದ್ದು ಪ್ರಕಾಶಕ್ಕೆ ಬರಲಿಲ್ಲ. ಅನಂತರ ಕೇಂಬ್ರಿಡ್ಜನ್ನು ಬಿಟ್ಟು ಆಸ್ಟ್ರೇಲಿಯಾದ ಅಡಿಲೇಡ್ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರಗಳ ಪ್ರೊಫೆಸರ್ ಹುದ್ದೆಯನ್ನಲಂಕರಿಸಿದನು. ಈತನು ತನ್ನ ಸಂಶೋಧನೆಯನ್ನು 40 ನೆಯ ವಯಸ್ಸಿನಲ್ಲಿ ಮೊದಲು ಪ್ರಕಟಿಸಿದನು. ಇದಾದ ಕೂಡಲೆ ರಾಯಲ್ ಸಂಸ್ಥೆಯವರು "ಫೆಲೊ" ಎಂಬ ಬಿರುದನ್ನು ನೀಡಿದರು. ಇಲ್ಲಿಂದಾಚೆಗೆ ಈತನು ಅನೇಕ ವೈಜ್ಞಾನಿಕ ಪತ್ರಿಕೆಗಳನ್ನು ಹೊರಡಿಸಿ, ಅನೇಕ ಗ್ರಂಥಗಳನ್ನೂ ರಚಿಸಿದ. ಈತನು ಕೇಂಬ್ರಿಡ್ಜಿನ ಗಣಿತಶಾಸ್ತ್ರ ಟ್ರೈಪಾಸ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ. ಪ್ರಮುಖ ರಾಂಗ್ಲರ್ (Wrangler) ಗಳ ಪೈಕಿ ಮೂರನೆಯವನಾಗಿದ್ದರೂ, ಭೌತಶಾಸ್ತ್ರದ ವಿಚಾರ ಹೆಚ್ಚು ನುರಿತವನಾಗಿರಲಿಲ್ಲ. ಅಡಿಲೇಡ್ ವಿಶ್ವವಿದ್ಯಾನಿಲಯದ ಭೌತಶಾಸ್ತ್ರದ ಪ್ರಯೋಗಶಾಲೆಯನ್ನು ಅಭಿವೃದ್ಧಿಗೊಳಿಸುವುದರಲ್ಲೇ ತೊಡಗಿದ್ದರಿಂದ 20 ವರ್ಷಗಳ ಕಾಲದವರೆಗೂ ಭೌತಶಾಸ್ತ್ರವನ್ನು ಈತ ವ್ಯಾಸಂಗ ಮಾಡುವ ಅವಕಾಶ ದೊರಕಲಿಲ್ಲ. ಆದರೆ, ಆಸ್ಟ್ರೇಲಿಯಾದ ಒಂದು ಪ್ರಮುಖ ಸಂಸ್ಥೆಯಿಂದ (Australian Association for the Advancement of Science) ಈತನಿಗೆ ರೇಡಿಯೋ ವಿಕಿರಣ ಶಕ್ತಿಯ ಸಂಗತಿಗಳ ವಿಚಾರ ಭಾಷಣಮಾಡಬೇಕೆಂಬ ಆಹ್ವಾನವು ಬಂದಿದ್ದು ಇವನ ವ್ಯಾಸಂಗವನ್ನು ಮುಂದುವರಿಸುವುದಕ್ಕೆ ಸ್ಫೂರ್ತಿ ದೊರಕಿದಂತಾಯಿತು. ವಿಶ್ವವಿದ್ಯಾನಿಲಯಕ್ಕೆ ಸ್ವಲ್ಪ ರೇಡಿಯಮ್ ಲೋಹವನ್ನು ಪರೀಕ್ಷೆಗಾಗಿ ಒದಗಿಸಿಕೊಡಬೇಕೆಂದು ಅರಿಕೆಮಾಡಿದನು. ರೇಡಿಯಮ್‌ನಿಂದ ಬರುವ ಅಲ್ಫ ಕಣಗಳ ವಿಷಯ ಸಂಶೋಧನೆ ನಡೆಸಿದನು. ರುಥರ್‌ಫರ್ಡ್‌ನ ತತ್ವ ಸರಿ ಎಂದು ಪ್ರದರ್ಶಿಸಿದನು. ರೇಡಿಯೋ ಕಿರಣಗಳ ಪೈಕಿ, ಗ್ಯಾಮ ಕಿರಣಗಳನ್ನೂ, ಬೆಳಕನ್ನೂ, ಕ್ಷ–ಕಿರಣಗಳನ್ನೂ ವಿದ್ಯುತ್ಕಾಂತ ತರಂಗಗಳೆಂದು ಆಗಲೇ ಭಾವಿಸಿದ್ದರು. ಗ್ಯಾಮ ಕಿರಣಗಳು (γ-rays) ಕ್ಷ-ಕಿರಣಗಳಂತೆಯೇ ಒಂದು ಅನಿಲದಲ್ಲಿ ವಿದ್ಯುತ್ ಹರಿಯುವ ಹಾಗೆ ಮಾಡಿ, ಅದರಲ್ಲಿರುವ ಅಣುಗಳನ್ನೂ, ಪರಮಾಣುಗಳನ್ನೂ ಅಯಾನ್‌ಗಳೆಂಬ ವಿದ್ಯುತ್ತಿನ ಹೊರೆಯುಳ್ಳ ಕಣಗಳ ರೂಪಕ್ಕೆ ತರಬಲ್ಲವು. (Ionisation) ಎಂಬ ಗಮನಾರ್ಹ ಸಂಗತಿಯನ್ನು ಬ್ರಾಗ್‌ನು ಬೇಗನೇ ಗ್ರಹಿಸಿದ. ಈ ರೀತಿಯ ಲಕ್ಷಣಗಳನ್ನು ಪಡೆದಿರುವ ಕ್ಷ-ಕಿರಣಗಳ ಕಡೆ ಮನಸ್ಸನ್ನು ಹರಿಸಿ, ಅನಿಲದಿಂದ ಅಯಾನುಗಳನ್ನು

ಉತ್ಪತ್ತಿಮಾಡುವ ಕ್ಷ-ಕಿರಣವನ್ನು ಎಂದಿಗೂ ಅಲೆಗೆ ಹೋಲಿಸುವುದು ಸಾಧ್ಯವಿಲ್ಲ, ಅದು ಕಣಗಳ ಸ್ವಭಾವವನ್ನೇ ಪಡೆದಿರಬೇಕು ಎಂದು ತೀರ್ಮಾನಿಸಿದ. ಈ ಕಣಗಳು ಗುಂಡಿನೋಪಾದಿಯಲ್ಲಿ ಅನಿಲವನ್ನು ಛಿದ್ರಮಾಡಿ, ಅದರಿಂದ ಎಲೆಕ್ಟ್ರಾನ್ ಕಣಗಳನ್ನು ಹರಿಸುತ್ತವೆ ಎಂಬುದನ್ನೂ ಮತ್ತು, ಈ ಎಲೆಕ್ಟ್ರಾನ್ ಕಣಗಳೇ ಅಯಾನುಗಳಿಗೆ ಹೇಗ ಆಧಾರ ಎಂಬುದನ್ನೂ ತಿಳಿಸಿದ. ಇದರಿಂದ ಗ್ಯಾಮ ಮತ್ತು ಕ್ಷ – ಕಿರಣಗಳು, ಕಣಗಳ ಸಮುದಾಯವೆನ್ನಿಸಿಕೊಂಡವು. ಇವುಗಳಿಗಿರುವ ತಟಸ್ಥ ಸ್ವಭಾವದಿಂದ, ಅನಿಲದಿಂದ ವಿದ್ಯುದಂಶವುಳ್ಳ ಪಾಸಿಟಿವ್ ಮತ್ತು ನೆಗೆಟಿವ್ ಕಣಗಳನ್ನು ಇವು ಕೊಡುವುದು ಸಾಧ್ಯ ಎಂದು ನಿರ್ಧರವಾಯಿತು. ಆದರೆ ಅಲ್ಲಿಯವರೆಗೂ ಅಲೆಗಳ ತತ್ವವನ್ನೇ ಆಚರಿಸಿದ್ದ ಅನೇಕ ವಿಜ್ಞಾನಿಗಳು ಅಪಜಯಹೊಂದಿದರು. 1912ರಲ್ಲಿ ಜರ್ಮನ್ ವಿಜ್ಞಾನಿಯಾಗಿದ್ದ ಲಾವೆ (Lave) ಎಂಬಾತನು ಕ್ಷ-ಕಿರಣ ಛಾಯಾ ಚಿತ್ರವನ್ನು ಪಡೆದು, ಕ್ಷ-ಕಿರಣಗಳನ್ನು ಅಲೆಗಳಿಗೆ ಸಮಾನ ಎಂದು ನಂಬಿದ್ದ. ಆಗ ಈತನು ಕ್ಷ-ಕಿರಣಗಳ ವಿಷಯ ಮಾತ್ರ ತಿಳಿದಿದ್ದು, ಆದರ ಪ್ರಯೋಗಕ್ಕೊಳಗಾಗುವ ಸ್ಫಟಿಕಾಕೃತಿಯ ವಸ್ತುಗಳಲ್ಲಿ ಪರಮಾಣುಗಳ ಆಕೃತಿಯ ವಿಷಯ ಸ್ವಲ್ಪವೂ ಯೋಚಿಸಿರಲಿಲ್ಲ, ಇದನ್ನು ತಿಳಿಯುವ ಪ್ರಯತ್ನ ಪಟ್ಟಿದ್ದು ಬ್ರಾಗ್‌ರವರೇ. ಮತ್ತು ಅದನ್ನು ಕಂಡು ಹಿಡಿದದ್ದಕ್ಕಾಗಿ ಅವರಿಬ್ಬರಿಗೂ 1915ರಲ್ಲಿ ನೊಬೆಲ್ ಪಾರಿತೋಷಕ ದೊರಕಿತು.



ಚಿತ್ರ 1

ಸರ್ ವಿಲಿಯಮ್ ಹೆನ್ರಿ ಬ್ರಾಗ್ ಕಂಡುಹಿಡಿದ ಎಕ್ಸರೇ ಸ್ಪೆಕ್ಟ್ರೋಮೀಟರಿನ ಚಿತ್ರ

ತನ್ನ ಮಗನಾದ ಲಾರೆನ್ಸ್ ಬ್ರಾಗ್‌ನಿಂದ, ವಿಲಿಯಮ್ ಹೆನ್ರಿ ಬ್ರಾಗನು ಸ್ಫಟಿಕಗಳು ಉಂಟುಮಾಡುತ್ತಿದ್ದ ಕ್ಷ-ಕಿರಣಗಳ ಪ್ರತಿಫಲನದ ವಿಷಯ ಕೆಲವು ಸಲಹೆಗಳನ್ನು ಪಡೆದು, ಸ್ಫಟಿಕಗಳ ಮುಖದಿಂದ ಪ್ರತಿಫಲಿಸುತ್ತಿದ್ದ ಕಿರಣಗಳು ಕ್ಷ-ಕಿರಣಗಳೇ ಅಲ್ಲವೇ ಎಂಬುದನ್ನು ಪರೀಕ್ಷಿಸಲು, "X ray Spectrometer" ಎಂಬ ಹೊಸ ಉಪಕರಣವನ್ನೇ ನಿರ್ಮಿಸಿದ. ತರಂಗದ ಉದ್ದವನ್ನು ಅಳೆಯುವ ಸ್ಪೆಕ್ಟ್ರೋಮೀಟರನ್ನು ಇದು ಹೋಲುತ್ತಿತ್ತು. ಇದನ್ನು ಉಪಯೋಗಿಸಿ, ಸ್ಫಟಿಕಗಳು ಪ್ರತಿಫಲಿಸುವ ಕಿರಣಗಳು ಕ್ಷ-ಕಿರಣಗಳೇ ಎಂದು ನಿರ್ಧರಿಸಿದನು. ಒಂದೊಂದು ಮೂಲವಸ್ತುವೂ ತನ್ನ ತರಂಗದ ಉದ್ದಕ್ಕನುಸಾರವಾದ ವರ್ಣಪಂಕ್ತಿಯನ್ನು ವರ್ಣಪಟಲ ದರ್ಶಕದಲ್ಲಿ ಹೇಗೆ ಕೊಡಬಲ್ಲುದೋ ಅದೇ ರೀತಿಯಲ್ಲಿ ಒಂದೊಂದು ಲೋಹದಿಂದ ಬರುವ ಕ್ಷ-ಕಿರಣವೂ, ತನ್ನ ತರಂಗದ ಉದ್ದಕ್ಕನುಸಾರವಾದ ದಿಕ್ಕಿನಲ್ಲೇ ಪ್ರತಿಫಲಿಸುತ್ತಿತ್ತು ಎಂಬ ಅಂಶವು ಮೂಲವಸ್ತುಗಳ ಕ್ಷ-ಕಿರಣ ವರ್ಣಪಟಲವನ್ನು ತಯಾರಿಸಲು ಸಹಕಾರಿಯಾಯಿತು. ಇದರಿಂದ ಅನೇಕ ಮೂಲವಸ್ತುಗಳ ತರಂಗ ಉದ್ದ (Wave length) ವನ್ನು ಕಂಡುಹಿಡಿದು. ಅದು ಮೆಂಡಿಲೀಫಿನ ಮೂಲ ವಸ್ತುಗಳ ಪಟ್ಟಿಯಲ್ಲಿ ಎಡದಿಂದ ಬಲಕ್ಕೆ ಹೋದಾಗ ಈ ತರಂಗದ ಉದ್ದ ಹೇಗೆ ಕಡಿಮೆಯಾಗುತ್ತಾ ಹೋಗುತ್ತದೆ ಎಂಬುದನ್ನೂ ಬ್ರಾಗನು ತಿಳಿಸಿದ. ಮೋಸ್ಲೆಯ (Moseley) ಪ್ರಯೋಗಕ್ಕೆ ಇದು ಮುಖ್ಯ ತಳಹದಿ. ಇದನ್ನು ಬಳಸಿ, ಬ್ರಾಗನು ವಜ್ರದ ಆಕೃತಿಯನ್ನು ಕಂಡುಹಿಡಿದ. ಇದು ಇನ್ನೂ ಇತರ ಉಪಕರಣಗಳ ನಿರ್ಮಾಣಕ್ಕೆ ಕಾರಣವಾಯಿತು.

ಸರ್ ವಿಲಿಯಮ್ ಲಾರೆನ್ಸ್ ಬ್ರಾಗ್ (1890)


ಆಸ್ಟ್ರೇಲಿಯಾದ ಅಡಿಲೇಡ್ ನಗರದಲ್ಲಿ ಜನಿಸಿ. ಕೇಂಬ್ರಿಡ್ಜಿನ ಕೆವೆಂಡಿಷ್ ಪ್ರಯೋಗ ಶಾಲೆಯಲ್ಲಿ ಪ್ರಾಧ್ಯಾಪಕನಾಗಿದ್ದ ತನ್ನ ತಂದೆಯಾದ ಬ್ರಾಗ್ ನಡೆಸಿದ ಹರಳುಗಳ ಕ್ಷ–ಕಿರಣಗಳ ಪರೀಕ್ಷೆಯಲ್ಲಿ ಭಾಗವಹಿಸಿ, ಕ್ಷ–ಕಿರಣಗಳ ತರಂಗದ ಉದ್ದವನ್ನೂ ಹರಳುಗಳ ಆಂತರಿಕ ರಚನೆಯನ್ನೂ ತಿಳಿಸಿ, 1915 ರಲ್ಲಿ ತಂದೆಯ ಜೊತೆಯಲ್ಲೇ ನೊಬೆಲ್ ಪಾರಿತೋಷಕವನ್ನು ಸಂಪಾದಿಸಿದನು.

ಸ್ಫಟಿಕ ವಸ್ತುಗಳಲ್ಲಿ ಪರಮಾಣುಗಳು ಹೇಗೆ ಜೋಡಿಸಲ್ಪಟ್ಟಿವೆ ಎಂಬುದನ್ನು ತಿಳಿಯುವ ಪ್ರಯತ್ನಗಳು ಮುಂಚೆಯೇ ನಡೆದಿದ್ದವು. ಅವು ಕ್ರಮವಾಗಿ ಜೋಡಿಸಲ್ಪಟ್ಟಿವೆ ಎಂಬುದನ್ನು ಊಹಿಸಿ ಕಾರಣ ಕೊಡುವಂತಾಯಿತು. ಬೆಣಚುಕಲ್ಲಿನ ಹರಳು ಅಥವಾ ಪಚ್ಚೆ (beryl) ಹರಳು ಷಡ್ಭುಜಾಕೃತಿಯನ್ನು ಪಡೆದಿದೆ. (hexagonal) ಉಪ್ಪಿನ ಹರಳು ಘನಾಕೃತಿಯನ್ನೂ (Cubical) ಪಟಿಕದ ಹರಳುಗಳು ಅಷ್ಟಮುಖಾಕೃತಿಯನ್ನೂ (Octahedral) ಪಡೆದಿವೆ. ಇವು ಹೊರಗಡೆಯಲ್ಲಿ ಕ್ರಮವಾಗಿರಬೇಕಾದರೆ ಪರಮಾಣುಗಳ ಒಳಗಡೆಯ ಜೋಡಣೆಯೂ ಕ್ರಮವಾಗಿರಲೇಬೇಕು. ಐವತ್ತು

ವರ್ಷಗಳಿಂದೀಚೆಗೆ ಮಾತ್ರ ಹರಳುಗಳಲ್ಲಿ ಪರಮಾಣುಗಳು ಎಲ್ಲೆಲ್ಲಿ ಹೇಗೆ ಜೋಡಿಸಲ್ಪಟ್ಟಿವೆ ಎಂಬುದನ್ನು ತಿಳಿಸುವ ಪ್ರಯತ್ನಗಳು ನಡೆದಿವೆ. ಬೆಳಕನ್ನು ಸ್ವಭಾವದಲ್ಲಿ ಹೋಲುವ, ಆದರೆ ಬೆಳಕಿನ 1/10,000 ದಷ್ಟು ಮಾತ್ರ ತರಂಗದ ಉದ್ದವಿರುವ ಕ್ಷ-ಕಿರಣಗಳನ್ನು ಈ ಪ್ರಯೋಗಕ್ಕೆ ಆಧಾರವಾಗಿರಿಸಿದ್ದಾರೆ. ಕ್ಷ-ಕಿರಣಗಳು ಹರಳುಗಳಲ್ಲಿರುವ ಪರಮಾಣುಗಳ ಸಂಘಟಿಸಿದ ಚಿತ್ರಾಲಂಕಾರ (Interference patterns) ಕೊಡಬಲ್ಲವು. ಪರಮಾಣುಗಳ ಚದುರುವಿಕೆಯಿಂದ ಉತ್ಪತ್ತಿಯಾಗುವ ಅಲೆಗಳೇ ಈ ಅಲಂಕಾರಗಳಿಗೆ ಕಾರಣ. ಈ ಅಲೆಗಳು ಕೆಲವುಕಡೆ ಪುಷ್ಟಿಗೊಳಿಸುವುದೂ, ಇತರ ಕಡೆ ವಿರೋಧ ದಿಕ್ಕಿನಲ್ಲಿ ಹರಿಯುವುದೂ ಉಂಟು. ಇವುಗಳ ತರಂಗದ ಉದ್ದ. ಪರಮಾಣುಗಳ ಅಂತರಕ್ಕಿಂತಲೂ ಕಡಿಮೆ ಇದ್ದಾಗ ಮಾತ್ರ ಈ ಸಂಘಟನೆ ಸಾಧ್ಯ. ಇದರಿಂದಲೇ ಸಾಮಾನ್ಯ ಬೆಳಕಿಗಿಂತಲೂ, ಕ್ಷ-ಕಿರಣಗಳೇ ಈ ಪರೀಕ್ಷೆಯಲ್ಲಿ ಬಳಸುವುದಕ್ಕೆ ಶ್ರೇಷ್ಠ. ಅನೇಕ ವಸ್ತುಗಳ ಪರಮಾಣುಗಳ ಆಂತರಿಕ ರಚನೆಯನ್ನು ತಿಳಿಯುವ ಪ್ರಯತ್ನ ನಡೆಸಿದ ಸರ್ ಲಾರೆನ್ಸ್‌ಬ್ರಾಗ್‌ನ ತಂದೆಯಾದ ವಿಲಿಯಮ್ ಬ್ರಾಗ್‌ನು ಕಂಡುಹಿಡಿದ X ray Photometer ಎಂಬ ಉಪಕರಣವನ್ನು ಬಳಸಿ ಇವರಿಬ್ಬರೂ ಅನೇಕ ಹರಳುಗಳ ಆಂತರಿಕ ರಚನೆಯನ್ನು ಕಂಡುಹಿಡಿದು "X ray crystallography" ಎಂಬ ಹೊಸ ವಿಜ್ಞಾನ ಶಾಸ್ತ್ರವನ್ನೇ ಜನರ ಮುಂದಿರಿಸಿದ್ದಾರೆ.

ಸರ್ ಲಾರೆನ್ಸ್‌ಬ್ರಾಗನು 18ನೆಯ ವಯಸ್ಸಿನಲ್ಲೇ (1908) ಆನರ್ಸ್ ಪದವಿ ಗಳಿಸಿದರೂ, ಭೌತಶಾಸ್ತ್ರ ಪ್ರವೀಣತೆ ಇನ್ನೂ ಸಂಪಾದಿಸಿರಲಿಲ್ಲ. ರಸಾಯನ ವಿಜ್ಞಾನದ ಉಪಾಧ್ಯಾಯನ ಪಾಠದ ಸ್ಫೂರ್ತಿಯಿಂದ. ಪರಮಾಣುಗಳ ರಚನೆಯನ್ನು ತಿಳಿಯುವ ಆಸಕ್ತಿ ಈತನಲ್ಲಿ ಬೆಳೆಯಿತು. ಇಂಗ್ಲೆಂಡಿನಲ್ಲಿ ಗಣಿತಶಾಸ್ತ್ರವನ್ನು ಅಭ್ಯಾಸ ಮಾಡಿದರೂ ಸಹ. ತಂದೆಯ ಉಪದೇಶದ ಮೇಲೆ ಭೌತಶಾಸ್ತ್ರದ ಅಧ್ಯಯನವನ್ನೇ ಪ್ರಾರಂಭಿಸಿದ. ತಂದೆಯು ರೇಡಿಯೋ ವಿಕಿರಣಶಾಸ್ತ್ರದ ಪ್ರವೀಣನಾದಾಗ, ತನ್ನ ಪ್ರಾಯೋಗಿಕ ಪರೀಕ್ಷೆಗಳನ್ನು ಪ್ರಾರಂಭಿಸಿದ. ಲಾವೆ ಎಂಬಾತ ಪ್ರದರ್ಶಿಸಿದ ಕ್ಷ-ಕಿರಣ ಛಾಯಾ ಚಿತ್ರಗಳು, ಹೇಗೆ ಉಂಟಾದವು ಎಂಬ ಕುತೂಹಲ ಇವನಲ್ಲಿ ಕೆರಳಿ. ಅವುಗಳಲ್ಲಿ ಕ್ಷ-ಕಿರಣಗಳ ಅಲೆಗಳೇ ಹೇಗೆ ಈ ಚಿತ್ರಗಳಿಗೆ ಕಾರಣವಲ್ಲವೆಂದೂ. ಪರಮಾಣುಗಳ ಆಂತರಿಕ ರಚನೆಯಿಂದಲೇ ಇದು ಉಂಟಾಗಿರಬೇಕೆಂದೂ ಈತ ತರ್ಕ ಮಾಡಿದ. ಇಲ್ಲಿಂದಾಚೆಗೆ ಕ್ಷ-ಕಿರಣಗಳನ್ನು ಹರಳುಗಳ ಆಂತರಿಕ ರಚನೆಯ ಪರೀಕ್ಷೆಗೆ ಬಳಸಲಾರಂಭಿಸಿದ. ಈತನ ಪರೀಕ್ಷೆಗಳಲ್ಲಿ ಆಗಲೇ ಒದಗಿದ್ದ ಹಲವಾರು ಪರಿಣಾಮಗಳನ್ನು ಬಳಸಿಕೊಂಡ. ಜೆ. ಜೆ. ಥಾಮ್‌ಸನ್ (J. J. Thomson) ಎಂಬ ವಿಜ್ಞಾನಿ. ಕ್ಷ-ಕಿರಣಗಳನ್ನು "ಈಥರ್"ನಲ್ಲಿ ಉಂಟಾಗಿರುವ ಅಲೆಗಳ ಸ್ಪಂದನ (Wave pulse) ಎಂಬುದಾಗಿಯೂ, ಈ ಸ್ಪಂದನಗಳು ಕ್ಷ-ಕಿರಣ ಕೊಳವೆಯಲ್ಲಿ ಎಲೆಕ್ಟ್ರಾನ್ ಕಣಗಳು ಲೋಹವನ್ನು ಬಡಿದಾಗ ಉತ್ಪತ್ತಿಯಾಗಿ ತತ್‌ಕ್ಷಣ ನಿಂತಿರುವುದರಿಂದ ಉಂಟಾಗಿವೆ

ಎಂದೂ ತಿಳಿಸಿದ. C. T. R. Wilson ಎಂಬ ವಿಜ್ಞಾನಿಯ ಪ್ರಕಾರ, ಬೆಳಕು ಕ್ರಮ ವಿಲ್ಲದ ಸ್ಪಂದನಗಳ ಅಥವಾ ಅವಿಚ್ಛಿನ್ನವಾದ ತರಂಗಗಳ ಸಾಲಾಗಿರಬೇಕು. ಈ ಆಧಾರಗಳ ಮೇಲೆ ಲಾವೆಯ ಚಿತ್ರಗಳಲ್ಲಿರುವ ಗುರ್ತುಗಳು, ಪರಮಾಣುಗಳ ಕ್ಷ-ಕಿರಣಗಳ ಪ್ರತಿಫಲನದಿಂದಲೇ ಉಂಟಾಗಿರಬೇಕು ಎಂದು ಈತ ನಿರ್ಧರಿಸಿದ. ಸತುವಿನ ಸಲ್ಫೈಡ್ (ZnS) ಉದಾಹರಣೆಯನ್ನು ತೆಗೆದುಕೊಂಡು, ಈ ಗುರ್ತುಗಳು ಎರಡು ಅಂಚುಗಳ ಮಧ್ಯೆಯೂ ಇರಬಹುದು ಎಂಬ ಅಂಶ ಖಚಿತವಾಯಿತು. ಮೊದ ಮೊದಲು ಈ ಪರೀಕ್ಷೆಗೆಳಿಗೊಳಗಾದ ಹರಳುಗಳು ಸೋಡಿಯಮ್ ಕ್ಲೋರೈಡ್ ಮತ್ತು ಪೊಟಾಸಿಯಮ್ ಕ್ಲೋರೈಡ್. ಈಗ ನೂರಾರು ಬಗೆಯ ಹರಳುಗಳನ್ನು ಈ ಪರೀಕ್ಷೆಗಳಿಗೊಳಪಡಿಸಿದ್ದಾರೆ.




ಚಿತ್ರ 2

ಕ್ಷ-ಕಿರಣಗಳ ಪರೀಕ್ಷೆಯಿಂದ ತಿಳಿಯುವ ಉಪ್ಪಿನ ಹರಳಿನ ಚಿತ್ರ

ಕಾಗೆ ಬಂಗಾರದಲ್ಲಿ (Mica) ಅನೇಕ ಫಲಕಗಳು ಸೇರಿವೆ ಎಂಬುದನ್ನೂ, ಅವು ಗಳಲ್ಲಿ ಪರಮಾಣುಗಳು ಹೇಗೆ ಒಂದೊಂದು ಫಲಕದಲ್ಲಿಯೂ ಜೋಡಿಸಲ್ಪಟ್ಟಿವೆ ಎಂಬುದನ್ನೂ ತಿಳಿಯಲು ಸಾಧ್ಯವಾಗಿದೆ. ಬ್ರಾಗ್‌ನ ಸಂಶೋಧನೆಗಳು ಫಲಕಾರಿ ಯಾಗುವುದಕ್ಕೆ ಮುಂಚೆ ರಸಾಯನ ವಿಜ್ಞಾನಿಗಳು ಉಪ್ಪಿನಲ್ಲಿ Nacl ಅಣುಗಳಿವೆ ಎಂದು ಭಾವಿಸಿದ್ದರು. ಆದರೆ, ಕ್ಷ-ಕಿರಣ ಪರೀಕ್ಷೆಯಿಂದ ಉಪ್ಪಿನ ಹರಳಿನಲ್ಲಿ

ಅಣುಗಳಿಲ್ಲ. ಆದರೆ, ಸೋಡಿಯಮ್ ಮತ್ತು ಕ್ಲೋರೀನ್ ಪರಮಾಣುಗಳು ಘನಾ ಕೃತಿಯಲ್ಲಿ ಜೋಡಿಸಲ್ಪಟ್ಟಿವೆ ಎಂಬುದು ಗೋಚರವಾಯಿತು. ಪ್ರತಿ ಸೋಡಿ



ಚಿತ್ರ 3

ಉಪ್ಪಿನ ಹರಳಿನ ಬೇರೆ ಮುಖದ ಚಿತ್ರ

ಯಮ್ ಪರಮಾಣುವೂ ಆರು ಕ್ಲೋರೀನ್ ಪರಮಾಣುಗಳಿಂದಲೂ ಪ್ರತಿ ಕ್ಲೋರೀನ್ ಪರಮಾಣುವು ಆರು ಸೋಡಿಯಮ್ ಪರಮಾಣುಗಳಿಂದಲೂ ಸಮ ದೂರದಲ್ಲಿ ಸುತ್ತಿ ರಚಿಸಲ್ಪಟ್ಟಿವೆ ಎಂದು ತಿಳಿದಿದೆ. 1914ನೆಯ ಯುದ್ಧದಲ್ಲಿ ಸರ್ ವಿಲಿಯಮ್ ಲಾರೆನ್ಸ್ ಬ್ರಾಗ್‌ನನ್ನು ಬೆಲ್ಜಿಯಮ್ಮಿಗೆ ಅಲ್ಲಿ ಶತ್ರುಗಳ ಫಿರಂಗಿಯ ಪ್ರದೇಶವನ್ನು ಶಬ್ದದ ಸಹಾಯದಿಂದ ಗುರ್ತಿಸುವುದಕ್ಕೆ ಕಳುಹಿಸಿದ್ದಾಗ (Sound ranging) ಈತನು ತನ್ನ ಪ್ರಯೋಗದಿಂದ ಜಯಶೀಲನಾಗಿದ್ದನು. 1915–16 ರಲ್ಲಿ ಪತ್ರದ ಮೂಲಕ ತಂದೆ ಮತ್ತು ಮಗನಿಗೆ ಭೌತಶಾಸ್ತ್ರದ ನೊಬೆಲ್ ಪಾರಿತೋಷಕ ದೊರಕಿದ ಹರ್ಷವಾರ್ತೆ ತಲುಪಿದಾಗ, ದ್ರಾಕ್ಷಾರಸ ಸೇವನೆಯಿಂದ ಇವರಿಬ್ಬರೂ ಪರಸ್ಪರ ಅಭಿನಂದಿಸಿಕೊಂಡರು.

ಬೃಹನ್ನಳೆ

ಎಂ. ಎ. ವ್ಯಾಸರಾವ್

ನಾಟ್ಯಶಾಲೆ ಹೊಕ್ಕಾಗ
ಬಚ್ಚಿಟ್ಟ ಕುಣಿತ
ಕೈಕಾಲು ಎದೆ ಕತ್ತುಗಳಲಿ ಮೂಡಿ
ಒಲವೇರಿ ಮೈಮರೆತು ಕುಣಿದು
ಸವೆದ ಹೆಜ್ಜೆಗಳೆನಳೆದಳೆದು
ತಕಿಟ ತದ್ದಿನಗಳ ಜೊತೆಗೆ ಹೆಜ್ಜೆಗೂಡಿಸುವಾಗ
ತೊಟ್ಟ ಬಳೆಯಲ್ಲಿ, ಕುಣಿವ ನೂಪುರದಲ್ಲಿ
ಒಡಕು ದನಿ ಏಳುತ್ತದೆ

ಎದ್ದಂತೆ –
ಧಗಧಗನುರಿವ ಅಗ್ಗಿಷ್ಟಿಕೆ ಎದುರು
ಕೊತ ಕೊತನೆ ಕುದ್ದು ಕರಗುವ
ಬಾಣಸಿಗನ ತೋಳ್ಬಲದಲ್ಲಿ ;
ಮುಡಿ ಹೆಣೆದು ಸೊರಗಿ ಸೋಲುವ
ಸೈರಂಧ್ರಿಯ ಬಿಚ್ಚು ಮುಡಿಯು ಹಗೆಯಲ್ಲಿ;
ಗೆದ್ದಲಡರಿದ ಗೋವಳಿಗರ ಚಾಣಕ್ಯತನದಲ್ಲಿ —
ತೆರೆದ ಪಂಜದ ಹೆಬ್ಬುಲಿಯಾಗಿ
ಕೆಂಗಣ್ಣು ತೆರೆವಾಗ
ವಿಹ್ವಲಿಸಿ ಸದ್ದಡಗಿ
ಕೂಗಲಾರದೆ ಒಟ್ಟಿನ ಹುಂಜವಾಗುತ್ತೇನೆ.

ಎದೆಯಲ್ಲಿ –
ಚಟಚಟನುರಿದು ಸುಡುವ ಖಾಂಡವ ದಹನ !
ಮತ್ಸರವೆಸಗಿ ಮುಸಮುಸನೆ ಮುಸಿವ
ಆ ಕರ್ಣ, ದುಶ್ಶಾಸನ, ದುರ್ಯೋಧನರ

ಶಕುನಿಯರ ತುಳಿದು ತರಿದು
ಖಂಡಖಂಡ ವಾಗಗ್ನಿಕುಂಡದೊಳಹೊಕ್ಕು
ಮರುಳುಗಳಿಗೌತಣವಿತ್ತು
ಗಾಂಡೀವಿಯಾಗಿ ಬದುಕುತ್ತೇನೆ.

ಆದರೇನು
ಬಯಕೆಯ ಕೊಂಡೀ ಕಳಚಿ
ನರನರದಲ್ಲೂ ಮಂಜಿನ ಹೊಳೆ ಹರಿದು
ಉಂಗುಷ್ಟದಿಂದ ನೆತ್ತಿವರೆಗೂ
ಊರ್ವಶಿ ಶಾಪ ;
ಕೊಳಕು ಮಂಡಲದುಸಿರಾಗಿ ಹಬ್ಬಿ
ಕೀಲು ಕಳಚಿ ಕುಸಿದು ಕುಳಿತಿದ್ದೇನೆ !

ಯಜುರ್ವೇದದಲ್ಲಿ ಸರಸ್ವತಿಯ ದರ್ಶನ

ಎನ್. ವಿ. ವಿಮಲ

ಯಸ್ತೇ ಸ್ತನಃ ಶಶಯೋಯೋ ಮಯೋಭೂರ್ಯೇನ ವಿಶ್ವಾ
ಪುಷ್ಯಸಿ ವಾರ್ಯಾಣಿ ।
ಯೋ ರತ್ನಧಾ ವಸುವಿದ್ಯಃ ಸುದತ್ರಃ ಸರಸ್ವತಿ ತಮಿಹ ಧಾತವೇಕಃ ॥
(ಯಜುರ್ವೇದ. ವಾ. ಸಂ. 38.5)

[ಎಲೈ ಸರಸ್ವತಿಯೇ. ಮೇಧಾವಿಗಳಾದ ಋತ್ವಿಕ್ಕುಗಳಿಗೆ ತೃಪ್ತಿದಾಯಕವಾದುದೂ ಸುಶಬ್ದರೂಪವಾದುದೂ ಆದ ಯಾವ ನಿನ್ನ ಸ್ತನವು ವಿಶ್ರಾಂತಿಯನ್ನು ಪಡೆಯುತ್ತಾ ನಿನ್ನ ದೇಹದಲ್ಲಿರುವುದೋ. ಯಾವ ಶಬ್ದರೂಪವಾದ ನಿನ್ನ ಸ್ತನವು ಸುಖದಾಯಕವಾದುದೋ, ಯಾವುದರಿಂದ ಸಮಸ್ತವಾದ ಇಷ್ಟಾರ್ಥವನ್ನು ನೀನು ಕೊಡುತ್ತೀಯೋ, ಯಾವುದು ರಮಣೀಯವಾದ ರಸವನ್ನು ಒದಗಿಸುವುದೋ ಮತ್ತು ಯಾವುದು ಧನಪೇತ್ರವೂ ಮತ್ತು ದಾತೃವೂ ಆಗಿರುವುದೋ ಆ ಸ್ತನವನ್ನು ಈ ಯಜ್ಞ ಕರ್ಮದಲ್ಲಿ ನಮ್ಮ ಪಾನಕ್ಕೆ ಯೋಗ್ಯವಾದುದನ್ನಾಗಿ ಮಾಡು.]

ಯಜುರ್ವೇದದಲ್ಲಿ ಸರಸ್ವತಿಯ ದರ್ಶನ

ವೇದದ ಧಾರ್ಮಿಕ ನಿಷ್ಠೆಯು ಭಾರತೀಯ ಸಂಸ್ಕೃತಿ ಮತ್ತು ನಾಗರೀಕತೆಗಳ ಇತಿಹಾಸದಲ್ಲಿ ಅನುಪಮವಾದ ಸ್ಥಾನವನ್ನು ಪಡೆದಿದೆ. ವೇದದ ಅನೇಕ ಸೂಕ್ತಗಳು ನಾನಾ ಬಗೆಯ ದೇವತೆಗಳ ಗುಣಗಾನ ಮಾಡುತ್ತವೆ. ವೇದಗಳ ಹೆಚ್ಚು ಭಾಗವನ್ನು ಈ ಮಂತ್ರಗಳು ಒಳಗೊಂಡಿವೆ. ಈ ಮಂತ್ರಗಳನ್ನು ಸಾಮೂಹಿಕವಾಗಿ ಗಮನಿಸಿದರೆ ಅವುಗಳಲ್ಲಿ ಅಡಗಿರುವ ವಿಚಾರ ಸಂಪತ್ತು ಹಾಗೂ ಜ್ಞಾನ ಸಂಪತ್ತಿನ ಅರಿವಾಗುತ್ತದೆ. ಇವುಗಳಲ್ಲಿ ಪ್ರಮುಖವಾಗಿರುವ ಶಬ್ದ ಸಂಪತ್ತು. ಸಮಾಜದರ್ಶನ. ಮಾತ್ರವಲ್ಲದೆ ದೇವತಾ ಧ್ಯಾನಗಳ ವಿಪುಲತೆಯನ್ನೂ ಸಹ ಗಮನಿಸಬಹುದು. ವೈದಿಕ ಕಾಲದ ದೇವತೆಗಳ ಸ್ಥಾನ ಮಾನ. ಗುಣ ವಿಶೇಷ ಮತ್ತು ಚಾರಿತ್ರ್ಯ — ಇವು ಕಾಲದಿಂದ ಕಾಲಕ್ಕೆ ಗುಣ ಸ್ವರೂಪಗಳಲ್ಲಿ ಬದಲಾವಣೆ ಹೊಂದುತ್ತಾ ಕೊನೆಗೆ ಉನ್ನತ ಸ್ಥಾನ ಪಡೆದಿರುವುದು ಒಂದು ಕುತೂಹಲಕರವಾದ ಅಂಶವಾಗಿದೆ. ನಾವು ಈಗ ಹಿಂದೂ ಧರ್ಮದಲ್ಲಿ ಕಾಣುವ ದೇವತೆಗಳು ವೈದಿಕ ಕಾಲದಿಂದ ಕಾಲಗರ್ಭದಲ್ಲಿ ಮರೆಯಾಗದೆ ತಮ್ಮ ಸ್ಥಾನ – ಮಾನಗಳನ್ನು ಸುಭದ್ರವಾಗಿ ಉಳಿಸಿಕೊಂಡು ಬಂದ ದೇವತೆಗಳೆನ್ನಬಹುದು. ಆದರೂ

ಆವರು ಗುಣಸ್ವರೂಪಗಳಲ್ಲಿ ಅನೇಕ ಬದಲಾವಣೆಯನ್ನು ಹೊಂದಿ ಈಗ ಒಂದು ಉನ್ನತ ಸ್ಥಾನವನ್ನು ಪಡೆದಿರುವ ಹಿಂದಿನ ದೇವತೆಗಳೆಂದು ಹೇಳಬಹುದು.

ವೇದದ ಮತಶ್ರದ್ಧೆಯು ಯಜ್ಞ–ಯಾಗಗಳ ಸುತ್ತಲೂ ನೇಯಲ್ಪಟ್ಟಿದೆ, "ಯಜ್ಞ"ವೆಂದರ ಆಹುತಿ (ಹವಿಸ್ಸು) ಯನ್ನು ಕೊಡುವುದರ ಮೂಲಕವಾಗಲೀ, ಪ್ರಾರ್ಥನೆಯ ಮೂಲಕವಾಗಲೀ ದೇವರನ್ನು ಆರಾಧಿಸುವುದು. ಈ ಉಪಾಸನೆಯ ಪ್ರಮುಖ ಉದ್ದೇಶ ದೇವತೆಗಳನ್ನು ತಮ್ಮೆಡೆಗೆ ಒಲಿಸಿಕೊಳ್ಳುವುದು. ಅಥವಾ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗುವುದು. ಹೀಗಾಗಿ ದೇವಾದಿ ದೇವತೆಗಳಿಲ್ಲದೆ ಯಾವ ಯಜ್ಞ – ಯಾಗಗಳ ಕಾರ್ಯವೂ ನಡೆದಿಲ್ಲವೆಂಬುದು ಖಂಡಿತ ಯಜ್ಞ –ಯಾಗಗಳನ್ನು ಎಡೆಬಿಡದೆ ನಡೆಸುತ್ತಿದ್ದ ವೈದಿಕ ಕಾಲದಲ್ಲಿ ಅಲ್ಲಿಯ ದೇವತೆಗಳು ಅವಿಶ್ರಾಂತರಾಗಿ ಕಾರ್ಯನಿರತರಾಗುತ್ತಿದ್ದರು. ವೇದದಲ್ಲಿ ಅನೇಕ ಬಗೆಯ ಯಜ್ಞ ವಿಧಿಗಳು ಕಂಡು ಬರುತ್ತವೆಯಾದರೂ ಅವುಗಳ ವ್ಯಾಪ್ತಿ ಹಾಗೂ ವಿವರಣೆಯ ಕ್ರಮವು ಒಂದಕ್ಕೊಂದು ಮಾರ್ಪಡುತ್ತವೆ. ಇದರ ಫಲವಾಗಿ ವೇದಗಳಲ್ಲಿ ಪುರಾಣ ಕತೆಗಳ (Mythology) ಹೇರಳವಾದ ಸಂಪತ್ತು ಅಡಗಿದೆ ಎನ್ನಬಹುದು. ಈ ಪುರಾಣ ಕತೆಗಳು ದೇವತೆಗಳ ವ್ಯಕ್ತಿ ವೈಲಕ್ಷಣ್ಯ ಮತ್ತು ವಿಶಿಷ್ಟತೆಯನ್ನು ಕುರಿತು ಚರ್ಚಿಸುತ್ತವೆ. ಉದಾ: ದೂತನಂತೆ ಕಾರ್ಯತತ್ಪರನಾಗಿರುವ ಅಗ್ನಿಯು ವೇದದಲ್ಲಿ ಬಹಳ ಪ್ರಮುಖನಾದ ದೇವತೆ. ಶ್ರದ್ಧೆಯಿಂದ ಅರ್ಪಿಸಿದ ಹವಿಸ್ಸನ್ನು (ಯಜ್ಞದಲ್ಲಿ) ಆಯಾ ದೇವತೆಗಳಿಗೆ ತಲುಪಿಸುವ ಹೊಣೆಯನ್ನು ಅಗ್ನಿಯು ಹೊತ್ತಿದ್ದಾನೆ. ಅಂದರೆ, ಇಂದ್ರಾಯ ಸ್ವಾಹಾ: ಎಂದು ಹೇಳಿಕೊಂಡು ಅಗ್ನಿಯಲ್ಲಿ ಅರ್ಪಿಸಿದ ಹವಿಸ್ಸನ್ನು ತಕ್ಷಣವೇ ಅಗ್ನಿಯು ಇಂದ್ರನಿಗೆ ತಲುಪಿಸುತ್ತಾನೆಂದು ವೈದಿಕರು ನಂಬಿದ್ದರು. ಹೀಗೆ ಪುರುಷ ಮತ್ತು ಸ್ತ್ರೀ ಜಾತಿಗಳಿಗೆ ಸಂಬಂಧಿಸಿದಂತೆ ನಾನಾ ಬಗೆಯ ದೇವತೆಗಳನ್ನು ವೇದದಲ್ಲಿ ಕಾಣಬಹುದು. ಸರಸ್ವತಿಯಾದರೋ ಲೌಕಿಕ ದೇವತೆಯೆಂದು ಪರಿಗಣಿತಳಾಗಿದ್ದಾಳೆ.

ವೈದಿಕ ದೇವತೆಗಳನ್ನು ಮನುಷ್ಯತ್ವಾರೋಪಣೆ ಮಾಡಿ (ಸಾಕಾರ ಸ್ವರೂಪ) ಚರ್ಚಿಸುತ್ತಿದ್ದರು. ಅಂದಮೇಲೆ ಅವರುಗಳು ಮನುಷ್ಯರಂತೆ ವ್ಯಕ್ತಿತ್ವವನ್ನು ಪಡೆದು ಮನುಷ್ಯರ ಗುಣ, ಧರ್ಮಗಳನ್ನು ಪಡೆದಿದ್ದರು. ಜಡ ಪದಾರ್ಥಗಳಾದ ಕ್ಷುರ (ಹರಿತವಾದ ಕತ್ತಿ), ಪ್ರಸ್ತಾರ (ಆಸನ) ಇವುಗಳಿಗೂ ಕೂಡ ವೈದಿಕರು ಮನುಷ್ಯತ್ವವನ್ನು ಆರೋಪಿಸುತ್ತಿದ್ದರು. ಯಾಗ ಕಾಲದಲ್ಲಿ ಇವುಗಳನ್ನು ಉಪಯೋಗಿಸುವ ಸಮಯ ಬಂದರೆ ಇವನ್ನು ದೇವತೆಗಳೆಂದು ತಿಳಿದು ಪೂಜಿಸುತ್ತಿದ್ದರು. ಹಾಗೆಯೇ ವೈದಿಕ ಪುರಾಣ ಕತೆಗಳು (Vedic Mythology) ಮನುಷ್ಯ, ಕ್ರೋಧ, ಶ್ರದ್ಧೆ — ಮೊದಲಾದ ಮೌಲ್ಯ (Abstract) ಗಳಿಗೆ ಮಹತ್ವವನ್ನು ನೀಡಿ ಅವುಗಳ ಪ್ರಾಮುಖ್ಯವನ್ನು ಎತ್ತಿಹಿಡಿದಿದೆ. ಇವು ಈ ಕತೆಗಳ ವೈಶಿಷ್ಟ್ಯ. ಈ ಪ್ರಯತ್ನದಲ್ಲಿ ವೈದಿಕ ದೇವತೆ

ಗಳನ್ನು ಮಾನುಷ ಸಹಜವಾದ ಅಂಶಗಳಾದ ಆಹಾರ, ಗುಣ–ಧರ್ಮ, ಕಾರ್ಯತತ್ಪರತೆ (ಕೆಲಸ – ಕಾರ್ಯ) ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ವರ್ಣಿಸಿದ್ದಾರೆ.

ಪುರುಷ ದೇವತೆಗಳಿಗಿಂತ ಸ್ತ್ರೀ ದೇವತೆಗಳ ಸಂಖ್ಯೆಯು ಕಡಿಮೆಯಾಗಿರುವುದು ಧಾರ್ಮಿಕ ಹಾಗೂ ಲೌಕಿಕ ದೃಷ್ಟಿಯಿಂದ ಗಮನಾರ್ಹವಾಗಿದೆ.

ಆಪಃ, ಅದಿತಿ, ಸರಸ್ವತಿ, ಉಷಸ್, ಮೊದಲಾದ ಸ್ತ್ರೀ ದೇವತೆಗಳು ವೈದಿಕ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಗಳಿಸಿದ್ದಾರೆ. ವೈದಿಕೋತ್ತರ ಸಾಹಿತ್ಯದಲ್ಲಿ ಈ ಸ್ತ್ರೀ ದೇವತೆಗಳ ಸಂಖ್ಯೆಯು ಕ್ರಮೇಣ ಹೆಚ್ಚುತ್ತಾ ಹೋಗಿರುವುದನ್ನು ಗಮನಿಸಿದರೆ, ಇದು ಪ್ರಗತಿಯ ಸೂಚನೆಯೆಂದು ಕಂಡುಬರುತ್ತದೆ. ಪುರಾಣ ಸಾಹಿತ್ಯದಲ್ಲಿ ಸ್ತ್ರೀ ದೇವತೆಗಳು ಹೆಚ್ಚು ಕಡಿಮೆ ಪುರುಷ ದೇವತೆಗಳ ಸರಿಸಮಾನವಾದ ಸಂಖ್ಯೆಯಲ್ಲಿ ರುವುದು ಒಂದು ವೈಶಿಷ್ಟ್ಯವೆನ್ನಬೇಕು. ವೈದಿಕ ಸಮಾಜದ ಸ್ತ್ರೀ ದೇವತೆಗಳ ಈ ಅಭಿವೃದ್ಧಿ ಹಾಗೂ ಅವರಿಗೆ ನೀಡಿರುವ ಪ್ರಾಮುಖ್ಯ ಮತ್ತು ಸ್ಥಾನಮಾನಗಳನ್ನು ಅವಲೋಕಿಸಿದರೆ ಆಧುನಿಕ ಮಾನವ ಸಮಾಜದ ಪ್ರಗತಿಯಂತೆ ವೈದಿಕ ಸಮಾಜವೂ ಪ್ರಗತಿಯನ್ನು ಪಡೆದಿತ್ತು ಎಂದು ಹೇಳಬಹುದು.

ವೇದದಲ್ಲಿ ಪುರುಷ ದೇವತೆಗಳ ಹಿಂಬದಿ (ಹಿನ್ನೆಲೆ)ಯಲ್ಲಿ ಸ್ತ್ರೀ ದೇವತೆಗಳು ಕಂಡುಬರುತ್ತಿದ್ದರು. ಹಿಂದೆ ಭಾರತೀಯ ಸಮಾಜದಲ್ಲಿದ್ದ ಸ್ತ್ರೀಯರ ಸ್ಥಿತಿ – ಗತಿಯಂತೆ ವೈದಿಕ ಕಾಲದ ಸ್ತ್ರೀ ದೇವತೆಗಳು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿರಲಿಲ್ಲ. ಉದಾ: ಆಪಃ ಎಂಬ ಸ್ತ್ರೀ ದೇವತೆಯು ಇಂದ್ರನ ಬೆಂಗಾವಲಿಗೆ ಇದ್ದುದರಿಂದ ಇಂದ್ರನು ವೃತ್ರಾಸುರನನ್ನು ಕೊಲ್ಲಲು ಸಾಧ್ಯವಾಯಿತು. ಆದುದರಿಂದಲೇ ಒಂದು ದಂತ ಕಥೆಯ ಪ್ರಕಾರ ಇಂದ್ರನ ವಜ್ರಾಯುಧವು ಆಪಃ ದೇವತೆಯ ಸಲಹೆಯಂತೆ ತಯಾರಾಯಿತು. ವೃತ್ರಾಸುರನನ್ನು ಕೊಲ್ಲುವ ಸಂದರ್ಭದಲ್ಲಿ ಆಪಃ ದೇವತೆಯು ಇಂದ್ರನ ಕೈಯಲ್ಲಿ ಶಕ್ತಿ ಸ್ವರೂಪಿಣಿಯಾದ ಆಯುಧವಾಗುವಂತೆ ಅವನನ್ನು ಚುನಾಯಿಸಿದಳು. ಈ ಪುರಾಣ ಸಂಬಂಧ ಘಟನೆಯು ಇಂದ್ರನ ಜೀವನದಲ್ಲಿ ಮಹತ್ತರವಾದ ಘಟನೆಯಾಯಿತು. ಬಹುಶಃ ಈ ಘಟನೆಯ ನಂತರ ಇಂದ್ರನು ಬಹಳ ಪ್ರಸಿದ್ಧನಾದನು. ರಾಕ್ಷಸನೊಂದಿಗೆ ನಡೆದ ಯುದ್ಧದಲ್ಲಿ ಇಂದ್ರನು ದೈಹಿಕವಾಗಿ ಅಸ್ವಸ್ಥನಾದಾಗ ಸರಸ್ವತಿಯು ದೇವ–ಧನ್ವಂತರಿಗಳಾದ ಅಶ್ವಿನಿ ದೇವತೆಗಳೊಂದಿಗೆ ಯಾವ ರೀತಿ ಸಹಕರಿಸಿ ಇಂದ್ರನನ್ನು ಉಪಚರಿಸಿದಳೆಂದು ಈಗ ನೋಡೋಣ. ಮತ್ತೊಂದು ಪುರಾಣದ ಕತೆಯ ಪ್ರಕಾರ ನಮುಚಿ ಎಂಬ ಅಸುರನು ಇಂದ್ರನ ಸತ್ವ (ವೀರ್ಯ)ವನ್ನು ಮತ್ತು ಶಕ್ತಿಯನ್ನು ಹೀರಿ ಬಿಟ್ಟನು. ಮತ್ತೆ ಇಂದ್ರನಿಗೆ ಶಕ್ತಿ ಮತ್ತು ಸತ್ವವನ್ನು ತಂದುಕೊಡುವುದು ಹೇಗೆಂದು ದೇವಾದಿ ದೇವತೆಗಳು ಚಿಂತೆಗೀಡಾದರು. ಈ ಸಾಹಸ ಕಾರ್ಯವು ಯಜುರ್ವೇದವಲ್ಲಿ ಸೌತ್ರಾಮಣಿ ಯಜ್ಞದಲ್ಲಿ ವರ್ಣಿತವಾಗಿದೆ. ಯಜುರ್ವೇದವು ಸರಸ್ವತಿಯನ್ನು ದೇವ

ಧನ್ವಂತರಿ (ಚಿಕಿತ್ಸಕಳೆಂದು) ಯೆಂದು ಕಂಡು ಅವಳ ಪ್ರಭಾವವನ್ನು ಕೊಂಡಾಡುತ್ತದೆ. ಇದರ ಮೂಲಕ ಸರಸ್ವತಿಯ ಜಾಣ್ಮೆ ವ್ಯಕ್ತವಾಗುತ್ತದೆ.

ಋಗ್ವೇದದಲ್ಲಿ ಸರಸ್ವತಿ (ಸರಸ+ವತಿ–ಹರಿಯುವ ನೀರುಳ್ಳದ್ದು) ಯನ್ನು ಪವಿತ್ರವಾದ ನದಿಗೆ ವ್ಯಕ್ತಿತ್ವದ ಅಧ್ಯಾರೋಪವನ್ನು ಮಾಡಿದ್ದಾರೆ. ಸರಸ್ವತಿಗೆ ನದಿಯ ಸಂಬಂಧವನ್ನು ಸೂಚಿಸುವಂತೆ ಋಗ್ವೇದದ ಮಂತ್ರಗಳು ಬಣ್ಣಿಸಿವೆ. ಇತರ ಯಾವ ನದಿಗಿಂತಲೂ ಸರಸ್ವತಿ ನದಿಯು ಶ್ರೇಷ್ಠವೆಂದು ವರ್ಣಿಸಿದ್ದಾರೆ. ಇತರ ದೇವತೆಗಳೊಡನೆ ಸರಸ್ವತಿಯನ್ನು ಪ್ರಾರ್ಥಿಸಿದ್ದಾರೆ. ಋಗ್ವೇದದ ಪ್ರಕಾರ ಪ್ರಥಮತಃ ಸರಸ್ವತಿಯು ಒಬ್ಬ ನದಿ ದೇವತೆಯೆಂದು ಪರಿಗಣಿತಳಾಗಿದ್ದಾಳೆ. ಬ್ರಾಹ್ಮಣ ಗ್ರಂಥಗಳಲ್ಲಿ ಸರಸ್ವತಿಯನ್ನು 'ವಾಕ್' ನೊಡನೆ ಸಮೀಕರಿಸಿದ್ದಾರೆ. ವೇದೋತ್ತರ ಕಾಲದ ಪುರಾಣ ಕತೆಗಳಲ್ಲಿ ವಾಗ್ಮಿತೆಯ (ವಾಕ್ಚಾತುರ್ಯ) ಮತ್ತು ವಿವೇಕದ ದೇವತೆಯೆಂದು ಅವಳನ್ನು ವರ್ಣಿಸಿದ್ದಾರೆ. (Godess of eloquence and wisdom). ಇದರ ಫಲವಾಗಿ, ಅವಳನ್ನು ವಿದ್ಯಾಧಿ ಕಲಾ ದೇವತೆಯೆಂದೂ (ವಾಗ್ದೇವತೆ. ಬುದ್ಧಿ ದೇವತೆ) ಮತ್ತು ಬ್ರಹ್ಮನ ರಾಣಿ (ಪತ್ನಿ) ಯೆಂದೂ ಭಾವಿಸಿ ಪ್ರಾರ್ಥಿಸತೊಡಗಿದರು. ಋಗ್ವೇದದಲ್ಲಿ ಸರಸ್ವತಿಯನ್ನು ಪವಿತ್ರಳೆಂದೂ. ವಿಚಾರ ಮತ್ತು ಬುದ್ಧಿಶಕ್ತಿಯನ್ನು ಪ್ರೇರೇಪಿಸುವಳೆಂದೂ ವರ್ಣಿಸಲಾಗಿದೆ.

ಸರಸ್ವತಿಯ ವ್ಯಕ್ತಿತ್ವದ ಆಧಾರ ಯಾವುದೇ ಆಗಿರಲಿ ಅವಳು ವೈದಿಕ ಜೀವಂತ ದೇವತೆಗಳಲ್ಲಿ ಒಬ್ಬಳೆಂದು ಪ್ರಸಿದ್ಧಳಾಗಿ. ಈಗಿನ ನಮ್ಮ ಪುರಾಣ. ಧರ್ಮಗ್ರಂಥಗಳಲ್ಲಿ ಕಂಗೊಳಿಸಿದ್ದಾಳೆ. ವೈದಿಕ ಕಾಲದಿಂದ ಆಧುನಿಕ ಕಾಲದ ವರೆಗೆ ಸರಸ್ವತಿಯ ವ್ಯಕ್ತಿತ್ವವು ವಿಕಾಸಗೊಂಡಿರುವುದನ್ನು ಗಮನಿಸಬಹುದು. ಈಗಲೂ ಸರಸ್ವತಿಯನ್ನು ಒಬ್ಬ ಪ್ರಮುಖ ದೇವತೆಯೆಂದು ಪರಿಗಣಿಸಿ. ಅವಳನ್ನು ಸಕಲ ವಿದ್ಯಾಸಂಪನ್ನ ದೇವತೆಯೆಂದು ಪೂಜಿಸುತ್ತಾರೆ. ನವರಾತ್ರಿಯ ಸಂದರ್ಭದಲ್ಲಿ ಮೂಲಾ ನಕ್ಷತ್ರದ ದಿನ ಸರಸ್ವತಿಯನ್ನು ಆವಾಹನೆ ಮಾಡಿ ಇಡೀ ದಿನ ಅಖಂಡವಾಗಿ ಅವಳನ್ನು ಪೂಜಿಸುತ್ತಾರೆ. ವೇದೋತ್ತರ ಕಾಲದಲ್ಲಿ ಸರಸ್ವತಿಯ ಗುಣಗಾನವನ್ನು ಮಾಡುವ ಸಹಸ್ರ ನಾಮ ಮತ್ತು ಇತರ ಅನೇಕ ಸ್ತೋತ್ರಗಳು ರಚಿತವಾದುವು. ಇವೆಲ್ಲವೂ ಅವಳನ್ನು ಒಲಿಸಿಕೊಂಡು ಅವಳ ಅನುಗ್ರಹವನ್ನು ಪಡೆಯುವುದಕ್ಕಾಗಿ ರಚಿತವಾದುವು. ಜನರು ಸರಸ್ವತಿಯಲ್ಲಿ ನಿರಂತರವಾದ ವಿಶ್ವಾಸ. ಆದರ. ನಂಬಿಕೆ. ಶ್ರದ್ಧೆ–ಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಸರಸ್ವತಿಯು ಸಂತೋಷದಿಂದ ತನ್ನ ಭಕ್ತನೆಡೆಗೆ ಮುಗುಳ್ನಗೆ ಬೀರಿದ ಹೊರತು ಅತನಿಗೆ ತನ್ನ ಯಾವುದೇ ಬೌದ್ಧಿಕ ಕಾರ್ಯದಲ್ಲಿ ಜಯ ಲಭಿಸುವುದು ದುರ್ಲಭವೆನ್ನುವುದು ಸ್ಪಷ್ಟ. ಯಜುರ್ವೇದದಲ್ಲಿ ಸರಸ್ವತಿಯ ಸ್ಥಾನ—ಮಾನಗಳೇನೆಂಬುದನು ಇನ್ನು ಮುಂದೆ ಸಂಕ್ಷೇಪವಾಗಿ ಪರಿಶೀಲಿಸೋಣ. ಶುಕ್ಲಯಜುರ್ವೇದಕ್ಕೆ ಸಂಬಂಧಿಸಿದ ವಾಜಸನೇಯ ಸಂಹಿತವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ವಿವೇಚಿಸಲಾಗಿದೆ.

2

ವಾಜಸನೇಯ ಸಂಹಿತವು ಮೂಲದಲ್ಲಿ 40 ಅಧ್ಯಾಯಗಳನ್ನೊಳಗೊಂಡಿದೆ. ಮೊದಲ 39 ಅಧ್ಯಾಯಗಳು ಯಾಗ ವಿಧಿಯನ್ನು ವರ್ಣಿಸುತ್ತವೆ. ಉದಾ: ದರ್ಶಪೂರ್ಣ ಮಾಸದಿಂದ ಹಿಡಿದು ಪ್ರವರ್ಗ್ಯದ ವಿಧಿಯವರೆಗೆ. ಕೊನೆಯ ಅಧ್ಯಾಯ (40) ವು ಪ್ರಸಿದ್ಧವಾದ ಈಶೋಪನಿಷತ್ತು.

ಇದರಲ್ಲಿ 50 ಕಂಡಿಕೆಗಳಿವೆ (ಶ್ಲೋಕ). ಇವು ವಾಜಸನೇಯ ಸಂಹಿತದಲ್ಲಿ ಸರಸ್ವತಿಗೆ ಸಂಬಂಧಪಟ್ಟಿವೆ. ಇದರಲ್ಲಿ ಹೆಚ್ಚು ಭಾಗವು 19–21 ಅಧ್ಯಾಯಗಳಲ್ಲಿ ದೊರೆಯುತ್ತವೆ. ಮತ್ತು ಇವು ಸೌತ್ರಾಮಣಿ ಯಜ್ಞವನ್ನು ವಿವರಿಸುತ್ತವೆ. ಉಳಿದ ವಿವರಗಳು ವಾಜಸನೇಯ ಸಂಹಿತದ ಇತರ ಅಧ್ಯಾಯಗಳಲ್ಲಿ ಹಂಚಿಹೋಗಿವೆ.

ಯಜುರ್ವೇದದಲ್ಲಿ ಸರಸ್ವತಿಯು ಮೂರು ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ನದಿಯ ರೂಪದಲ್ಲಿ, ಚಿಕಿತ್ಸಕಳಾಗಿ, ಮತ್ತು ಯಜ್ಞಯಾಗಾದಿಗಳಿಗೆ ಸಂಬಂಧಪಟ್ಟ ದೇವತೆಯೊಡನೆ ಸಂಗಾತಿಯಾಗಿ ಕಂಗೊಳಿಸಿದ್ದಾಳೆ. ಇಡಾ, ಭಾರತಿ ಮತ್ತು ಸರಸ್ವತಿ — ಮೂವರು ಕೂಡಿ ಒಬ್ಬ ಯಜ್ಞದೇವತೆಗಳಾಗುತ್ತಾರೆ. ... ಅವಳು ತ್ರಿಕೂಟಳಾಗಿದ್ದಾಳೆ (ಮೂರು ಮಂದಿಯಿಂದ ಕೂಡಿದವಳು). ತ್ರಿಸೋದೇವಿಯರಾದ ಈ ದೇವತೆಗಳು (ತ್ರಿಮೂರ್ತಿ) ವೇದದಲ್ಲಿ ಆಪ್ರಿ ದೇವತೆಗಳೆಂದು ಪ್ರಸಿದ್ಧರಾಗಿದ್ದಾರೆ.

ವಾಜಸನೇಯ ಸಂಹಿತದಲ್ಲಿ (ವಾ.ಸಂ. 34.1) ಒಂದೇ ಒಂದು ಸಲ ಸರಸ್ವತಿಯನ್ನು ನದಿಯೆಂದು (ನದಿ ದೇವತೆ) ವರ್ಣಿಸಿದ್ದಾರೆ. ಆದರೆ ಹಲವು ಕಡೆ ಯಜ್ಞ ದೇವತೆಗಳ ಗುಂಪಿನಲ್ಲಿ ಸರಸ್ವತಿಯನ್ನು ದೇವ ಧನ್ವಂತರಿಗಳೊಂದಿಗೆ ಸಹಕರಿಸಿ, ಇಂದ್ರನಿಗೆ ಉಪಚಾರ (ಚಿಕಿತ್ಸೆ) ಮಾಡಿದ ಚಿಕಿತ್ಸಕ ದೇವತೆಯೆಂದು ಹೊಗಳಿದ್ದಾರೆ.

ವಾಜಸನೇಯ ಸಂಹಿತದಲ್ಲಿ ಬರುವ ಸರಸ್ವತಿಯ ವರ್ಣನೆ ಮತ್ತು ಅವಳ ಗುಣ ಲಕ್ಷಣಗಳನ್ನು ನೋಡಿದರೆ ಅವಳಿಗೆ ಸಾಕಾರ ಸ್ವರೂಪವನ್ನು ಆರೋಪಿಸಿದಂತೆ ಕಂಡುಬರುತ್ತದೆ. ಆದುದರಿಂದ ಯಜುರ್ವೇದದಲ್ಲಿ ಸರಸ್ವತಿಯು ಸ್ವೀಕರಿಸುವ ಆಹಾರ ಪದಾರ್ಥಗಳು, ಅವಳ ಗುಣ – ಲಕ್ಷಣಗಳು, ಕಾರ್ಯಚಟುವಟಿಕೆಗಳು, ಮತ್ತು ಅವಳ ಸಂಬಂಧಿಕರು ಇವುಗಳಿಗೆ ವಿಶೇಷ ಪ್ರಾಧಾನ್ಯ ನೀಡಿದ್ದಾರೆ. ಮೇಲೆ ಹೇಳಿರುವ ಸರಸ್ವತಿಗೆ ಸಂಬಂಧಪಟ್ಟ ಪ್ರತಿಯೊಂದು ಅಂಶದ ಬಗ್ಗೆ ಸಂಕ್ಷೇಪವಾಗಿರುವ ವಿವರವನ್ನು ಕೆಳಗೆ ನೋಡಬಹುದು.

ಸೌತ್ರಾಮಣಿ, ಅಶ್ವಮೇಧ ಇವೇ ಮೊದಲಾದ ಯಜ್ಞಗಳಲ್ಲಿ ಆಹುತಿಯಾಗಿ ನೀಡುವ ಅನೇಕ ಬಗೆಯ ಆಹಾರ ಪದಾರ್ಥಗಳನ್ನು ಸರಸ್ವತಿಯ ಆಹಾರವೆಂದು

ತಿಳಿಯಬಹುದು. ಅನೇಕ ಬಗೆಯ ಯಜ್ಞಪಶುಗಳು, ಕೆಂಪು ಬಣ್ಣದ ಮೇಕೆ, ಬಿಳಿಯ ಹೆಣ್ಣು ಕುರಿ — ಇವೇ ಮೊದಲಾದುವನ್ನು ಅಶ್ವಮೇಧ ಯಾಗದಲ್ಲಿ ಸರಸ್ವತಿಗೆ ಆಹುತಿ ಯಾಗಿ (ಆಹಾರ) ಅರ್ಪಿಸುತ್ತಿದ್ದರು. ಇವೆಲ್ಲವನ್ನೂ ಅವಳ ಆಹಾರವೆಂದು ಪರಿಗಣಿಸ ಬಹುದು. ಸೌತ್ರಾಮಣಿಯಲ್ಲಿ ಪ್ರತ್ಯೇಕವಾಗಿ ಒಂದು ಟಗರನ್ನು ಅವಳಿಗೆ ನಿವೇದಿ ಸುತ್ತಿದ್ದರು. ಆ ಪ್ರಾಣಿಯ 'ವಪಾ' (ಕೊಬ್ಬು)ವನ್ನು ಅವಳಿಗೆ ಅರ್ಪಿಸುತ್ತಿದ್ದರು. ಯಜ್ಞಾಶ್ವದ ಎರಡನೆಯ ಪಕ್ಕೆಲುಬನ್ನು ಸರಸ್ವತಿಗೆ ನೀಡುತ್ತಿದ್ದರು. ಅವಳ ಪಾನೀಯ ವಾದರೋ ಸೋಮ, ಸುರಾ ಮತ್ತು ಮಧು — ಈ ಪಾನೀಯಗಳನ್ನು ಆಯಾ ಉಚಿತ ಸಂದರ್ಭಗಳಲ್ಲಿ ಅವಳಿಗೆ ಒಪ್ಪಿಸುತ್ತಿದ್ದರು.

ಸರಸ್ವತಿಯು ಇತರ ಪ್ರಮುಖ ದೇವತೆಗಳಂತೆ ಅವಳ ಗುಣ ಲಕ್ಷಣಗಳಿಂದ ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾಳೆ. ಹಿಂದೆ ಹೇಳಿದಂತೆ ಅವಳು ತಜ್ಞ ಚಿಕಿತ್ಸಕಳು. ಇಂದ್ರನಿಗೆ ಗುಣ ಪಡಿಸುವುದರಲ್ಲಿ ಅವಳು ಪ್ರಧಾನ ಪಾತ್ರವನ್ನು ವಹಿಸಿದಳು.

ಸರಸ್ವತಿಯು ಕಲಾಭಿಜ್ಞಳು ಮತ್ತು ರಸಜ್ಞಳು. ಅವಳು ಇಂದ್ರನ ಮಹಿಮೆ ಯನ್ನು ಕೊಂಡಾಡಿದಾಗ ಅವಳ ಪ್ರತಿಭೆ ಎಷ್ಟೆಂದು ವ್ಯಕ್ತವಾಗುತ್ತದೆ. ಅಂತೆಯೇ ವೇದ ಕಾಲದ ಋಷಿ ಕವಿಗಳ ಶ್ರೇಷ್ಠತೆಯನ್ನು ಮಾನ್ಯ ಮಾಡಿದಳು. ಯಜ್ಞದ ಪುಣ್ಯ ಕಾರ್ಯದಿಂದ ಸರಸ್ವತಿಯು ವರ್ಧಿಸಲೆಂದು ಭಕ್ತನು ಆಶಿಸುತ್ತಾನೆ. (ಸರಸ್ವತಿಶ್ಚ ಮೆ ಯಜ್ಞೇನ ಕಲ್ಪತಾಮ್) ಮುಂದೆ ಈ ಗುಣವು, ಯಜುರ್ವೇದದಲ್ಲಿ ಯಜ್ಞಪಶುವನ್ನು ಆಲಂಕಾರಿಕವಾಗಿ ಸಂಬೋಧಿಸಿದಾಗ ರುಜುವಾತಾಗುತ್ತದೆ.

ಭಕ್ತರ ಆಶೋತ್ತರಗಳನ್ನು ಪೂರೈಸುವುದರಲ್ಲಿ ಇವಳು ಶಕ್ತಳು ಮತ್ತು ಮಹಾ ಮಹಿಮಳು. ಯಜುರ್ವೇದದಲ್ಲೇ ಇವಳು ಪ್ರಮುಖಳು. ಏಕೆಂದರೆ ಸೋಮ ಯಾಗದಲ್ಲಿ ಸೋಮರಸಕ್ಕಾಗಿ ಸೋಮವನ್ನು ದಿನದಲ್ಲಿ ಮೂರನೆಯ ಸಲ ಹಿಂಡುವ ಕಾರ್ಯವು ಇವಳ ಮೂಲಕ ನಡೆಯುತ್ತಿತ್ತು. ಮೊದಲನೆಯದು ವೇದದ ಅಶ್ವಿನೀ ದೇವತೆಗಳ ಮೂಲಕ ನಡೆಯುತ್ತಿತ್ತು. ಸರಸ್ವತಿಯ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿ ದರೆ ಇವಳು ತಜ್ಞ ವೈದ್ಯಳಾಗಿ ಪ್ರಭಾವ ಬೀರುತ್ತಾಳೆ. ಯಜ್ಞದ ಯಜಮಾನನು ಯಾವಾಗ ಇವಳನ್ನು ಆಹ್ವಾನಿಸುತ್ತಾನೆಯೋ ಆಗ ಯಜ್ಞ ಶಾಲೆಗೆ ಬರುತ್ತಾಳೆ. ವೇದ ದಲ್ಲಿ ಅಗ್ನಿಗೆ ಯಾವ ಕಾರ್ಯಚಟುವಟಿಕೆಗಳಿವೆಯೋ ಅದೇ ಕಾರ್ಯಗಳು ಸರಸ್ವತಿಗೂ ಇವೆ. ಇವಳನ್ನು ಪಾವಕಳು (ಪವಿತ್ರ ಗೊಳಿಸುವವಳು) ಎಂದು ಯಜುರ್ವೇದವು ಉಲ್ಲೇಖಿಸುತ್ತದೆ. ಯಜ್ಞದ ಯಜಮಾನನನ್ನು ಹಗಲು–ರಾತ್ರಿ ಇವಳು ಕಾಪಾಡು ತ್ತಿದ್ದಳು. ಮತ್ತು ಎಲ್ಲಾ ಕಾಲದಲ್ಲಿಯೂ ಯಜ್ಞದ ಯಜಮಾನನ ಇಚ್ಛೆಯನ್ನು ನೆರ ವೇರಿಸುತ್ತಿದ್ದಳು. (ದಿವಾ ನಕ್ತಂ ಜಾಗ್ರುವಿ) (ವಾಜಸನೇಯ ಸಂಹಿತ 21.36).

ಈಗ ಸರಸ್ವತಿಯ ಬಂಧು ಬಾಂಧವರು (ಸಂಬಂಧಿಕರು) ಯಾರೆಂಬುದನ್ನು ನೋಡೋಣ. ಸರಸ್ವತಿಯು ಯಶಸ್ ದೇವತೆಯ ಸಹೋದರಿ. (ಯಶೋಭಗಿನಿ)

ಇವಳು ಅಶ್ವಿನಿಗಳಿಗೆ ಹೆಂಡತಿ. ಇಂದ್ರನಿಗೆ ತಾಯಿ. ವರುಣನ ಹೆಂಡತಿ ಅನಂತರ ಬ್ರಹ್ಮನರಾಣಿ ಮುಂತಾದುವು. (ವೇದಮೂಲಂ, ಋಷಿಮೂಲಂ, ನದಿಮೂಲಂ — ನಪ್ರಚೇತ್ ಇತ್ಯಾದಿ. ವೈದಿಕ ಕಾಲದ ದೇವತೆಗಳ ಆಪ್ತ ಸಂಬಂಧಿಕರನ್ನು ಗಮನಿಸಿದರೆ ಅದು ಈ ಕಾಲಕ್ಕೆ ವಿಚಿತ್ರವಾಗಿ ಮತ್ತು ತೊಡಕಾಗಿ ಕಂಡುಬರುತ್ತದೆ. ಏಕೆಂದರೆ ಈ ಕಾಲದ ನೈತಿಕ ಮಟ್ಟಕ್ಕೆ ಹೋಲಿಸಿದರೆ ಈ ವ್ಯಕ್ತಿಗತ ಸಂಬಂಧವು ಅಸಂಗತವಾಗಿ ತೋರುತ್ತದೆ. ಆದುದರಿಂದಲೇ ವೇದಮೂಲ, ದೇವತೆಗಳ ಮೂಲ, ನದಿಮೂಲ, ಋಷಿಮೂಲ ಮುಂತಾದವುಗಳ ಶೋಧನೆಯು ನಮ್ಮಲ್ಲಿ ವರ್ಜ್ಯವಾಗಿತ್ತೆಂದು ತೋರುತ್ತದೆ. ವೇದಮೂಲಂ ... ಇವುಗಳನ್ನು ಶೋಧಿಸುವುದು ಅಹಿತಕರ ಎಂಬ ಭಾವನೆ ನಮ್ಮಲ್ಲಿ ಇಂದಿಗೂ ಇದೆ. ಆದರೆ ಆಧುನಿಕ ಸಂಶೋಧಕರು,ಪಾಶ್ಚಾತ್ಯ ಸಂಶೋಧಕರು ಕುತೂಹಲದಿಂದ ನಮ್ಮ ದೇವಾದಿ ದೇವತೆಗಳ ಮೂಲವನ್ನು ಕುರಿತು ಸಂಶೋಧಿಸುತ್ತಿರುವುದು ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿದೆ.)

ಸರಸ್ವತಿಯು ಬೇರೆ ಬೇರೆ ವೈದಿಕ ದೇವತೆಗಳೊಡನೆ ಸಹಕರಿಸಿ ಎಲ್ಲರ ಹಿತದೃಷ್ಟಿಯನ್ನು ವೈಯಕ್ತಿಕವಾಗಲಿ, ಸಾಮೂಹಿಕವಾಗಲಿ ನೋಡಿಕೊಂಡಳೆಂದು ತಿಳಿದುಬರುತ್ತದೆ. ಉದಾ: ಅಶ್ವಿನಿ ದೇವತೆಗಳು, ತ್ವೈತ್ರಿ, ಉಪಾಸನಕ್ತ ಇತ್ಯಾದಿ. ಉದಾಹರಣೆಗೆ ಕೆಲವನ್ನು ನೋಡಬಹುದು.

ಇಂದ್ರ ಮತ್ತು ಅಶ್ವಿನಿ ದೇವತೆಗಳ ಜೊತೆಯಲ್ಲಿ ಸರಸ್ವತಿಯು ಸೇರಿಕೊಂಡು ಯಜ್ಞನ ಯಜಮಾನನ ಆಶೋತ್ತರಗಳನ್ನು ಈಡೇರಿಸುತ್ತಿದ್ದಳು. ಅವಳು ಇಂದ್ರನಿಗೆ ಸುಗಂಧ ಲೇಪನ (Balm) ಯಶಸ್ಸು ಗೌರವವನ್ನು ಸಂಪಾದಿಸಿ ಕೊಟ್ಟಳು ಮತ್ತು ಇತರ ದೇವತೆಗಳನ್ನು ಸೇರುವಂತೆ ಮಾಡಿದಳು. ತ್ವಷ್ಟ್ರಿಯು ಹೀಗೆಯೇ ನೇಮಕವಾಗಿದ್ದನು. ಇಂದ್ರನು ನಮುಚಿಯನ್ನು ಜಯಿಸಿದನಂತರ ಸರಸ್ವತಿಯು ಪೂಷನ್ನೊಂದಿಗೆ ಸೇರಿ ಇಂದ್ರನನ್ನು ಸ್ತುತಿ ಮಾಡಿದಳು, ಇಂದ್ರನಿಗೆ ರೂಪವನ್ನೂ, ಅತಿಶಯವಾದ ಶಕ್ತಿಯನ್ನೂ ಕರುಣಿಸಲು ಇವಳು ಉಷಸ್ ನಕ್ತನೊಂದಿಗೆ ಸೇರಿಕೊಂಡಳು. ಇತ್ಯಾದಿ.

ವಾಜಸನೇಯ ಸಂಹಿತದಲ್ಲಿರುವ ಒಂದು ಉಲ್ಲೇಖದಂತೆ, ಸುರೆಯು ಪ್ರವಾಹ ರೂಪದಲ್ಲಿ ಸರಸ್ವತಿಯ ಪಾನಕ್ಕೆಂದು ಹರಿದು ಬರುತ್ತಿದ್ದಳೆಂದು ತಿಳಿದು ಬರುತ್ತದೆ. ಇದರಿಂದ ಸರಸ್ವತಿಯ ಮೇಲೆ ಸುರಾದೇವತೆಗಿದ್ದ ಅಭಿಮಾನವು ವ್ಯಕ್ತವಾಗುತ್ತದೆ.

ಸರಸ್ವತಿಯು ಮತ್ತೆ ಕೆಲವು ಕೆಲಸಕಾರ್ಯಗಳನ್ನು ಸ್ವತಂತ್ರಳಾಗಿ ನಿರ್ವಹಿಸುತ್ತಿದ್ದಳು. ಇಂದ್ರನನ್ನು ಯಜ್ಞಕಾರ್ಯದಲ್ಲಿ ಭಾಗವಹಿಸಲು ಆಹ್ವಾನಿಸುತ್ತಿದ್ದಳು. ಸರಸ್ವತಿಯು ಇಂದ್ರನ ದೇಹಮತ್ತು ಅಂಗಾಂಗಗಳನ್ನು ಒಟ್ಟಿಗೆಸೇರಿಸಿಅವನಿಗೆ ಶಸ್ತ್ರ ಚಿಕಿತ್ಸೆ ಮಾಡಿದಳು. ನಮುಚಿಯನ್ನು ಜಯಿಸಿದ ನಂತರ ಅವನಿಗೆ ಕುಡಿಯಲು ಸೋಮರಸವನ್ನು ಸಿದ್ಧವಾಗಿ

ಟ್ಟಿದ್ದಳು. ಅವಳು ಇಂದ್ರನಿಗೆ ಪ್ರಾಣ, ವ್ಯಾನ (ಮೂಗಿನ ಕೂದಲು): ಕೋಸ, ಶಕ್ತಿ, ಈ ಅಂಶಗಳನ್ನು ದಯಪಾಲಿಸಿದಳು. ಇಂದ್ರನಿಗೆ ಕಷ್ಟಬಂದ ಕಾಲದಲ್ಲಿ ಅವನನ್ನು ಲಾಲನೆ ಮಾಡುತ್ತಿದ್ದಳು.

ಅಶ್ವಿನಿ ದೇವತೆಗಳೊಂದಿಗೆ ಸೇರಿ ಸರಸ್ವತಿಯು ಸಂತೋಷದಿಂದ ಸೋಮಪಾನ ಮಾಡುತ್ತಿದ್ದಳು. ಯಜುರ್ವೇದದ ಒಂದು ಕಡೆಯಲ್ಲಿ ಯಜ್ಞದ ಹವಿಸ್ಸನ್ನು ತೆಗೆದು ಕೊಳ್ಳಲು ರುದ್ರನನ್ನು ಅವನ ಸಹೋದರಿ ಅಂಬಿಕಾಳೊಡನೆ ಆಹ್ವಾನಿಸಲಾಗಿತ್ತು. (ವಾ.ಸಂ. 3.5.7) ಆಗ ಇವಳು ವಿಚಾರಶಕ್ತಿ (ಧಿಯ) ಯೊಂದಿಗೆ ಸೇರಿಕೊಂಡು ಇಂದ್ರನ ಅಂದವಾದ ದೇಹವನ್ನೂ ಮತ್ತು ಸಂಪತ್ತನ್ನೂ ಸೃಷ್ಟಿಸಿದಳು. ಏನೇ ಆದರೂ ದೇವ ಧನ್ವಂತರಿಗಳಾದ ಅಶ್ವಿನಿ ದೇವತೆಗಳೊಂದಿಗೆ ಕೂಡಿಕೊಂಡು ಸರಸ್ವತಿಯು ನಡೆಸಿದ ಚಿಕಿತ್ಸೆಯಿಂದಾಗಿ ಅವಳನ್ನು ಉತ್ತಮ ಚಿಕಿತ್ಸಕಳೆಂದು ವೇದವು ಶಿಫಾರಸು ಮಾಡುತ್ತದೆ.

ಯಜುರ್ವೇದದಲ್ಲಿ ಸರಸ್ವತಿಯನ್ನು 'ದೇವಿ ಸರಸ್ವತಿ' ಎಂದು ಸಂಬೋಧಿಸಿದಂತೆ ಕಂಡುಬರುವುದಿಲ್ಲ. ಆದರೆ ವೇದೋತ್ತರ ಪುರಾಣ ಕತೆಗಳ ಕಾಲದಲ್ಲಿ ಅವಳನ್ನು 'ದೇವಿ ಸರಸ್ವತಿ' ಎಂದು ಕರೆದಿದ್ದಾರೆ. ಯಜುರ್ವೇದದಲ್ಲಿ ಅವಳು ಕೇವಲ ಉಪಚಾರಕಳಾಗಿ (ಸೇವಕಿ, ಧಾತ್ರಿ) ಅಥವಾ ಸಮಾನಸ್ಥಾನದಲ್ಲಿ ಸಹಕರಿಸಿ ಇಂದ್ರನು ಚೇತರಿಸಿಕೊಳ್ಳುವ ಕಾರ್ಯದಲ್ಲಿ ನೆರವಾದಳು. ಅಂದರೆ ಅವಳು ದೇವತೆಗಿಂತ ಹೆಚ್ಚಾಗಿ ಇಲ್ಲಿ ಧಾತ್ರಿಯಾಗಿ ಕಾಣಿಸಿಕೊಂಡಿದ್ದಾಳೆ. ಮತ್ತೆ ಯಾವ ಸ್ತ್ರೀ ದೇವತೆಯೂ ಇವಳಷ್ಟು ವಿಶೇಷವಾದ ಅಧಿಕಾರವನ್ನು ಅನುಭವಿಸಲಿಲ್ಲ.

ಯಜುರ್ವೇದದಲ್ಲಿ ಸರಸ್ವತಿಯ ವ್ಯಕ್ತಿತ್ವವು ವಿಶಿಷ್ಟವಾಗಿ ವ್ಯಕ್ತವಾಗಿದೆ. ಪುರಾಣ ಕತೆಗಳಲ್ಲಿ ಅವಳಲ್ಲಿ ಕಂಡುಬರುವ ಕೆಲವು ಗುಣಲಕ್ಷಣಗಳು ವೇದಗಳ ಕಾಲದಲ್ಲಿ ಅವಳಲ್ಲಿ ಕಂಡುಬರುವುದಿಲ್ಲ. ಮತ್ತೊಂದು ಗಮನೀಯವಾದ ಅಂಶವೆಂದರೆ ಧನ್ವಂತರಿಯಾಗಿ ಆಕೆಯ ಪಾತ್ರವು ಯಜುರ್ವೇದದಲ್ಲಿ ಮಾತ್ರ ಕಂಡುಬರುತ್ತದೆ. ಈಗ ಸರಸ್ವತಿಯು ಯಜುರ್ವೇದದಲ್ಲಿ ಉಕ್ತವಾಗಿರುವಂತೆ ಚಿಕಿತ್ಸಕಳಾಗಿಯಾಗಲೀ ಅಥವಾ ಇತರೇ ಯಾವ ವಿಶೇಷ ಗುಣಗಳಿಂದಾಗಲೀ. ಕಂಡುಬರುವುದಿಲ್ಲ. ಅದಕ್ಕಿಂತ ಮಿಗಿಲಾಗಿ 'ವಿದ್ಯಾಧಿ ದೇವತೆ'ಯೆಂದು ಪೂಜನೀಯಳಾಗಿದ್ದಾಳೆ.

ವೈದಿಕ ದೇವತೆಗಳ ಸ್ತ್ರೀ ಮತ್ತು ಪುರುಷ ದೇವತೆಗಳ ವ್ಯಕ್ತಿತ್ವ ಮತ್ತು ವಿಶಿಷ್ಟ ಗುಣಗಳು ಕಾಲಾನುಕ್ರಮವಾಗಿ ಸಾಹಿತ್ಯ ಲೋಕದಲ್ಲಿ ಬದಲಾವಣೆ ಹೊಂದುತ್ತಾ ಬಂದಿದೆ. ಇದು ಜನರು ಆಯಾ ಕಾಲಕ್ಕೆ ಹೊಂದಿದ್ದ ನಂಬಿಕೆ ಶ್ರದ್ಧೆ. ಮತ್ತು ಆರಾಧನೆ ಯಲ್ಲಿನ ಅಭಿವೃದ್ಧಿಯ ಸಂಕೇತವಾಗಿ ಕಂಡು ಬರುತ್ತದೆ. ಕೆಲವು ವೈದಿಕ ಕಾಲದ ದೇವತೆ ಗಳಾದ ಪ್ರಷನ್. ಋಭುಸ್ — ಮೊದಲಾದ ದೇವತೆಗಳು ಕಾಲಪ್ರವಾಹದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಅಮುಖ್ಯರಾಗಿ ಈಗ ಅಪ್ರಸ್ತುತರಾಗಿರುವುದು ವ್ಯಕ್ತವಾಗು

ತ್ತದೆ. ಅವರ ಇಂದಿಗೂ. ಎಂದೆಂದಿಗೂ ಸರಸ್ವತಿಯು ಹಿಂದೂ ದೇವತಾ ಸಮೂಹದಲ್ಲಿ ಮತ್ತರವನ್ನುಂಟುಮಾಡುವ ಪ್ರಾಮುಖ್ಯವನ್ನು ಗಳಿಸಿ. ವೇದಕಾಲದಿಂದ ನಿರಂತರವಾದ ಅಭಿವೃದ್ಧಿಯನ್ನು ಪಡೆದು. ವಿಕಾಸದ ತುತ್ತ ತುದಿಯ ಮೆಟ್ಟಲನ್ನೇರಿ ನಿಂತಿದ್ದಾಳೆಂದು ಅಭಿಮಾನದಿಂದ ಹೇಳಬಹುದು. ಸರಸ್ವತಿಯು ಚಿರಸ್ಥಾಯಿಯಾದ ಗೌರವ ಮತ್ತು ಪೂಜ್ಯತೆಯನ್ನು ತನ್ನ ಭಕ್ತರಿಂದ ಸಂತೋಷವಾಗಿ ಪಡೆಯುತ್ತಾಳೆಂದು ತುಂಬು ಭರವಸೆ ಯಿಂದ ಹೇಳಬಹುದು.

"ಸರಸ್ವತ್ಯೈ ಪಾವಕ್ಯೈ ಸ್ವಾಹಾ"

[ಡಾ. ಸಿ. ಎಲ್. ಪ್ರಭಾಕರ್ ಅವರ Saraswathi in Yajurveda (Suma 1971) ಎಂಬ ಲೇಖನಕ್ಕೆ ಕೃತಜ್ಞಳಾಗಿದ್ದೇನೆ.]

ಡೊಳ್ಳಿನ ಪದದಲ್ಲಿ ಇಳೆ, ಮಳೆ, ಬೆಳೆ

ಸಂಗ್ರಹಕಾರರು : **ಕೆ. ವಿರೂಪಾಕ್ಷ ಗೌಡ**

ಸ್ವಾಮಿ ನಮ್ಮಯ ದೇವರು ಬಂದಾವು ಬನ್ನಿರೇ
ಗುರುವೇ ನಮ್ಮಯ ದೇವರು ಬಂದಾವು ಬನ್ನಿರೇ ॥ಪ॥
ಹೆಣ್ಣು ಎಂಬುದು ಯಾವುದಪ್ಪ ಗಂಡು ಅಂಬೋದು ಯಾವುದೇ ?
ಹೆಣ್ಣಂಬೋ ಭೂಮವ್ವೇಳಪ್ಪ ಗಂಡಂಬೋ ಮಳಿರಾಯನೇ
ಗಂಡಂಬೋ ಮಳಿರಾಯ ಬಾರದವ್ಯಾಲೆ ಭೂಮವ್ವ ಬಸಿರಿಲ್ಲವಾ
ಭೂಮವ್ವ ಬಸಿರಿಲ್ಲದವ್ಯಾಲೆ ಬಸವಗ ಮೇವಿಲ್ಲವಾ
ಬಸವಗ ಮೇವಿಲ್ಲದಾವ್ಯಾಲೆ ಶಿಶುವಿಗೆ ಹಾಲಿಲ್ಲವಾ
ಶಿಶುವಿಗೆ ಹಾಲಿಲ್ಲವಂದ್ವೇಳಿ ಗಂಡ ಹೋಗ್ಯಾನೆ ಮೂಡಾಲೆ
ಗಂಡ ಹೋಗ್ಯಾನೆ ಮೂಡಾಲಪ ಏಣ್ತಿ ಹೋಗ್ಯಾಳ ಪಡುವಾಲ
ಏಣ್ತಿ ಹೋಗ್ಯಾಳ ಪಡುವಾಲಪ್ಪ ಮಕ್ಕಳು ಮರಿಗಳು ಹೊಳಿಸಾಲು
ಮಕ್ಕಳು ಮರಿಗಳು ಹೊಳಿಸಾಲ್ ಹೋದ ಸುದ್ದಿ ಕುರುಬರ ಬೀರಣ್ಣ ಕೇಳ್ಯಾನ
ಕುರುಬರ ಬೀರಣ್ಣ ಕೇಳ್ಯಾನಪ್ಪ ವಜ್ಜರ ಕೀಲು ಕಡವಾನ
ಕಂಚ ಹುಟ್ಟಿತ ಕಡಿಯಲ್ಲಪ್ಪ ಮಿಂಚ ಹುಟ್ಟಿತ ಮುಗುಲಲ್ಲಿ
ಮಿಂಚ ಹುಟ್ಟಿತ ಮುಗುಲಲ್ಲೆಪ್ಪ ಮಳಿರಾಯ ಭೂಮಿಗೆ ಬಿದ್ದಾನ
ಮೂಡಾಲ್ಹೋದೋ ಗಂಡನು ನೋಡೋ ಪಡುವಾಲೇರುತ ಬಂದಾನ
ಪಡುವಾಲ್ಹೋದೋ ಏಣತಿ ನೋಡೋ ಮೂಡಾಲೇರುತಾ ಬಂದಾಳೋ
ಮೂಡಲೇರುತಾ ಬಂದಾಳಪ್ಪ ಗಂಡ ಹೆಂಡರು ಕಲತಾರ
ಗಂಡ ಹೆಂಡರು ಕಲತಾರಪ್ಪ ಮಕ್ಕಳು ಮರಿಗಳು ಕಲತಾರ
ಮಕ್ಕಳು ಮರಿಗಳು ಕಲತಾರಪ್ಪ ಮೂದಾಳು ಕೂರಿಗಿ ಹಾಸ್ಯಾರ
ಮೂದಾಳು ಕೂರಿಗಿನಾಸ್ಯಾರಪ್ಪ ಮುತ್ತಿನ ಸೆಡ್ಡೇವು ಬಿಗುವಾರ
ಎಡಕ ಎಲ್ಲ ನೂಡ್ಯಾರಪ್ಪ ಬಲಕ ಬಲ್ಲ ನೂಡ್ಯಾರೆ
ಬಲಕ ಬಲ್ಲಾ ನೂಡ್ಯಾರಪ್ಪ ಸ್ಯಾ ಅಂದ ಕೂರಿಗಿ ನೋಡವಾರ
ಸ್ಯಾ ಅಂದ್ ಕೂರಿಗಿ ನೋಡುವಾರಪ್ಪ ಭೂಮವ್ವನುಡಿಗಳು ತುಂಬ್ಯಾರ
ಉಡಿಯಳ ಬೀಜ ಹಿಂದ ಹಿಡಿಯಳ ಬೀಜ ಮುಂದು

ಭೂಮವ್ವನುಡಿಗಳ ತುಂಬ್ಯಾರ
ಎಡಿಗಾಳ್ ಹಾಕುತ ಕಸಗಳ ತಗಿಯುತ ಸಸಿಗಳು ವಡಿಗೆ ಬಂದಾವು
ಸಸಿಗಳು ವಡಿಗೆ ಬಂದಾವಪ್ಪ ಶಂಕರ ಗಂಡಾ ಮೂಡ್ಯಾಸ
ಶಂಕರ ಗಂಡಾ ಮೂಡಾ ಹೊತ್ತಿಗೆ ಮಾನವರ ಮಾಸ ಮುಚ್ಚ್ಯಾವ
ಶಂಕರ ಗಂಡಾ ಮೂಡಾ ಹೊತ್ತಿಗೆ ಮಾನವರ ಮಾಸ ಮುಚ್ಚ್ಯಾವ
ಇಲ್ಲಿಗೆ ಒಂದು ಸಂದೇಳ್ ಗುರುವೇ ಹಾಡಿದರ ಪದ ಮುಂದೇಳ*

***ಹಾಡಿದವರು:** ದೊಡ್ಡ ದುರುಗಪ್ಪ
ಕಣ್ವಿ ಮಲ್ಲಾಪುರ ಪೋಸ್ಟ್
ನಿಡಗುರ್ತಿ ಸೊಂಡೂರು ತಾಲ್ಲೂಕು
ಬಳ್ಳಾರಿ ಜಿಲ್ಲೆ.

ಬರಕೊಂಡವರು: ಕೆ. ವಿರೂಪಾಕ್ಷಗೌಡ ಮತ್ತು ಸಿ. ಭರಮಪ್ಪ
ಹಗ್ರಿ ಬೊಮ್ಮಳ್ಳಿ ಪೋಸ್ಟ್
ಬಳ್ಳಾರಿ ಜಿಲ್ಲೆ.

ಸ್ವಸ್ಥ ವ್ಯಕ್ತಿತ್ವ

ಎಂ. ಬಸವಣ್ಣ

ಪ್ರತಿಯೊಬ್ಬ ಮನುಷ್ಯನಿಗೂ ತನ್ನವೇ ಆದ ಸಹಜ ಪ್ರವೃತ್ತಿಗಳೂ. ಬುದ್ಧಿ ಸಾಮರ್ಥ್ಯಗಳೂ, ಆಲೋಚನಾ ವಿಧಾನಗಳೂ. ಆಸಕ್ತಿ ಹಾಗೂ ಅಭಿವ್ಯಕ್ತಿಗಳೂ ಇರುತ್ತವೆ. ಈ ಎಲ್ಲಾ ಮನೋವ್ಯಾಪಾರಗಳ ಒಂದು ಆಂತರಿಕ. ಅರ್ಥಪೂರ್ಣ. ಅಸದೃಶ ವ್ಯವಸ್ಥೆಯನ್ನು ಮನೋವಿಜ್ಞಾನಿಗಳು ವ್ಯಕ್ತಿತ್ವವೆಂದು ಕರೆದಿದ್ದಾರೆ. ಮೇಲೆ ಹೇಳಿರುವ ಮನೋ ವ್ಯಾಪಾರಗಳು ಎಲ್ಲಾ ವ್ಯಕ್ತಿಗಳಲ್ಲಿ ಕಂಡುಬಂದರೂ, ಅವುಗಳ ಸಂಯೋಜನೆ ಮಾತ್ರ ಪ್ರತಿಯೊಬ್ಬರಲ್ಲೂ ಅನನ್ಯ ಸಾಧಾರಣ (unique) ವಾಗಿರುತ್ತವೆ.ಈ ಒಂದು ವಿಶಿಷ್ಟತೆ ಅಥವಾ ತನ್ನತನ ವ್ಯಕ್ತಿತ್ವದ ಬಹು ಮುಖ್ಯ ಲಕ್ಷಣ.

ವ್ಯಕ್ತಿತ್ವ ಸಾಮಾನ್ಯವಾಗಿ ಹುಟ್ಟಿನಿಂದ ಬರುವುದಿಲ್ಲ. ಈಗ ತಾನೇ ಹುಟ್ಟಿದ ಮಗುವಿಗೆ ಹೇಳಿಕೊಳ್ಳುವಂತಹ ವ್ಯಕ್ತಿತ್ವವೊಂದು ಇರುವುದಿಲ್ಲ. ಅದು ಬಹಳ ಮಟ್ಟಿಗೆ ಸ್ವಯಾರ್ಜಿತ. ಹುಟ್ಟಿದ ಮಗುವಿಗೆ ವ್ಯಕ್ತಿತ್ವವಿಲ್ಲದಿದ್ದರೂ. ವ್ಯಕ್ತಿತ್ವ ವಿಕಾಸಕ್ಕೆ ಬೇಕಾದ ಮೂಲ ವಸ್ತುಗಳನ್ನು ಅದು ಪಡೆದು ಬಂದಿರುತ್ತದೆ. ಈ ಮೂಲ ಪರಿಕರಗಳು ಒಂದು ಆಕಾರ ಪಡೆದು ವ್ಯಕ್ತಿತ್ವ ವಿಕಸಿಸುವುದು ಒಂದು ಆವರಣದಲ್ಲಿ. ವ್ಯಕ್ತಿಯ ಆವರಣದ ವಿವಿಧ ಪ್ರಕಾರಗಳು – ಕುಟುಂಬ. ಶಾಲೆ. ಹಾಗೂ ಇನ್ನಿತರ ಸಂಘಸಂಸ್ಥೆಗಳು – ವ್ಯಕ್ತಿತ್ವದ ವ್ಯವಸ್ಥೆಯನ್ನು ನಿರ್ಧರಿಸುತ್ತವೆ. ವಿಕಾಸವನ್ನು ನಿರ್ದೇಶಿಸುತ್ತವೆ. ವ್ಯಕ್ತಿ ಬೆಳೆದಂತೆಲ್ಲ ವ್ಯಕ್ತಿತ್ವವೂ ಬೆಳೆಯುತ್ತದೆ. ವ್ಯಕ್ತಿತ್ವ ವಿಕಾಸ ಒಂದು ನಿರಂತರ ಕ್ರಿಯೆ. ಆದರಿಂದಲೇ ಮನೋವಿಜ್ಞಾನಿಗಳು ವ್ಯಕ್ತಿತ್ವವನ್ನು ಒಂದು ವಸ್ತು (product) ಎನ್ನದೆ ಒಂದು ಪ್ರಕ್ರಿಯೆ (process) ಎಂದು ಕರೆಯುತ್ತಾರೆ.

ವ್ಯಕ್ತಿತ್ವದ ಅನುಸಂಧಾನ ಬಹಳ ಜಟಿಲವಾದುದು. ಮನೋವಿಜ್ಞಾನಿಗಳಿಗೆ ಅದೊಂದು ಸಮಸ್ಯಾತ್ಮಕ ಸವಾಲು. ಆದರೂ ಅದು ಅವರ ಅಚ್ಚುಮೆಚ್ಚಿನ ಅಧ್ಯಯನ ರಂಗ. ವ್ಯಕ್ತಿತ್ವದ ಹುಟ್ಟು ಬೆಳವಣಿಗೆ ಹಾಗೂ ಅದರ ಮೇಲೆ ಪ್ರಭಾವ ಬೀರುವ ನಿರ್ಧಾರಕಾಂಶಗಳನ್ನು ಕುರಿತು ಮನೋವಿಜ್ಞಾನಿಗಳು ಬಹಳ ವಿಷಯ ಸಂಗ್ರಹಣೆ ಮಾಡಿದ್ದಾರೆ: ಒಂದು ಪರಿಮಿತಿಯೊಳಗೆ ಕರಾರುವಾಕ್ಕಾಗಿ ವ್ಯಕ್ತಿತ್ವವನ್ನು ಅರಿಯಲು. ಅಳೆಯಲು ಬೇಕಾಗುವ ಸಾಧನ ಸಲಕರಣೆಗಳನ್ನು ನಿರ್ಮಿಸಿದ್ದಾರೆ. ಹೀಗೆ ಕಲೆಹಾಕಿದ ವಿವರಗಳು ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಹಲವಾರು ಪ್ರಶ್ನೆಗಳಿಗೆ ಉತ್ತರ ಒದಗಿಸಲು ಸಹಾಯಕವಾಗಿವೆ.

ಮನೋವಿಜ್ಞಾನಿಗಳು ಉತ್ತರಿಸಲು ಪ್ರಯತ್ನಪಟ್ಟ ಪ್ರಶ್ನೆಗಳಲ್ಲೆಲ್ಲಾ ಬಹು ಮುಖ್ಯವಾದುದು, ಬೆಳೆಯುವ ವ್ಯಕ್ತಿತ್ವ ಪಕ್ವವಾಗುವುದು, ಪ್ರೌಢಿಮೆ ಪಡೆಯುವುದು ಯಾವಾಗ. ಅದು ನಿಲುಕಬೇಕಾದ ನೆಲೆ ಯಾವುದು, ಪ್ರೌಢ ಅಥವಾ ಸ್ವಸ್ಥ ವ್ಯಕ್ತಿತ್ವ ಲಕ್ಷಣಗಳಾವುವು ಎಂಬುದು. ವ್ಯಕ್ತಿತ್ವ ವಿಕಾಸ ನಿರಂತರವಾಗಿ ಸಾಗುತ್ತಲೇ ಇರುತ್ತ ದ್ದಾದ್ದರಿಂದ ಅದು ಪೂರ್ಣಗೊಳ್ಳುವ ಪ್ರಶ್ನೆ ಏಳದಿದ್ದರೂ. ಒಂದು ಪರಿಮಿತಿಯೊಳಗೆ ಅದು ಬೆಳೆದು ಮುಟ್ಟಬೇಕಾದ ನೆಲೆ ಯಾವುದು ಮತ್ತು ಆ ನೆಲೆಯನ್ನು ಮುಟ್ಟಿರುವ ನೆಂದು ಹೇಳಬಹುದಾದ ವ್ಯಕ್ತಿಯ ಗುಣಲಕ್ಷಣಗಳೇನು ಎಂಬುದು ಇಲ್ಲಿರುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಹೇಳುವುದು ಸುಲಭವಲ್ಲವಾದರೂ ಪ್ರಯತ್ನಗಳು ಮಾತ್ರ ನಡೆದಿವೆ. ನಡೆಯುತ್ತಿವೆ.

ಮೇಲಣ ಪ್ರಶ್ನೆಗೆ ಉತ್ತರ ನೀಡಲು ಯತ್ನಿಸಿದವರಲ್ಲಿ ಸಿಗ್ಮಂಡ್ ಫ್ರಾಯ್ಡ್ ಮೊದಲಿಗರು. ಫ್ರಾಯ್ಡ್ ಪ್ರಕಾರ ಪ್ರೇಮ ಮತ್ತು ದುಡಿಮೆ ಸ್ವಸ್ಥ ವ್ಯಕ್ತಿತ್ವದ ಆಧಾರ ಸ್ತಂಭಗಳು. ಯಾವ ವ್ಯಕ್ತಿ ನಿರುಪಾಧಿಕವಾಗಿ ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಸ ಬಲ್ಲನೋ. ಯಾವನು ತನ್ನ ಮೈ ಮನಸ್ಸುಗಳೆರಡನ್ನೂ ಯಾವುದಾದರೊಂದು ದುಡಿಮೆಗೆ ಹಚ್ಚಿ ಅದರಿಂದ ತೃಪ್ತಿ ಹೊಂದಬಲ್ಲನೋ ಅವನು ಸ್ವಸ್ಥ ವ್ಯಕ್ತಿ. ಚಿಕ್ಕದಾದರೂ ಚೊಕ್ಕ ವಾಗಿರುವ ಈ ವಿವರಣೆಯಲ್ಲಿ ಫ್ರಾಯ್ಡ್ ತಮ್ಮ ಜೀವನಾನುಭವಗಳನ್ನೆಲ್ಲಾ, ಸಂಶೋ ಧನಾ ಸ್ವಾರಸ್ಯಗಳನ್ನೆಲ್ಲಾ ಬಚ್ಚಿ ಇಳಿಸಿಟ್ಟಿರುವರೆಂದರೆ ತಪ್ಪಾಗುವುದಿಲ್ಲ.

ಸ್ವಸ್ಥ ಅಥವಾ ಪ್ರೌಢ ವ್ಯಕ್ತಿತ್ವದ ಚಿತ್ರಣಕ್ಕೆ ಯತ್ನಿಸಿದವರಲ್ಲಿ ಎರಡನೆಯವರು ಗೋರ್ಡನ್ ಆಲ್‌ಪೋರ್ಟ್. ವ್ಯಕ್ತಿತ್ವ ವಿಷಯಾನುಸಂಧಾನದಲ್ಲಿ ಖ್ಯಾತರಾದ ಆಲ್‌ಪೋರ್ಟ್ ಪ್ರಕಾರ ಸ್ವಸ್ಥ ವ್ಯಕ್ತಿತ್ವದ ಮುಖ್ಯ ಲಕ್ಷಣಗಳು ಆರು: (1). ತಾನಲ್ಲದೆ ಈ ವಿಶ್ವದಲ್ಲಿ ಬಹಳಷ್ಟು ಜೀವರಾಶಿಗಳೂ. ವಸ್ತು ವಿಶೇಷಗಳೂ ಇವೆ ಎಂಬುದನ್ನು ಅರಿತು. ಅವೆಲ್ಲದರಲ್ಲೂ ತನ್ನತನವನ್ನು ಕಾಣುವುದು. ಇದನ್ನು ಆಲ್‌ಪೋರ್ಟ್ ಸ್ವಯಂ ವಿಸ್ತರಣೆ (self-extension) ಎಂದು ಕರೆದಿದ್ದಾರೆ; (2) ವಿಶ್ವದಲ್ಲಿರುವ ಸಕಲ ಜೀವರಾಶಿಗಳೊಡನೆ. ವಸ್ತು ವಿಶೇಷಗಳೊಡನೆ ಮಧುರ ಸಂಬಂಧವನ್ನು ಹೊಂದಿರು ವುದು; (3) ತನ್ನನ್ನು ತಾನು ಅರಿತು ತಾನಿರುವಂತೆ ಒಪ್ಪಿಕೊಂಡು ತೃಪ್ತಿ ಪಡುವುದು. ಇದನ್ನು ಮನೋ ವಿಜ್ಞಾನಿಗಳು ಸ್ವಯಂ ಸ್ವೀಕಾರ (self-acceptance) ಎಂದು ಕರೆಯುತ್ತಾರೆ. ಇದಿದ್ದಲ್ಲಿ ಸಾಮಾನ್ಯವಾಗಿ ಭಾವ ಸುರಕ್ಷತೆ (emotional security) ಇರುತ್ತದೆ. ಸ್ವಯಂಸ್ವೀಕಾರ ಮತ್ತು ಭಾವ ಸುರಕ್ಷತೆಗಳು ಸ್ವಸ್ಥ ವ್ಯಕ್ತಿತ್ವಕ್ಕೆ ಮೂಲಾ ಧಾರಗಳು; (4) ಬಾಹ್ಯ ಪ್ರಪಂಚದ ನಿಜಸ್ವರೂಪವನ್ನರಿತು, ಅದಕ್ಕನುಗುಣವಾಗಿ ಆಲೋಚಿಸುವ. ಕಾರ್ಯೋನ್ಮುಖನಾಗುವ ಉತ್ಸಾಹ ಹಾಗೂ ತೀವ್ರಾಸಕ್ತಿ, ಇದು ವಾಸ್ತವಿಕ ದೃಷ್ಟಿ. (5) ತನ್ನನ್ನು ತನ್ನ ಇಂದ್ರಿಯಗಳಿಗೆ ವಿಷಯವಾಗಿಸಿ. ವಾಸ್ತವಿಕ

ರೂಪದಲ್ಲಿ ಮೂರ್ತೀಕರಿಸಿ ಅನುಭವಿಸುವ ಸಾಮರ್ಥ್ಯ (self-objectification): (6) ಜೀವ ಧರ್ಮಕ್ಕೆ ಹೊಂದಿಕೊಂಡು ಬಾಳಿ ಬದುಕಬಲ್ಲ ಶಕ್ತಿ.

ಫ್ರಾಯ್ಡ್ ಮತ್ತು ಆಲ್‌ಪೋರ್ಟ್ ರಚಿಸಿದ ಚಿತ್ರಣಗಳು ಅರ್ಥಪೂರ್ಣ ವಾಗಿದ್ದರೂ ಅವಕ್ಕೆ ನೇರವಾದ ಸಂಶೋಧನೆಯ ಆಧಾರವಿಲ್ಲದ್ದು ಒಂದು ಕೊರತೆ. ಈ ಕೊರತೆಯನ್ನು ನೀಗಿಸಿ. ವೈಜ್ಞಾನಿಕ ಸಂಶೋಧನೆಗಳ ಆಧಾರದ ಮೇಲೆಯೇ ಸ್ವಸ್ಥ ವ್ಯಕ್ತಿತ್ವದ ಲಕ್ಷಣಗಳನ್ನು ನಿರ್ಧರಿಸಿದ ಕೀರ್ತಿ ಅಬ್ರಹಾಮ್ ಮ್ಯಾಸ್ಲೋ (Abraham Maslow) ಎಂಬ ಮನೋ ವಿಜ್ಞಾನಿಗೆ ಸಲ್ಲುತ್ತದೆ. ಮ್ಯಾಸ್ಲೋ ಪ್ರಕಾರ ಪ್ರೌಢ ಅಥವಾ ಸ್ವಸ್ಥ ವ್ಯಕ್ತಿತ್ವದ ಪರಮೋಚ್ಚ ಲಕ್ಷಣ ಸ್ವಯಂ ಸಾಕ್ಷಾತ್ಕಾರ (self-actualization). ಯಾವನು ಏನಾಗಬಲ್ಲನೋ ಅದಾದರೆ. ತನ್ನ ಅಂತರ್ನಿಹಿತ ಶಕ್ತಿಗಳನ್ನು ವಾಸ್ತವೀಕರಿಸಿ ಕೊಂಡರೆ, ಆಗ ಅವನು ಪ್ರೌಢವ್ಯಕ್ತಿ. ಅವನದು ಪೂರ್ಣ ವಿಕಸಿತ ವ್ಯಕ್ತಿತ್ವ. ಅವನು ಸ್ವಸ್ಥ ವ್ಯಕ್ತಿ ಎಂಬುದು ಮ್ಯಾಸ್ಲೋ ಅಭಿಮತ. ಇದನ್ನೆ ಅವರು ಸ್ವಯಂ ಸಾಕ್ಷಾತ್ಕಾರ ಎಂದು ಕರೆದಿರುವುದು. ಹೀಗೆ ಸ್ವಯಂ ಸಾಕ್ಷಾತ್ಕಾರವನ್ನು ಸಿದ್ಧಿಸಿಕೊಂಡ ಹಲವಾರು ವ್ಯಕ್ತಿ ಗಳನ್ನು ಮ್ಯಾಸ್ಲೋ ಆಳವಾಗಿ ಅಭ್ಯಾಸ ಮಾಡಿದ್ದಾರೆ. ಇವರು ಪರಿಶೋಧಿಸಿದ ವ್ಯಕ್ತಿಗಳೆಲ್ಲಾ ಜೀವನದ ಒಂದಲ್ಲ ಒಂದು ರಂಗದಲ್ಲಿ ಪರಿಪೂರ್ಣತೆಯನ್ನು ಪಡೆದು ಪ್ರಸಿದ್ಧರಾದವರು, ಚರಿತ್ರಾರ್ಹರಾದವರು. ಅವರಲ್ಲಿ ವಿಜ್ಞಾನಿಗಳು. ಕಲಾವಿದರು. ದಾರ್ಶನಿಕರು, ಸಾಹಿತಿಗಳು, ಸಂಗೀತಗಾರರು. ರಾಜತಾಂತ್ರಿಕರು. ಧರ್ಮನಿಷ್ಠರು. ಪ್ರತಿಭಾನ್ವಿತ ವಿದ್ಯಾರ್ಥಿಗಳು, ಹೀಗೆ ಜೀವನದ ಹಲವಾರು ಪ್ರಕಾರಗಳಿಂದ ಆಯ್ದ ವ್ಯಕ್ತಿ ಗಳಿದ್ದರು. ಇವರನ್ನು ವಿವಿಧ ದೃಷ್ಟಿಕೋನಗಳಿಂದ ಪರೀಕ್ಷಿಸಿ ಉಪಯುಕ್ತ ಮಾಹಿತಿ ಗಳನ್ನು ಪಡೆದುಕೊಳ್ಳಲಾಯ್ತು. ಲಭ್ಯವಿದ್ದ ವ್ಯಕ್ತಿಗಳನ್ನು ನೇರವಾಗಿ ಸಂದರ್ಶಿಸಿ. ಗತಿಸಿದ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಆಳವಾಗಿ ಅಭ್ಯಾಸಿಸಿ ವಿಷಯ ಸಂಗ್ರಹಣೆ ಮಾಡಲಾಯ್ತು. ಹೀಗೆ ಕಲೆಹಾಕಿದ ವಿವರಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ಹೊರಬಿದ್ದ ವಾಸ್ತವಾಂಶಗಳನ್ನಾಧರಿಸಿ ಸ್ವಸ್ಥ ವ್ಯಕ್ತಿತ್ವದ ಹದಿನೈದು ಲಕ್ಷಣಗಳನ್ನು ಮ್ಯಾಸ್ಲೋ ನಮ್ಮ ಮುಂದಿಟ್ಟಿದ್ದಾರೆ. ಅವುಗಳನ್ನು ಸಂಕ್ಷಿಪ್ತವಾಗಿ ಕೆಳಗೆ ವಿವರಿಸಲಾಗಿದೆ.

1. ಮ್ಯಾಸ್ಲೋ ಅಭ್ಯಸಿಸಿದ ಎಲ್ಲಾ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿ ಕಂಡು ಬಂದ ಲಕ್ಷಣ ಅವರ ದಕ್ಷ ವಾಸ್ತವಿಕ ಪ್ರಜ್ಞೆ. ಈ ಜನ ಎಲ್ಲಾ ವಸ್ತುಗಳನ್ನೂ ಇತರ ವ್ಯಕ್ತಿ ಗಳನ್ನೂ ಮತ್ತು ತಮ್ಮನ್ನೂ. ಅವು ಇರುವಂತೆಯೇ ಅರಿತು ಅವುಗಳೊಡನೆ ಮಧುರ ಸಂಬಂಧವನ್ನಿಟ್ಟುಕೊಳ್ಳಬಲ್ಲವರು. ವೈಯಕ್ತಿಕ ಸ್ವಸ್ಥಾಸ್ವಸ್ಥತೆಯನ್ನು. ಆಯಾಯ ವ್ಯಕ್ತಿ ತನ್ನನ್ನೂ ಒಳಗೊಂಡಂತೆ ತನ್ನ ಪರಿಸರವನ್ನು ನೋಡುವ ದೃಷ್ಟಿಕೋನದ ಮೂಲಕ ನಿರ್ಧರಿಸಬಹುದೆಂಬುದು ಮನೋವಿಜ್ಞಾನಿಗಳ ಅಭಿಮತ. ಸ್ವಸ್ಥವ್ಯಕ್ತಿಗೆ ಇರುವುದು ಇರುವಂತೆಯೇ ಕಾಣುತ್ತದೆ. ಅಸ್ವಸ್ಥನಿಗೆ ಹಾಗಲ್ಲ. ಅವನಿಗೆ ಅದು ಹೇಗಿರಬೇಕೆನ್ನಿ ಸಿತ್ತೋ ಹಾಗೆ ಕಾಣುತ್ತದೆ. ಅವನ ಆಂತರಿಕ ಆಶೆ ಆಕಾಂಕ್ಷೆಗಳು, ಬೇಕುಬೇಡಗಳು,

ಸ್ಥಿತಿಗತಿಗಳು ಅವನ ವಾಸ್ತವಿಕ ಪ್ರಜ್ಞೆಯನ್ನು ನಿರ್ಧರಿಸುತ್ತವೆ. ಅಸ್ವಸ್ಥ ವ್ಯಕ್ತಿಯ ಅರಿವು ವಸ್ತು ನಿಷ್ಠವಲ್ಲ: ವ್ಯಕ್ತಿ ನಿಷ್ಠ. ವಸ್ತು ಸ್ಥಿತಿಯನ್ನು ಅದು ಇರುವಂತೆ ಅರಿಯುವುದು ಒಂದು ವಿಶಿಷ್ಟ ಶಕ್ತಿ. ವಾಸ್ತವಿಕ ದೃಷ್ಟಿ ವ್ಯಕ್ತಿಗೆ ಉನ್ನತಮಟ್ಟದ ತಾರ್ಕಿಕ ಜ್ಞಾನವನ್ನೊದಗಿಸುತ್ತದೆ. ವಾಸ್ತವಿಕ ಪ್ರಜ್ಞೆಯುಳ್ಳವನು ನೈಜ ಪ್ರಪಂಚದಲ್ಲಿ ವಾಸಿಸುತ್ತಿರುತ್ತಾನೆ. ಅವನು ಕಲ್ಪನಾ ಲೋಕ ವಿಹಾರಿಯಲ್ಲ. ಇದ್ದುದನ್ನು ಅರಿಯ ಬಲ್ಲವನು, ತಾನು ಅರಿಯದುದು ಇಲ್ಲವೆಂದು ಭಾವಿಸುವುದಿಲ್ಲ. ತನಗೆ ತಿಳಿಯದ ಹಲವಾರು ಅಭೇದ್ಯ ರಹಸ್ಯಗಳಿವೆ ಎಂದು ಅವನು ನಂಬುತ್ತಾನೆ. ತಿಳಿಯದುದರ ಬಗೆಗೆ ಅವನಿಗೆ ಆತಂಕವಿಲ್ಲ. ಆದರೆ ಅಸ್ವಸ್ಥ ವ್ಯಕ್ತಿಗೆ ತನಗೆ ತಿಳಿಯದುದರ ಬಗ್ಗೆ ಬಹಳ ಅತೃಪ್ತಿ, ಆತಂಕ. ಎಷ್ಟೋ ವೇಳೆ ತನಗೆ ಗೊತ್ತಿಲ್ಲದ್ದು ಅಸ್ತಿತ್ವದಲ್ಲಿ ಇಲ್ಲವೇ ಇಲ್ಲವೆಂಬುದು ಇವನ ವಾದ. ಆದ್ದರಿಂದಲೇ ಇವನು ಅತೃಪ್ತ: ಅಸ್ವಸ್ಥ.

2. ಇರುವುದನ್ನು ಇದ್ದಂತೆ ಗ್ರಹಿಸಿ. ಸ್ವೀಕರಿಸಿ, ತೃಪ್ತಿ ಹೊಂದುವುದು ಸ್ವಸ್ಥ ವ್ಯಕ್ತಿತ್ವದ ಎರಡನೇ ಲಕ್ಷಣ. ಸ್ವಯಂ ಸಾಕ್ಷಾತ್ಕಾರ ಪಡೆದವರು ತಮ್ಮನ್ನೂ. ಇತರರನ್ನೂ ಮತ್ತು ನಿಸರ್ಗವನ್ನೂ ಅವು ಇರುವಂತೆಯೇ ಸ್ವೀಕರಿಸುತ್ತಾರೆ. ತಮ್ಮಲ್ಲೂ ಮತ್ತೆಲ್ಲರಲ್ಲೂ. ಇರುವ ಒಳಿತು ಕೆಡಕುಗಳನ್ನು. ಗುಣಾವಗುಣಗಳನ್ನು ಗ್ರಹಿಸಿ ಹಾಗಿರುವುದು ಸಹಜವೆಂದು ಭಾವಿಸಿ. ಇರುವುದನ್ನು ಸ್ವೀಕರಿಸುತ್ತಾರೆ. ಈ ಸ್ವೀಕರಣ ಕ್ರಿಯೆ ಅವರಲ್ಲಿ ಬಹಳ ಸಹಜವಾಗಿ ನಡೆಯುತ್ತದೆ. ನೀರು ಒದ್ದೆ ಎಂದಾಗಲೀ. ಕಲ್ಲು ಒರಟೆಂದಾಗಲೀ ನಾವು ಹೇಗೆ ಗೊಣಗಾಡುವುದಿಲ್ಲವೋ ಹಾಗೆಯೇ ಮಾನವೀಯತೆಯ ಅಪೂರ್ಣತೆಯನ್ನು ಕಂಡು ಪ್ರೌಢವ್ಯಕ್ತಿ ಗೊಣಗುವುದಿಲ್ಲ. ಅವನ ಮನಸ್ಸು. ದೃಷ್ಟಿಕೋನ ಮಗುವಿನಂತಹದು. ಮಗು ವಿಶ್ವವನ್ನು ತೆರೆದ ಕಣ್ಣುಗಳಿಂದ ನೋಡುತ್ತದೆ: ಆಶ್ಚರ್ಯಪಡುತ್ತದೆ: ಸಂತೋಷಿಸುತ್ತದೆ. ಅದು ಹೀಗಿರಬೇಕಿತ್ತು. ಇದು ಹಾಗಿರಬೇಕಿತ್ತು ಎಂದು ಗೊಣಗಾಡುವುದಿಲ್ಲ. ಹಾಗೆಯೇ ಸ್ವಸ್ಥವ್ಯಕ್ತಿ ಇರುವುದನ್ನು ಇದ್ದಂತೆ ಗ್ರಹಿಸುತ್ತಾನೆ, ಸ್ವೀಕರಿಸುತ್ತಾನೆ. ತೃಪ್ತಿಗೊಳ್ಳುತ್ತಾನೆ. ಸಹಜ ಸ್ವೀಕಾರದ ಮುಖ್ಯ ಗುಣ ಮಾಡುವುದನ್ನು ಮನಸಾರೆ ಮಾಡುವುದು. ಕೊರಗದೆ. ಕೊಸರದೆ ಮಾಡುವುದು. ಹಸಿದಾಗ ಸಂಕೋಚವಿಲ್ಲದೆ ತಿಂದು. ನಿದ್ದೆ ಬಂದಾಗ ಹಾಯಾಗಿ ಮಲಗಿ. ಅನವಶ್ಯಕ ಅಡೆತಡೆಗಳನ್ನು ದೂರವಿಟ್ಟು. ಮಾಡಿದ್ದನ್ನು "ಅನುಭವಿಸಿ" ತೃಪ್ತಿಹೊಂದುವುದು ಮನಃಸ್ವಾಸ್ಥ್ಯದ ಲಕ್ಷಣ. ಸ್ವಸ್ಥವ್ಯಕ್ತಿಗೆ ತನ್ನ ಕುಂದುಕೊರತೆಗಳ ಪರಿಚಯವಿರುವುದರಿಂದ. ಇತರರ ಕುಂದುಕೊರತೆಗಳು ಸಹಜವಾಗಿ ಕಂಡುಬರುತ್ತವೆ. ಕೊರತೆ ಇರುವಂತೆಯೇ ತನ್ನನ್ನು ತಾನು ಸ್ವೀಕರಿಸುವುದರಿಂದ ಇತರರನ್ನು ಹಾಗೆಯೇ ಸ್ವೀಕರಿಸುತ್ತಾನೆ. ಸ್ವಯಂ ತೃಪ್ತಿ ಇರುವುದರಿಂದ ಇತರರು ಅವನಿಗೆ ತೃಪ್ತಿದಾಯಕವಾಗುತ್ತಾರೆ. ಅಂದಮಾತ್ರಕ್ಕೆ ಸ್ವಸ್ಥವ್ಯಕ್ತಿಗೆ ನಯ. ನಾಜೂಕು. ನಾಚಿಕೆ. ಆತಂಕಗಳಿರುವುದಿಲ್ಲವೆಂದಲ್ಲ. ಇವೆ. ಆದರೆ ಒಂದು ಪರಿಮಿತಿಯೊಳಗೆ. ಸ್ವಸ್ಥವ್ಯಕ್ತಿ ಆತಂಕ ಪಡುವುದು. ತಿದ್ದಿಕೊಳ್ಳಬಹುದಾದ್ದನ್ನು

ಹಾಗೆ ಮಾಡಲಾರದಾಗ: ಅಸೂಯೆ. ಪರನಿಂದೆ. ಪೂರ್ವಗ್ರಹ ಪೀಡನೆ. ತಾಳ್ಮೆಗೇಡಿತನ, ಹಿಂಸೆ ಮೊದಲಾದುವನ್ನು ನಿಯಂತ್ರಿಸಲಾರದಾದಾಗ: ತಪ್ಪಾಗಿ ಕಂಡರೂ ಅನುಸರಿಸಲೇ ಬೇಕಾದ ಸಾಮಾಜಿಕ ನಿಯಮಗಳೆದುರಿನಲ್ಲಿ: ಆಗಬೇಕಾದ್ದು ಆಗದಿದ್ದಾಗ. ಅನಾವಶ್ಯಕವಾದ ಆತಂಕಗಳನ್ನು ದೂರವಿರಿಸಿ. ಅನಿವಾರ್ಯವಾದುವನ್ನು ತೆರೆದ ಮನಸ್ಸಿನಿಂದ ಸ್ವೀಕರಿಸುವುದು ಸ್ವಸ್ಥ ವ್ಯಕ್ತಿತ್ವದ ಲಕ್ಷಣ.

3. ಸ್ವಸ್ಥ ವ್ಯಕ್ತಿಗಳ ವರ್ತನೆ ಸಾಮಾನ್ಯವಾಗಿ ಸ್ವಯಂಪ್ರೇರಿತ. ಸರಳ ಹಾಗೂ ಸಹಜ. ಅದು ಬಲವಂತಕ್ಕೊಳಗಾಗಿರುವುದಿಲ್ಲ. ಅವರ ವರ್ತನೆಯಲ್ಲಿ ಕೃತ್ರಿಮವಿಲ್ಲ. ಅವರು ಸಂಪ್ರದಾಯದ ಗುಲಾಮರಲ್ಲ. ಸಂಪ್ರದಾಯಬದ್ಧರಾಗಿ ನಡೆದರೂ ಅದರ ಮೌಢ್ಯತೆಯನ್ನು ನೋಡಿ ನಗಬಲ್ಲ. ಅವಶ್ಯಕತೆ ಬಿದ್ದಲ್ಲಿ ಸಂಪ್ರದಾಯದ ಬಂಧನಗಳನ್ನು ಕಿತ್ತೊಗೆಯಬಲ್ಲ ಸಾಮರ್ಥ್ಯ ಅವರಿಗಿದೆ. ತಮ್ಮವೇ ಆದ ಸ್ವತಂತ್ರ ನೀತಿನಿಯಮಗಳು ಅವರಲ್ಲಿವೆ. ಈ ವ್ಯಕ್ತಿಗಳ ವರ್ತನೆ ಕೆಲವೇಳೆ ನೋಡುವವರಿಗೆ ಅನೀತಿಯುತವಾಗಿ ಕಂಡು ಬರಬಹುದು. ಆದರೆ ಅನೀತಿಯ ಸೋಂಕು ಅವರಿಗಿಲ್ಲ. ಸಾಮಾಜಿಕ ಕುಟಿಲ ನೀತಿನಿಯಮಗಳಿಗೆ ಹೊಂದಿಕೊಳ್ಳಲಾರದೆ ಅವರು ಅನೇಕಸಾರಿ ಒಂದು ವಿಧವಾದ ವಿಮುಖತೆ ಅಥವಾ ಪರಕೀಯತೆ (Alienation) ಯನ್ನು ಅನುಭವಿಸುತ್ತಾರೆ. ಸಾಮಾಜಿಕ ಸೋಗು. ಅಸಂಬದ್ಧತೆ. ಸುಳ್ಳು. ಮೋಸ. ಇವುಗಳನ್ನು ಮೀರಿ ಮೇಲೇರಿರುವುದರಿಂದ ಅವರು ತಮ್ಮ ನಾಡಿನಲ್ಲೇ ಪರಕೀಯರಂತೆ ಕಂಡು ಬರಬಹುದು.

4. ಸ್ವಸ್ಥ ವ್ಯಕ್ತಿಗಳಿಗೆ ಜೀವನದಲ್ಲಿ ಸ್ವಾರ್ಥರಹಿತವಾದ. ಹಿರಿಯ ಗುರಿಯೊಂದು ಇದ್ದೇ ಇರುತ್ತದೆ. ಅದು ಹಿರಿಯದಿರಲಿ. ಕಿರಿಯದಿರಲಿ. ಸ್ವಾರ್ಥಕ್ಕಂತೂ ಅಲ್ಲ. ಅವರ ವರ್ತನೆ ಯಾವಾಗಲೂ ಒಂದ ಸಮಸ್ಯೆಯನ್ನು ಕೇಂದ್ರವಾಗುಳ್ಳದ್ದು: ತಮ್ಮನ್ನಲ್ಲ. ಅವರ ಸಮಸ್ಯೆಗಳು ಸಾಮಾನ್ಯವಾಗಿ ಮೂಲ ಭೂತ ಪ್ರಶ್ನೆಗಳನ್ನು ಕುರಿತವು. ಅವು ದಾರ್ಶನಿಕ ಪ್ರಶ್ನೆಗಳಿರಬಹುದು. ನೈತಿಕ ಪ್ರಶ್ನೆಗಳಿರಬಹುದು. ಒಟ್ಟಿನಲ್ಲಿ ಅವರ ದೃಷ್ಟಿ ಕೋನ ವಿಶಾಲವಾದುದು. ಮೌಲ್ಯಗಳು ಹಿರಿದಾದುವು. ಕಾರ್ಯರಂಗ ದೊಡ್ಡದು. ಜನ ಸಾಮಾನ್ಯರ ಮಾತಿನಲ್ಲಿ ಅವರು "ದೊಡ್ಡ ಮನುಷ್ಯರು".

5. ಸ್ವಸ್ಥ ವ್ಯಕ್ತಿಗಳು ಸಾಮಾನ್ಯವಾಗಿ ಏಕಾಂತ ಪ್ರಿಯರು. ಅಂದಮಾತ್ರಕ್ಕೆ ಅವರು ಅಂತರ್ವರ್ತಿ (Introvert) ಗಳೇನೂ ಅಲ್ಲ. ಅವರದೊಂದು ವಿಧವಾದ ನಿರ್ಲಿಪ್ತತೆ (Detachment) ಇತರರು ಕ್ಷೋಭೆಗೊಳ್ಳಬಹುದಾದ ಸಂದರ್ಭಗಳಲ್ಲಿ ಅಚಲರಾಗಿರುವುದು ಅವರ ವೈಶಿಷ್ಟ್ಯ. ಎಂತಹ ಪರಿಸ್ಥಿತಿಯಲ್ಲೂ ಪ್ರಸನ್ನತೆ ಪ್ರಶಾಂತತೆಯನ್ನು ಕಾಪಾಡಿಕೊಂಡು. ನಿಶ್ಚಲರೂ. ನಿರುದ್ವೇಗಿಗಳೂ ಆಗಿರಬಲ್ಲ ಶಕ್ತಿ ಅವರದು. ವೈಯಕ್ತಿಕ ದುಃಖ. ದುರಾದೃಷ್ಟಗಳನ್ನು ಅವರು ಭರಿಸಬಲ್ಲರು. ಗಂಭೀರರಹಿತ ಸನ್ನಿವೇಶಗಳಲ್ಲೂ ಗೌರವಾನ್ವಿತರಾಗಿರಬಲ್ಲರು. ವಸ್ತುಸ್ಥಿತಿಯನ್ನು ತಮ್ಮದೇ ದೃಷ್ಟಿ

ಯಿಂದ —ಬೇರೆಯವರು ವಿವರಿಸುವಂತೆ ಅಲ್ಲ—ನೋಡುವುದೇ ಅವರ ಈ ಮನೋಭಾವಕ್ಕೆ ಆಧಾರ. ಎಲ್ಲವನ್ನೂ ಅವರು ವಸ್ತು ನಿಷ್ಠ ದೃಷ್ಟಿಯಿಂದ ನೋಡಬಲ್ಲರು: ತಮ್ಮನ್ನೂ ಕೂಡ. ಈ ನಿರ್ಲಿಪ್ತತೆ ಅವರಿಗೆ ಒಂದು ವಿಧವಾದ ಅಸಾಮಾನ್ಯತೆಯನ್ನು ತಂದುಕೊಡುತ್ತದೆ.

6. ಸ್ವಸ್ಥ ವ್ಯಕ್ತಿಗಳು ಸ್ವತಂತ್ರರು: ಸ್ವಾವಲಂಬಿಗಳು; ಎಲ್ಲರಿಂದಲೂ. ಎಲ್ಲದರಿಂದಲೂ ಬೇರೆಯಾಗಿರಬಲ್ಲರು. ಸಮಾಜ. ಸಂಸ್ಕೃತಿ. ಸಂಪ್ರದಾಯ ಹಾಗೂ ಜನಾಭಿಪ್ರಾಯಗಳನ್ನು ಮೀರಿ ಮೇಲೇರಬಲ್ಲ ಸ್ವಾಯತ್ತತೆ ಅವರದು. ಅವರ ಅಭಿಪ್ರಾಯ, ಸುಖ ದುಃಖಗಳನ್ನು ನಿರ್ಧರಿಸುವುದು ಸಾಮಾಜಿಕ ಸನ್ನಿವೇಶಗಳಲ್ಲ, ಸ್ವಸ್ಥ ಸ್ವಯಂಭಾವ (Healthy Self Concept). ಅವರಲ್ಲಿ ಅವರಿಗೆ ಅಪಾರವಾದ ನಂಬಿಕೆ. ಸ್ವಯಂ ವಿಶ್ವಾಸ ಅವರ ಸವೆಯದ ಆಸ್ತಿ.

7. ಸ್ವಸ್ಥ ವ್ಯಕ್ತಿಗಳಿಗೆ ಜೀವನವೆಲ್ಲಾ ಸ್ವಾರಸ್ಯಪೂರ್ಣ; ಅನುಭವಗಳೆಲ್ಲಾ ವಿನೂತನ. ಅವರಿಗೆ ಯಾವುದೂ "ಇದು ನನಗೆ ಗೊತ್ತೇ ಇತ್ತು" ಅನಿಸುವುದಿಲ್ಲ. ಪ್ರತಿನಿತ್ಯದ ಸೂರ್ಯೋದಯವೂ ಎಂದಿನಂತೇ ಸುಂದರ: ನೋಡಿದ ಪ್ರತಿಯೊಂದು ಹೂವೂ ಚೆಲುವಿನ ಚಿಲುಮೆ: ಸಾವಿರಸಾರಿ ಕೇಳಿದ ರಾಗವೂ ಎಂದಿನಷ್ಟೇ ಸುಮಧುರ; ಹುಟ್ಟಿದ ಪ್ರತಿಯೊಂದು ಮಗುವೂ ಪ್ರಕೃತಿಯ ಅದ್ಭುತ ಅಭಿವ್ಯಕ್ತಿ; ಅರುವತ್ತಾದರೂ ಪತ್ನಿ ಅನುಪಮ ಸುಂದರಿ. ಅವರ ಅನುಭವಗಳೆಲ್ಲವೂ ಶ್ರೀಮಂತವಾದುವು. ಆದರೆ ಈ ಅನುಭವ ಶ್ರೀಮಂತಿಕೆ ಕೃತ್ರಿಮ ಸಾಮಾಜಿಕ ಚಟುವಟಿಕೆಗಳಿಂದುಂಟಾದುದಲ್ಲ: ಐಶ್ವರ್ಯ. ಭೋಜನಕೂಟ. ನೈಟ್‌ಕ್ಲಬ್‌ಗಳಿಂದ ಬಂದುದಲ್ಲ.

8. ಸ್ವಸ್ಥ ವ್ಯಕ್ತಿಗಳಿಗೆ ಒಂದೊಂದು ವೇಳೆ ಅಸಾಧಾರಣವೂ. ಅಲೌಕಿಕವೂ. ತೀವ್ರ ಹಾಗೂ ನಿಗೂಢವೂ ಆದ ಅನುಭವಗಳುಂಟಾಗುತ್ತವೆ. ಅವು ಒಂದು ಬಗೆಯ ರಹಸ್ಯಗರ್ಭಿತ ಗಾಢ ಪ್ರಜ್ಞೆಗಳು (Mystic-experiences); ಅಪರಿಮಿತ ದರ್ಶನಗಳು. ಆದರೆ ಕೆಲವು ಧಾರ್ಮಿಕ ವ್ಯಕ್ತಿಗಳು ವಿವರಿಸುವ ಅತಿಲೌಕಿಕ (Super natural) ಅನುಭವಗಳಲ್ಲ ಇವು. ಸ್ವಸ್ಥ ವ್ಯಕ್ತಿಗಳದು ಸಹಜಾನುಭವ. ಒಂದು ಪಕ್ಷಿಯ ಇಂಚರವನ್ನು ಕೇಳಿದಾಗ. ರಮಣೀಯ ನೋಟವೊಂದನ್ನು ಕಂಡಾಗ ಮಧುರ ನಾದ ಒಂದನ್ನು ಆಲಿಸಿದಾಗ ಇಂಥ ಅನುಭವವಾಗಬಹುದು. ತಮ್ಮನ್ನು ಮರೆತು. ವಸ್ತುವಿನಲ್ಲಿ ತಲ್ಲೀನರಾಗಿ. ತೀವ್ರತರವಾದ ಇಂದ್ರಿಯಾನುಭವ ಒಂದನ್ನು ಆಗಗೊಡುವುದು ಇಲ್ಲಿನ ಮುಖ್ಯ ಲಕ್ಷಣ.

9. ಇವರ ಮಾನವೀಯ ಅನುಕಂಪ ಅಪಾರವಾದುದು. ಮನುಷ್ಯರಲ್ಲಿ ಇವರಿಗೆ ಎಲ್ಲೆ ಮೀರಿದ ಸಹಾನುಭೂತಿ, ತದಾತ್ಮ್ಯತೆ. ಇವರ ಪ್ರೀತಿ ಇಡೀ ಮಾನವ ಜನಾಂಗಕ್ಕೇ ಸೀಮಿತವಾದುದು. ಜನರ ಮೇಲೆ ಇವರು ಕೋಪಗೊಳ್ಳಬಹುದು.

ತಾಳ್ಮೆಗೆಡಬಹುದು. ಆದರೂ ಅವಶ್ಯಕತೆ ಬಿದ್ದಾಗ ಅವರ ನೆರವಿಗೆ ಹೋಗುವುದು ಸ್ವಸ್ಥ ವ್ಯಕ್ತಿಗಳ ಸಹಜ ಗುಣ. ಎಷ್ಟೋ ವೇಳೆ ನಮ್ಮ ಸೋದರ ಸೋದರಿಯರು ಮೂರ್ಖರೂ, ಅವಿವೇಕಿಗಳೂ, ಅಶಕ್ತರೂ ಆಗಿ ನಮ್ಮ ತಾಳ್ಮೆಗೆಡಿಸಿದರೂ, ಸಕಾಲದಲ್ಲಿ ಅವರನ್ನು ನಾವು ಉಪಕರಿಸುವುದಿಲ್ಲವೇ, ಅಂತಹ ಮನೋಭಾವ ಸ್ವಸ್ಥ ವ್ಯಕ್ತಿಗಳದು. ಮಾನವ ಪ್ರೇಮ ಇವರ ಪ್ರಮುಖ ಸಂವೇದನೆ. ಜನೋಪಕಾರ ಇವರ ಆದರ್ಶ. ಮಾನವನ ಒಳಿತು ಇವರ ಕೇಂದ್ರಾಭಿಲಾಶೆ. ಮಾನವಕುಲದ ಹಿರಿಯ ಸೋದರರು ಇವರು.

10. ಸ್ವಸ್ಥ ವ್ಯಕ್ತಿಗಳು ಸರ್ವ ಜನ ಶ್ರೇಯೋಭಿಲಾಷಿಗಳಾದರೂ, ಆತ್ಮೀಯ ಸಂಪರ್ಕ ಮಾತ್ರ ಆಯ್ದ ಕೆಲವು ಜನರೊಡನೆ. ಇವರ ಮಿತ್ರವೃಂದ ಸಣ್ಣದು. ಮಿತ್ರರೊಡನೆ ಸಂಬಂಧ ಆಳವೂ, ತೀವ್ರವೂ ಆಗಿರುತ್ತದೆ. ಅವರಿಗಾಗಿ ಯಾವ ತ್ಯಾಗಕ್ಕೂ ಸಿದ್ಧ. ಸ್ವಸ್ಥ ವ್ಯಕ್ತಿಗಳ ಮಿತ್ರವೃಂದ ಚಿಕ್ಕದಾದರೂ ಭಕ್ತವೃಂದ ಮಾತ್ರ ಬಹಳ ದೊಡ್ಡದು. ಭಕ್ತರ ಸಹವಾಸ ಯಾವಾಗಲೂ ಇವರಿಗೆ ಕಿರಿಕಿರಿ: ಕಿರುಕುಳ ಎಂದರೂ ಸರಿಯೆ.

11. ಸ್ವಸ್ಥ ವ್ಯಕ್ತಿಗಳ ವ್ಯವಹಾರ ಮೌಲ್ಯಗಳು ಪ್ರಜಾ ತಂತ್ರಾತ್ಮಕ (Democratic —) ರೀತಿಯವು. ಎಲ್ಲರೊಡನೆ ಕಲಿಯಬಲ್ಲ. ಕಲಿಯಬಲ್ಲ ಇವರಿಗೆ ಜಾತಿ, ಮತ, ವರ್ಣ, ಜನಾಂಗ, ಸ್ಥಾನ ಮಾನ ಭೇದಗಳ ಸಂಕೋಲೆ ಇಲ್ಲ.

12. ಈ ಜನರಿಗೆ ಗುರಿಯಷ್ಟೇ ಅದನ್ನು ಸಾಧಿಸುವ ಮಾರ್ಗವೂ ಪವಿತ್ರ. ಹೇಗಾದರಾಗಲೀ, ಕೆಲಸ ನಡೆದು ಗುರಿ ಮುಟ್ಟಿದರೆ ಸಾಕು, ಎನ್ನುವ ಅಭಿವೃತ್ತಿ ಇವರದಲ್ಲ. ಇವರದು ನೈತಿಕ ಮಾರ್ಗ. ಎಷ್ಟೋ ವೇಳೆ ಇವರಿಗೆ ಮಾರ್ಗವೇ ಗುರಿಯಾಗಿರುತ್ತದೆ.

13. ಸ್ವಸ್ಥ ವ್ಯಕ್ತಿಗಳದು ಒಂದು ವಿಧವಾದ ತಾತ್ತ್ವಿಕ ಪೂರ್ಣ ವಿನೋದ ಪ್ರವೃತ್ತಿ. ಆದರದು ವ್ಯಂಗ್ಯವಲ್ಲ: ಹಾಸ್ಯವಲ್ಲ. ಹಿಂಸೆ, ಹೀನಾಯ, ತೆಗಳಿಕೆ ಎಂದೂ ಇವರಿಗೆ ವಿನೋದಕಾರಕವಲ್ಲ. ನಿತ್ಯಜೀವನದ ಸಮಸ್ಯೆಗಳಲ್ಲಿ ವಿನೋದವನ್ನು ಕಾಣುವುದು ಇವರ ವೈಶಿಷ್ಟ್ಯ.

14. ಈ ಜನರ ಸೃಜನಾತ್ಮಕ ಶಕ್ತಿ ಅಪರಿಮಿತವಾದುದು. ಅವರ ಅದೇನು ಅತಿಶಯ ಪ್ರತಿಭಾನ್ವಿತ ಪ್ರೌಢಿಮೆಯಲ್ಲ; ಅದೊಂದು ಸಹಜ ಶಕ್ತಿ. ಅವರ ಜೀವನ ದೃಷ್ಟಿಯೇ ಸೃಜನಾತ್ಮಕವಾದುದು: ಆಡುವ ಮಾತಿನಲ್ಲಿ, ಮಾಡುವ ಕೆಲಸಗಳಲ್ಲಿ ಅದು ಕಂಡುಬರುತ್ತದೆ. ಸೃಜನ ಶಕ್ತಿಯೇ ಇವರ ವ್ಯಕ್ತಿತ್ವ ವಿಕಾಸಕ್ಕೆ ತಳಪಾಯ.

15. ಅದಮ್ಯ ವೈಯಕ್ತಿಕತೆ ಮತ್ತು ಅನನ್ಯತೆ ಸ್ವಸ್ಥ ವ್ಯಕ್ತಿತ್ವದ ಮುಖ್ಯ ಗುಣ. ಸಂಸ್ಕೃತೀಕರಣಕ್ಕೆ ತಲೆಬಾಗದಿರುವುದು ಇವರ ವೈಶಿಷ್ಟ್ಯ. ಹೇಗೋ ಎಲ್ಲಕ್ಕೂ ಹೊಂದಿಕೊಂಡು ಅನುಸರಿಸುವ ಪ್ರವೃತ್ತಿ ಇವರಿಗೆ ಹೊರತಾದುದು.

ಇವು ಸ್ವಯಂ ಸಾಕ್ಷಾತ್ಕಾರವನ್ನು ಪಡೆದುಕೊಂಡವರ ಲಕ್ಷಣಗಳು. ಮ್ಯಾಸ್ಲೋ ಪ್ರಕಾರ ಇವರು ಪ್ರೌಢ ವ್ಯಕ್ತಿಗಳು. ಸ್ವಸ್ಥ ವ್ಯಕ್ತಿಗಳು. ಪೂರ್ಣ ವ್ಯಕ್ತಿತ್ವದ ಈ ನೆಲೆಯನ್ನು ಮುಟ್ಟಲು ಎಲ್ಲರಿಗೂ ಸಾಧ್ಯವಾಗದಿದ್ದರೂ ಅದನ್ನು ಒಂದು ಆದರ್ಶವನ್ನಾಗಿರಿಸಿಕೊಂಡು . ಅದರೆಡೆಗೆ ನಡೆಯಲು ಯತ್ನಿಸಿದರೆ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯವೆಂಬುದು ಮ್ಯಾಸ್ಲೋ ಮತ್ತು ಇನ್ನು ಕೆಲವು ಮನೋ ವಿಜ್ಞಾನಿಗಳ ಅಭಿಮತ.

Refernce :

MASLOW, A. H. *Motivation and personality. New York : Harper and Row*, 1954.

ಕಲ್ಬುರ್ಗಿ ಜಿಲ್ಲೆಯ ಕೆಲವು ಶಾಸನಗಳು

ಎಸ್. ನಾಗರಾಜು

1966 ನೆಯ ಇಸವಿ ಬೇಸಗೆಯಲ್ಲಿ ಪ್ರಾಚ್ಯ ವಸ್ತು ಸಂಶೋಧನೆಗಾಗಿ ಕಲ್ಬುರ್ಗಿ ಜಿಲ್ಲೆಯಲ್ಲಿ ಪ್ರವಾಸ ಮಾಡುವ ಒಂದು ಅವಕಾಶ ಈ ಲೇಖಕನಿಗೆ ಒದಗಿ ಬಂದಿತ್ತು.[1] ಆಗ ಸಂಗ್ರಹಿಸಲಾದ ಅನೇಕ ಶಾಸನಗಳಲ್ಲಿ ಕೆಲವನ್ನು ಇಲ್ಲಿ ಮೊದಲ ಬಾರಿಗೆ ಪ್ರಕಟಿಸಲಾಗಿದೆ.

ಈ ಶಾಸನಗಳೆಲ್ಲಾ ಕಲ್ಬುರ್ಗಿ ಜಿಲ್ಲೆಯ ವಾಯುವ್ಯ ಭಾಗದಲ್ಲಿರುವ ಅಲಂದ್ ತಾಲ್ಲೂಕಿನವು. ಇವುಗಳ ಭಾಷೆ ಮತ್ತು ಲಿಪಿ ಕನ್ನಡ. ಕೇವಲ ತೇದಿ ಮತ್ತು ವ್ಯಕ್ತಿ ನಾಮವನ್ನುಳ್ಳ ಕೊನೆಯ ಶಾಸನ ಮಾತ್ರ ನಾಗರೀ ಲಿಪಿಯಲ್ಲಿದೆ.

ಗ್ರಾಮ : **ಮಡಿಹಾಳ್**

1. ಮಡಿಹಾಳ ಗ್ರಾಮದ ಶಂಕರಲಿಂಗ ದೇವಾಲಯದ ಮುಖ ಮಂಟಪದ ಒಂದನೆಯ ಕಂಬದ ಮೇಲೆ

(ಕಾಲ : 1184)

1 ಸ್ವಸ್ತಿ ಶ್ರೀಮತು ಚಾಳುಕ್ಯ ಚಕ್ರವರ್ತ್ತಿ ತ್ರಿಭು
2 ವನಮಲ್ಲ ಸೋಮೇಶ್ವರ ದೇವ ವರ್ಷದ ೩ ನೆಯ ಶೊ್ರೀ
3 ಧಿ ಸಂವತ್ಸರದ ಆಶ್ವಯುಜ ಸುಧ ೧೪ ಸೋಮ
4 ವಾರ ಬ್ಯತೀಪಾತದಂದು ಶ್ರೀಮನು ಮಹಾ
5 ಪ್ರಧಾನಂ ರಾಯದಂಡನಾಥ ಗಂಡಪೆಂಡಾರ ಚಾ
6 ಳುಕ್ಯ ರಾಜ್ಯ ಸಮುದ್ಧರಣ ಶ್ರೀಮತು ಚಾ
7 ವಣಯ್ಯ ದಂಡನಾಯಕರುಂ ಚಂದಲ ದೇವಿಯುಂ

---

[1] ಈ ಪ್ರವಾಸಕ್ಕಾಗಿ ನನಗೆ ಬಹುವಿಧವಾಗಿ ಸಹಾಯ ಮಾಡಿದ ನನ್ನ ಗುರುಗಳಾದ ಡಾ. ಎಂ. ಶೇಷಾದ್ರಿಯವರಿಗೂ, ಕಲ್ಬುರ್ಗಿ ಜಿಲ್ಲೆಯ ಡಿವಿಷನಲ್ ಕಮಿಷನರ್ ಆಗಿದ್ದ ಶ್ರೀ ಜಿ. ವಿ. ಕೆ. ರಾವ್‌ರವರಿಗೂ, ಅಲಂದ್ ತಾಲೂಕಿನ ತಹಸೀಲ್ದಾರರಾಗಿದ್ದ ಸಂಗಪ್ಪನವರಿಗೂ, ಶಾಸನ ಸಂಪಾದನೆಯಲ್ಲಿ ಉಪಯುಕ್ತ ಸಲಹೆಗಳನ್ನಿತ್ತ ಮಿತ್ರ ಡಾ. ಕೆ. ವಿ. ರಮೇಶ್‌ರವರಿಗೂ ಪ್ರವಾಸಕ್ಕೆ ಧನಸಹಾಯವನ್ನೊದಗಿಸಿದ ಮೈಸೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗಕ್ಕೂ ನಾನು ಕೃತಜ್ಞನಾಗಿದ್ದೇನೆ.

8 ಕುಮಾರ ಪದ್ಮರಸ ದಂಡನಾಯಕರುಂ ಮನ್ನೆಯ ಮಲ್ಲಿದೇವ
9 ರಸರು ಪ್ರಭುಗಳುಂ ಶ್ರೀಮತು ಮಾಡಿಘಳದ ಶ್ರೀ ಸ್ವ
10 ಯಂಭು ಕೋಟಿ ಶಂಖರ ದೇವರ್ಗ್ಗೆ ಸೂ
11 ಳೆಗೇರಿಯ ಭೂಮಿಯುಂ ಆ ದೇವರ ಪುರದಲು
12 ದಂಡದೋಷ ಮಡಿವಳ ಬಡಗಿ ಸಿಪ್ಪಿಗ ಕಂಮ್ಮರಿ ಇನಿತುಮಂ ಸ
13 ರ್ವ್ವಬಾಧಾಪರಿಹಾರವಾಗಿ ಧಾರಾಪೂರ್ವ್ವಕಂ ಮಾಡಿಕೊಟ್ಟರು.

2. ಅದೇ ಕಂಬದ ಇನ್ನೊಂದು ಮುಖದ ಮೇಲೆ

(ಕಾಲ : 1241)[2]

1 ಶ್ರೀಮತು ಚಿಕ್ಕಯುನ ಕಲ್ಲಯ ಕ್ರೋ
2 ಧಿ ಸಂಛರದ ಜೇಷ್ಟ ಶುಧ ಸೋಮವಾರ ಅ
3 ಮವಾಸೆಯಲು ಶ್ರೀ ಸ್ವಯಂಭು ಮಾಡಿ ಘ
4 ಳದ ಕೋಟಿ ಸಂಖರದೇವರಿಗೆ ಹ (ಪ್ರ)ಭು ಮುಖ್ಯ
5 ವಾಗಿ ಮೇಲಾಳಿಕೆಯ ಕೆಯಲು ಹೊಂ
6 ಗ್ಗೊಟ್ಟು ಹೂದೋಂಟವಂ ಕೊಂಡು ಸಂಖ
7 ರ ದೇವರಿಗೆ ಚಿಯ್ಯ್ಯನ ಕಲ್ಲಯ ದೇವರಿಗೆ
8 ಕೊಟ್ಟ ॥ ಮಂಗಳಮಾಹಾ ಶ್ರೀ ಶ್ರೀ

3. ಅದೇ ದೇವಸ್ಥಾನದ ಮುಖಮಂಟಪದ ಎರಡನೆಯ ಕಂಬದ ಮೇಲೆ

(ಕಾಲ : 12 ನೆಯ ಶತಮಾನ)

1 ಶ್ರೀಮತ್ಸರ್ವ್ವೇಶ್ವರ ದೇವರು ಕೊಂಡಜೀಯನಿಂ ಪ್ರಭು ಮು
2 ಖ್ಯ ವಾಗಿ ಪೊಂಗೊಟ್ಟು ಕೊಂಡ ವೆಳಸಂಗವಿಯ ದಾರಿಯಿಂ ತೆಂಕ
3 ಲು ಕಾಲಮತ್ತರು ೩೦ ಜಿಒಳಗೆ ಪಿಟ್ಟದ್ರ್ದವಂ ಕಳೆದುಳಿ
4 ದ ಮೂಡಣಮತ್ತರು ೧೫ ವಂ ದೇವಿಗೆಜೀಯ ಜರಿದೇರಿ
5 ಯಂ ಕಟ್ಟಲು ಹೊಕ್ಕ ಮಣ್ಣಂ ಕಳೆಯಲು ಕೊಟ್ಟರು
6 ವೃ[3] ॥ ಪರಮ ಶ್ರೀವರನಾಸುರೇಶ್ವರ ಮುನೀಂದ್ರಂ
7 ಮಂಡಳೀಕಂ ಗುಣೋತ್ಕರನಪ್ಪಾಹವಮಲ್ಲ ಮಾಡಿಘಳ
8 ದಾಚಾರ್ಯ್ಯಂ ಧ್ರುವೇಶ ಬ್ರತೀಶ್ವರ ಗ್ಗಿರ್(ಗಿರ್)ತ್ತ ದ್ಧರಣೀ ತಳಂ
9 ೬ಲುವಿನಂ ದ್ವಾರೇಶ್ವರಂ ದೇವಣೇಶ್ವರವನಾ
10 ಸಕರೇಶ್ವರಂ ಪದಪಿನಿಂ ಭೋಗೇಶ್ವರ ಸ್ಥಾನವಂ ॥
11 ವೇಳುಗ್ರಾಮೆಯ ಭೂಷಣೇಶ್ವರದ ಸ್ಥಾನವೀ ಸಮೃದಿ

---

2 ಮುಂದೆ ಟಿಪ್ಪಣಿಯನ್ನು ನೋಡಿ

3 ಛಂ, ಮತ್ತೇಭವಿಕ್ರೀಡಿತ

4. ಅದೇ ಮುಖಮಂಟಪದ ಮೂರನೆಯ ಕಂಬದ ಮೇಲೆ

(ಕಾಲ : 12ನೆಯ ಶತಮಾನ).

1 [4]ಶಿವಧರ್ಮ್ಮಾಂಭೋಧಿ ವಾದೀಶ್ವರ ಮುನಿಪತಿ ಶಿಷ್ಯಂ ಗುಣಾಂ
2 ಭೋಧಿ ಚಂದ್ರಂ ಶಿವಪಾದಾಂಭೋಜಭಾವಂ ವಿಬುಧವಿನುತ
3 ಸರ್ವ್ವೇಶ್ವರಂ ತತ್ಸುತಂ ಭೂಭುವನಸ್ತುತ್ಯಂ ಧ್ರುವೇಶಂ ನೆಗಳ್ದ
4 ಮುನಿಪ ಶಿಷ್ಯಂ ವಿವೇಕಾಸ್ಪದಂ ಜ್ಞಾನ ವಿಳಾಸಂ
5 ಸರ್ವ್ವ ಶಾಸ್ತ್ರಾಗಮ ಜಳನಿಧಿ ಸರ್ವ್ವೇಶ್ವರಾಚಾರ್ಯ್ಯ
6 ದೇವಂ ॥ [5]ತಂನಿಂದಂ ಶಿವಧರ್ಮ್ಮವಮುನ್ನತವಾಪ್ತಿ
7 ನಿಸಿ ಕೋಟಿಶಂಕರ ದೇವಾಸಂನ್ನಮೆನೆ ಬಾವಿ ಜಲ ಸಂ
8 ಪಂನ ತಡಾಗವನನೂನಮೆನೆ ನಿರ್ಮ್ಮಿಸಿದಂ ॥ [6]ಪಿರಿಯ
9 ನೆನೆನೆಗಳ್ದ ಸರ್ವ್ವೇಶ್ವರನ ಗುಣಂಗಳನೆ ಕೇಳ್ದು ತಲೆದೂಗ
10 ದೆ ಪೆರ್ವ್ವರಲಿಂ ಮಿಡಿಯದ ಪುಳಕಾಂಕುರಮೊ
11 ಗೆಯದ ವಿಬುಧರೊಳರೆ ಸಕಳಾವನಿಯೊಳು ।।
14 [7]ದೇವರ ಕೇರಿಯ ಪೊಕ್ಕಲ ಅವಟಮಂತರಿಕೆ ತಿಪ್ಪೆ ಸುಂ [ಕ]
15 ನಂದಾದೀವಿಗೆಗೆ ಗಾಣವಾಯಿಲೆಮಂ ಮತ್ತರಿಂಗೆ......

5. ಅದೇ ಮುಖ ಮಂಟಪದ ನಾಲ್ಕನೆಯ ಕಂಬದ ಮೇಲೆ

(ಕಾಲ : 12ನೆಯ ಶತಮಾನ)

1 ಶ್ರೀ ಶಂಕರ ದೇವರ ಹೊಲಕೇರಿ
2 ಯಲ್ಲಿ ಹುರಿಕಾಯ ಅವ
3 ಟ ಮಂತರಿಕೆ ಗಾಣಾಯಿ
4 ಲೆ ತಿಪ್ಪೆಸುಂಕ ಸರ್ವ್ವನಮಸ್ಯ
5 ಒಂದು ಹೇಱುವ ಒಕ್ಕಲುಂ

---

4 ಛಂ. ಮಹಾಸ್ರಗ್ಧರಾ

5 ಛಂ. ಕಂದ

6 ಛಂ. ಕಂದ

7 ಈ ಕೆಳಗಿನ ಎರಡು ಸಾಲುಗಳು ಕೆಲವು ಕಾಲದನಂತರ ಸೇರಿಸಿದ್ದು ಹಗುರವಾಗಿ ಗೀಚಲಾಗಿದೆ

6. ಅದೇ ಕಂಬದ ಇನ್ನೊಂದು ಮುಖದ ಮೇಲೆ

(ಈ ಶಾಸನದ ಬಲ ಪಾರ್ಶ್ವ ಒಡೆದುಹೋಗಿದೆ.)

(ಕಾಲ : 13ನೆಯ ಶತಮಾನ)

1 ಕೇಸಿಮರಸನ ತೋಟದಿ (ಬಡ)
2 ಗಲು ಕಾಲಡಿಯ ಮತ್ತ. (ಪ್ರ)
3 ಭುಗಳುಂ ಮಲ್ಲಯ ಸಾ [ಹ]
4 ಣಿಯುಂ ಸರ್ವ್ವನಮಸ್ಯ (ವಾ)
5 ಗಿ ಬಿಟ್ಟರು.

7. ಅದೇ ಗ್ರಾಮದ ಲಕ್ಷ್ಮೀದೇವಿ ದೇವಸ್ಥಾನದ ಮುಂದೆ ಇರುವ ಒಂದು ಕಲ್ಲು.

(ಕಾಲ : 13ನೆಯ ಶತಮಾನ)

1 O ಮಠದ ಪರಿಸೂತ್ರ
2 ದಿಂ ಮೂಡ ನೀಳಕ್ಕೆ ೨೦.
3 ಅಗಲ ೧೫ ಸತ್ರದ
4 ಮನೆಯುದಱ ಕೆಯಿ ಸಿರಿಊ
5 ರ ತೆಂಕನುಣಿಗೆಯ ಹಾಡ ಗೋಣುಂ
6 ೩೨ ಱ ಕಾಲಮತ್ತ ೪೦ ಮತ್ತಾ
7 ಸತ್ರಕ್ಕೆ ತಿಪ್ಪೆ ಸುಂಕ...
8 ಮಾಱಿ ಹೇಱಿಂಮ್ಮನ ೧[೬]
9 ಅಡಕೆ ೫ ಯೆಲೆ ೨೫
10 ಮಡಕೆ ೧ ಎಳೆಯಾರವೆಯ
11 ಪಳ ದೊಳಗೆ ಮಾಉ ೩ ಆರ್ವ್ವೆಲ್ಲದಸೆ[ಳ್ಳ]
12 [೧]ರೊ [ಳಗೆ] ಸೆ [ಳ್ಳು] ೧೨

8. ಅದೇ ಗ್ರಾಮದಲ್ಲಿ ಮಾಲಿ ಪಾಟೀಲ್ ಮಲಕಪ್ಪನವರ ಮನೆಯ ಮುಂದಿರುವ ಕಲ್ಲು.

(ಕಾಲ : 13ನೆಯ ಶತಮಾನ)

1 ಶ್ರೀ ಶಂಕರ ದೇ
2 ವರಿಗೆ ನಾ
3 ಯಕ ನಾರಾಯಣ
4 ಲಕ್ಷ್ಮಿ [ದೇವ] ನ ರಾಯಬಡಿ
5 [ಕಾ] ಱ ವಾಯಿದೇವನ

6 ಬಿಂನಪದಿಂ ಪರಮೇಶ್ವ
7 ರ ದತ್ತಿ

ಗ್ರಾಮ : ನಿಂಬರ್ಗ

9. ನಿಂಬರ್ಗದ ಈಶ್ವರಲಿಂಗ ದೇವಾಲಯದ ನವರಂಗದಲ್ಲಿ ಇಟ್ಟಿರುವ ಎರಡು ತುಂಡು ಚಪ್ಪಡಿಗಳು

(ಕಾಲ : 1046 ಮತ್ತು 1098)

(ಅ) 1 ವಿಶುದ್ಧ ಜ್ಞಾನ ದೇಹಾಯ ತ್ರಿವೇದೀ ದಿವ್ಯಚಕ್ಷುಷೇ ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನ[ಮಃ] —

2 ನುದರದ ವಾರೀರುಹೋದರದೊಳೊಗೆದನಾದ್ಯ[ಸ]ನವದ್ಯ ಕಳಾಧಾರ ಕೃತ ಸೃಷ್ಟಿವ್ಯಾಪಾರ ಧೀರ ಹಿರಣ್ಯಗ —

3 ವ ಪ್ರಭು ಭವಂ ಸ್ವಾಯಂಭು ಸುಜನಿತ.ನು ತತ್ಸೂನು ಜಗಜ್ಜನಾನತ ಪದಂ ಮಾನವ್ಯನಾತಂಗೆ ನಂದನ —

4 ಹರೀತಾತ್ಮಜಂ ವಿನುತಂ ವಿ...ಚಶಿಖಂ. ರೋಜ್ವಳ ಮುನಿ[ಹಾ]ರೀತಿಲೋ [ಕೋತ್ತ]ಮಂ॥ ವ॥ ಅನ್ತಾ ಹಾರೀತಿಗೆ ಚಳುಕ್ಯರ್ಪುಟ್ಟಿ. —

5 ಗದಳಮುಂ ರಥಸಂಕುಳಮುಂ ಪದಾತಿ ದುರ್ದ್ಧರಬಳಮುಂ ವಿ...... ಸನಮುಂ ಶರ ಜಳಮುಂ ಭಯಂಕರ ವರ ಖಡ್ಗದ —

6 ತಪತ್ರಮುಂ ಸ್ಮರರಿಪುವಿತ್ತನೆಂದಡೆ ಚಳುಕ್ಯರ ಪೆರ್ಮೆಯನಾರೋ ವರ್ನ್ನಿ ಪರ್॥ ಅನಲಂ ಕೊ[ಟ್ಟಾ]ಪತಾಕೆಯುಂ ಸುರುಚಿರ ಪ್ರೋತ್ತ —

7 ಶಿಕಿ ಕೇಕಿಪಿಂಛರಚಿಕಾದ್ಯತ್ಕುಂತಮಂ ಷಣ್ಮುಖಂ ದನುಜಾರಾತಿ ವರಾಹ ಲಾಂಛನಮನು ಚಕ್ರೇಶಂಗೆ ಕೂರ್ತ್ತಿಯೆ ಪಾ[ದ] —

8 ಕುಳಪೂಜ್ಯಂ ವೀರ ಸತ್ಯಾಶ್ರಯಂ॥ ವ॥ ಅನ್ತಾ ಚಳುಕ್ಯರಿಂ ಬಳಿಕ್ಕೆ ರಾಷ್ಟ್ರಕೂಟರ್ಪ್ಪ್ರಬಳಿಸಿ ಭೂವಳಯಮುಂ ಕೈಕೊಂಡಿರೆ —

9 [ತೈ]ಲ ನೃಪಂ ಮದವದ್ದ್ವಿಪ್ರಸಮಿತಿ ಬೆದಱಿ ಬೆಂಗೊಟ್ಟೋಡಲ್ಕದನ ಪ್ರಚಂಡನುದ್ಧತ ಮದಗಜ ಮೃಗರಾಜ[ನು] —

10 ...ಜನತಾ ಸಂಸ್ತುತನಾದ ತೈಲನ ಮಗಂ ಸತ್ಯಾಶ್ರಯಂ॥ ತಂ ನೃಪಾಳನ ಪುತ್ರಂ ವಿಭು ವಿಕ್ರಮಂ ತದನುಜ... —

11 ..ನಾತನ ತಮ್ಮಂ ಜಯಸಿಂಹನಾತನ ಮಗಂ ತ್ರೈಳೋಕ್ಯಮಲ್ಲ ಕ್ಷಿತೀಶನೆ ನಿಪ್ಪಾಹವ ಮಲ್ಲ ಭೂಪನೆನಿಪಂ —

12 ...ಚೋಳಕುಳಕುತ(ಠಾ)ರ ಕುಳೀಶಂ ಲಾಳ [ಮಂ] ಹೀಪಾಳ ದಾವಧವ ದಹನಂ ನೇಪಾಳ ವಿಳಯಾನ್ತಕಂ ಪಾಂಚಾಳಾಂಬ

13 ...ನಾಹವಮಲ್ಲಂ॥ ವ॥ ಆ ಚಕ್ರವರ್ತ್ತಿಯ ಪಿರಿಯರಸಿ ಧರೆಯುಂ ದಿಗ್ಭಿತ್ತಿಯುಂಬರಮುಂ ಪೊಸಮುತ್ತಿನಿಂದೆ ವನಜ ಭವಂ

14 ಭಾಸುರ ಕೀರ್ತ್ತಿಯನಾನ್ತಳುಂದಯಮತಿ ಸತೀರತ್ನಂ॥ ವ॥ ಆ ಚಕ್ರವರ್ತ್ತಿಯಾಳ್ವ ಕುನ್ತಳ ದೇಸದೊಳಲಂ [ದೆ].

15 ...ಕವನದಿಂದೆಳೆಮಾವಿಂ ಗನ್ಧಶಾಳಿಯಿಂ ಪೂತಕುಜಾವಳಿಯಿಂ ಪೂರ್ಣ್ನ ತಡಾಗ......

16 ದೇಶಂ॥ ವ॥ ಆ ಮಂಡಳಪತಿ ಆಹವಮಲ್ಲ ದೇವ ಪಾದಪದ್ಮೋಪ ಜೀವಿ ಅವನಿ ಸಂಸ್ತುತ...

17 ... ಗಂ ನೃಪ ಪ್ರವರಂ ಮನ್ನೆಯ ಸಿಂಗನೀಶ್ವರ ಪದಾಂಭೋಜಾತ ಭೃಂಗಂ ಸುಧಾರ್ಣ್ನವ ಸಂಕಾಶಯಶೋವಿಭಾಸಿ...

18 (ಅ) ಲಂದೆ ಪಡಂಗಂ ವಿಜಯಾಂಗನಾಪ್ರಿಯ ಭುಜಂಗಂ ಬಿಬ್ಬ ಭೂಪಾಳಕಂ ॥ ವ॥ ಆ ಮನ್ನೆಯ...

19 ತಪೋಧನರಿನಿಳಾಮರರಿಂ ಸತ್ಕವಿ ಕದಂಬದಿಂ ಗಣಿಕೆಯರಿಂ ವರ ವಿದ್ಯಾ ವಿದರಿಂ ಸಚ್ಚರಿತ ಗುಣಾನ್ವಿತರಿನೊಪ್ಪು—

20 ಯೆಳ್ಮಾಡಿ ಫಳಂ ಕಣ್ಗಾಳಿಸಿಕ್ಕುಂ ಗನ್ಧಶಾಳಿಯಿಂ ಪೂತಕುಜಾವಳಿ ಯಿ ನರಗಿಳಿಯನುದ್ಯತ್ತಿ.

21 ಪಾಳಯ.ದಿಂ॥ ಶ್ರೀಯುಂ ನಿರ್ಮ್ಮಲ ಕೀರ್ತ್ತಿ ಶ್ರೀಯುಂ ಚಂಡ ಭುಜದಂಡಮಂಡಿತ ವೀರ ಶ್ರೀಯುಂ ಸಲೆ ...

22 (ಮಾ) ಡಿ ಫಳದ ಶೇಷ ಪ್ರಭುಗಳ್॥ ವ॥ ಆ ನಾಡ ಮೇಲಾಳ್ಕೆ॥ ಜಗದೇಕ ವೀರಸಭಿಸವಭೃಗು ವಿಕ್ರಮ ಚಕ್ರವರ್ತ್ತಿ ಬಿರುದ—

23 ಕ್ರಮಂ ಸಲೆ ನೆಗಳ್ದಂ ಮಂಡಳೀಕ ದೇವ ನಾಗಂ ಧರೆಯೊಳ್॥ ದೆಸೆ ಯಾನ್ತಂ ತಾಪಿನಂ ಧಾತ್ರಿಯೊ[ಳ]ಮ

24 ಯಂ ನರ್ತ್ತಿಸಿದಂ ತ್ರೈಳೋಕ್ಯಮಲ್ಲ ಬೆಸಸೆ ಕದನದೊಳ್ನಿಂದ ವಿದ್ವಿಷ್ಟರ ಸೋಲಿಸಿದರಿ ಧರ್ಮ್ಮಾರ್ಜ್ಜಿತಾರ್ತ್ಥ...

25 .ನಿರ್ಮ್ಮಿಸಿದ ಸಾಮಾನ್ಯ ...೦ ಚಿತರಣ... ಭೂ[ಚೌ] ಪಮಂ ದೇವ ನಾಗ......

26 ...ಯೆನಿಪ ಚಂದಲ ದೇವಿಯರುಂ ... ಸಮಿ.

27 ...ನೆಗಳ್ತೆವಡೆದ ಮಂಡಳೀಕ ದೇವನಾಗರಸರು ಮಾಡಿ ಫಳದ ಶ್ರೀ.ತ್ರೈ

28 ಮಾಡಿಸಿದ ...... ಯುದ್ಬದಾ ಚಂದ್ರ ಮಂಡಳಮೆ ದಿವಾ ಗಾರಮಂ
ಪೋಲ್ತು ತನ್ಮದದಿಂದಬ್ಜಭವ. —

29 ..ಗಿ ಮಯೂರ ಹಂಸ ಮಕರ ಪ್ರೋತ್ತುಂಗಕೀರ್ತ್ಯ್ ಕದಂಬದಿ ನೊಪ್ಪಿತ್ತು
ಸುವರ್ಣ್ಣ ವ[ರ್ಣ್ಣ] ... —

30 ... ಸಮಮಂ ಕಳೆ ... ದೆ ವೀ ಧರ್ಮ್ಮರತ್ನ ದ್ಯುತಿಯಂ ಬೆಳಗಿ ಸಿಲಿಸಿಟ್ಟಿ
ಳೆಂಬಗ್ಗಳಿಕೆಯ ... —

31 . [ನ್ಯೆ] ಷ್ಠಿಕಾಚಾರ್ಯ್ಯನ್ವಯಂ॥ ಸಯ [ಶಾಳಿ] ಗಳಾದಂ ಮನ್ಸೆ
ಯ ವ ... —

32 ...... [ದ] ವರ್ಮ್ಮಡಿಫಳದ ಮಠದಾಚಾರ್ಯ್ಯರ್॥ ವ॥ ಅ. ಕ.—

33 ... ಭಾವಂ. ಕುಸುಮಾ [ಸ್ತ್ರಾ] ವಳಿಯ ...... —

34 . ವಿನಿಂ ... ನ ... —

35 ...... ನ ...... ಲ —

(ಆ) 1 . ಮಧುಕರದೊ . —

2 [ರ] ಸರ್ವ್ವೇಶ॥ ಮುನಿವೃಷಭ —

3 ... [ನ] ದೊಳುದ್ಭವಿಸುವನ್॥ ಮದನ . —

4 . ಣದೊಳ್ ಪೋಲ್ವುದು ಮಯದಿ ಧಾತ್ರಿ ಬಾಪ್ಪೆನಲ್ ಸರ್ವ್ವೇಶ —

5 . ಪರಮೇಶ್ವರಂ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳ ತಿಳಕಂ . —

6 . ತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕ ತಾರಂ
ಸಲುತ್ತಮಿರೆ ಸಕವರ್ಷ ೯೭೮ —

7 [ಪಂಚಮಿ] ಬೃಹಸ್ಪತಿವಾರದಂದುತ್ತರಾಯಣ ಸಂಕ್ರಮಣ ವ್ಯತೀ
ಪಾತಯೋಗದೊಳ್ ತುಳಾಪುರುಷವಿರ್ದ್ದ—

8 ರಸನ ಜಿನಪದಿಂ ಶ್ರೀಮದಾಹವಮಲ್ಲ ದೇವರು ಮಾಡಿ ಫಳದ ಶ್ರೀ
ಸ್ವಯಂಭು ಕೋಟಿ ಶಂಕರ ದೇವರ.—

9 . ಸರ್ವನಮಸ್ಯವಾಗಿ ದೇವರ ಅಂಗಭೋಗಕ್ಕಂ ರಂಗಭೋಗಕ್ಕಂ ಜೀರ್ಣ್ಣೋ
ದ್ಧಾರಕ್ಕಂ ಅಲಂದೆ ಸಾಸಿರದ ಗೊಂಕ ನಾಡೊಳ [ಗ]—

10 ... ರಿಗೆಯಂ ಧಾರಾಪೂರ್ವ್ವಕಂ ಮಾಡಿಕೊಟ್ಟರು ಆ ಸಮಯದೊಳ್
ಪಂಚಮಹಾ ಶಬ್ದ ಮಹಾಮಂಡಳೇಶ್ವ—

11 ಪಾದಪದ್ಮೋಪಜೀವಿ ಬಿಬ್ಬರಸರುಂ ತಮ್ಮ ಮನ್ನೆಯ ಮುವಂ ಶ್ರೀ ಮಹಾಹವಮಲ್ಲ ದೇವರ್ಗ್ಗೆ ದ್ರೋಹರಾಗಲವಂದಿರಂ—

12 … ರಮುಮಂ ಆಯದಾಯ ಪರಿಹಾರವಾಗಿ ಧಾರಾಪೂರ್ವ್ವಕಂ ಮಾಡಿ ಕೊಟ್ಟರು ಇನ್ತು ತ್ರಿಭೋಗಾಭ್ಯನ್ತರವಾಗಿ—

13 ಸೀಮಾ ಪದ್ಧತಿ ಕವಿಲಗೆಯ ಸೀಮೆಯ ಸಱಿಯ ಬಮ್ಮದೇವಸಿಂದಿಳಿದ ಹಳ್ಳದಿಂ ಜಕ್ಕಿಯರ ಮಡುವಿಂ ಆಲದ ಮರಡಿ—

14 ವಾ… ಕ. ವಿರಿಂ ತೆಂಕಲು । ಮತ್ತಂ ಆ ಊರ ಬೇವಿನ ಹಾಡದ ಹಳ್ಳದಿಂ ಮುರಂಜೆ ಸಂಗಮದಿಂ ಪಡುವಲು । ಮತ್ತ ವಾ ಮುರಂಜೆ—

15 …ವಳ್ಳಿಯ…ಪ್ಪ [ಗದೆ]ಗೆ ಪೋದ ದಾರಿಯಿಂ ಬಲದ ಕಲ್ಲೊಟ್ಟಿಲ ಕಾರೆಯ ಗುತ್ತಿಯಿಂ ಕಲುವೆಟ್ಟದಿಂದೆರದ ಕೆಱೆಯಿಂ ಕ—

16 ಯುರೆ ಕಮಱಿ…ಕ. ಯ ಬಡಗಲು ಮತ್ತಂ ಮುಗ್ಗುಡ್ಡೆಯೊಳಗೆಱೆಯಿಂ ಕಲುಪುಂಜಳಿಯಿಂ ಅಂಕುಲೆಯ ಬಾಗಿಂ ಜಳಕಿ—

17 . ಬಮ್ಮದೇವಸಿಂ ಮೂಡಲು॥ ಕದನದೊಳಾಂತರಿರಾಯರನದಟಿಂದಂ ಗೆಲ್ದು ಸಕಳ ಭೂ ಮಂಡಳಮಂ ಪುದುವಿಲ್ಲ[ದಾ] —

18 . ದೆ ತಾ ಪೆರ್ಮ್ಮಾಡಿ ದೇವನೆಸೆದ ಧರೆಯೊಳ್॥ ಅನ್ತು ನೆಗೞ್ದ ಪೆರ್ಮ್ಮಾಡಿ ದೇವ ಪಾದ ಪದ್ಮೋಪಜೀವಿ ನರಲೋಕ ಜಗದಳಂ ಬಿರುದರ ಗಂ—

19 ಡರದೆಯ ಗೂಂಟಂ ತೊಡವ…ರು. ರಿಕಳ್ಬಕುಜಾತಂ ವರ ವಂದಿಗೆ ದೇವ ನಾಗನಾಹವಮಲ್ಲಂ॥ ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ—

20 23 ನೆಯ ಬಹುಧಾನ್ಯ ಸಂವತ್ಸರದ ಪುಷ್ಯದಮಾವಾಸ್ಯೆ ಬೃಹಸ್ಪತಿ ವಾರ ಸೂರ್ಯ್ಯಗ್ರಹಣವಿರೆ ನರ್ಮ್ಮದಾ ತೀರದಲು ತುಳಾಪುರುಷವಿರ್ದ್ದಸ [ಮು]—

21 …ಮಂಡಳೀಕ ದೇವ ನಾಗರಸನ ಮಗನಾಹವಮಲ್ಲನ ಬಿಂನಪದಿಂ ಮಾಡಿ ಘಳದ ಶ್ರೀ ಸ್ವಯಂಭು ಕೋಟಿ ಶಂಕರ ದೇವರ ಮಠದಾ—

22 …ಸರ್ವ್ವೇಶ್ವರ ದೇವ [ರ್ಗ್ಗೆ] ನೈಷ್ಠಿಕ ತಪೋಧನರ ದಾನಕ್ಕಂ ಛಾತ್ರರ ಪರಿಚಾರಕರ ಅಶನಾಛಾದನಕ್ಕಂ ಆ ಊರ ತೆಂಕಣ ಪೊಲದಲು ಬೊಂ

23 …ದ ಕಾಲ [ಡಿಯ] ಮತ್ತರು ಇನೂಱಿಂ ೨೦೦ ಸರ್ಬ್ಬನಮಸ್ಯವಾಗಿ ಧಾರಾ ಪೂರ್ವ್ವಕಂ ಮಾಡಿಕೊಟ್ಟರು ೧ ಆ ಊರ ಕೋಟೆಯಿಂ ಪ

24 … ಮತ್ತರೊಂದು ೧ ಆ ಪುರಕ್ಕಾಯ ದಾಯ ದಂಡ ದೋಶವಿಲ್ಲೆಂದು ಸರ್ವ್ವನಮಸ್ಯವಾಗಿ ಧಾರಪೂ

25 ... ಪಳ್ಳದಿಂ [ಮೂಡ] ಲು ಮಾರೆಯನ ತೋಂಟದಿಂ ತೆಂಕಲು ಮಾನ್ಯ
ಬೊಲದಿಂ ಬಡಗಲು । ಅಡ್ಡದಾರಿಯಿಂ ಪಡುವಲು । ಪೂದೋಟಂ

26 ...ವೆರಡು ೨ ಕಟ್ಟಿಯ ಪಳ್ಳದಿಂ ಮೂಡಲು...ಮತ್ತರು ಎರಡು ೨
ಮಂ ಧಾರಾಪೂರ್ವ್ವಕಂ ಮಾಡಿ ಕೊಟ್ಟರು । ಆ ಸಮ

27 ಯದಲು ಸಮಧಿಗತ ಪಂಚಮಹಾ ಶಬ್ದ ಮಹಾಮಂಡಳೇಶ್ವರಂ ಮಂನೆ
ಯಸಿಂಗ ಬಿಬ್ಬನಂಕಕಾಜಿ ಗೊಂಕರಸರು ಸರ್ವ್ವ ನಮಸ್ಯವಾಗಿ

28 ಧಾರಾಪೂರ್ಬ್ಬಕಂ ಮಾಡಿಕೊಟ್ಟರು । ಆ ಹಿರಿಯ ಸ್ಥಳದ ಸೀಮಾ ಪದ್ಧತಿ
ಕುಡಿಕಿಗೆಯ ಸೀಮೆಯಿಂ ಪಡುವಲು ಭಾಸ್ಕರನ ಬೆಟ್ಟದ

29 ತೆಂಕಣಣೆಯಿಂ ವೈಜಯ ಗಟ್ಟಿಯಿಂ ಸಿರಿಊರ ಕಲ್ಲಿಪಳ್ಳದಿಂ ಬಡಗಲು
ವೆಳಸಂಗವಿಯ ಮೂಲಿಗಗೆಯ್ಯ ಹೊಲವೇರೆಯಿಂ

30 ಮೂಡಲು ಹುಲ್ಲೆಯ ಬೆಟ್ಟದ ತೆಂಕಣಣೆಯಿಂ ಪೆರಡಾಲದ ಮರಡಿಕಲು
ಪುಂಜಳಿಯಿಂ ತೆ(ಂ)ಕಲು ಆ ಸ್ಥಳದ ಸೀಮಾ ಪದ್ಧತಿಯೆಂಬುವ

31 ರ್ ॥ ಇಂತೀಧರ್ಮ್ಮಮಂ ಅರಸುಗಳುಂ ಮಂನೆಯರುಂ ಪ್ರಭುಗಳುಂ ನಗರ
ಮುಂ ಬಣಂಜಿಗರುಂ ಸಮಸ್ತ ಪ್ರಜೆಗಳುಂ ಪ್ರತಿಪಾಳಿಸುವರು

32 ಈ ಸ್ಥಾನದಾ ನೈಷ್ಠಿಕಾಚಾರ್ಯ್ಯರು ನಿಯಾಮಂದಪ್ಪಿ ನಡೆಯಲವರಂ ಸಿಕ್ಷಿ
ಸುವುದು । ಅವರು ಮಾಡಿದನ್ಯಾಯಕ್ಕೆ ಸ್ಥಾನವಂ ಕಿಡಿಸಲು ವೇದ । ಕಿಡಿ
ಸಿದವರು

33 ತಂಮಿಪ್ಪತ್ತೊಂದು ತಲೆಯ ಪಿತೃಗಳು ನೇರ ಪ್ರನ್ನರಕಕ್ಕೆಳಿವರು । ಈ
ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗೆ ವಾರಣಾಶಿಯಲು ಸಾಸಿರಕವಿಲೆ

34 ಯನಲಂಕಾರ ಸಹಿತಂ ದಾನಂ ಗೆಯ್ದ ಫಲಮಕು ॥ ಅಭವಂಗಾಳ್ಕೆಯ
ಕೆಯ್ಯೊಳಂ ಪುರದೊಳಂ ಪೂದೋಂಟದೊಳು ಗಾಣದೊಳು ಪ್ರಭುಮೇ

35 (ಲಾ) [ಳ್ಕೆ] ಯರಕ್ಕೆ ನಾಡರಸರಕ್ಕಾರಾವಡಂ ದೋಶಮಂದು ಭಯಂ
ಗೊಳ್ಳದೆ ಬಾಧಿಸಲು ಕೇಮನಮ [ರ] ಪ್ಪಾನರರು ಶ್ವಾನ ಗರ್ದ್ದಭ ಚಾಂಡಾ
ಲರವರ್ಗ್ಗೆ ಪಿಂಗದೆನುತುಂ

36 (ಜ) ನ್ಮಾಂತರಂ ರೌರವಂ ॥ ಸ್ವದತ್ತಾಂ ಪರದತ್ತಾಂ ವಾಂ ಯೋ ಹರೇತು
ವಸುಂಧರಾ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ ॥

37 ಗುಡಿಯ ದೇವನಿಗೆಯಲು ನಾಡಮೇಲಾಳ್ಕೆಯರಸುಗಳು ತಂಮ ಕೋರಿಕೆ
ದಂಡದೋಶವಮ್ಮನ್ನೆಯರು ತಂಮ ಕಾಣಿಕೆಯಾಯದಾ

38 ...ಂ ಪ್ರಭುತ್ವಪನಿತು ಅಷ್ಟವರ್ಗ್ಗವರುವಣ ಬನಬಸಿ ಸಹಿತಂ ಶ್ರೀ ಕೋಟಿ ಶಂಕರ ದೇವರಿಗೆ ತತಂಮು ಅಂಕವಂ ಧಾರಾಪೂರ್ವ್ವಕಂ ಮಾಡಿಕೊಟ್ಟರು ॥

39 ...[ನಾಚಾ] ರ್ಯ್ಯರು ಪೂರ್ಬ್ಬಾಸ್ರಯ ಬ್ರಾಹ್ಮಣರಾಗಿ ಸರ್ವ್ವೇಶ್ವರ ದೇವರ ಶಿಷ್ಯಸಂತಾನವಾಗಲು ಪೆರ್ಕ್ಕ ದೇವರ ವ್ರಿತಿ —

40 ರ್ಯ್ಯರು ಒತ್ತೆ ಇಡಲುಂ ಮಾಜಿಲುಂ ದಾಸಂಗೈಯಲುಂ ಸಲ್ಲದು ಪರಿಚಾರಕರು ತಂತಂಮು ನಡೆವಳಿಯ ವ್ರಿತ್ತಿ —

41 ರಲ್ಲಿದೆ ಒತ್ತೆ ಇಡಲುಂ ಮಾಜಿಲುಂ ಸಲ್ಲುದು ವಿಗಾಜಿದಂ ದಾಚಾರ್ಯ್ಯಂ. ರಸಿದಯಿನೂರ್ವ್ವರೀ ಮಂನೆಯ ... —

ಗ್ರಾಮ : **ಜವಳಿ**

10. ಜವಳಿ ಗ್ರಾಮದಿಂದ ಒಂದೂವರೆ ಮೈಲಿ ದಕ್ಷಿಣದಲ್ಲಿ ಹಾಳ್ಬೆ ಲಕ್ಷ್ಮಿ ದೇವಾಲಯದಲ್ಲಿರುವ ಕಲ್ಲು

(ಕಾಲ : 12–13ನೆಯ ಶತಮಾನ)

1 ವಾಮರಸ
2 ದಂಡನ್ನೆ (ನಾ) ಯ
3 ಕರವ್ರಿತ್ತಿ

ಗ್ರಾಮ : **ದೇವಂತಿ**

11. ದೇವಂತಿ ಗ್ರಾಮದಲ್ಲಿ ಮಡಿವಾಳಯ್ಯನ ಮಠದ ಎಡಗಡೆ ನಿಲ್ಲಿಸಿರುವ ಕಲ್ಲು

(ಕಾಲ : 11–12 ನೆಯ ಶತಮಾನ)

1 ಮಾಡಿ ಘಳದ ಶಂಕರದೇ
2 ವರಿಗೆ ಗುಡಿಯ ದೇವ
3 ಯ ಮೇಲಾಳಿಕೆ [ಮ]

(ಮುಂದೆ ಒಡೆದು ಹೋಗಿದೆ)

ಗ್ರಾಮ : **ಖಜೂರಿ**

12. ಖಜೂರಿ ಗ್ರಾಮದಲ್ಲಿ ಕಿಶೆನ್‌ರಾವ್ ದೇಶಪಾಂಡೆಯವರ ಮನೆಯ ಮುಂದೆ ಮೆಟ್ಟಲಿಗೆ ಸೇರಿಸಿ ಕಟ್ಟಿರುವ ಕಲ್ಲು

(ಕಾಲ : 1127–28)

1 . ತ್ತರೋತ್ತರಾಭಿವ್ರಿದ್ಧಿ ಪ್ರವರ್ಧ್ಧಮಾನ ....

2 ಕಲ್ಯಾಣದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯ್ಯು ತ್ತಮಿರೆ

3 ಶ್ರೀಮಚ್ಚಾಳುಕ್ಯ ಸತ್ಯಾಶ್ರಯ ಚಕ್ರವರ್ತ್ತಿ ಭೂಲೋಕಮಲ್ಲ ದೇವರ 2ನೆಯ ಪ್ಲವಂಗ ಸಂವತ್ಸರದ

(ಮುಂದೆ ಪೂರ್ಣ ಸವೆದು ಹೋಗಿದೆ)

ಗ್ರಾಮ : **ಪಡಸಾವಳಿ**

13. ಪಡಸಾವಳಿ ಗ್ರಾಮದಲ್ಲಿ ಕಲ್ಲೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಕಲ್ಲು

(ಕಾಲ : 1110)

1 ....

2 .... ಸ್ವಸ್ತಿ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜಂ

3 ಪರಮೇಸ್ವರಂ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳ

4 ಕಂ ಚಾಳುಕ್ಯಾಭರಣಂ ಶ್ರೀಮಂತು ತ್ರಿಭುವನಮಲ್ಲ ದೇವರು

5 ... ಯ ನೆಲೆವೀಡಿನೊಳು ಸುಖ [ಸಂಕ*] ಥಾ ವಿನೋದದಿಂ ವಿಜಯ

6 ರಾಜ್ಯಾಭಿವ್ರಿದ್ಧಿ ಪ್ರವರ್ದ್ಧಮಾನ ಮಾಚಂದ್ರಾರ್ಕ್ಕತಾರಂಬರಂ ಸಲುತ್ತಮಿ

7 ರೆ ಶ್ರೀಮತು ಚಾಳುಕ್ಯ ವಿಕ್ರಮ ವರ್ಷದ ೩೪ನೆಯ ವಿರೋಧಿ ಸಂ

8 ವತ್ಸರದ ಮಾಘ ಬಹುಳ ದಸಮಿ ಸುಕ್ರವಾರದಂದು ಶ್ರೀಮ

9 ತು ಪಟ್ಟ ಸಾವಳಿಗೆಯ ಪ್ರಭು ಬಾಣಸವರ್ಗ್ಗಡೆ ನಾರಣ ದೇ [ವರು]

10 ಪಟ್ಟ ಸಾವಳಿಗೆಯ ಕಲಿದೇವೇಸ್ವ...ಮಿಗೆ ಮತ್ತರು [೯೦] ದಸ

11 ...ಮತ್ತರು ಮಂ ಸರ್ವ್ವಬಾಧಾ ಪರಿಹಾರವಾಗಿ ಬಿಟ್ಟ ಧರ್ಮ 1

12 ಇಲ್ಲಿಯ ಮುಲಿಗ [ದುಂ] ಮರಸನುಂ ಗೋಪತಿ ನಾಯಕರುಂ ಯೀಸ್ವರ ದೇ

13 ವನುಂ ಅಯಿ [ತ್ರ] ಮಾಯ ಸೆಟ್ಟಿಯುಂ ಬಾಪರಸನುಂ ಚಿಕ್ಕರಸನುಂ

14 ಮೊರಂಬ ಎಂಬತ್ತಜಿ ಮನ್ನೆಯ ಮಾಗರಸನುಂ ಯಿನ್ತೀ ಧರ್ಮ್ಮ ಮಾಚಂದ್ರಾ

15 ರ್ಕ ತಾರಂಬರಂ ಪ್ರತಿಪಾಳಿಸುವರು ಯಿನ್ತೀ ಧರ್ಮ್ಮಮನಾರೊಬ್ಬರು

16 [ಪ್ರ] ತಿಪಾಳಿಸದಿರ್ದ್ದೊಡೆ ಗಂಗೆ ಕುರುಕ್ಷೇತ್ರ ಬಾಣರಾಸಿಯಲುಂ

17 . ಕಿಲೆಯುಂಕತ್ತಿಗೆಯ ಅಳಿದ ದೋಸಮುನೆಯ್ದುವರು ॥

18 ಮತ್ತಂ ಸಿಂಗೇಸ್ವರ ದೇವರಿಗ್ಗೆ ಸಿಂಗಣ ಬಿಟ್ಟ ಮತ್ತರು ೧೨ ॥
19 ಮತ್ತಂ ರಾವಸೆಟ್ಟಿಯುಂ ಬಲ್ಲೆಯಣನುಂ ಸೋಮೇಸ್ವರ ದೇವರಿಗೆ ಬಿ
20 ಟ್ಟ ಮತ್ತರು ೧ । ಏಳು ಕೆಯ್ಯನೆ ಸ...ಇನ್ತೀ ೧೦೪ ಮತ್ತರಿಂಗೆ ...
21 ... ಟ್ಟಿಯುಂ ಮಲ್ಲಿಯಣನು ಒಡೆಯರು ॥ ಮಂಗಳ ಮಹಾ ಶ್ರೀ ...
22 * ದಂಡನಾಯಕ ನಾರದೇವ ಹೆಗ್ಗಡೆ ಕೇಸಿರಾಜನುಂ ಸೌದರೆಗಳುಂ ಅಜು
ಪತ್ತೊಕ್ಕಲುಂ
23 ಕಲಿಸೆಟ್ಟಿ ಪೇಟೆ [ಹುಂಜ] ಮಂ ಬಿಟ್ಟನು

ಗ್ರಾಮ : **ಹಿರೇರ್ಝುಳಕಿ**

14. ಹಿರೇರಝಳಕಿ ಗ್ರಾಮದಲ್ಲಿ ಜೋಗೇಸ್ವರ ದೇವಾಲಯದ ಹಿಂದಿರುವ ಕಲ್ಲು

(ಕಾಲ : 1254)

1 ....ಮಯ...ಳದ
2 ....೨೦...............
3 ಸ್ವಸ್ತಿ ಶ್ರೀಮತು ಯಾದವಾ ನಾರಯಣಾ
4 ಪ್ರತಾಪ ಚಕ್ರವಾರ್ತ್ತಿ ಶ್ರೀ ಕಂನರದೇವ
5 ವಿಜಯರಾಜ್ಯ ೮ ಆನದ ಸಂವತ್ಸ
6 ರದಲಿ ಸೋಮವರ ಸೂರ್ಯ್ಯ ಗ್ರಹಣ ವಿ
7 ರ ಪತ ಅ ತಿಥಿ ಕುಡಿದ ಧನ ಮಾ [ವಿ] ನ ಜ
8 ಳಕಿಗೆ ವಿಸಪ್ರಹಾರಿ ಜೋಗಸ್ವರ ದೇವರಿಗೆ ಬಿ
9 ಟ ದವನ್ಯಾ ಚಿಕಯನ ಮಕಳು ಕಲಿಗೌಡ
10 [ಸಂಗಡ] ಮೆಜಿ ಕೊಂಡು ದೇವರಿಗೆ ಬಿ
11 ಟ ಕೆಂಬ ಮತ್ತರು ೬ ಮದರ ಮತ್ತರು ೧
12 ಯಿದರಿಂದೆರಡು ನಂದ ದೀವಿಗೆಯ ನ ಡ [ಹ ... ಕೊ]
13 ಟರು..................ಯಾದವ ನಾರಯಣ
14 ....ಧರ್ಮ್ಮವ ನಡೆಸಿ......

* ಈ ಕೆಳಗಿನ ಎರಡು ಸಾಲುಗಳನ್ನು ಅನಂತರ ಶಾಸನಕ್ಕೆ ಸೇರಿಸಲಾಗಿದೆ

ಗ್ರಾಮ : ತಡಕಲ್

15. ತಡಕಲ್ ಗ್ರಾಮದ ಮಧ್ಯೆ ಸಿದ್ದಪ್ಪ ಬಾಳಪ್ಪ ಸುತಾರ್‌ರ ಮನೆಯ ಮುಂದೆ ಇರುವ ಬಿಂಡರಾಯನ ಮೂರ್ತಿ ಕಲ್ಲಿನ ಮೇಲೆ

(ಕಾಲ : 11-12 ನೆಯ ಶತಮಾನ)[8]

1 ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ । ತ್ರೈಳೋಕ್ಯ ನಗ ರಾರಂಭ ಮೂಳ ಸ್ತಂಭಾಯ ಶಂಭವೇ

2 ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ಣವಂ ದಕ್ಷಿ ಣೋಂನತ ದಂಷ್ಟ್ರಾಗ್ರ ವಿಶ್ರಾನ್ತ ಭುವನಂ ವಪುಃ ಶ್ರೀ—

3 ಪದರತಾದ್ವಃ ಶ್ರೀಪತಿಃ ಕ್ರೋಡರೂಪೋ ವಿಕಟ ವಿಶದ ದಂಷ್ಟ್ರಾಪ್ರೋಂತ ವಿಶ್ರಾಂತ ಭಾಜಂ ಅವಪದ —

4 ಷ್ಟ್ಯಾಕ್ರಿಪ್ಟ ವಿಸ್ಪಷ್ಟ ಕಾಣ್ಡ ಪ್ರತನುಬಿಸ ಜಟಾಗ್ರಗ್ರಸ್ಥಿಮ ಥ್ಯೋಧರಿತ್ರಿಂ॥ [9]ಶ್ರೀ ರಾಷ್ಟ್ರಕೂಟ ವಂಸ (ಶ್ರೀ)

5 ರಮಣೀ ರಮಣನಾಗಲೀ (೦) ಧರೆಗೆಸೆದಂ ಶ್ರೀರಮಣನೆನಿಪ ಕ್ರಿಷ್ಣಮಹೀ ರಮಣಂ ಬೆರಸಮೋಘವರ್ಷಂ ನೃಪ (೦)

6 ॥ಸ್ವಸ್ತಿ ಸಮಸ್ತ ಜಗನ್ಮಂಡೊ (ಡ) ಳಾನುಷ್ಠಾಣ ಪರಾಯಣ ವೀರ ನಾರಾಯಣ । ನನುಕ್ರಿತಾಂಬರೀಶ ನೃಗನ

7 ಹಿತಬಳ ಜಳಧಿ ಬಡವಾನಳ । ನಿಜಭುಜ ವಜ್ರ ಪಂಜರಾನ್ತಃಕ್ರಿತ ಸರ ಣಾಗತಾರಾತಿಲೋ

8 ಕ। ಅಭಯಾವಳೋಕ। ನಮಿತ ಪ್ರೆ (ಪ್ರ) ದಯ ನಿಶಾತ ಜೀವಿತರಾಜ್ಯ ಚಿನ್ಹಾನು ಬಣ್ನರೋಷ । ನವನ್ಧ್ಯ ಕೋಪ। ನಿಬೋದ

9 ಯ ಪ್ರಕಾಸಿತ ಯದುಕುಳನರಪಾಳ ಕಮಳ ಷೆ (ಷ) ಣ್ಡ। ರಟ್ಟ ಮಾರ್ತ್ತಣ್ಡ। ಮಹಾವರಾಹನಪ್ಪನುಪಮ

10 ಶ್ರೀಮದಮೋಘವರ್ಷ ದೇವರು ಮಾನ್ಯಖೇಡಪುರದೊಳು ಸುಕಸಂಕಥಾ ವಿನೋದದಿಂ ರಾಜ್ಯಗೆ

11 ಯ್ಯುತ್ತಮಿರೆ ಸಕವರ್ಷ 651 ನೆಯ ಸುಕ್ಲ ಸಂವತ್ಸರದ ಫಾಲ್ಗುಣದಮಾ ವಾಸ್ಯೆ ಆದಿವಾರದಂ

---

8. ಟಿಪ್ಪಣಿಯಲ್ಲಿ ಪುಟ 65 ನೋಡಿ

9. ಛಂ. ಕಂದ

12 ದು ಸೂರ್‍ಯ್ಯಗ್ರಹಣಮಾಗೆ ಪಿರಿಯತಡಕಲ್ಲ ಬಳ್ಳೇಶ್ವರ ದೇವರ್ಗ್ಗೆ ದೇವ ರಂಗಭೋಗಕ್ಕ ಖಣ್ಡಸ್ಫುಟಿ

13 ತ ಜೀರ್ಣ್ನೋದ್ಧಾರಕ್ಕಂ ಗೀತವಾದ್ಯ ನ್ರಿತ್ಯಕ್ಕಂ ಪೂಜಾರಿಗಂ ಸ್ಥಾನಾ ಚಾರ್‍ಯ್ಯರ್ಗಂ ಸರ್ವನಮಸ್ಯಮಾಗೆ ಊರಿಂ ಬ

14 (ಡ) ಗಣ ಸೀಮೆಯಲ್ಲಿ.....................

(ಮುಂದೆ ಕಲ್ಲು ಒಡೆದಿದೆ)

16. ಅದೇ ಗ್ರಾಮದ ಶಾಂತಿನಾಥ ಬಸದಿಯಲ್ಲಿರುವ ಒಂದು ಚಿಕ್ಕ ಕಂಚಿನ ಜಿನಬಿಂಬದ ಪೀಠದ ಮೇಲೆ

ಕಾಲ : (16–17 ನೆಯ ಶತಮಾನ)

(ಮುಂಭಾಗ)

1 ಬದಾವೆಯ ಮನಿಕ
2 ಸೆಟ್ಟಿಯಮಗ ಮಲ್ಲಿಸೆ
(ಪಕ್ಕದಲ್ಲಿ)
3 ಟ್ಟಿ ಮಡಿಸಿದ ಬಿಂ
4 ಬ ಪ್ರಬವಲಿ

17. ಅದೇ ಬಸದಿಯಲ್ಲಿರುವ ಒಂದು ಚಿಕ್ಕ ಅಮೃತಶಿಲೆಯ ಪಾರ್ಶ್ವನಾಥ ವಿಗ್ರಹದ ಪೀಠದಲ್ಲಿ

(ಕಾಲ : 1601)

1 ಸಾಲಿವಾಹನ ಸಖೆ ೧೫೨೩ ನೆ ಪ್ಲವನಾಮ ಸಂವತ್ಸರದ ಚೈತ್ರ
2 ಸುದ್ಧ ಷಷ್ಠಿ ಬುಧವಾರ ಭಟ್ಟಾರಕ ಶ್ರೀ ವಾದಿ ವಿದ್ಯಾ
3 ....[ಶಿಷ್ಯ] ಚಂದ್ರಕೀರ್ತಿ......[ನಾಭಿರಾ]
4 ....

18. ಅದೇ ಬಸದಿಯಲ್ಲಿರುವ ಇನ್ನೊಂದು ಚಿಕ್ಕ ಅಮೃತಶಿಲೆಯ ಜಿನಬಿಂಬದ ಪೀಠದ ಮೇಲೆ

1 . ಸಂವತ್ 1549 ವರ್ಷೇ ವೈಸಾಖ
2 . ಸು ೩ ಶ್ರೀ ಮೂಲಸಂಘ ಮ...ನಾ
3 . ಭಾನುಚಂದ್ದ್ರ ದೇವ

(ಸಶೇಷ)

ಟಿಪ್ಪಣಿ

ಮೊದಲ ಎಂಟು ಶಾಸನಗಳಿರುವ ಮಡಿಹಾಳ ಗ್ರಾಮವು ಅಲಂದ್‌ನಿಂದ ನೈಋತ್ಯಕ್ಕೆ ಸುಮಾರು ಹನ್ನೆರಡು ಮೈಲಿ ದೂರದಲ್ಲಿದೆ. ಇಲ್ಲಿ ಶಂಕರಲಿಂಗ ಎಂದು ಕರೆಯುವ ಚಾಳುಕ್ಯರ ಕಾಲದ ಒಂದು ಸುಂದರ ದೇವಾಲಯವೂ, ಅದರಿಂದ ದಕ್ಷಿಣದಲ್ಲಿ ಅದೇ ಕಾಲದ ಒಂದು ಮಠದ ಕಟ್ಟಡವೂ[10], ದೇವಸ್ಥಾನದ ಉತ್ತರದಲ್ಲಿ ಒಂದು ಕೆರೆಯೂ ಇವೆ. ಈ ಗ್ರಾಮದ ಪೂರ್ವದ ಹೆಸರು ಮಾಡಿಫಳ. ಚಾಳುಕ್ಯರ ಕಾಲದಲ್ಲಿ ಮಾಡಿಫಳವು ಬಹಳ ಮುಖ್ಯಸ್ಥಾನವಾಗಿರಬೇಕು. ಮಡಿಹಾಳವಲ್ಲದೆ ಇದರ ಸುತ್ತಲಿನ ಗ್ರಾಮಗಳ ಕೆಲವು ಶಾಸನಗಳಲ್ಲಿ ಇಲ್ಲಿಯ ದೇವಾಲಯ ಮತ್ತು ಮಠದ ಪ್ರಸ್ತಾಪ ಬರುತ್ತದೆ. ಈಗಿನ ಶಂಕರಲಿಂಗ ದೇವರ ಪೂರ್ವದ ಹೆಸರು ಸ್ವಯಂಭು ಕೋಟಿಶಂಕರದೇವ. ಈ ದೇವಾಲಯವು ಕಲ್ಯಾಣಿ ಚಾಳುಕ್ಯ ಆಹವಮಲ್ಲ ಸೋಮೇಶ್ವರನ ಕಾಲದಲ್ಲಿ ಅವನ ಮಂಡಳೀಕ ನಾಗರಸನೆಂಬುವನಿಂದ ಕಟ್ಟಲಾಗಿರಬೇಕೆಂದು ನಿಂಬರ್ಗದ ಶಾಸನದಿಂದ[11] ತಿಳಿಯುತ್ತದೆ. ರಚನೆಯ ಕಾಲ ಪ್ರಾಯಃ ಕ್ರಿ. ಶ. 1044. ಇಲ್ಲಿಯ ಮಠ ಸ್ವಯಂಭೂ ಕೋಟಿಶಂಕರ ದೇವರ ಮಠವೆಂದೇ ಪ್ರಸಿದ್ಧವಾಗಿದ್ದು, ಶೈವ ಸಂಪ್ರದಾಯದ (ಕಾಳಾಮುಖ ?) ಆಚಾರ್ಯರ ವಶದಲ್ಲಿತ್ತು. ಇಲ್ಲಿನ ಶಾಸನಗಳಿಂದ ಈ ಮಠದ ನಾಲ್ಕು ತಲೆಮಾರಿನ ಗುರುಗಳ ಹೆಸರುಗಳು-ಕ್ರಮವಾಗಿ ಈಶ್ವರ, ಸರ್ವೇಶ, ಧ್ರುವೇಶ, ಸರ್ವೇಶ್ವರ-ಎಂದು ದೊರೆಯುತ್ತವೆ.

1ನೆಯ ಶಾಸನವು ಕಲ್ಯಾಣಿಯ ಚಾಳುಕ್ಯ ದೊರೆ ನಾಲ್ಮಡಿ ಸೋಮೇಶ್ವರನ ಆಳ್ವಿಕೆಯ 3ನೆಯ ವರ್ಷದ್ದು. ಶಾಸನದಲ್ಲಿ ಕೊಟ್ಟಿರುವ ತೇದಿಯ ವಿವರ. ಕ್ರೋಧಿ ಸಂವತ್ಸರದ ಅಶ್ವಯುಜ ಶುದ್ಧ 14 ಸೋಮವಾರ, ಸ್ವಾಮಿಕಣ್ಣು ಪಿಳ್ಳೆಯವರ ಪಂಚಾಂಗದ ಪ್ರಕಾರ ಕ್ರಿಸ್ತಾಬ್ದ 1184ನ ಸೆಪ್ಟಂಬರ್ 17ನೆಯ ತಾರೀಕಿಗೆ ಸರಿಯಾಗುತ್ತದೆ. ಆದರೆ ಅಂದಿನ ವಾರ ಗುರುವಾರ. ಚಾಳುಕ್ಯ ಸೋಮೇಶ್ವರನು ಕಳಚುರಿಗಳಿಂದ ರಾಜ್ಯವನ್ನು ಪುನರ್ವಶಪಡಿಸಿಕೊಳ್ಳಲು ಅನೇಕರು ಸಹಾಯಕರಾಗಿರಬೇಕು. ಬೇರೆ ಶಾಸನಗಳಿಂದ ಆ ಕಾರ್ಯದಲ್ಲಿ ವಿಶೇಷವಾಗಿ ಶ್ರಮಿಸಿದ ಬಮ್ಮಿದೇವನೆಂಬುವನ ಹೆಸರು ತಿಳಿದಿದೆ.[12] ಈ ಶಾಸನದಿಂದ ಚಾವಣಯ್ಯ

---

[10] ಪ್ರಭುದೇವರೇ ಮೊದಲಾದ ಅನುಭವ ಮಂಟಪದ ಸದಸ್ಯರು ಇಲ್ಲಿ ಕೂರುತ್ತಿದ್ದರೆಂದು ಸ್ಥಳ ಪ್ರತೀತಿ. ಮಡಿಹಾಳ ಕಲ್ಯಾಣದಿಂದ 40 ಮೈಲಿಗಿಂತ ಹೆಚ್ಚು ದೂರವಿಲ್ಲ.

[11] ಶಾಸನ ನಂ. 9

[12] SII IX i 277, 279

ದಂಡನಾಯಕನೆಂಬುವನೂ ಈ ಕಾರ್ಯದಲ್ಲಿ ಪಾಲ್ಗೊಂಡಿದ್ದನೆಂಬುದು ಇಲ್ಲಿರುವ 'ಚಾಳುಕ್ಯ ರಾಜ್ಯ ಸಮುದ್ಧರಣ' ಎಂಬ ಅವನ ಬಿರುದಿನಿಂದ ತಿಳಿಯುತ್ತದೆ. ಇದು ಹೊಸ ವಿಷಯ. ಚಂದಲದೇವಿ, ಕುಮಾರ ಪದ್ಮರಸ ದಂಡನಾಯಕ ಮತ್ತು ಮನ್ನೆಯ ಮಲ್ಲಿದೇವ ಈ ಕಾಲದ ಇತರ ಮುಖ್ಯ ವ್ಯಕ್ತಿಗಳು.[13] ಇವರು ಮಾಡಿಘಳದ ಶಂಕರ ದೇವಾಲಯಕ್ಕೆ ಆ ಊರಿನ ಸೂಳೆಗೇರಿಯ ಭೂಮಿಯನ್ನೂ ಮತ್ತು ಅನೇಕ ಆದಾಯದ ಬಾಬ್ತುಗಳನ್ನೂ ಕೊಟ್ಟರು: ದಂಡದೋಷವೆಂಬ ತಪ್ಪುಗಾಣಿಕೆ (ಗಳು), ಮಡಿವಳ (ಅಗಸ), ಸಿಪ್ಪಿಗ (ದರ್ಜಿ), ಕಂಮ್ಮಾಜಿ (ಕಮ್ಮಾರ)ರಿಂದ ಬರುವ ವೃತ್ತಿಸುಂಕಗಳು ಇಲ್ಲಿ ಹೆಸರಿಸಿರುವ ಆದಾಯದ ಮೂಲಗಳು.

2ನೆಯ ಶಾಸನ ಜೇಕಾಬಿಟ್ಟಿಯಾಗಿ ಕೋಚು ಅಕ್ಷರಗಳಲ್ಲಿ ಬರೆದಿದ್ದು, ಪಾಠದಲ್ಲಿ ಅನೇಕ ತಪ್ಪುಗಳಿವೆ. ತೇದಿಯ ವಿವರದಲ್ಲೇ ಶುಕ್ಲಪಕ್ಷದಲ್ಲಿ ಅಮಾವಾಸ್ಯೆ ಇದೆಯೆಂದು ಹೇಳಿದೆ. ಲಿಪಿರೂಪದಿಂದ ಈ ಶಾಸನ 13ನೆಯ ಶತಮಾನದ್ದೆಂದು ಹೇಳಬಹುದು. ಆಗಿನ ಕ್ರೋಧಿ ಸಂವತ್ಸರವು 1241ರಲ್ಲಿ ಬರುತ್ತದೆ. ಚಿಕ್ಕಯನ ಕಲ್ಲಯನೆಂಬುವನು ಮೇಲಾಳಿಕೆಗೆ ಸೇರಿದ ಒಂದು ಹೂದೋಟವನ್ನು ಹಣ ತೆತ್ತು ಕೊಂಡು ಶಂಕರದೇವರಿಗೆ ದಾನಮಾಡಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಇಲ್ಲಿಯ ದಾನಿ ಚಿಕ್ಕಯನ ಕಲ್ಲಯ, ಸಮೀಪದ ಝಳಕಿ ಗ್ರಾಮದ 1255ರ ಶಾಸನದಲ್ಲಿ[14] ಬರುವ ಚಿಕ್ಕಯನ ಮಗ ಕಲಯನೇ ಇರಬಹುದು.

ತೇದಿಯಿಲ್ಲದ 3ನೆಯ ಶಾಸನದಲ್ಲಿ ಮಾಡಿಘಳದ ಮಠದ ಆಚಾರ್ಯ ಸರ್ವೇಶ್ವರನು ಒಂದು ಒಡೆದ ಕೆರೆಯ ಏರಿಯನ್ನು ಸರಿಪಡಿಸಲು ಬೇಕಾದ ಮಣ್ಣನ್ನು ಎತ್ತಲು ತನಗೆ ಸೇರಿದ ಹೊಲದ ಸ್ವಲ್ಪ ಭಾಗವನ್ನು ಬಿಟ್ಟುಕೊಟ್ಟನೆಂದು ತಿಳಿಸುತ್ತದೆ. ಧರ್ಮಪ್ರಸಾರಣೆಗೆ ನೇರ ಸಂಬಂಧಪಡದ ಜನಹಿತಕಾರ್ಯಗಳಲ್ಲಿಯೂ ಮಠಗಳು ಭಾಗವಹಿಸುತ್ತಿದ್ದುವೆಂಬ ಈ ವಿಷಯ ಆಸಕ್ತಿಕರವಾದುದು. ಮುಂದಿರುವ ಪದ್ಯಭಾಗದಲ್ಲಿ ಮಂಡಳೀಕ ಆಹವಮಲ್ಲನು ಮಾಡಿಘಳದ ಆಚಾರ್ಯ ಧ್ರುವೇಶ್ವರನಿಗೆ ದಾರೇಶ್ವರ.

---

13 ಕಳಚೂರಿ ಸಂಕಮನ ಕಾಲದಲ್ಲಿ ಹರಿಹರದೇವನ ಮಗ ಮಲ್ಲಿದೇವರಸನೆಂಬ ಮಂಡಳೀಕನಿದ್ದ. (DKD, p. 488) ಆದರೆ ಇವನೇ ಮುಂದೆ ಚಾಳುಕ್ಯ ಸೋಮೇಶ್ವರನ ಆಶ್ರಯವನ್ನು ಪಡೆದಿದ್ದನೆಂಬುದಕ್ಕೆ ಸ್ಪಷ್ಟಕ್ಕೆ ಸಾಕಷ್ಟು ಆಧಾರಗಳಿಲ್ಲ. ಮೇಲೆ ಹೇಳಿದ ಬಿಮ್ಮಿದೇವನ ಮಗ ಪದ್ಮಿದೇವನು 1184ರಲ್ಲಿ ಸಿಂದವಾಡಿ ಪ್ರಾಂತ್ಯವನ್ನು ಆಳುತ್ತಿದ್ದನೆಂದು ತಿಳಿದಿದೆ. (S II IX, i 279) ಈ ಪದ್ಮಿದೇವನೂ, ಪ್ರಸಕ್ತ ಶಾಸನದಲ್ಲಿರುವ ಪದ್ಮದೇವರಸನೂ ಒಬ್ಬನೇ ವ್ಯಕ್ತಿಯಿರಬಹುದು.

14 ನಂ. 14

ದೇವಣೇಶ್ವರ, ಸಕರೇಶ್ವರ ಮತ್ತು ಭೋಗೇಶ್ವರ ದೇವಾಲಯಗಳನ್ನು ವಹಿಸಿದ ನೆಂದು ತಿಳಿಸುತ್ತದೆ. ಆ ಕಾಲದಲ್ಲಿ ಒಂದು ಮೂಲ ಮಠದ ಅಧೀನದಲ್ಲಿ ಅನೇಕ ದೇವಾಲಯುಗಳಿರುತ್ತಿದ್ದುವೆಂಬುದು ತಿಳಿದ ವಿಷಯ. ಈ ಮಾಡಿಫಳದ ದೇವಾಲಯ ಸಹ ವೇಳುಗ್ರಾಮೆಯ ಭೂಷಣೇಶ್ವರವೆಂಬ ಅದಕ್ಕೂ ಹಿರಿಯ ಸ್ಥಾನಕ್ಕೆ ಸೇರಿತ್ತೆನಿಸುತ್ತದೆ. ಇದು ಅಸ್ಪಷ್ಟ. ಈ ಪದ್ಯದಲ್ಲಿ ಹೆಸರಿಸಿರುವ ಮಂಡಳೀಕ ಆಹವಮಲ್ಲ ಆ ಪ್ರಾಂತ್ಯದ ಅಧಿಕಾರಿ. ಇವನು ಮಂಡಳೀಕ ನಾಗರಸನ ಮಗನೆಂದೂ, ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಕಾಲದಲ್ಲಿದ್ದನೆಂದೂ, ಮತ್ತು ಮಾಡಿಫಳದ ಮಠಕ್ಕೆ ದೊರೆಯಿಂದ ದಾನವನ್ನು ದೊರಕಿಸಲು ಅನುವಾದನೆಂದೂ ನಿಂಬರ್ಗದ ಶಾಸನದಿಂದ[15] ತಿಳಿಯುವುದರಿಂದ, ಈ ಶಾಸನವನ್ನು 11ನೆಯ ಶತಮಾನದ ಕೊನೆ ಅಥವ 12ರ ಆದಿಭಾಗದ್ದೆಂದು ತರ್ಕಿಸಬಹುದು. ಇಲ್ಲಿ ಬಳಸಿರುವ ಲಿಪಿ ಪ್ರಕಾರವೂ ಇದಕ್ಕೆ ಹೊಂದಿಕೊಳ್ಳುತ್ತದೆ.

4ನೆಯ ಶಾಸನದಲ್ಲಿ ಮಾಡಿಫಳದ ಆಚಾರ್ಯರ ಪರಂಪರೆ ಮತ್ತು ಅವರಲ್ಲೊಬ್ಬನಾದ ಸರ್ವೇಶ್ವರನ ಹಿರಿಮೆಯ ಕಥನವಿದೆ. ಗುರುಪರಂಪರೆಯಲ್ಲಿ ಈಶ್ವರ ಸರ್ವೇಶ್ವರ, ಧ್ರುವೇಶ್ವರ ಮತ್ತು ಸರ್ವೇಶ್ವರ ಕ್ರಮವಾಗಿ ಬರುತ್ತಾರೆ. ಶಾಸನದಲ್ಲಿ ತೇದಿಯ ವಿವರವಿಲ್ಲ. ಆದರೆ ಧ್ರುವೇಶ್ವರನ ಹೆಸರು ನಿಂಬರ್ಗದ ಶಾಸನದಲ್ಲಿ 1099ರಲ್ಲಿಯೂ,[16] ಮತ್ತು ಅದೇ ಸ್ಥಳದ 1136 ಇನ್ನೊಂದು ಶಾಸನದಲ್ಲಿಯೂ[17] ದೊರಕುವುದರಿಂದ, ಈ ಶಾಸನ ಅವನ ಶಿಷ್ಯ ಸರ್ವೇಶ್ವರನ ಕಾಲದಲ್ಲಿ ಅಂದರೆ 12ನೆಯ ಶತಮಾನದಲ್ಲಿ 1136ರ ನಂತರ ಹುಟ್ಟಿರಬಹುದೆಂದು ತೀರ್ಮಾನಿಸಬಹುದು. ಪ್ರಸಕ್ತ ಗೀಚಿರುವ ಎರಡು ಸಾಲುಗಳಲ್ಲಿ ಆ ಊರ ದೇವರ ಕೇರಿಯ ಜನರು ತೆರುತ್ತಿದ್ದ ಆವಟ, ಅಂತರಿಕೆ. ತಿಪ್ಪೆ ಸುಂಕವನ್ನೂ, ನಂದಾದೀಪಕ್ಕೆ ಗಾಣವಾಯಿಲೆ (ಎಣ್ಣೆಗಾಣದ ಮೇಲಿನ ಸುಂಕ) ಯನ್ನೂ ದೇವಸ್ಥಾನಕ್ಕೆ ಸಲ್ಲಿಸಿದಂತೆ ತಿಳಿಸಿದೆ

ತೇದಿಯಿಲ್ಲದ 5ನೆಯ ಶಾಸನ ಸಹ ಲಿಪಿ ದೃಷ್ಟಿಯಿಂದ 12ನೆಯ ಶತಮಾನದ್ದು. ಇದರಲ್ಲಿ ಅದೇ ಊರಿನ ಹೊಲಕೇರಿಯ ಜನರು ತೆರುತ್ತಿದ್ದ ಹುರಿಕಾಯ, ಆವಟ, ಅಂತರಿಕೆ, ಗಾಣಾಯಿಲೆ ಮತ್ತು ತಿಪ್ಪೆ ಸುಂಕವನ್ನು ಬಿಟ್ಟುಕೊಟ್ಟ ವಿಷಯವಿದೆ.

ಭೂಮಿ ದಾನವನ್ನು ಸೂಚಿಸುವ, ತೇದಿಯಿಲ್ಲದ 6ನೆಯ ಶಾಸನವು ಲಿಪಿ ಪ್ರಕಾರದಿಂದ 13ನೆಯ ಶತಮಾನಕ್ಕೆ ಸೇರುತ್ತದೆ.

7ನೆಯ ಶಾಸನ ವಿಚಿತ್ರ ರೀತಿಯದು. ಪ್ರಾಯಃ ಒಂದು ಮಠದ ಒಟ್ಟು ಆಸ್ತಿ ಮತ್ತು ಆದಾಯದ ಹಕ್ಕುಗಳ ಪಟ್ಟಿ ಇದರಲ್ಲಿದೆ. ಪಂಕ್ತಿ 11–12ರಲ್ಲಿ ಬರುವ ಸೆಳ್ಳು ಏನೆಂದು ತಿಳಿದಿಲ್ಲ. ಈ ಶಾಸನ 13ನೆಯ ಶತಮಾನದ ಲಿಪಿಯಲ್ಲಿದೆ.

---

15 ನಂ. 9

16 ಮೇಲಿನದೇ

17 ಈ ಶಾಸನವು ಎಪಿಗ್ರಾಫಿಯಾ ಇಂಡಿಕಾದ 38 ನೆಯ ಸಂಪುಟದಲ್ಲಿ ಪ್ರಕಟವಾಗಲಿದೆ.

8ನೆಯ ಶಾಸನದಲ್ಲಿ ನಾಯಕ ಲಕ್ಷ್ಮೀದೇವನ ಅರಮನೆಯ ಬಡಿಗಾರ ವಾಯಿದೇವನೆಂಬುವನು ಬಿನ್ನಪ ಮಾಡಲಾಗಿ, ಅರಸನು ದೇವರಿಗೆ ಒದಗಿಸಿದ ದಾನವನ್ನು ಸೂಚಿಸುತ್ತದೆ. ಇಲ್ಲಿ ದಾನದ ವಿವರವಿಲ್ಲದುದರಿಂದ. ಈ ಕಲ್ಲು ಮೊದಲು ಯಾವುದೋ ಹೊಲದಲ್ಲಿದ್ದು. ಆ ಹೊಲದ ದಾನವನ್ನು ಸೂಚಿಸುತ್ತಿರಬೇಕೆಂದು ಕಾಣುತ್ತದೆ. ಇದರ ಲಿಪಿ 13ನೆಯ ಶತಮಾನದ್ದು. ಶಾಸನದಲ್ಲಿ ತೇದಿಯಿಲ್ಲ.

9ನೆಯ ಶಾಸನವಿರುವ ನಿಂಬರ್ಗ ಆಲಂದ್‌ನಿಂದ ಸುಮಾರು 10 ಮೈಲಿ ದಕ್ಷಿಣದಲ್ಲಿದೆ. ಈ ಊರಿನಲ್ಲಿ ಚಾಳುಕ್ಯರ ಕಾಲದ ಕೋಟೆ, ದೇವಾಲಯಗಳು ಮತ್ತು ಇತರ ಅವಶೇಷಗಳಿವೆ. ಪ್ರಸಕ್ತ ಶಾಸನವು ಅಲ್ಲಿಯ ಈಶ್ವರ ಲಿಂಗ ದೇವಾಲಯದ ನವರಂಗದಲ್ಲಿ ಎರಡು ಭಾಗವಾಗಿ (ಅ ಮತ್ತು ಆ) ಬಿದ್ದಿದೆ. ಈ ತುಂಡುಗಳು ಸುಮಾರು ವೃತ್ತಾಕಾರವಾಗಿದ್ದು. ಎರಡರಲ್ಲೂ ಮೇಲು ಮತ್ತು ಕೆಳಭಾಗಗಳಲ್ಲಿ ಕೆಲವೇ ಅಕ್ಷರಗಳೂ ಮಧ್ಯದಲ್ಲಿ ಹೆಚ್ಚು ಅಕ್ಷರಗಳೂ ದೊರಕುತ್ತವೆ. ಆದರೂ ಈಗ ಉಳಿದಿರುವಷ್ಟರಲ್ಲೇ ಅನೇಕ ವಿಷಯಗಳ ಪರಿಚಯವಾಗುತ್ತದೆ. ಈ ಶಾಸನದ ಪಾಠದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗ ಶಕವರ್ಷ 968ರ ಉತ್ತರಾಯಣ ಸಂಕ್ರಮಣದಂದು ಅಂದರೆ ಕ್ರಿಸ್ತಾಬ 1046ರ ಡಿಸೆಂಬರ್ 27ರಲ್ಲಿ ಹೊರಡಿಸಲಾದುದು. ಎರಡನೆಯ ಭಾಗ ಚಾಳುಕ್ಯ ವಿಕ್ರಮ ವರ್ಷದ 23ನೆಯ ಬಹುಧಾನ್ಯ ಸಂವತ್ಸರದ ಪುಷ್ಯಮಾಸದ ಅಮಾವಾಸ್ಯೆ ಅಂದರೆ ಕ್ರಿಸ್ತಾಬ್ದ 1098ರ ಜನವರಿ 5ನೆಯ ತಾರೀಕಿನಲ್ಲಿ ಹುಟ್ಟಿದುದು. ಆದರೆ ಸ್ವಾಮಿ ಕಣ್ಣುಪಿಳ್ಳೆಯವರ ಪಂಚಾಂಗದ ಪ್ರಕಾರ ಅಂದು ಮಂಗಳವಾರ, ಶಾಸನದಲ್ಲಿರುವಂತೆ ಗುರುವಾರವಲ್ಲ. ಅಲ್ಲದೆ ಶಾಸನದಲ್ಲಿ ಆ ದಿನ ಸೂರ್ಯಗ್ರಹಣವಿತ್ತೆಂದು ಹೇಳಿದ್ದರೂ ಮೇಲಿನ ಪಂಚಾಂಗದಲ್ಲಿ ಅದರ ಸೂಚನೆಯಿಲ್ಲ. ಶಾಸನದ ಮೊದಲ ಭಾಗ ಚಾಳುಕ್ಯ ಆಹವಮಲ್ಲ ಸೋಮೇಶ್ವರನ ಕಾಲದಲ್ಲಿ ಬೀಳುತ್ತದೆ. ಇದರಲ್ಲಿ ಮೊದಲು ದೇವಪ್ರಾರ್ಥನೆಯಿದ್ದು (ಅ, ಸಾಲು 1), ನಂತರ ಚಾಳುಕ್ಯರ ಮಾಮೂಲು ವಂಶಾವಳಿ ಇದೆ (ಅ. ಸಾಲು 2–14) ಇದರಲ್ಲಿ ಆಹವಮಲ್ಲನು ಚೋಳ, ಲಾಟ, ನೇಪಾಳರ ಮೇಲೆ ಸಾಧಿಸಿದ್ದ ಹಿರಿಮೆಯ ಪ್ರಸ್ತಾಪವಿದೆ (ಅ, ಸಾಲು 12): ಅ. 14ನೆಯ ಸಾಲಿನಲ್ಲಿ ಅಲಂದೆ ನಾಡಿನ ವರ್ಣನೆಯೂ ಮುಂದೆ ಅಲ್ಲಿಯ ಮಂಡಳೀಕ ಬಿಜ್ಜ (ಅ. ಸಾಲು 16–18) ಮತ್ತು ಮಾಡಿಫಳದ ಪ್ರಭು ನಾಗನ ಹೊಗಳಿಕೆ ಇದೆ. ಈ ನಾಗನು ತ್ರೈಲೋಕ್ಯಮಲ್ಲನ ಮಾತಿನಂತೆ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡಿದ್ದನೆಂದೂ, ಮಾಡಿಫಳದಲ್ಲಿ ಏನನ್ನೋ ಮಾಡಿಸಿದನೆಂದೂ ತಿಳಿಸುತ್ತದೆ. ಇಲ್ಲಿ ಬರುವ ವರ್ಣನೆಯ ಭಾಗದಿಂದ ಈತ ನಿರ್ಮಿಸಿದುದು ಮಾಡಿಫಳದ ಶಂಕರದೇವಾಲಯವೆಂದು ಊಹಿಸಬಹುದು. ಮುಂದಿನ ಗದ್ಯಭಾಗದಲ್ಲಿ ಈ ನಾಗನ ಬಿನ್ನಪದಂತೆ ಆಹವಮಲ್ಲನು ತಾನು ತುಲಾಪುರುಷ ನೆರವೇರಿಸಿದ ಸಂದರ್ಭದಲ್ಲಿ ಮಾಡಿಫಳದ ದೇವರಿಗಾಗಿ

ಅಲಂದ 1,000 ಪ್ರಾಂತ್ಯದ ಗೋಂಕನಾಡಿನಲ್ಲಿ ಒಂದು ಹಳ್ಳಿಯನ್ನು ದಾನ ಮಾಡಿದ ವಿಷಯವಿದೆ. (ಅ, ಸಾಲು 1–10) ಅದೇ ಸಂದರ್ಭದಲ್ಲಿ ಮಹಾಮಂಡಳೇಶ್ವರ ಬಿಬ್ಬರಸ ಸಹ ಏನನ್ನೋ ದಾನಕೊಟ್ಟನು. ಈ ಧರ್ಮದ ವಿವರ ಅದ 11–18 ಸಾಲುಗಳಲ್ಲಿದೆ, ಇಲ್ಲಿ ಬರುವ ಕೌಳ್ಗಿ ಮತ್ತು ಜಳಕಿ, ಮಡಿಹಾಳದ ಹತ್ತಿರದಲ್ಲಿರುವ ಕೌಳ್ಗಿ ಮತ್ತು ಝಳ್ಕಿ ಗ್ರಾಮಗಳೆಂದು ಗುರುತಿಸಬಹುದು.

ಅದ 18 ನೆಯ ಸಾಲಿನಿಂದ 1098 ರ ಎರಡನೆಯ ಭಾಗ ಪ್ರಾರಂಭವಾಗುತ್ತದೆ. ಮೊದಲೊಂದು ಪದ್ಯದಲ್ಲಿ ಚಾಳುಕ್ಯ ವಿಕ್ರಮಾದಿತ್ಯನನ್ನು ಹೊಗಳಿ ನಂತರ ತೇದಿಯ ವಿವರಗಳೊಡನೆ, ವಿಕ್ರಮಾದಿತ್ಯನು ನರ್ಮದಾ ತೀರದಲ್ಲಿ ತುಳಾಪುರುಷವನ್ನು ನೆರವೇರಿಸಿದಾಗ, ಮೇಲಿನ ನಾಗರಸನ ಮಗ ಆಹವಮಲ್ಲನೆಂಬುವನ ಬಿನ್ನಹದಂತೆ ಕೆಲಭೂಮಿಯನ್ನು ಮಾಡಿಹಳದ ಶಂಕರದೇವರಿಗೆ ದಾನ ಮಾಡಲಾಯಿತೆಂದು ಹೇಳಲಾಗಿದೆ. (ಅ. ಸಾಲು 18—27). ಅದೇ ಸಂದರ್ಭದಲ್ಲಿ ಮಹಾಮಂಡಳೇಶ್ವರ ಬಿಬ್ಬರಸನ ಮಗ (ಅಥವ ಆಶ್ರಿತ) ಗೋಂಕರಸನೂ ಕೆಲವು ಭೂಮಿಗಳನ್ನು ಬಿಟ್ಟನು. ಇತರ ರಾಜ್ಯಾಧಿಕಾರಿಗಳೂ ತಮ್ಮ ಕೆಲವು ಆದಾಯಗಳನ್ನು ದಾನವಾಗಿ ಕೊಟ್ಟರು. ಆಡಳಿತದ ಯಾವ ಅಧಿಕಾರಿಗಳು ಯಾವ ತೆರಿಗೆ ಅಥವ ಆದಾಯದ ಹಕ್ಕನ್ನು ಅನುಭವಿಸುತ್ತಿದ್ದರೆಂದು ಈ ಭಾಗದಲ್ಲಿ ಅವರ ದಾನವಿತ್ತ ವಿವರಗಳಿಂದ ತಿಳಿಯಬಹುದಾಗಿದೆ. ಅದರ ಪ್ರಕಾರ ನಾಡಮೇಲಾಳ್ಕೆಯ ಅರಸು ಬಿಟ್ಟದ್ದು ತಮ್ಮ ಕೋರಿಕೆ. ದಂಡ, ದೋಷ; ಮನ್ನೆಯರು ಬಿಟ್ಟಿದ್ದು ತಮ್ಮ ಕಾಣಿಕೆ; ಪ್ರಭುತ್ವದವರು (ಊರ ಪ್ರಭು) ಬಿಟ್ಟಿದ್ದು ತಮ್ಮ ಅಷ್ಟವರ್ಗದರುವಣ. ಬನಬನಿ. ಕೊನೆಯ ಭಾಗದಲ್ಲಿ ದಾನವನ್ನು ಸ್ವೀಕರಿಸಿ ಅನುಭವಿಸುವ ಮಠಾಚಾರ್ಯರು ಮತ್ತು ದೇವಾಲಯದ ಪರಿಚಾರಕ ವರ್ಗದವರ, ಈ ಸಂಬಂಧದ ಹಕ್ಕುಬಾಧ್ಯತೆಗಳೇನು ಎಂಬುದನ್ನು ವಿವರಿಸಲಾಗಿದೆ. ಇಲ್ಲಿ ಮಠಾಧಿಪತಿಗಳು ಸಹ ತಪ್ಪಿ ನಡೆದರೆ ಶಿಕ್ಷೆಗೆ ಒಳಗಾಗುತ್ತಿದ್ದರೆಂದು ತಿಳಿಸಿರುವುದು ಗಮನಾರ್ಹ ವಿಷಯ. ದಾನಭೂಮಿಯ ಮೇರೆ ವಿವರದಲ್ಲಿ ಹೆಸರಿಸಲಾಗಿರುವ ಕುಡಿಕಿಗೆ. ಸಿರಿಊರು. ಮತ್ತು ವೆಳಸಂಗವಿ ಮಡಿಹಾಳದ ಹತ್ತಿರದಲ್ಲಿರುವ ಈಗಿನ ಕುಡ್ಕಿ, ಸಿರೂರ್ ಮತ್ತು ಎಳಸಂಗಿ ಗ್ರಾಮಗಳು.

10 ನೆಯ ಶಾಸನವಿರುವ ಜವಳಿ ಅಲಂದದಿಂದ ಸುಮಾರು 6 ಮೈಲಿ ದಕ್ಷಿಣಕ್ಕಿದೆ. ಇಲ್ಲಿಯ ಶಾಸನವು ಒಂದು ಹೊಲದಲ್ಲಿದ್ದು. ಆ ಹೊಲವು ವಾಮರಸನೆಂಬ ಒಬ್ಬ ದಂಡನಾಯಕನ ವೃತ್ತಿಯಾಗಿತ್ತೆಂದು ತಿಳಿಸುತ್ತದೆ. ಅಕ್ಷರರೂಪದಿಂದ 12-13 ನೆಯ ಶತಮಾನದ್ದೆಂದು ಹೇಳಬಹುದು.

ದೇವಂತಿ ಅಲಂದ್‌ನಿಂದ ಸುಮಾರು 5 ಮೈಲಿ ದಕ್ಷಿಣದಲ್ಲಿದೆ. ಇಲ್ಲಿನ ತುಂಡು ಶಾಸನವು 11–12 ನೆಯ ಶತಮಾನದ ಲಿಪಿಯಲ್ಲಿದೆ.

ಅಲಂದದಿಂದ 9 ಮೈಲಿ ಉತ್ತರಕ್ಕಿರುವ ಖಜೂರಿ ಗ್ರಾಮದಲ್ಲಿರುವ 12 ನೆಯ ಶಾಸನದ ಕಲ್ಲು ಮೆಟ್ಟಿಲು ಹಾಸಾಗಿದ್ದು, ಜನರ ತುಳಿತದಿಂದ ಪೂರ್ಣ ಸವೆದುಹೋಗಿದೆ. ಆದರೆ ಒಳ ಅಂಚಿನಲ್ಲಿ ಮಾತ್ರ ಕೆಲವು ಅಕ್ಷರಗಳು ಉಳಿದಿದ್ದು, ಇದರಿಂದ ಆ ಶಾಸನ ಕಲ್ಯಾಣಿಯ ಚಾಳುಕ್ಯ ದೊರೆ ಭೂಲೋಕಮಲ್ಲನ ಕಾಲದ್ದೆಂದು ತಿಳಿಯುತ್ತದೆ. ಇದರ ಕಾಲ 1127–28.

ಪಡಸಾವಳಿ ಅಲಂದ್‌ನಿಂದ ಸುಮಾರು 8 ಮೈಲಿ ಪಶ್ಚಿಮದಲ್ಲಿರುವ ಗ್ರಾಮ. ಇಲ್ಲಿ ಚಾಳುಕ್ಯರ ಕಾಲದ ಅನೇಕ ದೇವಾಲಯಗಳಿವೆ. ಅಲ್ಲಿಯ ಕಲ್ಲೇಶ್ವರ ಗುಡಿಯ ಮುಂದಿರುವ ಪ್ರಸಕ್ತ ಶಾಸನವು ಬಹಳ ಕಚ್ಚಾಗಿದೆ. ಇದು ಚಾಳುಕ್ಯ ವಿಕ್ರಮಾದಿತ್ಯನ ಕಾಲದ ಶಾಸನ. ಅಲ್ಲಿರುವ ತೇದಿಯ ವಿವರ ಕ್ರಿಸ್ತಾಬ್ದ 1110 ರ ಫೆಬ್ರುವರಿ 15 ಕ್ಕೆ ಹೊಂದುತ್ತದೆ. ಆದರೆ ವಾರ ವ್ಯತ್ಯಾಸವಿದೆ. ಪಂಚಾಂಗದ ಪ್ರಕಾರ ಅಂದು ಮಂಗಳವಾರ. ಶಾಸನದಲ್ಲಿ ಶುಕ್ರವಾರವೆಂದಿದೆ. ಈ ಶಾಸನದಿಂದ ಆ ಊರಿನ ಹಳೆಯ ಹೆಸರು ಪಟ್ಟಸಾವಳಿಗೆಯೆಂದೂ, ಈ ಶಾಸನಕಾಲಕ್ಕಾಗಲೇ ಅಲ್ಲಿಯ ಕಲ್ಲೇಶ್ವರ ಗುಡಿಯು ಅಸ್ತಿತ್ವದಲ್ಲಿತ್ತೆಂದೂ ತಿಳಿಯುತ್ತದೆ. ಈ ಕಲ್ಲೇಶ್ವರ (ಶಾಸನದಲ್ಲಿ ಕಲಿದೇವೇಶ್ವರ) ದೇವರಿಗೆ ಬಿಟ್ಟ ದತ್ತಿಗಳ ವಿವರ ನೀಡುವುದೇ ಶಾಸನದ ಉದ್ದೇಶ. ಶಾಸನದಲ್ಲಿ ಬಾಣಸವೆರ್ಗ್ಗಡೆ ನಾರಣದೇವ, ಮೊರಂಬ 80 ರ ಮನ್ನೆಯ ಮಾಗರಸ, ದುಮ್ಮರಸ ಮುಂತಾದ ಪ್ರಮುಖರ ಹೆಸರಿವೆ. ಮೊರಂಬ ಈಗಿನ ಉಸ್ಮಾನಾಬಾದ್ ಜಿಲ್ಲೆಯಲ್ಲಿರುವ ಮುರವ್ ಗ್ರಾಮ.

14 ನೆಯ ಶಾಸನವು ಅಲಂದದಿಂದ ಸುಮಾರು 10 ಮೈಲಿ ನೈಋತ್ಯಕ್ಕಿರುವ ಹಿರೇರಝಳಕಿ ಗ್ರಾಮದಲ್ಲಿದೆ. ಈ ಶಾಸನ ಸೇವುಣ ಕನ್ನರದೇವನ 8 ನೆಯ ವರ್ಷದ ಆನಂದ ಸಂವತ್ಸರದಲ್ಲಿ, ಅಂದರೆ ಕ್ರಿಸ್ತಾಬ್ದ 1254 ರಲ್ಲಿ, ಹುಟ್ಟಿದುದು, ಚಿಕಯನ ಕಲಿದೇವನೆಂಬುವನು ದೇವರಿಗಿತ್ತ ದಾನದ ವಿಷಯ ಇದರಲ್ಲಿದೆ. 13 ನೆಯ ಶತಮಾನದ ಈ ಶಾಸನದಲ್ಲಿ ಇಲ್ಲಿಯ ದೇವರನ್ನು ವಿಸಪ್ರಹಾರಿ ಬೋಗೇಸ್ವರ ಎಂದು ಸಂಬೋಧಿಸಿರುವುದು ಆಸಕ್ತಿಕರವಾಗಿದೆ. ಈಗಲೂ, ಇಲ್ಲಿಯ ಭೋಗೇಶ್ವರ ದೇವಾಲಯದ ಸುತ್ತಿನಲ್ಲೆಲ್ಲೂ ಹಾವು ಕಚ್ಚುವುದಿಲ್ಲ, ಬೇರೆಡೆ ಹಾವು ಕಡಿದವರು ಇಲ್ಲಿ ಬಂದು ತೀರ್ಥ ಸ್ವೀಕರಿಸಿದರೆ ತತ್‌ಕ್ಷಣ ಗುಣವಾಗುವರು ಎಂದು ಸ್ಥಳನಂಬಿಕೆಯಿದೆ. ಶಾಸನದ ಬರಹದಲ್ಲಿ ಅನೇಕ ತಪ್ಪುಗಳಿವೆ,

ತಡಕಲ್ ಅಲಂದದಿಂದ ಸುಮಾರು 5 ಮೈಲಿ ಈಶಾನ್ಯಕ್ಕಿರುವ ಗ್ರಾಮ. ಇಲ್ಲಿ ಖಂಡರಾಯ ಎಂದು ಪೂಜಿಸಲಾಗುವ ಒಂದು ಕಲ್ಲಿನ ಮೇಲೆ 15 ನೆ ನಂಬರಿನ ಶಾಸನವಿದೆ. ಇದು 11–12 ನೆಯ ಶತಮಾನದ ಸುಂದರವಾದ ದುಂಡು ಕನ್ನಡ ಅಕ್ಷರದಲ್ಲಿ ತತ್ಕಾಲೀನ ಭಾಷೆಯಲ್ಲಿ ಬರೆಯಲಾಗಿರುವ ಶಾಸನ. ಆದರೆ ಶಾಸನ

ದಲ್ಲಿ ಹೆಸರಿಸಿರುವ ರಾಜರು ರಾಷ್ಟ್ರಕೂಟ ವಂಶದ ಕೃಷ್ಣ ಮತ್ತು ಅಮೋಘವರ್ಷ. ಇಲ್ಲಿರುವ ತೇದಿ ಶಕವರ್ಷ 651, ಅಂದರೆ ಕ್ರಿಸ್ತಾಬ್ದ 729–ಇದಾದರೋ ಬಾದಾಮಿ ಚಾಳುಕ್ಯರ ಕಾಲದಲ್ಲಿ ಬೀಳುತ್ತದೆ. ಬಾದಾಮಿ ಚಾಳುಕ್ಯರ ಕಾಲದ ತೇದಿ. ರಾಷ್ಟ್ರಕೂಟ ಅರಸರ ಹೆಸರುಗಳು, ಮತ್ತು ಕಲ್ಯಾಣಿ ಚಾಳುಕ್ಯರ ಕಾಲದ ಲಿಪಿ, ಈ ಅಸಮಂಜಸ ಅಂಶಗಳು ಒಂದೇ ಶಾಸನದಲ್ಲಿರುವುದರಿಂದ, ಇದು 11-12 ನೆಯ ಶತಮಾನದಲ್ಲಿ ಹುಟ್ಟಿದ ಒಂದು ಖೋಟಾ ಶಾಸನವಿರಬೇಕು. ಕೆಲವೊಮ್ಮೆ ಅಪರೂಪವಾಗಿ ಹಳೆಯ ಶಾಸನಗಳನ್ನು ಅನಂತರ ಕಲ್ಲಿನ ಮೇಲೆ ಸಹ ಪ್ರತಿಮಾಡುವುದು ರೂಢಿಯಿದ್ದರೂ, ಇಲ್ಲಿ ಉಪಯೋಗಿಸಿರುವ ಭಾಷಾರೂಪ ಮತ್ತು ಬಿರುದಾವಳಿಗಳು ಈ ಊಹೆಗೆ ಆಸ್ಪದ ಕೊಡುವುದಿಲ್ಲ. ಆದರೆ ಸುಮಾರು 200–300 ವರ್ಷ ಹಿಂದಿನ ಚಾರಿತ್ರಿಕ ಅಂಶಗಳು, ರಾಷ್ಟ್ರಕೂಟ ರಾಜರ ಹೆಸರು, ಅವರ ರಾಜಧಾನಿ ಇತ್ಯಾದಿಯಾಗಿ ಇನ್ನೂ ಜನರ ಜ್ಞಾಪಕದಲ್ಲಿದ್ದಿರಬೇಕೆಂದು ಇದರಿಂದ ತಿಳಿಯಬಹುದಾಗಿದೆ. ಆಗಿನ ಕಾಲದಲ್ಲೂ ಹಳೆಯ ದಾಖಲೆಗಳನ್ನು ಉಳಿಸಿಕೊಂಡು ಬರುವ ಪದ್ಧತಿ ಏನಾದರೂ ಇದ್ದಿತೋ ಏನೋ ? ಶಾಸನದಲ್ಲಿ ಪಿರಿಯ ತಡಕಲ್ಲ ಬಳ್ಳೇಶ್ವರ ದೇವರಿಗೆ ಕೊಟ್ಟ ಭೂಮಿದಾನದ ವಿಷಯವಿದೆ.

ಅದೇ ಗ್ರಾಮದ ಶಾಂತಿನಾಥ ಬಸದಿಯಲ್ಲಿ ಅನೇಕ ಚಾಳುಕ್ಯ ಶೈಲಿಯ ವಿಗ್ರಹಗಳೂ, ಭವ್ಯರು ಕೊಟ್ಟ ಸಣ್ಣ ಜಿನ ಬಿಂಬಗಳೂ ಇವೆ. ಇವುಗಳಲ್ಲಿ ಒಂದು ಚಿಕ್ಕ ಕಂಚಿನ ಜಿನ ಬಿಂಬದ ಪೀಠದ ಮೇಲಿರುವ ತೇದಿಯಿಲ್ಲದ 16ನೆಯ ಶಾಸನವನ್ನು ಲಿಪಿ ರೂಪದಿಂದ 16–17ನೆಯ ಶತಮಾನದ್ದೆಂದು ಹೇಳಬಹುದು. ಇದರಲ್ಲಿ ಬದಾವೆಯ ಮಲ್ಲಿಸೆಟ್ಟಿಯೆಂಬುವನು ಅದನ್ನು ಮಾಡಿಸಿಕೊಟ್ಟನೆಂದು ಹೇಳಿದೆ. ಬದಾವೆ ಈಗಿನ ಬಿಜಾಪುರ ಜಿಲ್ಲೆಯಲ್ಲಿರುವ ಬಾದಾಮಿ. ಬರಹವಿರುವ ಇನ್ನೆರಡು ವಿಗ್ರಹಗಳು ಅಮೃತ ಶಿಲೆಯವು. 17ನೆಯ ಶಾಸನವು ಅವುಗಳಲ್ಲೊಂದಾದ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲೆ ಇದೆ. ಇಲ್ಲಿರುವ ತೇದಿಯ ವಿವರ ಕ್ರಿಸ್ತಾಬ್ದ 1601ರ 13ನೆಯ ಏಪ್ರಿಲ್‌ಗೆ ಸರಿಹೊಂದುತ್ತದೆ. ಆದರೆ ವಾರ ಕೊಡುವುದಿಲ್ಲ. ಈ ಶಾಸನದಲ್ಲಿ ಗಜಪತಿವಾದಿವಿದ್ಯಾ … ಶಿಷ್ಯ ಚಂದ್ರಕೀರ್ತಿಯ ಹೆಸರಿದೆ.

ನಾಗರೀ ಲಿಪಿಯ ಬರಹವಿರುವ ಎರಡನೆಯ ಅಮೃತಶಿಲಾ ಬಿಂಬದ ಶಾಸನ ಸಂವತ್ 1549ರದ್ದು, ಅಂದರೆ 1491–92ನೆಯ ಇಸವಿಯದು. ಇದು ಪ್ರಾಯಶಃ ಮೂಲಸಂಘದ ಭಾನುಚಂದ್ರ ದೇವನ ಕಾಣಿಕೆ.

ಹವ್ಯಕ ಕನ್ನಡದಲ್ಲಿ ಅನುನಾಸಿಕೀಕರಣ*

ಕೃಷ್ಣ ಪರಮೇಶ್ವರ ಭಟ್ಟ

0. ಹವ್ಯಕ ಕನ್ನಡವು ಕನ್ನಡದ ಒಂದು ಸಾಮಾಜಿಕ ಉಪಭಾಷೆ. ಈ ಉಪಭಾಷೆಯನ್ನಾಡುವ ಹವ್ಯಕ ಬ್ರಾಹ್ಮಣರು ಹೆಚ್ಚಾಗಿ ಉತ್ತರಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಶಿವಮೊಗ್ಗ ಹಾಗೂ ಕೊಡಗು ಜಿಲ್ಲೆಯ ಕೆಲವು ಭಾಗಗಳಲ್ಲಿಯೂ ಈ ಜನಾಂಗದವರಿದ್ದಾರೆ.

ಪ್ರಸ್ತುತ ಲೇಖನದಲ್ಲಿ ಮುಖ್ಯವಾಗಿ ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಪ್ರಚಲಿತವಿರುವ ಈ ಉಪಭಾಷೆಯನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ.

1. ಅನುನಾಸಿಕೀಕರಣವು ಹವ್ಯಕ ಕನ್ನಡದಲ್ಲಿ ಎದ್ದು ತೋರುವ ಒಂದು ಲಕ್ಷಣ. ಕನ್ನಡದ ಇತರ ಉಪಭಾಷೆಗಳಲ್ಲಿರುವುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇದು ಈ ಉಪಭಾಷೆಯಲ್ಲಿದೆ. ಆದರೆ ಈ ಉಪಭಾಷೆಯಲ್ಲಿಯೂ ಇದರ ಪ್ರಮಾಣ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳುತ್ತದೆ. ಉದಾಹರಣೆಗೆ ಪಶ್ಚಿಮ ಕರಾವಳಿಯಲ್ಲಿಯ ಹವ್ಯಕ ಕನ್ನಡದಲ್ಲಿಯದಕ್ಕಿಂತ ಸಿರ್ಸಿ–ಸಿದ್ದಾಪುರ ತಾಲ್ಲೂಕುಗಳಲ್ಲಿಯ ಈ ಉಪಭಾಷೆಯಲ್ಲಿ ಅನುನಾಸಿಕೀಕರಣದ ಪ್ರಮಾಣ ಹೆಚ್ಚಾಗಿದೆ. ಸಾಗರ ತಾಲ್ಲೂಕಿನಲ್ಲಿ ಇದರ ಪ್ರಮಾಣ ತುಲನಾತ್ಮಕವಾಗಿ ಇನ್ನೂ ಹೆಚ್ಚು. ಆದರೆ ಸಾಕ್ಷರತೆ ಹೆಚ್ಚಿದಂತೆ ಇದು ಕಡಿಮೆಯಾಗುತ್ತಿದೆ.

---

* ಆಸ್ಯಧ್ವನಿಗಳಾದ 'ಕ' 'ಬ' 'ಯ' ಮುಂತಾದುವುಗಳನ್ನು ಉಚ್ಚರಿಸುವಾಗ ಅಲಿಜಿಹ್ವೆ (Uvula)ಯು ನಾಸಾದ್ವಾರವನ್ನು ಮುಚ್ಚಿರುತ್ತದೆ. ಹಾಗೆ ಸಂಪೂರ್ಣವಾಗಿ ಮುಚ್ಚದೆ ಆಸ್ಯಮಾರ್ಗ ಹಾಗೂ ನಾಸಾದ್ವಾರಗಳ ನಡುವೆ ಅಲಿಜಿಹ್ವೆಯು ನಿಂತಾಗ ನಿಶ್ವಾಸದ ವಾಯುವಿನ ಕೆಲಭಾಗ ಮೂಗಿನ ಮೂಲಕ ಬಂದು ಮೇಲೆ ಹೇಳಿದ ಧ್ವನಿಗಳು ಮೂಗಿನಲ್ಲಿ ಉಚ್ಚರಿಸಲ್ಪಟ್ಟಂತೆ ಕೇಳುತ್ತವೆ. ಈ ಧ್ವನಿಗಳನ್ನು 'ಅನುನಾಸಿಕೀಕೃತ ಧ್ವನಿ' ಗಳೆಂದು ಕರೆಯುತ್ತಾರೆ; ಹಾಗೂ ಈ ರೀತಿಯ ಉಚ್ಚಾರಣಾ ಕ್ರಮಕ್ಕೆ 'ಅನುನಾಸಿಕೀಕರಣ' (Nasalization) ಎಂದು ಹೆಸರು. ರೂಢಿಯ ಮಾತಿನಲ್ಲಿ ಹೇಳುವುದಾದರೆ ಇದು 'ಮೂಗಿನಲ್ಲಿ ಮಾತನಾಡುವ ರೀತಿ'. ಅನುನಾಸಿಕೀಕೃತವಾದ 'ಕ' 'ಬ' ಮೊದಲಾದುವುಗಳನ್ನು 'ಕ̃' 'ಬ̃' ಎಂದು ಗುರುತಿಸುತ್ತಾರೆ.

ಹವ್ಯಕ ಕನ್ನಡದಲ್ಲಿಯ ಅನುನಾಸಿಕೀಕರಣವು ಇಂದು ಬಹು ಮಟ್ಟಿಗೆ ಸ್ವಚ್ಛಂದ ಗುಣವುಳ್ಳದ್ದಾಗಿದೆ (Free variant). ಕೆಲವು ಕಡೆ ಧ್ವನಿಮದ ಸ್ಥಾನ (Phonemic State) ವನ್ನೂ ಪಡೆದುಕೊಂಡಿದೆ. ಧ್ವನಿಮದ ಸ್ಥಾನವನ್ನು ಪಡೆದುದು ಇತ್ತೀಚಿನ ಬೆಳವಣಿಗೆಯೆಂದು ತೋರುತ್ತದೆ. ಮೊದಮೊದಲು ಅನುನಾಸಿಕೀಕರಣವು ಈ ಉಪಭಾಷೆಯ ಒಂದು ಸಾಮಾನ್ಯ ಲಕ್ಷಣವಾಗಿದ್ದು, ನಂತರ ಒಂದು ಕಡೆ ಸ್ವಚ್ಛಂದ ಪ್ರಸಾರದ ಲಕ್ಷಣವನ್ನೂ ಇನ್ನೊಂದೆಡೆ ಧ್ವನಿಮದ ಸ್ಥಾನವನ್ನೂ ಪಡೆಯಲು ಈ ಭಾಷೆಯ ಶೈಲಿ, ಶಿಕ್ಷಣಪ್ರಸಾರ ಹಾಗೂ ಅನ್ಯ ಉಪಭಾಷೆಯಿಂದಾದ ಸ್ವೀಕರಣಗಳು ಕಾರಣಗಳೆಂದು ತೋರುತ್ತದೆ.[1]

2.(ಅ) ಅನುನಾಸಿಕೀಕರಣವು ವಿರೋಧ ಪ್ರಸಾರವನ್ನುಂಟುಮಾಡುವುದನ್ನು ಕೆಳಗಿನ ಉದಾಹರಣೆಗಳಿಂದ ಅರಿಯಬಹುದು.

'ಅವ' (=ಅವಳು) : 'ಅವ̃' ಅಥವಾ 'ಅ̃ವ̃' (=ಅವನು) :

'ಆ' (=ನಿರ್ದೇಶಕ ಪದ) : 'ಆ̃' (=ಆಶ್ಚರ್ಯ ಸೂಚಕ ಪದ ಅಥವಾ ಕರೆದಾಗ ಬರುವ (ಪ್ರತಿಕ್ರಿಯೆ).

'ತಾ' (=ಕೊಡು) : 'ತಾ̃' (=ತಾನು)

'ಕೈ' ಅಥವಾ 'ಕೈಯ್ಯಿ' (=ಕೈ) : ಕೈ̃ ಅಥವಾ ಕೈ̃ಯ್ಯಿ (=ಕಹಿ)

'ಸವ್ರು' (=ಗಿಡ, ಮರ ಮೊದಲಾದವುಗಳನ್ನು ಕಡಿಸಿ ಸ್ವಚ್ಛಮಾಡಿಸು) : 'ಸವ್ರು̃' (=ಸಿದ್ಧತೆಗೆ ತೊಡಗು)

'ಬತ್ತು' (=ನಿಶ್ಚಯವಾಗಿ ಬರುತ್ತಾನೆ) : 'ಬತ್ತು̃' (ಬರುತ್ತಾನೆ).

(ಬ) ಪ್ರಥಮ ಪುರುಷ ಏಕವಚನವನ್ನು ಹೇಳುವ ಕ್ರಿಯಾಪದಗಳಲ್ಲಿ ಎಲ್ಲ ಕಡೆಗೂ ಅನುನಾಸಿಕೀಕರಣವು ಧ್ವನಿಮದ ಸ್ಥಾನವನ್ನು ಪಡೆಯುತ್ತದೆ. (ಅನುನಾಸಿಕೀಕೃತ

---

[1] ಒಂದು ಧ್ವನಿ ಇತರ ಕೆಲವು ಧ್ವನಿಗಳೊಡನೆ ಒಂದೆಡೆ ಸ್ವಚ್ಛಂದ ಪ್ರಸಾರವನ್ನೂ ಮತ್ತೊಂದೆಡೆ ವಿರೋಧ ಪ್ರಸಾರವನ್ನೂ ಹೊಂದಿ ಧ್ವನಿಮದ ಸ್ಥಾನವನ್ನೂ ಪಡೆಯುವ ಉದಾಹರಣೆಗಳು ನಮಗೆ ಅನೇಕ ಭಾಷೆಗಳಲ್ಲಿ ದೊರೆಯುತ್ತವೆ. ಈ ಅವಸ್ಥೆಗೆ ಭಾಷಾ ಅಥವಾ ಉಪಭಾಷಾ ಸ್ವೀಕರಣಗಳು ಮುಖ್ಯ ಕಾರಣವೆಂದು ತೋರುತ್ತದೆ. ಉದಾಹರಣೆಗೆ ಕನ್ನಡದಲ್ಲಿಯೇ ಳ–ಣ, ಳ–ಡ. ಶ–ಚ ಮೊದಲಾದ ಧ್ವನಿಯುಗ್ಮಗಳಲ್ಲಿ ಈ ಅವಸ್ಥೆ ಕಂಡುಬರುತ್ತದೆ. ಉದಾಹರಣೆಗೆ ಕೋಲಾರ – ಆಂಧ್ರದ ಗಡಿಯಲ್ಲಿ ಬರುವ ಅನೇಕ ತಾಲೂಕುಗಳಲ್ಲಿ 'ಕಳ' (=ಹೊಲದಲ್ಲಿ ಧಾನ್ಯಗಳನ್ನು ಒಟ್ಟುಮಾಡುವ ಸ್ಥಳ) ಎಂಬ ಶಬ್ದವಿದೆ. ಕೋಲಾರ ಜಿಲ್ಲೆಯ ಇತರ ಕೆಲವು ತಾಲೂಕುಗಳಲ್ಲಿ ಇದಕ್ಕೆ ಸಮಾನಾರ್ಥಕವಾದ 'ಕಣ' ಎಂಬ ಶಬ್ದ ಮಾತ್ರವೇ ದೊರೆಯುತ್ತದೆ. ಬೆಂಗಳೂರಿನಿಂದ ಉತ್ತರಕ್ಕೆ ಹೋದಂತೆ 'ಕಣ' – 'ಕಳ' ಎರಡು ರೂಪಗಳೂ ದೊರೆಯುತ್ತವೆ. ಆದರೆ ಬೀದರ್ ಜಿಲ್ಲೆಯಲ್ಲಿ 'ಕಣ' ದೊರೆಯದು : 'ಖಳ' ಎಂಬ ಶಬ್ದವಿದೆ.

ಧ್ವನಿಯುಳ್ಳ ಪದವು ಪುಲ್ಲಿಂಗ ಏಕವಚನವನ್ನೂ ಅನನುನಾಸಿಕೀಕೃತ ಧ್ವನಿಯುಳ್ಳ ಪದವು ಸ್ತ್ರೀಲಿಂಗ ಏಕವಚನವನ್ನೂ ಹೇಳುತ್ತದೆ)

ಉದಾಹರಣೆಗೆ:

'ಮಾಡ್ತೆ̃' (=ಮಾಡುತ್ತಾನೆ) : 'ಮಾಡ್ತ' (=ಮಾಡುತ್ತಾಳೆ)

'ಹೋಗ್ತೆ̃' (=ಹೋಗುತ್ತಾನೆ) : 'ಹೋಗ್ತ' (=ಹೋಗುತ್ತಾಳೆ)

'ತಿಂತೆ̃' (=ತಿನ್ನುತ್ತಾನೆ) : 'ತಿಂತ' (=ತಿನ್ನುತ್ತಾಳೆ).

'ಹೊಂಟೆ̃' (=ಹೊರಟಿದ್ದಾನೆ) : 'ಹೊಂಟ' (=ಹೊರಟಿದ್ದಾಳೆ).

'ಬೀಳ್ತೆ̃' (=ಬೀಳುತ್ತಾನೆ) : 'ಬೀಳ್ತ' (=ಬೀಳುತ್ತಾಳೆ).

ಇತ್ಯಾದಿ

3. ನಾಮಪದಗಳಲ್ಲಿ ಹಾಗೂ ಉತ್ತಮ, ಮಧ್ಯಮ ಪುರುಷಗಳ ಕ್ರಿಯಾಪದಗಳಲ್ಲಿ ಅನುನಾಸಿಕೀಕರಣವು ಸ್ವಚ್ಛಂದವಾಗಿದೆ. ಅಂದರೆ ಅರ್ಥವ್ಯತ್ಯಾಸವನ್ನುಂಟು ಮಾಡುವುದಿಲ್ಲ. ಉದಾಹರಣೆಗೆ :—

(ಅ). (ನಾಮಪದಗಳಿಗೆ)

'ಮರ' ~ 'ಮರ̃' (=ಮರ)

'ಬಾವಿ' ~ 'ಬಾವಿ̃' (=ಬಾವಿ)

'ಕರ' ~ 'ಕರ̃' (=ಕರು)

(ಬ). (ಕ್ರಿಯಾಪದಗಳಿಗೆ)

'ಬತ್ತಿ' ~ 'ಬತ್ತಿ̃' (=ಬರುತ್ತೇನೆ)

'ಬತ್ತ್ಯ' ~ 'ಬತ್ತ್ಯ̃' (=ಬರುತ್ತೇವೆ)

'ಹೋಗು' ~ 'ಹೋಗು' (=ಹೋಗು)

'ಮಲಗಿ' ~ 'ಮಲಗಿ̃' (=ಮಲಗಿಕೊಳ್ಳಿ).

ಈವರೆಗಿನ ಉದಾಹರಣೆಗಳಿಂದ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಮೇಲೆ 2 (ಬ) ದಲ್ಲಿ ಕೊಟ್ಟ ಉದಾಹರಣೆಗಳಲ್ಲಿ 'ಮಾಡ್ತೆ̃', 'ಹೋಗ್ತೆ̃', 'ಮಾಡ್ತ', 'ಹೋಗ್ತ' ಮೊದಲಾದ ಪದಗಳು ಅನುಕ್ರಮವಾಗಿ 'ಮಾಡುತ್ತಾನೆ', 'ಹೋಗುತ್ತಾನೆ', 'ಮಾಡುತ್ತಾಳೆ', 'ಹೋಗುತ್ತಾಳೆ' ಮೊದಲಾದ ಪದಗಳ ರೂಪಾಂತರಗಳು. ಇವುಗಳಲ್ಲಿ ಪ್ರ. ಪುರುಷ ಏಕವಚನದ ಪುಲ್ಲಿಂಗವನ್ನು ಹೇಳುವ ಕ್ರಿಯಾಪದಗಳು ಮೂಲಪದ(ಉದಾ: 'ಮಾಡುತ್ತಾನೆ') ದಲ್ಲಿಯ ಅನುನಾಸಿಕ ಧ್ವನಿಯ ಅಂಶವನ್ನು ಉಳಿಸಿಕೊಂಡು ಅನುನಾಸಿಕೀಕೃತ ಪದಗಳಾಗಿವೆ. ಆದರೆ 'ಹೋಗುತ್ತಾಳೆ' ಮುಂತಾದ ಸ್ತ್ರೀಲಿಂಗವನ್ನು

ಹೇಳುವ ಪದಗಳಲ್ಲಿ ಅನುನಾಸಿಕ ಧ್ವನಿಯಿಲ್ಲವಾದುದರಿಂದ ಅವುಗಳ ರೂಪಾಂತರಗಳಾದ 'ಹೋಗ್ತ' ಮುಂತಾದ ಪದಗಳು ಅನುನಾಸಿಕೀಕೃತವಾಗಿಲ್ಲ. 2(ಅ) ಪಟ್ಟಿಯಲ್ಲಿಯ 'ಅವ಼' (∠ಅವನ್) : 'ಅವ' (=ಅವಳ್), 'ತಾ಼' (∠ತಾನ್): 'ತಾ' (∠ತರ್). 'ಆ಼' (∠ಆನ್) : 'ಆ' (=ಆ) ಪದಯುಗ್ಮಗಳಿಗೆ ಮೇಲಿನ ವಿವರಣೆಯನ್ನೆ ನೀಡ ಬಹುದು.

ಆದರೆ ಪಟ್ಟಿ 2(ಅ) ದಲ್ಲಿಯ ಇತರ ಉದಾಹರಣೆಗಳು ಹಾಗೂ ಪಟ್ಟಿ 3(ಅ) 3(ಬ)ದಲ್ಲಿ ಕೊಟ್ಟ ಉದಾಹರಣೆಗಳಲ್ಲಿ ಅನುನಾಸಿಕೀಕರಣವು ಉಂಟಾಗಲು ಬೇರೆಯಾವ ಕಾರಣಗಳಿವೆ. ಅದನ್ನು ತಿಳಿಯಲು ಈ ಉಪಭಾಷೆಯ ಬಳಕೆಯ ರೀತಿಯನ್ನು ಗಮನಿಸಬೇಕಾಗುತ್ತದೆ.

4. ಈ ಉಪಭಾಷೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಮೂರುನಾಲ್ಕು ರೀತಿ ಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಆ ಸಂದರ್ಭಗಳು ಹೀಗಿವೆ.

(1) ಹವ್ಯಕ – ಹವ್ಯಕರಲ್ಲಿ,
  (ಅ) ಹವ್ಯಕ ಗಂಡಸು (ಅಥವಾ ಹೆಂಗಸು) – ಹವ್ಯಕ ಹೆಂಗಸರೊಡನೆ (ವಿಶೇಷವಾಗಿ ತಾಯಿಯೊಡನೆ ಅಥವಾ ವಯಸ್ಸಾದವರೊಡನೆ)
  (ಬ) ಹವ್ಯಕ ಗಂಡಸು (ಅಥವಾ ಹೆಂಗಸು)–ಇನ್ನೊಬ್ಬ ಹವ್ಯಕ ಗಂಡಸಿನೊಡನೆ

(2) ಹವ್ಯಕರು — ಇತರ ಸುತ್ತಲಿನ ಪರಿಚಿತ ಜನಾಂಗದೊಡನೆ

(3) ಹವ್ಯಕರು — ಅಪರಿಚಿತರೊಡನೆ

ಇವುಗಳಲ್ಲಿ 1 (ಅ) ದಲ್ಲಿ ಹೇಳಲಾದ ಸಂದರ್ಭದಲ್ಲಿ ಬಳಕೆಯಾಗುವ ಶೈಲಿ ಸಿದ್ದಾ ಪುರ ಹಾಗೂ ಸಾಗರ ತಾಲ್ಲೂಕಿನಲ್ಲಿ ಹೆಚ್ಚಾಗಿ ತೋರಿಬರುತ್ತದೆ. ಇಲ್ಲಿ ಹೇಳಿದ ನಾಲ್ಕು ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆಯಾಗುವ ಹವ್ಯಕರ ಮಾತಿನಲ್ಲಿ ಅನುನಾಸಿಕೀಕರಣದ ಪ್ರಮಾಣವು ಕ್ರಮವಾಗಿ ಕಡಿಮೆಯಾಗುತ್ತ, ಹೋಗುತ್ತದೆ.

ಇಲ್ಲಿ, ಒಂದು ವಾಕ್ಯವನ್ನು ಉದಾಹರಣೆಯಾಗಿ ತೆಗೆದುಕೊಂಡು ಅದನ್ನು ಮೇಲೆ ಹೇಳಿದ ಸಂದರ್ಭಗಳಲ್ಲಿ ಹೇಗೆ ಉಪಯೋಗಿಸುತ್ತಾರೆಂಬುದನ್ನು ನೋಡಬಹುದು:

ವಾಕ್ಯ: 'ಅವನು ಮನೆಗೆ ಬಂದಕೂಡಲೆ ನಾನು ತೋಟಕ್ಕೆ ಹೋಗುತ್ತೇನೆ'.

1 (ಅ) ಸಂದರ್ಭದಲ್ಲಿ : 'ಅ಼ವ (ಅವ಼್) ಮನೀಗ್ ಬಂದ್‌ಕೂಡ್ಲೇ ಆ಼ (ಯಾ಼) ತ್ವಾಟಕ್ಕ್ ಹೋಗ್ತೇ'

(ಬ) " : ಅವ (ಅವ಼್) ಮನೀಗ್ ಬಂದ್ ಕೂಡ್ಲೇ ಆ಼ (ಯಾ಼) ತ್ವಾಟಕ್ಕ್ ಹೋಗ್ತಿ'

2 ನೇ ಸಂದರ್ಭದಲ್ಲಿ : "ಅವ್ಞ (ಅವನು) ಮನೀಗ್ (ಮನೇಗ್) ಬಂದ್ ಕೂಡ್ಞೇ ನಾ (ನಾನ್) ತ್ವಾಟಕ್ ಹೋಗ್ತೀನಿ'.

3 ನೇ " : ಅವನು ಮನೇಗ್ ಬಂದ್ ಕೂಡ್ಞೇ ನಾನ್ (ನಾ) ತೋಟಕ್ಕೆ ಹೋಗ್ತೇನೆ.'

5. ಅನುನಾಸಿಕೀಕರಣದ ಪ್ರಮಾಣದಲ್ಲಿ ಹೇಗೆ ವ್ಯತ್ಯಾಸವುಂಟಾಗುತ್ತದೆಂಬುದನ್ನು ಮೇಲಿನ ಉದಾಹರಣೆಯಿಂದ ತಿಳಿಯಬಹುದು. ಇಲ್ಲಿ 1 (ಅ) ಸಂದರ್ಭದಲ್ಲಿ ಬಳಸಲಾಗುವ 'ಹೋಗ್ತೀ' ಎಂಬ ಪದದಲ್ಲಿ ಕನ್ನಡದ ಶಿಷ್ಟಭಾಷೆ (Standard Language) ಯ 'ಹೋಗುತ್ತೇನೆ' ಎಂಬ ಪದದಲ್ಲಿಯ ಅನುನಾಸಿಕಧ್ವನಿಯ ಅಂಶವಿದೆ ಎಂದು ತೋರಬಹುದು. ಆದರೆ 1 (ಬ) ಸಂದರ್ಭದಲ್ಲಿ ಕೊಡಲಾದ 'ಹೋಗ್ತಿ' ಎಂಬುದನ್ನು ಗಮನಿಸಿದಾಗ ಈ ಊಹೆ ತಪ್ಪು ಎಂಬುದು ಸಿದ್ಧವಾಗುತ್ತದೆ. 'ಹೋಗ್ತೀ ಎಂಬಲ್ಲಿ ಅನುನಾಸಿಕೀಕೃತ ಧ್ವನಿ ಬರಲು ಭಾಷೇತರ ಸಂದರ್ಭ (Extra linguistic context) ವು ಕಾರಣವಾಗಿದೆ. ಇಲ್ಲಿಯ ಅನುನಾಸಿಕೀಕರಣವು (ತಾಯಿಯೊಡನೆ ಅಥವಾ ಇತರ ವಯಸ್ಸಾದ ಸ್ತ್ರೀಯರೊಡನೆ ಇರುವ) ವಾತ್ಸಲ್ಯವನ್ನು ಸೂಚಿಸುತ್ತದೆ. ಪಟ್ಟಿ 3(ಬ) ದಲ್ಲಿ ಕೊಟ್ಟ ಉದಾಹರಣೆಗಳಲ್ಲಿ (ಪು.69) ಅನುನಾಸಿಕೀಕೃತ ಧ್ವನಿಗಳು ಬರಲು ಇದೇ ಕಾರಣವಾಗಿದೆ.

6. ಬೇರೆ ಬೇರೆ ಸಂದರ್ಭದಲ್ಲಿಯ ಆಡುಮಾತಿನ ಶೈಲಿಯಲ್ಲಿ ಅನುನಾಸಿಕೀಕರಣದ ಪ್ರಮಾಣ ಬೇರೆ ಬೇರೆಯಾಗಿರುತ್ತದೆಂಬುದು ಈ ಹಿಂದೆ ಕೊಟ್ಟ ಉದಾಹರಣೆಯಿಂದ ಸ್ಪಷ್ಟವಾಗಿದೆ. ಇದರ ಪರಿಣಾಮವಾಗಿ ಹವ್ಯಕರ ಮಾತಿನಲ್ಲಿ ಅನುನಾಸಿಕೀಕರಣವು ಐಚ್ಛಿಕವಾಯಿತೆಂದು ತೋರುತ್ತದೆ. ಆದರಿಂದಾಗಿ ಅಜ್ಜ–ಅಜ್ಜ̃, ಅಕ್ಕ–ಅಕ್ಕ̃, ಅಪ್ಪ–ಅಪ್ಪ̃, ಹೋಗ್ತಿ–ಹೋಗ್ತಿ̃ ಮುಂತಾದ ಯುಗ್ಮಗಳಲ್ಲಿಯ ಎರಡೂ ರೂಪಗಳು ಸ್ವೀಕೃತವಾದವು. ಮೇಲೆ ಪಟ್ಟಿ 2 (ಅ) ದಲ್ಲಿ ಕೊಡಲಾದ (ಪು.69) ಕೈಯ್ಯಿ-ಕೈಯ್ಯಿ̃, ಸವ್ವು–ಸವ್ವು̃ ಎಂಬ ಯುಗ್ಮಗಳಲ್ಲಿಯ ಸ್ವಚ್ಛಂದ ಪರಿವರ್ತನೆಗೂ ಇದೇ ಕಾರಣ.

7. ಮೊದಲು ಹವ್ಯಕ ಕನ್ನಡದಲ್ಲಿ 'ಅವಳು' ಎಂಬರ್ಥದಲ್ಲಿ ಅದು ಎಂಬ ಪದ ಇತ್ತೆಂಬುದು ತಿಳಿಯುತ್ತದೆ. ಇಂದು 'ಅವಳು' 'ಅದು' ಎರಡು ರೂಪಗಳೂ ಇವೆ. 'ಅವಳು' ಎಂಬುದು ಇತ್ತೀಚೆಗೆ ಕನ್ನಡದ ಇತರ ಉಪಭಾಷೆಗಳಿಂದಾದ ಸ್ವೀಕೃತ ಪದ, ಅಥವಾ ಶಿಕ್ಷಣ ಪ್ರಸಾರದ ಫಲವಾಗಿ ಬಂದ ಶಿಷ್ಟಭಾಷೆಯಿಂದ ಸ್ವೀಕೃತವಾದ ಪದ. ಈಗೀಗ 'ಅವಳು' ಎಂಬ ಪದದ ಬಳಕೆಯೇ ಹೆಚ್ಚಾಗಿದೆ. (ಹಾಗೆಯೇ ಪ್ರ. ಪುರುಷ ಬಹುವಚನ ಸರ್ವನಾಮವಾದ 'ಅಪ್ಪು' ಕಡಿಮೆಯಾಗಿ 'ಅವರು' ಎಂಬ ಪದದ ಬಳಕೆಯಾಗುತ್ತಿದೆ). 'ಅವಳಿಗೆ' 'ಅದು' ಎಂಬ ರೂಪವಿರುವಾಗ 'ಅಜ್ಜ̃'–'ಅಜ್ಜ' ಆದಂತೆ, 'ಅಪ್ಪ̃'–'ಅಪ್ಪ' ಆದಂತೆ 'ಅವ̃' 'ಅವ' ಎಂದೇಕೆ ಆಗಲಿಲ್ಲ ಎಂಬ ಪ್ರಶ್ನೆ ಏಳುತ್ತದೆ.

ಇದಕ್ಕೆ ಎರಡು ಬಗೆಯಲ್ಲಿ ಸಮಾಧಾನ ನೀಡಬಹುದು. ಒಂದು, ಅನುನಾಸಿಕೀಕರಣವು ಐಚ್ಛಿಕವಾಗಿ 'ಅವೆ' ಎಂಬುದು 'ಅವ' ಆಗುವುದಕ್ಕಿಂತ ಮೊದಲೇ 'ಅವಳು' ಎಂಬ ಪದವು ಸ್ವೀಕೃತವಾಗಿ 'ಅವ' ಎಂದು ರೂಪಾಂತರಹೊಂದಿರಬೇಕು; ಎರಡು, 'ಅವೆ' ಎಂಬುದು 'ಅವ' ಎಂದೂ ಬಳಕೆಯಾಗುತ್ತಿದ್ದು 'ಅವಳು' ಎಂಬ ಪದವು ಸ್ವೀಕೃತವಾದ ಮೇಲೆ 'ಅವನು' ಎಂಬರ್ಥದ 'ಅವ' ಪದದ ಬಳಕೆ ನಿಂತು ಹೋಗಿರಬೇಕು. ಇವುಗಳಲ್ಲಿ ಮೊದಲನೆಯ ಅಭಿಪ್ರಾಯ ಹೆಚ್ಚು ತೃಪ್ತಿಕರವಾಗಿದೆ.

8. ಪಟ್ಟಿ 2 (ಬ)ದಲ್ಲಿ ಕೊಟ್ಟ ಉದಾಹರಣೆಗಳಲ್ಲಿ, ಅನುನಾಸಿಕೀಕೃತ ಧ್ವನಿಗಳು ಅವುಗಳ ಮೂಲರೂಪದಲ್ಲಿಯ ಅನುನಾಸಿಕ ಧ್ವನಿಗಳು ಮೊಟಕುಗೊಂಡದ್ದರಿಂದಾದ ಪರಿಣಾಮವೆಂದು ಹಿಂದೆಯೇ ಹೇಳಿದ್ದೇನೆ. (ಉದಾ : ಮಾಡುತ್ತಾನೆ > ಮಾಡ್ತ್ರೆ) ಆದರೆ 'ಬತ್ತ' (ಅಥವಾ ಬರ್ತೆ) : 'ಬತ್ತ' (ಅಥವಾ ಬರ್ತ್ರ), 'ಹೊಂಟೆ : 'ಹೊಂಟ' ಮುಂತಾದ ಕ್ರಿಯಾಪದಗಳಲ್ಲಿ ತೋರುವ ಅರ್ಥವ್ಯತ್ಯಾಸ ಅಥವಾ ಧ್ವನಿಮಾತ್ಮಕ ವ್ಯತ್ಯಾಸವು (Phonemic difference) ಸ್ವತಂತ್ರವಾಗಿ ಆಗಿದೆಯೆನ್ನುವುದಕ್ಕಿಂತ 'ಅವೆ' : 'ಅವ' ಪದಗಳಲ್ಲಿಯ ವ್ಯತ್ಯಾಸವನ್ನನುಸರಿಸಿ ಉಂಟಾಗಿದೆಯೆಂದು ಹೇಳುವುದು ಉತ್ತಮವೆಂದು ತೋರುತ್ತದೆ.

ಉದಾಹರಣೆಗೆ :

'ಅವ್ ಹೋಯ್ದ್' : 'ಅವ್ ಹೋಯ್ದ'

'ಅವ್ ಬಿದ್ದ' : 'ಅವ್ ಬಿದ್ದ'.

9. ಆದರೆ ಇಲ್ಲಿಯ ಕರ್ತೃ, ಕ್ರಿಯಾಪದಗಳೆರಡರಲ್ಲಿಯೂ ಅನುನಾಸಿಕೀಕೃತ ಧ್ವನಿಯನ್ನು ಬಳಸುವುದು ಅನಿವಾರ್ಯವೇನಲ್ಲ. ಒಂದು ಕಡೆ ಮಾತ್ರ ಬಳಸಿಕೊಂಡರೂ ಸಾಕು. ಉದಾಹರಣೆಗೆ – 'ಅವ ಹೋಯ್ಬ' ಎಂಬುದರ ಬದಲು 'ಅವ ಹೋಯ್ಬ' ಎಂದೇ ಉಪಯೋಗಿಸಿದರೂ, 'ಅವ' ಎಂಬುದಕ್ಕೆ 'ಅವಳು' ಎಂಬರ್ಥವನ್ನಿಟ್ಟುಕೊಂಡರೆ 'ಹೋಯ್ಬ' ಎಂಬುದು 'ಹೋಗಿದ್ದಾಳೆ' ಎಂಬರ್ಥವನ್ನೇ ಕೊಡುತ್ತದೆ. ಹೀಗೆ ಒಂದರ ಆಧಾರದ ಮೇಲೆ ಇನ್ನೊಂದು ಸಿದ್ಧ ಅಂಶ (redundant feature) ವಾಗುತ್ತದೆ[2]

---

[2] ಇಂಗ್ಲಿಷಿನಲ್ಲಿಯ 'he does', 'she does', 'it does' — ಎಂಬ ವಾಕ್ಯಗಳಲ್ಲಿ ಕ್ರಿಯಾಪದ ಒಂದೇ ಆಗಿರುವುದನ್ನು ಗಮನಿಸಬಹುದು.

ಮಕ್ಕಳ ಭಾಷೆಯನ್ನು ಅರ್ಥವಿಸುವಾಗ ಈ ಸಿದ್ಧಾಂಶಗಳು ನೆರವಾಗುತ್ತವೆ. ಉದಾ : 'ಅಪ್ಪ ಬಂತು' ಎಂದು ಮಗು ಹೇಳಿದರೂ 'ಅಪ್ಪ ಬಂದ (ನು)' ಎಂದೇ ಅರ್ಥವಿಸಿಂತ್ತೇವೆ. ಹಾಗೆಯೇ 'ನಿನ್ನೆ ಬಬ್ಬಾ ಹೋತೀನಿ' ಅಮ್ಮ ನಾಳೆ ಬಂತು' ಮುಂತಾದ ವಾಕ್ಯಗಳನ್ನು ಗಮನಿಸಬಹುದು.

ಪ್ರ. ಪುರುಷ ಏಕವಚನಕ್ಕೆ ಸಂಬಂಧಪಟ್ಟಂತೆ ಹವ್ಯಕ ಕನ್ನಡದ ಸಂಭಾಷಣೆಯಲ್ಲಿ ಲಿಂಗಭೇದಕ್ಕಾಗಿ ಕರ್ತೃ ಕ್ರಿಯಾಪದಗಳೆರಡರಲ್ಲಿಯೂ ಅನುನಾಸಿಕೀಕೃತ ಧ್ವನಿಯನ್ನು ಸಾಮಾನ್ಯವಾಗಿ ಉಪಯೋಗಿಸಿಕೊಂಡರೂ ಕೆಲವು ಸನ್ನಿವೇಶಗಳಲ್ಲಿ ಅನುನಾಸಿಕೀಕೃತ ಧ್ವನಿಯನ್ನು ಕರ್ತೃಪದದಲ್ಲಿ ಮಾತ್ರವೇ ಬಳಸಿಕೊಳ್ಳಲಾಗುತ್ತಿದೆ. ಉದಾಹರಣೆಗಾಗಿ ತಾಯಿಯೊಡನ ಅಥವಾ ವಯಸ್ಸಾದ – ಹವ್ಯಕ ಸ್ತ್ರೀಯೊಡನೆ ಮಾತ ನಾಡುವಾಗ 'ಅವಳು ಹೋಗುತ್ತಾಳೆ' ಎಂಬರ್ಥದಲ್ಲಿ 'ಅವ್ ಹೋಗ್ತ' ಎಂಬುದಾಗಿಯೇ ಹೇಳುತ್ತಾರೆ. ಅದೇ ರೀತಿ 'ತಾ', 'ತಾ'ಗಳಲ್ಲಿ ವ್ಯತ್ಯಾಸವಿದ್ದರೂ ಈ ಸಂದರ್ಭದಲ್ಲಿ ಅವೆರಡನ್ನೂ 'ತಾ' ಎಂದೇ ಉಚ್ಚರಿಸಲಾಗುತ್ತದೆ. ಇವುಗಳಲ್ಲಿಯ ಅರ್ಥ ವ್ಯತ್ಯಾಸ ವನ್ನು ಗುರುತಿಸಲು ಸಂದರ್ಭಗಳು ನೆರವಾಗುತ್ತವೆ.

10. ಇಲ್ಲಿ ಒಂದು ಪ್ರಶ್ನೆ ಏಳಬಹುದು. ಮೇಲೆ ಉದಾಹರಿಸಿದ 'ಅವ್‌ಹೋಗ್ತ' ಎಂಬಲ್ಲಿಯ 'ಹೋಗ್ತ' ಎಂಬುದರ ಬದಲು ಭಾಷೇತರ ಸಂದರ್ಭದಲ್ಲಿ (ವಾತ್ಸಲ್ಯ ಸೂಚಕವಾಗಿ) 'ಹೋಗ್ತ' ಎಂಬುದೂ ಸ್ವಚ್ಛಂದವಾಗಿ ಬರಬಹುದು ಎಂದಿದ್ದೇನೆ. ಇಲ್ಲಿ ಕ್ರಿಯಾಪದವೇ ಏಕೆ ಅನುನಾಸಿಕೀಕೃತವಾಗಬೇಕು? ಕರ್ತೃಪದವಾದ 'ಅವ' ಎಂಬುದು 'ಅವ' ಆಗಬಹುದಿತ್ತಲ್ಲ? – ಆಗಬಹುದಿತ್ತು. ಆದರೆ ಆಗಿಲ್ಲ ಅಷ್ಟೇ. ಕಾರಣವಿಷ್ಟೆ. ಈ ಹಿಂದೆ ಹೇಳಿದ 1 (ಅ)ದ(ಅಂದರೆ ತಾಯಿಯೊಡನೆ ಅಥವಾ ವಯಸ್ಸಾದ ಸ್ತ್ರೀಯೊಡನೆ) ಸಂದರ್ಭದಲ್ಲಿ ಬಳಸಲಾಗುವ ಸಂಭಾಷಣೆಯಲ್ಲಿ ವಾಕ್ಯದ ಅಂತ್ಯ ಧ್ವನಿಯನ್ನು ಅನು ನಾಸಿಕೀಕೃತವಾಗಿ ಮಾಡುವುದು ರೂಢಿ. 'ತಾ' ಎಂಬುದು ವಾಕ್ಯದ ಅಂತ್ಯದಲ್ಲಿದ್ದರೆ 'ತಾ' (=ತರ್) ಆಗುತ್ತದೆ. ಬೇರೆಡೆ ಇದ್ದರೆ 'ತಾ' ಆಗಿಯೇ ಉಳಿಯುತ್ತದೆ.

ಮೊದಲಿನಿಂದಲೂ ಹವ್ಯಕ ಕನ್ನಡದಲ್ಲಿ ಅನುನಾಸಿಕೀಕರಣವು ಧ್ವನಿಮಾತ್ಮಕವಾಗಿ ದ್ದಿದ್ದರೆ ಇಂತಹ ಸ್ವಚ್ಛಂದ ಪರಿವರ್ತನೆಯ ಅವಕಾಶಗಳು ಸಾಧ್ಯವಾಗುತ್ತಿರಲಿಲ್ಲವೆಂದು ತೋರುತ್ತದೆ. ಮೊದಲು ಅನುನಾಸಿಕೀಕರಣವು ಅನಿವಾರ್ಯವಲ್ಲದ, ಆದರೂ ಎಲ್ಲ ಕಡೆಗಳಲ್ಲಿಯೂ ಉಪಯೋಗವಾಗುತ್ತಿದ್ದ ಒಂದು ಅಂಶ (tone feature) ವಾಗಿತ್ತು ಅಷ್ಟೆ. ಇತರ ಭಾಷೆ – ಉಪಭಾಷೆಗಳ ಪ್ರಭಾವದಿಂದ ಅದರ ಆಂಶಿಕ ಪ್ರಮಾಣ ಕಡಿಮೆಯಾಗುತ್ತಾ ಒಂದೆಡೆ ಸ್ವಚ್ಛಂದ ಪರಿವರ್ತನೆಯ ಅವಕಾಶವನ್ನೂ ಇನ್ನೊಂದೆಡೆ ಧ್ವನಿಮದ ಸ್ಥಾನವನ್ನೂ ಪಡೆಯಿತು.

ಶುಂಠಿ

ವಿ. ಎಸ್. ಯಲವಿಗಿ

'ಶುಂಠಿ' ಎಂಬ ಶಬ್ದವನ್ನು ಕೇಳಿದೊಡನೆಯೇ ಏನೇನೋ ವಿಚಾರಗಳು ತಲೆದೋರುವುವು. ಅವುಗಳಲ್ಲಿ 'ಹಸಿ ಶುಂಠಿ' ಎಂದರೆ 'ಹಸಿ ದಡ್ಡ'. ಶುಂಠಿ ಬೆಲ್ಲಾ ಕೊಡು ಎಂದರೆ ಚಿಗಟು (ಚೊಟು) ಎಂಬ ವಿಕಟ ಅರ್ಥಗರ್ಭಿತ ನುಡಿಗಳು ನಮ್ಮ ಭಾಷೆಯಲ್ಲಿ ಬಳಕೆಯಲ್ಲಿರುವಂತಹವು. ಹೀಗೆ ಶುಂಠಿ ವಿಕಟ ಅರ್ಥ ಹೊಂದಿದ್ದರೂ ಅದರ ನಿಜವಾದ ರುಚಿ ಮತ್ತು ಔಷಧೀಯ ಗುಣಗಳು ಮಾನವ ಕೋಟಿಗೆ ಮಾಡಿದ ಉಪಕಾರ ಅಷ್ಟಿಷ್ಟಲ್ಲವೆಂದು ಹೇಳಬಹುದು. ನಿಮಗೆ ಹೊಟ್ಟೆನೋವು ಅಥವಾ ಅಜೀರ್ಣೀಯ ಬಾಧೆ ಉಂಟಾದಾಗ ಶುಂಠಿ ಇರದಿದ್ದರೆ ಗೊತ್ತಾಗುತ್ತಿತ್ತು ಅದರ ಮಹಿಮೆ. ವೈಜ್ಞಾನಿಕವಾಗಿ ಮುಂದುವರೆದ ಆ್ಯಲೋಪಾಥಿಕ್ (ಇಂಗ್ಲಿಷ್) ಔಷಧೀಯ ಪದ್ಧತಿಗಳಲ್ಲಿ ಪ್ರಸಿದ್ಧಿ ಪಡೆದ ಕಾರ್ಮಿನೇಟಿವ್ ಮಿಕ್ಸ್ಚರ್‌ನಲ್ಲಿ ಶುಂಠಿಯ ಅರ್ಕವೇ— "ಟಿಂಕ್ಚರ್ ಝಿಂಝಿಬೆರಿಸ್" ಅತಿ ಮುಖ್ಯವಾದುದೆಂದರೆ ನೀವು ನಂಬಲಾರಿರಿ. ಆದರೆ ಇದು ನಿಜ. ಮಹಾರಾಷ್ಟ್ರದ ಪಟ್ಟಣಗಳ ಪೇಟೆಯಲ್ಲಿ ಕೇಳಿ ಬರುವ "ಅಲೇಪಾತ ಅಲೇಪಾತ" ಎಂಬುದು ಮತ್ತೇನೂ ಅಲ್ಲ. ಕೇವಲ ಹಸಿ ಶುಂಠಿ ಮತ್ತು ಸಕ್ಕರೆಯಿಂದ ತಯಾರಿಸಿದ ಅಜೀರ್ಣಕ್ಕೆ ಉತ್ತಮವಾದ ಒಡೆ. ಇನ್ನೂ ಉತ್ತರಕ್ಕೆ ಹೋದರೆ ದೆಹಲಿ ಮತ್ತಿತರ ಪಟ್ಟಣಗಳ ಪೇಟೆಯಲ್ಲಿ ಮಾರಲಾಗುವ "ಪತ್ಥರ ಹಜಮ – ಲಕ್ಕಡ ಹಜಮ" ಇತ್ಯಾದಿ ಚೂರ್ಣಗಳು ಕೂಡಾ ಶುಂಠಿಯಿಂದಲೇ ಉದ್ಭವಿಸಿದ್ದೆಂದರೆ ಆಶ್ಚರ್ಯದ ಮಾತು ! ಪ್ರತಿನಿತ್ಯದಲ್ಲಿ ಶುಂಠಿಯನ್ನು ಒಂದಾದರೊಂದು ರೂಪದಲ್ಲಿ ನಮ್ಮ ದೇಶದ ಎಲ್ಲಾ ಭಾಗಗಳಲ್ಲಿಯೂ ಬಳಸುವುದುಂಟು.

ಅರಿಷಿಣ ಬಜೆಯಂತೆ ಶುಂಠಿಯೂ ಒಂದು ಸಸಿಯಿಂದ ಉತ್ಪತ್ತಿ ಹೊಂದುವ ಪದಾರ್ಥ. ಈ ಸಸಿಯ ವೈಜ್ಞಾನಿಕ ಹೆಸರು— ಝಿಂಝಿಭೆರಸ್ ಆಫಿಸಿನೇಲ ಎಂದೂ ಕನ್ನಡದಲ್ಲಿ 'ಶುಂಠಿ', ತಮಿಳು – ಇಂಜೀ. ತೆಲುಗು – ಅಲ್ಲಂ, ಮಲೆಯಾಳ – ಇಂಚಿ. ಉರ್ದು – ಅದ್ರಕ್ ಮತ್ತು ಮರಾಠಿಯಲ್ಲಿ – ಅಲಾ ಎಂದೂ ಕರೆಯುವರು. ಈ ಸಸಿಯು ಏಕದಳೀಯ ವಿಭಾಗದ "ಝಿಂಝಿಬರೇಸೀ" ಎಂಬ ಕುಟುಂಬಕ್ಕೆ ಸೇರಿದೆ. ಈ ಸಸಿಯ ಸುವಾಸಿತ ಪ್ರಕಂದವೇ (Rhizome) ನಮ್ಮ ಹಸಿ ಶುಂಠಿ.

ಶುಂಠಿಯ ಬೆಳೆಯನ್ನು ಆದಿಕಾಲದಿಂದಲೂ ತೆಗೆಯುತ್ತಿದ್ದಾರಲ್ಲದೆ, ಇದು ಒಂದು ವ್ಯಾಪಾರಿ ಸರಕಾಗಿದೆ. ಸಂಸ್ಕೃತ ಮತ್ತು ಚೀನಿ ಭಾಷೆಗಳಲ್ಲಿ ಶುಂಠಿಯ ಔಷಧೀಯ

ಗುಣವರ್ಣನೆ ಎಷ್ಟೋ ಕಡೆಯಲ್ಲಿ ಕಂಡು ಬರುವುದು. ಗ್ರೀಕ್ ಮತ್ತು ರೋಮನ್‌ರು ಕೂಡಾ ಇದನ್ನರಿತಿದ್ದರೆಂಬುದಕ್ಕೆ ಎಷ್ಟೋ ಪುರಾವೆಗಳಿವೆ. ಶುಂಠಿಯ ತೌರು ದಕ್ಷಿಣ ಏಶ್ಯಾದಲ್ಲಿಯೇ ಇರಬಹುದೆಂದು ತಜ್ಞರ ಊಹೆ. ಆದರೆ ಇಲ್ಲಿ ಶುಂಠಿಯ ಪೂರ್ವಭಾವೀ ಪ್ರಭೇದಗಳು ಕಂಡು ಬಂದಿಲ್ಲ. ಆದ್ದರಿಂದ ಇದರ ಉಗಮ ಸ್ಥಾನವನ್ನು ನಿರ್ಧರಿಸುವುದು ಕ್ಲಿಷ್ಟವಾಗಿದೆ. ಪ್ರಪಂಚದಲ್ಲಿ ಶುಂಠಿಯನ್ನು ಭಾರತ, ಮಲಾಯಾ-ಚೀನಾ ಮತ್ತು ವೆಸ್ಟ್ ಇಂಡೀಸಿನ ಜಮೇಕಾದಲ್ಲಿ ಬೆಳೆಯುವರು. ಆಫ್ರಿಕಾದ ಸಿಯೋರೋಲಿಯೋನದಲ್ಲಿ ಕೂಡಾ ಇದನ್ನು ಬೆಳೆಯುತ್ತಿದ್ದಾರೆ. ಭಾರತದಲ್ಲಿ ಪ್ರತಿ ವರ್ಷ 10–14 ಸಾವಿರ ಟನ್ ಶುಂಠಿ ಉತ್ಪತ್ತಿಯಾಗುವುದು. ಇದನ್ನು ದಕ್ಷಿಣ ಭಾರತದಲ್ಲಿಯೇ ಹೆಚ್ಚಾಗಿ ಬೆಳೆಯುವರು - ಕೇರಳ, ಮೈಸೂರು, ತಮಿಳುನಾಡುಗಳಲ್ಲಿಯೇ ಹೆಚ್ಚು. ಬಿಹಾರದ ರಂಗಾಪುರ ಮತ್ತು ಗುಜರಾತ್ ರಾಜ್ಯದ ಸುರತ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಕೂಡಾ ಇದರ ಬೆಳೆಯನ್ನು ತೆಗೆಯುವರು. ಕೇರಳರಾಜ್ಯವು 10 ಸಾವಿರ ಟನ್ನು ಬೆಳೆ ಉತ್ಪಾದಿಸಿದರೆ ಮೈಸೂರು ರಾಜ್ಯದಲ್ಲಿ 1200 ಎಕರೆ ಭೂಮಿಯಲ್ಲಿ 2 ಸಾವಿರ ಟನ್ನು ಬೆಳೆ ತೆಗೆಯುವರು. ಕೇರಳದ ಮಲಬಾರ್ ಪ್ರದೇಶವು ಶುಂಠಿಯನ್ನು ರಫ್ತು ಮಾಡುವುದರಲ್ಲಿ ಅಗ್ರಸ್ಥಾನವನ್ನು ಹೊಂದಿದೆ.

"ಶುಂಠಿ" ಎಂಬುದು ಈಗ ಬೇಸಾಯಗೊಂಡಿರುವ ಒಂದೇ ಒಂದು ವಿಧವೆಂದು ಹೇಳಬಹುದು. ಬೇಸಾಯಗೊಳ್ಳುವ ದೇಶದ ಅನುಗುಣವಾಗಿ ಇದನ್ನು ಜಮೇಕಾ ಶುಂಠಿ, ಆಫ್ರಿಕನ್ ಶುಂಠಿ, ಕೊಚಿನ್ ಶುಂಠಿ, ಇಂಡಿಯನ್ ಅಥವಾ ಬಂಗಾಳ ಶುಂಠಿ ಎಂದು ಕರೆಯುತ್ತಾರೆ. ಇವುಗಳಲ್ಲಿ ಕೆಲವು ಗುಣವ್ಯತ್ಯಾಸಗಳಿರಬಹುದು. ಉದಾ:— ಜಮೇಕಾ ಶುಂಠಿ ಅತೀ ಸುವಾಸನೆಯನ್ನು ಹೊಂದಿದ್ದರೆ, ಆಫ್ರಿಕನ್ ಶುಂಠಿ ಅತೀ ಖಾರವನ್ನು ಹೊಂದಿರಬಹುದು. ಇಂಡಿಯನ್ ಅಥವಾ ರತೂನ ಶುಂಠಿಯು ಜಮೇಕಾ ಮಾದರಿಯದಾದರೂ ಆಕಾರದಲ್ಲಿ ಚಿಕ್ಕದಾಗಿದ್ದು ಇದನ್ನು ಕೂಳೆ ಬೆಳೆಯಿಂದ ಬೇಸಾಯ ಮಾಡುವರು. ಕೇರಳದ ಅಂಬಲವಯಾಲು ಕೃಷಿ ಸಂಶೋಧನಾ ಕೇಂದ್ರದಲ್ಲಿ ದೇಶ ಮತ್ತು ವಿದೇಶದಿಂದ ಬಂದ ಒಟ್ಟು 19 ವಿಧಗಳನ್ನು ಬೆಳೆಸಿ ಸಂಶೋಧನೆ ನಡೆಸಲಾಗಿದೆ. ಇವುಗಳಲ್ಲಿ ಬ್ರೆಜಿಲ್ ದೇಶದಿಂದ ಬಂದ ರಿಯೋಡೀ ಜಾನೆರೋ ಎಂಬ ವಿಧವು ನಮ್ಮ ದೇಶದ ವಿಧಗಳಿಗಿಂತ 2–3 ಪಟ್ಟು ಹೆಚ್ಚು ಇಳುವರಿ ಹೊಂದುವದೆಂದು ಕಂಡಿದ್ದಾರೆ. ಇದಲ್ಲದೆ "ಮಾವುಶುಂಠಿ" – ಮ್ಯಾಂಗೋ ಜಿಂಜರ್ ಎಂಬುದು ಶುಂಠಿಯ ಕುಟುಂಬಕ್ಕೆ ಸೇರಿದ ಅರಿಶಿಣದ ಪ್ರಭೇದವೇ ಹೊರತು ಶುಂಠಿಗೆ ಸಂಬಂಧವೇ ಇಲ್ಲ. ಇದು ಕರ್ಕುಮಾ ಅಮಾಡಾ ಎಂಬ ಅರಿಶಿಣದ ಪ್ರಭೇದದ ಪ್ರಕಂದವು. ಆದರೆ ಇದಕ್ಕೆ ಮಾವಿನ ವಾಸನೆ ಹೊಂದಿದ್ದರಿಂದ ಮತ್ತು ಕೊಂಚ ಖಾರವಾಗಿರುವುದರಿಂದ "ಮಾವು ಶುಂಠಿ" ಎಂದು ತಪ್ಪು ನಾಮಕರಣ ಹೊಂದಿದೆಯೆನ್ನಬಹುದು. "ಜಪಾನ್ ಶುಂಠಿ" ಎಂದು ಕರೆಯಲ್ಪಡುವ ಇನ್ನೊಂದು ಕೂಡಾ ನಿಜವಾದ ಶುಂಠಿಯೇ ಅಲ್ಲ.

ಇದು ಝಿಂಝಿಬೆರ್ ಮೊಯಿಗಾ ಎಂಬ ಪ್ರಭೇದದ ಹರವಾದ ಆಕಾರ ಹೊಂದಿದ ಪ್ರಕಂದವು. ಇದನ್ನು ನಿಜವಾದ ಶುಂಠಿಯೊಂದಿಗೆ ಕಲಬೆರಿಕೆ ಮಾಡಲು ಉಪಯೋಗಿಸುವರು.

ಹವೆ ಮತ್ತು ಭೂಮಿಗುಣ ಇತ್ಯಾದಿ:— ಶುಂಠಿಯನ್ನು ಸಮುದ್ರ ಪಾತಳಿಯಿಂದ 5000 ಅಡಿ ಎತ್ತರದ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಹುದು. ಇದರ ಬೆಳೆಗೆ ಹೆಚ್ಚಾಗಿ ನೆರಳು, ತೇವ ಮತ್ತು ಒಳ್ಳೇ ನೀರಾವರಿ ಅಥವಾ ಹೆಚ್ಚು ಮಳೆಬೀಳುವಂತಹ ಪ್ರದೇಶವು ಬೇಕು. ಆದ್ದರಿಂದಲೇ ಕೇರಳದ ಮಲಬಾರ ಮತ್ತು ಮೈಸೂರಿನ ಮಲೆನಾಡು ಪ್ರದೇಶಗಳಲ್ಲಿ ಇದನ್ನು ಬೆಳೆಯುವರು. ಶುಂಠಿಯನ್ನು ತರತರಹದ ಭೂಮಿಯಲ್ಲಿ ಬೆಳೆಯಬಹುದು. ಆದರೆ ಭೂಮಿಯು ಚವಳು ಹೊಂದಿರಬಾರದು. ಮತ್ತು ನೀರು ಹರಿದು ಹೋಗಲು ಅನುಕೂಲ ಹೊಂದಿರಬೇಕು. ಇದು ಹೆಚ್ಚಾಗಿ ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು ಮಲಬಾರ ಪ್ರದೇಶದ ಲ್ಯಾಟರೈಟ್ ಭೂಮಿಯಲ್ಲಿ ಚೆನ್ನಾಗಿ ಕುದುರುವುದು.

ಬೇಸಾಯ ವಿಧಾನ :— ಶುಂಠಿಯ ಬೆಳೆಗೆ 9–10 ತಿಂಗಳು ಬೇಕು. ಆದ್ದರಿಂದ ವರುಷಕ್ಕೆ ಒಂದೇ ಬೆಳೆ. ಆದರೆ ಕೆಲವು ವೇಳೆ ಇದನ್ನು ಭೂಮಿಯಲ್ಲಿಯೇ ಬಿಟ್ಟು ಎರಡನೆಯ ಕೂಳೆ ಬೆಳೆಯನ್ನು ತೆಗೆಯುವರು. ಮೈಸೂರು ರಾಜ್ಯದಲ್ಲಿ ಶುಂಠಿಯನ್ನು ಇನ್ನೊಂದು ಬೆಳೆಯೊಂದಿಗೆ "ಮಿಶ್ರಬೆಳೆ" ಯೆಂದು ತೆಗೆಯುವರು. ಇದರಿಂದ ಶುಂಠಿಗೆ ನೆರಳು ಒದಗಿಸಿದಂತಾಗುವುದು. ಕೆಲವೆಡೆ ಇದನ್ನು ಬಾಳೆ ತೋಟದಲ್ಲಿಯೂ ಬೆಳೆಯುವರು. ಇನ್ನೂ ಕೆಲವು ಪ್ರದೇಶಗಳಲ್ಲಿ ತೊಗರೆ, ಹರಳುಗಳೊಂದಿಗೆ ಬೆಳೆಯುವರು ಶುಂಠಿಯೊಂದಿಗೆ ವರುವರುಷಕ್ಕೆ ಪರ್ಯಾಯ ಹೊಂದುವ ಬೆಳೆಗಳೆಂದರೆ —(Rotation-crops) ನೀರಾವರಿ ರಾಗಿ, ಮುಸುಕಿನ ಜೋಳ, ಮೆಣಸಿನಕಾಯಿ ಮತ್ತಿತರ ತೋಟದ ಬೆಳೆಗಳು. ಮಲಬಾರದಂತಹ ಅತಿವೃಷ್ಟಿ ಪ್ರದೇಶಗಳಲ್ಲಿ ಟೆಪಿಯೋಕಾ–(ಮರಗೆಣಸು) ಮತ್ತು ವ್ಯಾಮಸೂರಣದಂತಹ ಗಡ್ಡೆಗಳು ಪರ್ಯಾಯ ಹೊಂದುವುವು.

ನೀರಾವರಿ ಬೇಸಾಯಕ್ಕೆ ಮೊದಲು ಭೂಮಿಯನ್ನು ಚೆನ್ನಾಗಿ ಅಗೆಯುವರು. ಸುಮಾರು 1 ರಿಂದ $1\frac{1}{2}$ ಅಡಿಯಷ್ಟು ಆಳದಲ್ಲಿ ಎಕರೆಗೆ 30–40 ಸಗಣಿ ಗೊಬ್ಬರವನ್ನು ಹಾಕಿ ಭೂಮಿಯನ್ನು ಒಳ್ಳೇ ಹದಕ್ಕೆ ಬರುವ ಹಾಗೆ ಉಳುಮೆ ಮಾಡುವರು. ಸುತ್ತಲೂ 1–2 ಅಡಿ ಆಳದ ಕಾಲುವೆಯನ್ನು ತೋಡಿ ಹೆಚ್ಚಿನ ನೀರು ಹರಿದು ಹೋಗುವ ಹಾಗೆ ವ್ಯವಸ್ಥೆಗೊಳಿಸುವರು. ಒಳ್ಳೇ ರೋಗಮುಕ್ತವಾದ ಹಾಗೂ ಅಂಕುರ ಮೊಗ್ಗನ್ನು ಹೊಂದಿರುವ 1–2 ಅಂಗುಲದಷ್ಟು ಉದ್ದವಾಗಿರುವ ಪ್ರಕಂದ ತುಣುಕುಗಳನ್ನು ಬೀಜವಾಗಿ ಉಪಯೋಗಿಸುವರು. ಶುಂಠಿಯನ್ನು 2 ಅಂಗುಲ ಆಳದ ಗಾಡಿಯಲ್ಲಿ (furrow) 9 ಅಂಗುಲ ಅಂತರದಲ್ಲಿ ಕೈಯಿಂದ ನೆಡುವರು. ಇದೇ

ವೇಳೆಗೆ ಸುತ್ತಲೂ ತೊಗರೆ ಅಥವಾ ಹರಳನ್ನು ನೆರಳಿನ ಸಲುವಾಗಿ ಬಿತ್ತನೆ ಮಾಡುವರು. 10–20 ದಿನಗಳಲ್ಲಿ ಶುಂಠಿಯು ಮೊಳೆಯೊಡೆದು ಹೊರಬರುವುದು. ಒಂದೆರಡು ಸಲ ಕಳೆ ತೆಗೆಯುವರು. ಕೆಲವು ಪ್ರದೇಶಗಳಲ್ಲಿ 20 ಕೆ.ಜಿ. ಅಮೋನಿಯಮ್ ಸಲ್ಫೇಟ್ ಮತ್ತು 80 ಕೆ.ಜಿ. ಹರಳಿನ ಹಿಂಡಿಯನ್ನು ಹಾಕುವರು. ಕೆಲವು ತಿಂಗಳುಗಳ ಅವಧಿಯಲ್ಲಿ ಶುಂಠಿಯ ಸಸಿಯು ಎರಡು ಅಡಿಯಷ್ಟು ಎತ್ತರವಾಗಿ ಪ್ರಕಂದವು ಭೂಮಿಯಲ್ಲಿ ಕವಲೊಡೆದು ಹರಡಿಕೊಂಡು ಶುಂಠಿಯು ಸುಗ್ಗಿಗೆ ತಯಾರಾಗುವುದು. ಹೀಗೆ ಹದವಾದ ಶುಂಠಿಯ ಪ್ರಕಂದಗಳನ್ನು ತೋಡಿ ತೆಗೆಯುವರು. ಕೆಲಸಲ ಪೂರ್ಣವಾಗಿ ತೋಡದೆ ಅರ್ಧ ಮಾತ್ರ ತೆಗೆದು, ಅರ್ಧವನ್ನು ಭೂಮಿಯಲ್ಲಿಯೇ ಬಿಡುವರು. ಮಲಬಾರ್ ಮತ್ತು ಮೈಸೂರಿನ ಮಲೆನಾಡಿನಲ್ಲಿ ಶುಂಠಿಯನ್ನು ಹೆಚ್ಚಾಗಿ ಮಳೆ ಅನುಸರಿಸಿ ಬೆಳೆಯುವರು. ಈ ಪ್ರದೇಶಗಳಲ್ಲಿ ಭೂಮಿಯನ್ನು 15–18 ಅಂಗುಲ ಎತ್ತರದ ಹಾಗೂ 24 ಅಂಗುಲ ಅಗಲವಾದ ಉದ್ದ ಪಟ್ಟೆ (ಹಾಳೆ) ಗಳನ್ನಾಗಿ ಮಾಡುವರು. ಈ ಪಟ್ಟೆಗಳು 9–12 ಅಂಗುಲದ ಕಾಲುವೆಗಳಿಂದ ಬೇರ್ಪಟ್ಟಿರುವವು. ಈ ಬೇಸಾಯವೂ ನೀರಾವರೀ ಬೇಸಾಯದಂತೆಯೇ ಇದ್ದು ಬಿತ್ತನೆ ಆದ ನಂತರ ಎಲೆಗಳಿಂದ ಹೆಚ್ಚಾಗಿ ನಕ್ಸವೊಮಿಕಾ – (ನಂಜನ ಕೊರಡು) ಸಸಿಯ ತೊಪ್ಪಲಿನಿಂದ ಮುಚ್ಚುವರು. ಇದರಿಂದ ಬಿಸಿಲಿಗೆ ಬಿತ್ತನೆಮಾಡಿದ ಶುಂಠಿ ಒಣಗುವುದಿಲ್ಲ ಮತ್ತು ಹೆಚ್ಚು ಮಳೆಯಿಂದ ರಕ್ಷಿಸಲ್ಪಡುವುದು. ಬಿತ್ತನೆಯ ಬೀಜದ ದರ ಇಲ್ಲಿ 300–600 ಕೆ.ಜಿ. ಮಾತ್ರ. ಆದರೆ ನೀರಾವರೀ ಬೇಸಾಯದಲ್ಲಿ ಇದು 900 ಕೆ.ಜಿ.ಯವರೆಗೆ ಏರಬಹುದು.

ಸುವಾಸಿತ ಪ್ರಕಂದಗಳನ್ನು ತೋಡಿ ತೆಗೆದ ನಂತರ ಚೆನ್ನಾಗಿ ತೊಳೆದು ಹಸಿ ಶುಂಠಿಯನ್ನೇ ಮಾರುಕಟ್ಟೆಗೆ ಕಳುಹಿಸುವರು. ಶುಂಠಿಯ ಇಳುವರಿ ಅದನ್ನು ತೋಡಿದ ರೀತಿ. ಬೇಸಾಯದ ಮಾದರಿ. ಮತ್ತು ಬೆಳೆಯ ಹದ ಮುಂತಾದವುಗಳ ಮೇಲೆ ಅವಲಂಬಿಸಿದೆ. ಒಳ್ಳೇ ನೀರಾವರಿ ತೋಟ ಪಟ್ಟೆಗಳಲ್ಲಿ 3000–4500 ಕೆ.ಜಿ. ಯಷ್ಟು ಒಣ ಶುಂಠಿಯು ಪ್ರತಿ ಎಕರೆಗೆ ಉತ್ಪಾದನೆ ಹೊಂದುವುದು. ಆದರೆ ಕೆಲವು ಪ್ರದೇಶಗಳಲ್ಲಿ 10 ಸಾವಿರ ಕೆ.ಜಿ. ಯಷ್ಟು ಇಳುವರಿ ಹೊಂದಿದ ದಾಖಲೆಗಳಿವೆ.

ಒಣ ಶುಂಠಿ ತಯಾರಿಸುವ ವಿಧಾನ : ಶುಂಠಿಯ ಬೆಳೆಯ ಹೆಚ್ಚಿನ ಭಾಗವು ಒಣಶುಂಠಿಯೆಂದೇ ಮಾರುಕಟ್ಟೆಗೆ ಬರುವುದು. ಒಣಗಿದ ಶುಂಠಿಯ ಹಸಿಯ ಪ್ರಕಂದಗಳ ತೊಗಟೆ ಸುಲಿದು ಚೆನ್ನಾಗಿ ಒಣಗಿಸಿ ಚೆಲುವೆ – (ಬ್ಲೀಚ್) ಮಾಡಿ ತಯಾರಿಸುವರು. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ವಿಧಾನಗಳಿಂದ ಒಣ ಶುಂಠಿಯನ್ನು ತಯಾರಿಸುವರು. ಗುಜರಾತ್ ರಾಜ್ಯದ ಸುರತ್‌ದಲ್ಲಿ ಹಸಿ ಶುಂಠಿಯನ್ನು ಚೆನ್ನಾಗಿ ತೊಳೆದು. ನೀರಿನಲ್ಲಿ ನೆನೆಬಿಟ್ಟು ಕಪ್ಪೆಚಿಪ್ಪುಗಳಿಂದ ತೊಗಟೆ ಸುಲಿದು ಮತ್ತೊಮ್ಮೆ ಚೆನ್ನಾಗಿ ತೊಳೆದು 3–4 ದಿನ ಬಿಸಿಲಿನಲ್ಲಿ ಒಣಗಿಸುವರು. ಇದರಿಂದ ಪ್ರಕಂದಗಳು ಚೆಲುವೆ ಹೊಂದಿ ಬಿಳಿ ಬಣ್ಣಕ್ಕೆ ಬರುವುವು. ನಂತರ ಪ್ರಕಂದಗಳನ್ನು ಕೈಯಲ್ಲಿ ಚೆನ್ನಾಗಿ

ತಿಕ್ಕುವರು, ಪುತ್ತೆ ಒಣಗಲು ಹಾಕುವರು. 3–4 ದಿನ ಒಣಗಿದ ಮೇಲೆ ಇನ್ನೊಮ್ಮೆ ಕೈಯಲ್ಲಿ ತಿಕ್ಕಿ ನಂತರ ನೀರಿನಲ್ಲಿ 2 ಗಂಟೆಕಾಲ ನೆನೆ ಇಡುವರು. ಇನ್ನೊಮ್ಮೆ ಒಣಗಿಸಿ ಗೋಣಿತಟ್ಟಿನ ಮೇಲೆ ತಿಕ್ಕಿ ಹೊಲಸನ್ನೂ ತೊಗಟೆಯನ್ನೂ ಶುಂಠಿಯಿಂದ ಬೇರ್ಪಡಿಸಿ ಒಣ ಶುಂಠಿಯನ್ನು ಮಾಡುವರು. ಈ ವಿಧಾನಕ್ಕೆ ವೇಳೆ ಹೆಚ್ಚಾದರೂ, ಈ ರೀತಿಯಲ್ಲಿ ತಯಾರಿಸಿದ ಒಣ ಶುಂಠಿಯು ಸುವಾಸನೆ ಮತ್ತು ಅದರಲ್ಲಿ ಅಡಕವಾಗಿರುವ ಮಾಧುರ್ಯತೆ ಕಡಿಮೆ ಹೊಂದುವುದಿಲ್ಲ. ಇದಲ್ಲದೆ ಶುಂಠಿಯು ಆಕಾರದಲ್ಲಿ ಕೂಡಾ ಹೆಚ್ಚಿನ ವ್ಯತ್ಯಾಸ ವಾಗುವುದಿಲ್ಲ. ಮಲಬಾರಿನಲ್ಲಿ ಒಣಗಿಸುವ ವಿಧಾನವೇ ಬೇರೆ. ಇಲ್ಲಿ ಸಿಮೆಂಟಿನ ಹರ ವಾದ ತೊಟ್ಟಿಗಳಲ್ಲಿ ಪ್ರಕಂದಗಳನ್ನು ಹಾಕಿ ನೀರು ಬಿಟ್ಟು ಚೆನ್ನಾಗಿ ಕಾಲಿನಿಂದ ತುಳಿಯುವರು. ಇದರಿಂದ ಪ್ರಕಂದಕ್ಕೆ ಹತ್ತಿರುವ ಮಣ್ಣು ಮತ್ತು ಅದರ ತೊಗಟೆ ಕಳಚಿಕೊಳ್ಳುವವು. ಹೀಗೆ ಎರಡು ಮೂರು ಸಲ ನೀರು ಬದಲಿಸುತ್ತ ತುಳಿಯುವರು. ನಂತರ ತೊಗಟೆ ಕಳಚಿದ ಶುಂಠಿಯ ಪ್ರಕಂದಗಳನ್ನು ಸುಣ್ಣದ ನೀರು ತುಂಬಿದ ತೊಟ್ಟಿಗಳಲ್ಲಿ ಹಾಕುವರು. ಕೆಲ ಸಮಯದ ನಂತರ ತೆಗೆದು ಒಂದು ರೂಮಿನಲ್ಲಿ ಶೆಲ್ಫುಗಳ ಮೇಲೆ ಹರಡಿ ಗಂಧಕದ ಹೊಗೆಯಾಡಿಸುವರು. ಹೀಗೆ ಎರಡು ಮೂರು ಸಲ ಮಾಡಿದ ನಂತರ ಬಿಸಿಲಿನಲ್ಲಿ ಒಣಗಿಸುವರು. ಇದರಿಂದ ಒಣಶುಂಠಿ ತಯಾರಾಗುವುದು. ಈ ವಿಧಾನದಿಂದ ತಯಾರಿಸಿದರೆ ನೂರಕ್ಕೆ 16–20 ಭಾಗ ಮಾತ್ರ ಇಳುವರಿ ಹೊಂದುವದು.

ಕೀಟ ರೋಗ ರುಜಿನಗಳು : ಡಾಯಕೋಕ್ರೊಸಿಸ್ ಪಂಕ್ಟಿಫೆರಾಲಿಸ್ ಎಂಬ ಪ್ರಕಂದ ಕೊರೆಯುವ ಹುಳವು ಅರಿಶಿನದ ಬೆಳೆಯನ್ನು ನಾಶಮಾಡುವಂತೆಯೇ ಶುಂಠಿಯ ಪ್ರಕಂದಗಳನ್ನು ಕೊರೆದು ಬೆಳೆಯನ್ನು ಹಾಳುಮಾಡುವುದು. ಇದಕ್ಕೆ ನಿರ್ದಿಷ್ಟವಾದ ನಿವಾರಣೋಪಾಯವಿಲ್ಲ. ಪಿಥಿಯಮ್‌ಗ್ರಾಸ್ಪೈಲ ಎಂಬ ಬೂಷ್ಟದಿಂದ ಎಲೆ ಮತ್ತು ಮೇಲ್ಭಾಗವು ಕೊಳೆತು ನಂತರ ಪ್ರಕಂದವೂ ಸೇರಿ ಬೆಳೆ ನಾಶಹೊಂದುವದು. ನಿವಾರ ಣೋಪಾಯವೆಂದರೆ ರೋಗಬರದಂತೆ ಮುಂಜಾಗ್ರತೆ ವಹಿಸುವುದು. ಭೂಮಿ ಯಲ್ಲಿ ಹೆಚ್ಚಿನ ನೀರು ನಿಲ್ಲದಂತೆ ನೋಡಿಕೊಳ್ಳುವುದು. ಇದಲ್ಲದೆ ರೋಗ ಮುಕ್ತ ಪ್ರಕಂದ ಗಳನ್ನು ಬಿತ್ತನೆ ಮಾಡುವುದು. ಮತ್ತು ಬೆಳೆ ಪರ್ಯಾಯ ಮಾಡುವುದು.

ಶುಂಠಿಯ ಗುಣಾಂಶಗಳು ಮತ್ತು ಉಪಯೋಗ : ಶುಂಠಿಯಲ್ಲಿ 0.25–0.30% ಎಣ್ಣೆ 56% ಪಿಷ್ಟ: 1.7–9.00% ನಾರು 2–5% ಬೂದಿ ಇರುವುದು. ಶುಂಠಿಯ ಹೆಚ್ಚಿನ ಅಂಶವು ಪಿಷ್ಟದಿಂದಲೇ ಆಗಿರು ವುದು. ಇದರ ಸುವಾಸಿತ ಆಹ್ಲಾದಕರವಾದ ವಾಸನೆಯು ಇದರಲ್ಲಿರುವ 2–3% ಅಂಶದ ಎಣ್ಣೆಯಲ್ಲಿ ಅಡಕವಾಗಿದೆ. ಇದರ ಒಗರುತನ ಇದರಲ್ಲಿರುವ ಹಳದೀ ವರ್ಣದ "ಝಿಂಝಿರಾಲ" ಎಂಬುದರಲ್ಲಿದೆ. ಇದರಲ್ಲಿ ಕೆಲ ಅಂಶ ರಾಳವು (Resin) ಇರುವುದು. ರಾಳವು ಎಣ್ಣೆಯೊಂದಿಗೆ ಸಮನ್ವಯಗೊಂಡಿರುವುದರಿಂದಲೇ ಅದು ಹಳದೀ ವರ್ಣ ವಾಗಿರುವುದು.

ಶುಂಠಿಯು ನಮ್ಮ ನಿತ್ಯ ಜೀವನದಲ್ಲಿ ಎರಡು ವಿಧದಲ್ಲಿ ಮುಖ್ಯ ಪಾತ್ರ ವಹಿಸುವುದು :–

1. ಮಸಾಲೆ ಪದಾರ್ಥ. ಇನ್ನೊಂದು 2) ಔಷಧೀಯ ಸಾಮಾನು. ಇದನ್ನು ಸಕ್ಕರೆ ಅಥವಾ ಬೆಲ್ಲದಿಂದ ತಯಾರಿಸಿದ ಮೊರಬ್ಬದಂತೆ ಮಾಡಿ ಬಹುಕಾಲ ಕಾಯ್ದಿರಿಸಬಹುದು. ಅಥವಾ ಉಪ್ಪಿನೊಂದಿಗೆ ಬೆರೆಸಿ. ಇದರ ನೀರನ್ನೂ ಕೂಡಾ ಉಪಯೋಗಿಸಬಹುದು. ಗರಮ್ ಮಸಾಲೆಯಲ್ಲಿ "ಅಲಾ"– ಹಸಿ ಶುಂಠಿ ಒಂದು ಅತಿ ಮುಖ್ಯ ವಸ್ತು. ಔಷಧಿಗಳಲ್ಲಿ ಅಜೀರ್ಣ ನಿವಾರಣೋಪಾಯಗಳಲ್ಲಿ ಶುಂಠಿಯ ಪಾತ್ರ ಪ್ರಪ್ರಥಮವಾಗಿದೆ. ಆಯುರ್ವೇದದ ಮೂರು ಮುಖ್ಯ ಪದಾರ್ಥಗಳು: ಕರೀ ಮೆಣಸು, ಬಾಲಮೆಣಸು, ಮತ್ತು ಶುಂಠಿ. ಇದರಿಂದ ಶುಂಠಿಯ ಮಹಿಮೆ ಎಷ್ಟು ಅಗಾಧವಾಗಿದೆ ಎಂಬುದನು ನೀವು ಊಹಿಸಬಹುದು.

ಬಾಂಗ್ಲಾ ಗೀತ

ವೇಣುಗೋಪಾಲ ಸೊರಬ

ಬೆಳಕೆಂದು ತಿಳಿದದ್ದು ರಕ್ತದೋಕುಳಿಯಾಗಿ
ಸಿಹಿತಿನಿಸು ಸಂದೇಶ ಸಿಡಿಗುಂಡು ಸಿಡಿಸಿ
ಆಕ್ರಂದನದ ದನಿಗೆ ದೌರ್ಜನ್ಯವಪ್ಪಳಿಸಿ
ಬೆಳೆಯು ಬಹುದೇ ಬದುಕು ?–
ಕುಡಿಗಣ್ಣು ಮೊಳಕೆಗಳು ಭೇದಿಸಿವೆ ಬಂಡೆ
ಬದುಕು ಬದುಕಿಗೆ ನಿಂತು ರಕ್ತದುಂಡೆ

ಕೊಳೆತ ಕತ್ತಲೆಯಲ್ಲಿ ಭರದ ಬಿರುಗಾಳಿ ಬೀಸಿ
ಉರಿಯ ಕೊತ್ತಳದಲ್ಲಿ ಅಗ್ನಿಸ್ನಾತಕರೆನಿಸಿ
ಅಂತರಂಗದ ಗುಡಿಗೆ ರಕ್ತಸೇಚನೆ ಸಲಿಸಿ
ಬೆಳೆದು ಬೆಳಗಿತು ಬದುಕು –
ತರುಣರು ಮುದುಕರು ಹೆಣ್ಣುಗಳ ಅಟ್ಟೆ
ಎತ್ತಿನಿಲ್ಲಿಸಿದ ಪಟಕೆ ಚಿನ್ನಲೇಪದ ನಿಷ್ಠೆ

ಮೈ ಕೊಡವಿ ಸಿಡಿದೆದ್ದು ಸಾಹಸದಿ ಬಲಿಗೊಟ್ಟು
ದುಷ್ಟಶೋಷಣೆ ಸುಲಿಗೆ ಹೆಡಮುರಿಗೆ ಕಟ್ಟು
ಮುಕ್ತಿಬಾಹಿನಿ ಎದೆಗೆ ಕಲಶ, ನಡುಕಟ್ಟು
ಬೆಳೆಯು ಬೆಳಗುವ ಬದುಕು —
ಬಂಗಾರ ನೆಲದಲ್ಲಿ ಬತ್ತ ತೆನೆ ಹಾಲು
ಹೊಂಬಾಳೆಗೆದೆ ನಟ್ಟು ಅಮೃತದ ಪಾಲು

ಪ್ರಾಚೀನ ನೆಲದಿಂದ ಮೊಳಗಿದುದ್ಘೋಷ
ಮನೆಯ ಅಂಗಳ ಪೇಟೆ ಗದ್ದೆ ನದಿ ಮೊರೆತ
ಕಮ್ಮಾರ ಕುಂಬಾರ ಹರಿಗೋಲಿನಂಬಿಗ
ಎಲ್ಲರೊಂದೇ ಉಲಿಹ, ಒಂದೆ ಮಾತು—
ಅಮರವಾಗಲಿ ನನ್ನ ಚಿನ್ನದ ಬಾಂಗ್ಲಾ
ಮುಗಿಲ ಭೇದಿಸುತಿಹುದು "ಜೊಯ್ ಬಾಂಗ್ಲಾ"

ಸಾಮೂಹಿಕ ಸಂಪರ್ಕ

ಬಿ. ಎಸ್. ಚಂದ್ರಶೇಖರ

ಅನುಭವದಲ್ಲಿ ಪಾಲ್ಗೊಳ್ಳುವುದನ್ನು 'ಸಂಪರ್ಕ' ಎಂದು ಸಾಮಾನ್ಯವಾಗಿ ವರ್ಣಿಸಬಹುದು. ಸಮಾಚಾರ, ಅಭಿಪ್ರಾಯ ಅಥವಾ ಮನೋವೃತ್ತಿಯನ್ನು ಹಂಚಿಕೊಳ್ಳುವುದು ಸಂಪರ್ಕ. ಸಂಪರ್ಕ ಏರ್ಪಡುವುದಕ್ಕೆ ಮೂರು ಅಂಶಗಳು ಅಗತ್ಯ. ಒಂದು ಉಗಮಸ್ಥಾನ, ಎರಡು ಸಂದೇಶ ಮತ್ತು ಮೂರು ಉದ್ದೇಶಿತ ಸ್ಥಳ. ಉಗಮಸ್ಥಾನ: ಮಾತನಾಡುವ , ಬರೆಯುವ, ಚಿತ್ರಿಸುವ, ಸಂಜ್ಞೆ ಮಾಡುವ ವ್ಯಕ್ತಿಯಾಗಿರಬಹುದು. ಅಥವಾ ಪತ್ರಿಕಾ ಕಛೇರಿಯಂತಹ ಸಂಸ್ಥೆಯಿರಬಹುದು. ಸಂದೇಶ: ಆಡುವ ಮಾತಿನ ರೂಪದಲ್ಲಿರಬಹುದು. ಕಾಗದದ ಮೇಲಿನ ಅಕ್ಷರ, ಚಿತ್ರ ರೂಪದಲ್ಲಿರಬಹುದು. ಹಾರುವ ಬಾವುಟ ಅಥವಾ ಇದೇ ರೀತಿಯ ಅರ್ಥವನ್ನು ಕೊಡಬಹುದಾದ ಯಾವುದಾದರೂ ಸಂಜ್ಞೆಯಿರಬಹುದು. ಈ ಸಂದೇಶ ತಲುಪಬೇಕಾದ ಸ್ಥಳ ಭಾಷಣ ಕೇಳುತ್ತಿರುವ ವ್ಯಕ್ತಿ, ಕ್ರೀಡೆಯನ್ನು ವೀಕ್ಷಿಸುತ್ತಿರುವ ಗುಂಪು ಆಗಿರಬಹುದು.

ಮುಖಾಮುಖಿ, ಗುಂಪಿನ ಹಾಗೂ ಸಾಮೂಹಿಕ ಸಂಪರ್ಕ

ಸಂಪರ್ಕದ ತೀರಾ ಸರಳರೂಪ ಇಬ್ಬರ ನಡುವಿನ ಸಂಭಾಷಣೆ. ಇಲ್ಲಿ ಮಾತನಾಡುತ್ತಿರುವ ವ್ಯಕ್ತಿ ಸಂಪರ್ಕದ ಉಗಮಸ್ಥಾನವಾಗುತ್ತಾನೆ. ಅವನು ಹೇಳಬೇಕಾಗಿರುವ ಸಂದೇಶವನ್ನು ಭಾಷೆಯ ಸಂಕೇತದಲ್ಲಿ ಹೇಳುತ್ತಾನೆ. ಆ ಮಾತನ್ನು ಕೇಳುತ್ತಿರುವವನು ಆ ಸಂಕೇತವನ್ನು ಅರ್ಥ ಮಾಡಿಕೊಂಡು ವ್ಯಕ್ತಿಯ ಸಂದೇಶವನ್ನು ತಿಳಿಯುತ್ತಾನೆ. ಇಂತಹ ಮುಖಾಮುಖಿ ಸಂಪರ್ಕದಲ್ಲಿನ ಒಂದು ಮುಖ್ಯ ಅಂಶವೆಂದರೆ ಅದು ಕೇಳುತ್ತಿರುವ ವ್ಯಕ್ತಿಯಿಂದ ಬರುವ ಪ್ರತಿಕ್ರಿಯೆ. ತಾನು ಹೇಳುತ್ತಿರುವುದು ತನ್ನ ಶ್ರೋತೃವಿಗೆ ಅರ್ಥವಾಗುತ್ತಿದೆಯೇ, ತನ್ನ ಸಂದೇಶ ಸರಿಯಾಗಿ ತಲುಪುತ್ತಿದೆಯೇ ಎನ್ನುವುದನ್ನು ಇಲ್ಲಿ ಸುಲಭವಾಗಿ ತಿಳಿದುಕೊಳ್ಳಬಹುದು. ಪ್ರತಿಕ್ರಿಯೆಯನ್ನು ನೋಡಿ ಹೇಳುವ ರೀತಿಯನ್ನು ಬದಲಾಯಿಸಿಕೊಳ್ಳಬಹುದು.

ಒಬ್ಬ ವ್ಯಕ್ತಿ ಹಲವರನ್ನು ಉದ್ದೇಶಿಸಿ ಮಾತನಾಡುವಾಗ ಏರ್ಪಡುವ ಸಂಪರ್ಕವನ್ನು ಗುಂಪಿನ ಸಂಪರ್ಕ ಎನ್ನಬಹುದು. ಇಲ್ಲಿ ಮುಖಾಮುಖಿ ಸಂಪರ್ಕದಂತೆ ನೇರವಾಗಿ ಶ್ರೋತೃವಿನ ಪ್ರತಿಕ್ರಿಯೆ ಬರದಿದ್ದರೂ ಭಾಷಣಕಾರ ಅಥವಾ ತರಗತಿಯಲ್ಲಿ ಪಾಠಮಾಡುತ್ತಿರುವ ಉಪಾಧ್ಯಾಯ ತಾನು ಹೇಳುತ್ತಿರುವುದು ಕೇಳುತ್ತಿರು

ವವರ ಮೇಲೆ ಎಷ್ಟರ ಮಟ್ಟಿನ ಪ್ರಭಾವ ಬೀರುತ್ತಿದೆ ಎನ್ನುವುದನ್ನು ಸ್ವಲ್ಪವಾದರೂ ತಿಳಿಯಲು ಸಾಧ್ಯ.

ಇಂದಿನ ವಿಜ್ಞಾನ ಯುಗವನ್ನು ಸಾಮೂಹಿಕ ಸಂಪರ್ಕ ಯುಗವೆಂದು ಕರೆಯಬಹುದು. ಮುದ್ರಣಯಂತ್ರದ ಆವಿಷ್ಕಾರ ಈ ದಿಸೆಯಲ್ಲಿ ಮೊದಲ ಹೆಜ್ಜೆಯಾದರೆ ಯಾಂತ್ರಿಕ ಹಾಗೂ ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿನ ವಿಸ್ಮಯಕಾರಕ ಪ್ರಗತಿ ಸಂಪರ್ಕ ವ್ಯವಸ್ಥೆಯಲ್ಲಿ ಮಹಾನ್ ಕ್ರಾಂತಿಯನ್ನು ಉಂಟು ಮಾಡಿದೆ. ಸಮಾಚಾರ ಪತ್ರಿಕೆ, ಪುಸ್ತಕ, ರೇಡಿಯೋ, ಚಲನಚಿತ್ರ, ಟೆಲಿವಿಷನ್ ಮುಂತಾದವು ಪ್ರಪಂಚದ ಒಂದು ಭಾಗದಲ್ಲಿರುವ ವ್ಯಕ್ತಿ ಬೇರೆ ಎಲ್ಲಾ ಕಡೆಯಲ್ಲಿಯೂ ನೇರ ಸಂಪರ್ಕ ಹೊಂದಲು ಸಾಧ್ಯಮಾಡಿದೆ. ಮುದ್ರಿತ ಪುಟ–ವಾರ್ತಾಪತ್ರಿಕೆ, ನಿಯತಕಾಲಿಕ, ಪುಸ್ತಕ, ರೇಡಿಯೋ, ಟೆಲಿವಿಷನ್, ಚಲನಚಿತ್ರ ಇವುಗಳು ಸಾಮೂಹಿಕ ಸಂಪರ್ಕದ ಮಾಧ್ಯಮಗಳು.

ಇಂತಹ ಸಾಮೂಹಿಕ ಸಂಪರ್ಕದಲ್ಲಿ, ಸಂಪರ್ಕದ ಉಗಮಸ್ಥಾನ ಒಂದು ಸಂಸ್ಥೆಯಾಗಿರುತ್ತದೆ. ಉದಾಹರಣೆಗೆ ಒಂದು ಸಮಾಚಾರ ಪತ್ರಿಕೆ. ಅದಕ್ಕೆ ಅದರ ವರದಿಗಾರರಿಂದ, ವಾರ್ತಾ ಸಂಸ್ಥೆಗಳಿಂದ ಹಲವಾರು ಸುದ್ದಿಗಳು ಬರುತ್ತವೆ. ಪತ್ರಿಕೆಯ ಸಂಪಾದಕ ವರ್ಗ ಈ ಸುದ್ದಿಗಳನ್ನು ಓದಿ ಅವುಗಳ ಮೌಲ್ಯವನ್ನು ತುಲನೆ ಮಾಡಿ ಬೇಡವಾದದ್ದನ್ನು ಬಿಟ್ಟು, ಬೇಕಾದ ಕಡೆ ಪೂರಕ ಮೂಲಗಳಿಂದ ಮತ್ತಷ್ಟು ಮಾಹಿತಿ ಪಡೆದು ಒಂದು "ಕತೆ" ಮಾಡುತ್ತಾರೆ. ಅದಕ್ಕೆ ಪತ್ರಿಕೆಯಲ್ಲಿ ಒಂದು ಸ್ಥಾನ ಕೊಟ್ಟು ಒಂದು ಶೀರ್ಷಿಕೆ ಹಾಕಿ ಅಚ್ಚು ಮಾಡಿ ಪತ್ರಿಕೆಯ ಓದುಗರಿಗೆ ತಲುಪಿಸುತ್ತಾರೆ. ಆ ಪತ್ರಿಕೆ ಓದುವ ವ್ಯಕ್ತಿ ಆ 'ಕತೆ'ಯನ್ನು ಅರ್ಥಮಾಡಿಕೊಂಡು ಮೂಲ ಸಂದೇಶವನ್ನು ಪಡೆಯುತ್ತಾನೆ.

ಸಾಮೂಹಿಕ ಸಂಪರ್ಕದಲ್ಲಿ ಸಂದೇಶ ಸಾರ್ವಜನಿಕವಾಗಿ ಪ್ರಸಾರವಾಗುತ್ತದೆ. ಒಂದೇ ಕಾಲದಲ್ಲಿ ಹಲವರಿಗೆ ತಲಪುತ್ತದೆ. ಸಾಮಾನ್ಯವಾಗಿ ಸಂಪರ್ಕಿಸುವವರಿಗೆ ತಾವು ಯಾರು ಯಾರಿಗೆ ಸಂದೇಶವನ್ನು ತಲಪಿಸುತ್ತಿದ್ದೇವೆಂದು ಗೊತ್ತಿರುವುದಿಲ್ಲ. ಅಂತೆಯೇ ತಮ್ಮ ಸಂದೇಶ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎನ್ನುವುದು ನೇರವಾಗಿ ತಿಳಿದಿರುವುದಿಲ್ಲ. ಇಲ್ಲಿ ಶ್ರೋತೃವರ್ಗ ದೊಡ್ಡದು ಮಾತ್ರವಲ್ಲ. ಅದು ಹಲವು ಮಟ್ಟದ್ದು ಕೂಡ. ಒಂದು ಪತ್ರಿಕೆಯ ಚಂದಾದಾರರು ಅಥವಾ ಒಂದು ರೇಡಿಯೋ ಕೇಂದ್ರದ ಶ್ರೋತೃಗಳು ಹಲವು ಅಭಿರುಚಿಯವರು. ಅವರಿಗೆ ಆ ಪತ್ರಿಕೆಯ ಯಾವುದೋ ಒಂದು ವಿಭಾಗದಲ್ಲಿ ಮಾತ್ರ ಆಸಕ್ತಿಯಿರಬಹುದು. ಕ್ರೀಡಾ ವಿಷಯವನ್ನು ಮಾತ್ರ ಓದುವ ವಾಚಕರಿರುವಂತೆ ಲಲಿತ ಸಂಗೀತವನ್ನು ಮಾತ್ರ ಕೇಳುವ ಶ್ರೋತೃಗಳಿರುತ್ತಾರೆ. ಸಾಮೂಹಿಕ ಸಂಪರ್ಕದ ಇನ್ನೊಂದು ಮುಖ್ಯ ಲಕ್ಷಣವೆಂದರೆ ಇಲ್ಲಿ ಸಂದೇಶ ತಾತ್ಕಾಲಿಕವಾದದ್ದು ಮತ್ತು ಕೂಡಲೇ ಉಪಯೋಗಿಸು

ವಂತಹದು. ಕೆಲವು ಅಪರೂಪ ಅಪವಾದಗಳನ್ನು ಬಿಟ್ಟರೆ ನಿನ್ನಿನ ಪತ್ರಿಕೆಗೆ, ಮೊನ್ನಿನ ರೇಡಿಯೋ ಕಾರ್ಯಕ್ರಮಕ್ಕೆ, ಹೋದ ವರ್ಷದ ಸಿನಿಮಾಕ್ಕೆ ಇಂದು ಹೆಚ್ಚಿನ ಉಪಯೋಗ ವಿಲ್ಲ.

ಸಾಮೂಹಿಕ ಸಂಪರ್ಕದ ಕಾರ್ಯ

ಸಾಮೂಹಿಕ ಸಂಪರ್ಕದ ಕಾರ್ಯ ಮೂರು ರೀತಿಯದು ಎಂದು ಸಾಂಪ್ರದಾಯಿಕ ವಾಗಿ ವರ್ಣಿಸುತ್ತಾರೆ. ಒಂದು, ನಮ್ಮ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ವೀಕ್ಷಿಸುವುದು. ಎರಡು, ಈ ಬದಲಾವಣೆಗಳ ಅರ್ಥ ವಿವರಣೆ ಮಾಡಿ ಅವಶ್ಯಕವಾದ ಕಡೆ ಪರಿಹಾರಗಳನ್ನು ಸೂಚಿಸುವುದು. ಮೂರು, ನಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಕಾಯ್ದು ಅದನ್ನು ತಲೆಮಾರಿನಿಂದ ತಲೆಮಾರಿಗೆ ತಲುಪಿಸುವುದು.

ಇಂದಿನ ಜಟಿಲ ಯುಗದಲ್ಲಿ ನಮ್ಮ ಪರಿಸರ ದೇಶ ಕಾಲದ ಮೇರೆಯನ್ನು ಮೀರಿ ನಿಂತಿದೆ. ವಿಯತ್ನಾಂನ ಯುದ್ಧ, ಅಮೆರಿಕದ ಅಧ್ಯಕ್ಷ ಚುನಾವಣೆ, ರಷ್ಯಾದಲ್ಲಿನ ಅಧಿಕಾರ ವರ್ಗಾವಣೆ, ಕ್ರಿ. ಶ. 2000 ದಲ್ಲಿ ಪ್ರಪಂಚದಲ್ಲಿನ ಜನಸಂಖ್ಯೆ ಎಲ್ಲಾ ನಮಗೆ ಆಸಕ್ತಿಯ ವಿಷಯಗಳೇ. ಈ ಎಲ್ಲಾ ಬದಲಾವಣೆಗಳನ್ನು ವೀಕ್ಷಿಸಿ ವರದಿ ಮಾಡುವುದು ಸಂಪರ್ಕ ಮಾಧ್ಯಮಗಳ ಒಂದು ಮುಖ್ಯ ಕೆಲಸ. ರೇಡಿಯೋ ವಾರ್ತೆ, ಸಮಾಚಾರ ಪತ್ರಿಕೆಗಳು, ಸುದ್ದಿ ಚಲನಚಿತ್ರಗಳು ಈ ಕೆಲಸವನ್ನು ಮಾಡುತ್ತಿವೆ. ವಾರ್ತೆಗಳನ್ನು ಸಂಗ್ರಹಿಸಲು ಈ ಮಾಧ್ಯಮಗಳು ದೇಶ, ವಿದೇಶದ ಹಲವಾರು ಮುಖ್ಯ ಪಟ್ಟಣಗಳಲ್ಲಿ ತಮ್ಮ ವರದಿಗಾರರನ್ನು ಹೊಂದಿರುತ್ತವೆ. ಪೂರಕವಾಗಿ ವಾರ್ತಾ ಸಂಸ್ಥೆಗಳಿಂದ ಮಾಹಿತಿ ಪಡೆಯುತ್ತವೆ. ಸರ್ಕಾರದ ಮತ್ತಿತರ ಸಂಸ್ಥೆಗಳಲ್ಲಿನ ಮುಖ್ಯ ಬೆಳವಣಿಗೆಯನ್ನು ತಿಳಿಸಲು ವಿಶೇಷ ವ್ಯವಸ್ಥೆಗಳಿರುತ್ತವೆ. ತಾಂತ್ರಿಕ ಕ್ಷೇತ್ರದಲ್ಲಿನ ಅಗಾಧ ಪ್ರಗತಿಯಿಂದಾಗಿ ಟೆಲಿಫೋನ್, ಟೆಲಿಪ್ರಿಂಟರ್, ಟೆಲಿಸ್ಟಾರ್ ಮೊದಲಾದುವುಗಳ ಮೂಲಕ ಇಂತಹ ವಾರ್ತೆಗಳನ್ನು ಮಾಧ್ಯಮಗಳು ನಿಮಿಷಗಳಲ್ಲಿ ಪಡೆಯಬಲ್ಲವು. ತತ್‌ಕ್ಷಣ ತಮ್ಮ ಶ್ರೋತೃಗಳಿಗೆ ತಲುಪಿಸಬಲ್ಲವು.

ಸಾಮೂಹಿಕ ಸಂಪರ್ಕ ಮಾಧ್ಯಮಗಳ ಎರಡನೆಯ ಕೆಲಸ ಆಗುತ್ತಿರುವ ಬದಲಾವಣೆಗಳನ್ನು ಕೂಲಂಕಷವಾಗಿ ವಿವೇಚಿಸಿ, ಅದರ ಅರ್ಥವನ್ನು ಓದುಗರು ಕೇಳುಗರಿಗೆ ತಿಳಿಸುವುದು. ಪತ್ರಿಕೆಗಳಲ್ಲಿನ ಸಂಪಾದಕೀಯ, ವಿಶೇಷ ಲೇಖನಗಳು, ಟೀಕೆ ಟಿಪ್ಪಣಿಗಳು, ರೇಡಿಯೋದಲ್ಲಿನ ವಾರ್ತಾ ವಿಮರ್ಶೆ, ಚರ್ಚಾಗೋಷ್ಠಿ ಮೊದಲಾದ ಕಾರ್ಯಕ್ರಮಗಳು ಈ ಕೆಲಸವನ್ನು ಮಾಡುತ್ತವೆ. ಆಯಾ ವಿಷಯಗಳಲ್ಲಿ ಹೆಚ್ಚು ನುರಿತಿರುವವರು ಸಾಧಾರಣವಾಗಿ ಈ ರೀತಿಯ ಲೇಖನ, ಭಾಷಣಗಳಿಂದ ಸಾಮಾನ್ಯ ಓದುಗ, ಕೇಳುಗ ತನ್ನ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳ ಅರ್ಥವನ್ನು ಅರಿಯಲು ಸಹಾಯ ಮಾಡುತ್ತಾರೆ. ಪ್ರಜಾಪ್ರಭುತ್ವ ಇರುವ ದೇಶಗಳಲ್ಲಿ ಸಂಪರ್ಕ

ಮಾಧ್ಯಮಗಳ ಈ ಕಾರ್ಯ ಬಹಳ ಮುಖ್ಯವಾದದ್ದು. ಸರಕಾರ ಮತ್ತು ಜನತೆಯ ನಡುವಿನ ಕೊಂಡಿಯಾಗಿ ಮಾಧ್ಯಮಗಳು ಕೆಲಸ ಮಾಡುತ್ತವೆ. ಪತ್ರಿಕೆಗಳಲ್ಲಿನ ವಾಚಕರ ವಿಭಾಗ ಇನ್ನು ಒಂದು ರೀತಿ ಸಾರ್ವಜನಿಕರ ಕುಂದುಕೊರತೆಗಳು, ಅಭಿಪ್ರಾಯ ಗಳು ಸರಕಾರದ ಗಮನಕ್ಕೆ ಬರಲು ಒಂದು ದಾರಿಯನ್ನು ಒದಗಿಸುತ್ತದೆ.

ಸಾಂಸ್ಕೃತಿಕ ಪರಂಪರೆಗಳನ್ನು ಕಾಯ್ದು ಅವುಗಳನ್ನು ಮುಂದಿನ ಪೀಳಿಗೆಗೆ ಸಾಗಿಸುವ ಹೊಣೆ ವ್ಯಕ್ತಿಯ ಕುಟುಂಬದ, ಸಮಾಜದ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿದ್ದು ಎಂದು ಹೇಳಿದರೂ, ಈಗಾಗಲೇ ಸಂಪರ್ಕ ಮಾಧ್ಯಮಗಳು ಈ ಜವಾಬ್ದಾರಿ ಯಲ್ಲಿ ಬಹಳಷ್ಟನ್ನು ಪಡೆದಿವೆ. ಸಾಹಿತ್ಯ, ಸಂಗೀತ ಮತ್ತಿತರ ಕಲಾ ಪ್ರಕಾರಗಳಿಗೆ ಭಾರತದಲ್ಲೂ ಮತ್ತು ಇತರ ದೇಶಗಳಲ್ಲೂ ಹಿಂದೆ ಬೆಂಬಲ ಸಿಗುತ್ತಿದ್ದುದು ಆಳುವವರಿಂದ ಮಾತ್ರ. ರಾಜಾಶ್ರಯದಲ್ಲಿ ಬೆಳೆದು ಬಂದ ಕಲೆಗಳಿಗೆ ಇಂದು ಹೆಚ್ಚಿನ ನೆರವು ಬರುತ್ತಿರು ವುದು ಸಂಪರ್ಕ ಮಾಧ್ಯಮಗಳಿಂದ. ವಾರ, ಮಾಸ ಪತ್ರಿಕೆಗಳಲ್ಲಿ, ದಿನ ಪತ್ರಿಕೆಗಳ ವಾರದ ವಿಭಾಗದಲ್ಲಿ ಪ್ರಕಟವಾಗುವ ಕತೆ ಕವನಗಳೂ, ಸಂಗೀತ ಕಲೆ ನಾಟಕ ಪುಸ್ತಕಗಳ, ವಿಮರ್ಶೆಗಳೂ, ಲೇಖಕ ಕಲಾವಿದರನ್ನು ಪರಿಚಯ ಮಾಡಿಕೊಡುವ ಲೇಖನಗಳೂ ರೇಡಿಯೋದಲ್ಲಿನ ಶಾಸ್ತ್ರೀಯ ಹಾಗೂ ಲಘು ಸಂಗೀತ ಕಾರ್ಯಕ್ರಮಗಳೂ ಸಾಹಿತ್ಯಿಕ ಕಾರ್ಯಕ್ರಮಗಳೂ ಚಲನ ಚಿತ್ರರಂಗಗಳೂ ಇಂದು ಲೇಖಕ ಕಲಾವಿದರಿಗೆ ಹಿಂದೆಂದೂ ಇಲ್ಲದಿದ್ದಷ್ಟು ಹೆಚ್ಚಿನ ಶ್ರೋತೃಗಳನ್ನು ಒದಗಿಸಿವೆ. ಮಾನವನ ಇತಿಹಾಸದಲ್ಲಿ ಎಂದೂ ಇಲ್ಲದಷ್ಟು ಹೆಚ್ಚಿನ ಆಸಕ್ತಿ ಇಂದು ಜನ ಸಾಮಾನ್ಯರಲ್ಲಿ ಸಾಹಿತ್ಯ, ಸಂಗೀತ ಮೊದಲಾದ ಕಲೆಗಳಲ್ಲಿ ಇದ್ದರೆ ಅದಕ್ಕೆ ಸಾಮೂಹಿಕ ಸಂಪರ್ಕ ಮಾಧ್ಯಮಗಳೇ ಕಾರಣ. ಕೆಲವು ಶತಮಾನಗಳ ಕಾಲ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಡವಾಗಿದ್ದ ಭಾರತದಂತಹ ದೇಶದಲ್ಲಿ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಸಂಪರ್ಕ ಮಾಧ್ಯಮಗಳು ತುಂಬಾ ಸಹಾಯಮಾಡಿವೆ.

ಹೊಸ ವಿಚಾರಗಳ ಪ್ರಸಾರ

ಸಮಾಜ ಅಭಿವೃದ್ಧಿಯಾಗಬೇಕಾದರೆ ಹಳೆಯ ರೂಢಿ ಪದ್ಧತಿ, ವಿಧಿ ನಿಷೇಧಗಳು ಪಕ್ಷಪಾತ ಧೋರಣೆಗಳನ್ನು ಬಿಟ್ಟು ಆಧುನಿಕ ಜ್ಞಾನ, ನವೀನ ಕೌಶಲ ಮತ್ತು ಹೊಸ ರೀತಿಗಳನ್ನು ಒಪ್ಪಿಕೊಳ್ಳುವುದು ಅವಶ್ಯಕ. ಯಾವುದಾದರೂ ಒಂದು ಹೊಸ ಪದ್ಧತಿ ಯನ್ನು ವ್ಯಕ್ತಿ ಸ್ವೀಕರಿಸುವ ಕ್ರಿಯೆಯಲ್ಲಿ (Adoption Process) ಐದು ಹಂತಗಳನ್ನು ಗುರುತಿಸಬಹುದು. ಒಂದು ಆ ಹೊಸ ಪದ್ಧತಿಯ ಅರಿವು. ಎರಡು ಅದರಲ್ಲಿ ಆಸಕ್ತಿ, ಮೂರು ಈಗಿರುವ ಪದ್ಧತಿಯೊಂದಿಗೆ ಹೊಸ ಪದ್ಧತಿಯ ತುಲನೆ, ನಂತರ ಪ್ರಯೋಗ ಮತ್ತು ಕೊನೆಯಲ್ಲಿ ಸ್ವೀಕಾರ ಅಥವಾ ತಿರಸ್ಕಾರ. ಒಂದು ಉದಾಹರಣೆಯ ಮೂಲಕ ಈ ಹಂತಗಳನ್ನು ಅರಿಯಬಹುದು. ಸೌದೆ ಒಲೆಯಲ್ಲಿ ಅಡಿಗೆ ಮಾಡುತ್ತಿರುವ ಹೆಂಗಸು ಸೀಮೆಎಣ್ಣೆ ಒಲೆಗೆ ಬದಲಾಯಿಸಬೇಕಾದರೆ ಮೊದಲು ಆಕೆಗೆ ಸೀಮೆಎಣ್ಣೆ ಒಲೆಯ ಅರಿವು ಅವಶ್ಯಕ. ಆ ಅರಿವಿನ ನಂತರ

ಆಕೆಗೆ ಅದರಲ್ಲಿ ಆಸಕ್ತಿ ಮೂಡಬೇಕು. ಅಂತಹ ಆಸಕ್ತಿ ಬಂದರೆ ಸೌದೆ ಒಲೆಗೂ, ಸೀಮೆಎಣ್ಣೆ ಒಲೆಗೂ ಹಣ, ಶ್ರಮ ಮತ್ತು ಸಮಯದ ಉಳಿತಾಯದಲ್ಲಿರುವ ವ್ಯತ್ಯಾಸಗಳನ್ನು ತುಲನೆ ಮಾಡುತ್ತಾಳೆ. ಸೀಮೆಎಣ್ಣೆ ಒಲೆ ಪರವಾಗಿಲ್ಲ ಎನ್ನಿಸಿದರೆ ಒಂದೆರಡು ದಿನ ಅದನ್ನು ಉಪಯೋಗಿಸಿ ನೋಡಿ ಅದನ್ನು ಕೊನೆಗೆ ಸ್ವೀಕರಿಸಬಹುದು ಅಥವಾ ಅದು ಅಪಾಯಕಾರಿ ಎಂದು ತಿರಸ್ಕರಿಸಬಹುದು.

ಸ್ವೀಕಾರ ಕ್ರಿಯೆಯ ಮೊದಲೆರಡು ಹಂತಗಳಲ್ಲಿ ಸಾಮೂಹಿಕ ಸಂಪರ್ಕಗಳ ಮಾಧ್ಯ-ಮಗಳ ಪ್ರಭಾವ ನಿರ್ವಿವಾದ. ಹೊಸ ತಿಳುವಳಿಕೆ, ನವೀನ ಕೌಶಲ ಮತ್ತು ಆಧುನಿಕ ಪದ್ಧತಿಗಳ ಅರಿವನ್ನು ಜನ ಸಾಮಾನ್ಯರಲ್ಲಿ ಉಂಟುಮಾಡುವುದರಲ್ಲಿ ಇವುಗಳಿಗೆ ಅಪರಿಮಿತ ಶಕ್ತಿ ಇದೆ. ಹೊಸ ವಿಚಾರದಲ್ಲಿ ಶ್ರೋತೃಗಳಿಗೆ ಹೆಚ್ಚಿನ ಆಸಕ್ತಿಯುಂಟು ಮಾಡಬಲ್ಲವು. ಪ್ರಚಾರ ತಂತ್ರಗಳಿಂದ ಈ ಹೊಸ ವಿಚಾರಗಳು ಹಳೆಯವಕ್ಕಿಂತ ಉತ್ತಮ ಎಂದು ಸಾರಬಲ್ಲವು. ಆದರೆ ಆ ವಿಚಾರವನ್ನು ವ್ಯಕ್ತಿ ಮತ್ತು ಸಮಾಜ ಪೂರ್ತಿ ಸ್ವೀಕರಿಸುವಂತೆ ಮಾಡಲು ಮಾಧ್ಯಮಗಳಿಗೆ ಹಲವು ಮಿತಿಗಳಿವೆ.

ಮುಖ್ಯವಾದ ಅಂಶವೆಂದರೆ ಸಮಾಜದಲ್ಲಿ ಸಂಪರ್ಕ ಮಾಧ್ಯಮಗಳ ಜೊತೆಗೆ ಬೇರೆ ಹಲವು ಶಕ್ತಿಗಳು ಕೆಲಸ ಮಾಡುತ್ತಿರುತ್ತವೆ ಎನ್ನುವುದು. ವ್ಯಕ್ತಿಯ ಪಂಗಡ, ಅದರ ಮೌಲ್ಯಗಳು ಆತ ಹೊಸ ವಿಚಾರವನ್ನು ಸ್ವೀಕರಿಸುವುದಕ್ಕೆ ತಮ್ಮ ಪ್ರಭಾವ ವನ್ನು ಬೀರುತ್ತವೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ಶ್ರೋತೃವಿಗೆ ಸಂಪರ್ಕ ಮಾಧ್ಯಮಗಳ ಆಯ್ಕೆಯಲ್ಲಿರುವ ವಿಶಾಲ ಅವಕಾಶ. ಈ ಮಾಧ್ಯಮಗಳನ್ನು ಉಪಯೋಗಿಸುವವರು ತಮ್ಮ ಪೂರ್ವ ನಿಶ್ಚಿತ ಅಭಿಪ್ರಾಯಕ್ಕೆ ಸರಿಹೊಂದುವಂತಹು-ದನ್ನೇ ಓದುತ್ತಾರೆ, ಕೇಳುತ್ತಾರೆ ಮತ್ತು ನೋಡುತ್ತಾರೆ, ಮತ್ತು ಬೇರೆಯ ಅಭಿಪ್ರಾಯವನ್ನು ಓದಿದರೂ ಸಹ ತಮ್ಮ ಅಭಿಪ್ರಾಯಕ್ಕೆ ಪೂರಕವಾದದ್ದನ್ನು ಮಾತ್ರ ಜ್ಞಾಪಕದಲ್ಲಿಟ್ಟುಕೊಂಡು ಉಳಿದುದನ್ನು ಮರೆಯುತ್ತಾರೆ. ಇದರಿಂದಾಗಿ ಮಾಧ್ಯಮಗಳು ತಮ್ಮಷ್ಟರಿಂದಲೇ ಶ್ರೋತೃಗಳ ಪೂರ್ವನಿಶ್ಚಿತ ಅಭಿಪ್ರಾಯ ಮತ್ತು ಮನೋವೃತ್ತಿಯನ್ನು ಬದಲಾಯಿಸಲಾರವು. ಮಾಧ್ಯಮಗಳ ಒಟ್ಟಾರೆ ಪ್ರಭಾವ ಮುಂಚಿನ ನಂಬಿಕೆ ಮತ್ತು ಮನೋವೃತ್ತಿಗಳನ್ನು ಮತ್ತಷ್ಟು ದೃಢಪಡಿಸುವುದೇ ಆಗಿದೆ. ಈ ದಿಸೆಯಲ್ಲಿ ಸಂಪರ್ಕ ಮಾಧ್ಯಮಗಳಿಗಿಂತ ಜನ – ಜನದ ನಡುವಿನ ಸಂಪರ್ಕ ಹೆಚ್ಚು ಪ್ರಭಾವಶಾಲಿ ಎಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ.

ಈ ದಿಸೆಯಲ್ಲಿ ಮಾಧ್ಯಮಗಳು ಯಶಸ್ವಿಯಾಗಬೇಕಾದರೆ ಅಭಿಪ್ರಾಯ-ಮುಖಂಡರೆಂದು ಕರೆಯಲಾಗುವ ಜನ ಮಧ್ಯವರ್ತಿಯಾಗುವುದು ಅಗತ್ಯ. ಸಂಪರ್ಕ ಮಾಧ್ಯಮಗಳ ಸಂದೇಶ ಮೊದಲು ಈ 'ಮುಖಂಡ'ರಿಗೆ ತಲುಪಿ ಅಲ್ಲಿಂದ ಮುಖಾಮುಖಿ ಸಂಪರ್ಕದ ಮೂಲಕ ಸಮಾಜದ ಸದಸ್ಯರಲ್ಲಿ ಪ್ರಸಾರವಾಗುತ್ತದೆ. ಈ ಅಭಿಪ್ರಾಯ

ಮುಖಂಡರು ಸಾಧಾರಣವಾಗಿ ತಮ್ಮ ಕ್ಷೇತ್ರದಲ್ಲಿ ಪ್ರತಿಷ್ಠೆಯ ಸ್ಥಾನ ಪಡೆದಿರುತ್ತಾರೆ. ಹೆಚ್ಚು ಜನಬಳಕೆಯುವರಾಗಿರುತ್ತಾರೆ. ಮತ್ತು ಮುಖ್ಯವಾಗಿ ಸಂಪರ್ಕ ಮಾಧ್ಯಮಗಳ ಶ್ರೋತೃಗಳಾಗಿರುತ್ತಾರೆ. ಉದಾಹರಣೆಗೆ ಸುಧಾರಿತ ಕೃಷಿ ಪದ್ಧತಿಯನ್ನು ಹೇಗೆ ಭಾರತದಂತಹ ಸಂಪ್ರದಾಯಸಮಾಜದಲ್ಲಿ ಹರಡಬಹುದು ಎಂದು ನೋಡಬೇಕು. ಸಂಪರ್ಕ ಮಾಧ್ಯಮಗಳು ಇವುಗಳನ್ನು ಎಷ್ಟು ಹೊಗಳಿ ಪ್ರಸಾರ ಮಾಡಿದರೂ ಸಾಧಾರಣ ರೈತ ಈ ಪದ್ಧತಿಗಳನ್ನು ಒಪ್ಪಿಕೊಳ್ಳಲಾರ. ಆದರೆ ಇಂತಹ ಪದ್ಧತಿಗಳನ್ನು ಕೆಲವು ಪ್ರಗತಿಪರ ರೈತರು ತಮ್ಮ ಹೊಲಗಳಲ್ಲಿ ಪ್ರಯೋಗಿಸಿದಾಗ, ಆ ರೈತರೊಂದಿಗೆ ಬೇರೆಯವರು ಚರ್ಚಿಸಿ ಸಾಧಕ ಬಾಧಕಗಳನ್ನು ಅರಿತು ಮುಂದೆ ಹೆಚ್ಚು ಜನ ಈ ಪದ್ಧತಿಯನ್ನು ಅನುಸರಿಸಲು ಸಾಧ್ಯ.

ಇರುವ ಸಾಮಾಜಿಕ ಮೌಲ್ಯಗಳಲ್ಲಿ ಯಾವ ರೀತಿಯ ಬದಲಾವಣೆಯನ್ನೂ ಉದ್ದೇಶಿಸದೆ ಅವುಗಳ ಗತಿಯನ್ನು ಬೇಕಾದ ಕಡೆಗೆ ತಿರುಗಿಸುವುದರಲ್ಲಿ ಸಂಪರ್ಕ ಮಾಧ್ಯಮಗಳು ಯಶಸ್ವಿಯಾಗಬಲ್ಲವು. ಜಾಹಿರಾತುಗಳ ಯಶಸ್ಸು ಇದಕ್ಕೆ ನಿದರ್ಶನ. ಯಾವುದಾದರೂ ಹೊಸ ಸಾಬೂನಿನ ಹೊಗಳಿಕೆಯನ್ನು ದಿನಪತ್ರಿಕೆಯಲ್ಲಿ, ರೇಡಿಯೋದಲ್ಲಿ, ಸಿನಿಮಾಗಳಲ್ಲಿ ಕಂಡಾಗ ಹಲವರು ಆ ಸಾಬೂನು ಕೊಳ್ಳಬಹುದು. ಇಲ್ಲಿ ನೈರ್ಮಲ್ಯದ ಬಗೆಗಿನ ಅಥವಾ ಇನ್ನಾವ ಮನೋವೃತ್ತಿಯ ಬದಲಾವಣೆಯಿಲ್ಲ. ಕೊಳ್ಳುತ್ತಿದ್ದ ಸಾಬೂನಿನ ಬದಲು ಈಗ ಹೊಸದರ ಪ್ರಯೋಗ ಅಷ್ಟೆ.

ವಿರುದ್ಧ ಅಭಿಪ್ರಾಯಗಳಿಗೆ ಅವಕಾಶವಿಲ್ಲದ ಏಕಸ್ವಾಮ್ಯ ಪರಿಸ್ಥಿತಿಯಲ್ಲಿ ಸಂಪರ್ಕ ಮಾಧ್ಯಮಗಳು ಯಶಸ್ವಿಯಾಗಬಲ್ಲವು. ನಾಜಿ ಜರ್ಮನಿ ಮತ್ತು ಕಮ್ಯೂನಿಸ್ಟ್ ದೇಶಗಳಲ್ಲಿ ಮಾಧ್ಯಮಗಳ ಇಂತಹ ಏಕಸ್ವಾಮ್ಯವನ್ನು ನಾವು ನೋಡಬಹುದು. ಬೇರೆ ದೇಶಗಳಲ್ಲೂ ಯುದ್ಧ ಮುಂತಾದ ರಾಷ್ಟ್ರೀಯ ಸಂಕಟ ಸಮಯದಲ್ಲಿ ಇಂತಹ ಪರಿಸ್ಥಿತಿ ಇರುತ್ತದೆ. ಒಂದು ವಿಚಾರದ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು ಕೊಡುತ್ತಿರುವಾಗ ಸಂಪರ್ಕ ಮಾಧ್ಯಮಗಳ ಒಟ್ಟಾರೆ ಪ್ರಭಾವ ತೀರಾ ಕಡಿಮೆ.

ಅಭಿವೃದ್ಧಿಯ ಸಾಧನ

ಸಾಮೂಹಿಕ ಸಂಪರ್ಕಗಳಲ್ಲಿ ಮಾಧ್ಯಮಗಳು ವ್ಯಕ್ತಿಯ, ಸಮಾಜದ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಹಲವು ರೀತಿಗಳಿಂದ ಸಹಾಯ ಮಾಡುತ್ತವೆ. ಇವು ವ್ಯಕ್ತಿ ವ್ಯಕ್ತಿಗಳ ನಡುವೆ ಹೆಚ್ಚಿನ ಅರಿವು, ಸಹಕಾರ, ಏರ್ಪಡುವುದು ಸಾಧ್ಯವಾಗುವಂತೆ ಮಾಡಬಲ್ಲುವು. ಈ ಮಾಧ್ಯಮಗಳು ಸಾಕ್ಷರತೆಯನ್ನು ಹೆಚ್ಚಿಸಿವೆ. ಕೃಷಿ, ಆರೋಗ್ಯ ಮತ್ತು ನೈರ್ಮಲ್ಯಗಳ ಬಗೆಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಿವೆ. ಕೈಗಾರಿಕೆ ಮತ್ತು ವೈಜ್ಞಾನಿಕ ಕುಶಲತೆಯನ್ನು ಹೆಚ್ಚಿಸಲು ನೆರವಾಗಿವೆ.

ಪ್ರಜಾಪ್ರಭುತ್ವ ಪದ್ಧತಿಯ ಯಶಸ್ಸಿಗೆ ಅಗತ್ಯವಾದ ವಿವಾದಾತ್ಮಕ ವಿಷಯಗಳನ್ನು ಕುರಿತ ಚರ್ಚೆ, ಅಭಿಪ್ರಾಯ ವಿನಿಮಯಕ್ಕೆ ವೇದಿಕೆ ಒದಗಿಸಿವೆ. ಪತ್ರಿಕೆಗಳನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಎಂದು ಕರೆಯುವುದು ತೀರಾ ಸಾಧು.

ಯಾವುದೇ ರೀತಿಯ ಅಭಿವೃದ್ಧಿಗೆ ಮೂಲ ಪ್ರೇರಣೆಯಾಗಬಲ್ಲ ಜನರ ವೈಯಕ್ತಿಕ ಮತ್ತು ರಾಷ್ಟ್ರೀಯ ಆಶೋತ್ತರಗಳನ್ನು ಹೆಚ್ಚಿಸುವುದರಲ್ಲಿ ಸಂಪರ್ಕ ಮಾಧ್ಯಮಗಳು ಯಶಸ್ವಿಯಾಗಿವೆ. ಡೇನಿಯಲ್ ಲರ್ನರ್ ಹೇಳುವಂತೆ ಸಾಮೂಹಿಕ ಮಾಧ್ಯಮಗಳು ವ್ಯಕ್ತಿ ತಾನು ನೇರವಾಗಿ ಅನುಭವಿಸದ ಪರಿಸ್ಥಿತಿ ಮತ್ತು ಜೀವನ ಕ್ರಮಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯಮಾಡಿವೆ. ತನ್ನನ್ನು ಬೇರೆ ಒಬ್ಬರ ಪರಿಸ್ಥಿತಿಯಲ್ಲಿ ಕಾಣಲು ಆಗುವಂತೆ ಮಾಡಿವೆ. ಇದು ಸಾಂಪ್ರದಾಯಿಕ ಸಮಾಜದಿಂದ ಮೇಲೆ ಬರಲು ಅವಶ್ಯಕವಾಗಿ ಬೇಕಾದ ಗುಣ. ತನ್ನ ಶ್ರಮದಿಂದ ಮತ್ತು ಬುದ್ಧಿಯಿಂದ ಹೆಚ್ಚು ಹೆಚ್ಚು ಸಾಧಿಸಲು ಸಾಧ್ಯ ಎಂಬ ಅರಿವು ಮತ್ತು ಪ್ರೇರಣೆಯಿಲ್ಲದಿದ್ದಲ್ಲಿ ಯಾವ ರೀತಿಯ ಅಭಿವೃದ್ಧಿಯೂ ಸಾಧ್ಯವಿಲ್ಲ.

ಭಾರತದಂತಹ ವಿವಿಧ ಭಾಷೆ, ಜನಾಂಗವಿರುವ ದೇಶದಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನುಂಟುಮಾಡುವುದರಲ್ಲಿ ಈ ಮಾಧ್ಯಮಗಳು ಮುಖ್ಯ ಜವಾಬ್ದಾರಿಯನ್ನು ವಹಿಸಬಲ್ಲವು.

ಅಪಾಯಗಳು

ಸಾಮೂಹಿಕ ಮಾಧ್ಯಮಗಳು ಪಾಶ್ಚಿಮಾತ್ಯ ಸಮಾಜದಲ್ಲಿ ಕ್ಷಿಪ್ರವಾಗಿ ಹರಡಲು ಪ್ರಾರಂಭವಾದಾಗ, ಈ ಮಾಧ್ಯಮಗಳ ಅಪಾರ ಶಕ್ತಿಯನ್ನು ಜನರ ಒಳಿತಿಗಾಗಲಿ ಕೆಡುಕಿಗಾಗಲಿ ಉಪಯೋಗಿಸಲು ಸಾಧ್ಯವೆಂದು ವಿಚಾರವಂತರು ಕಂಡಾಗ ಅವರಲ್ಲಿ ಇದರ ಬಗ್ಗೆ ಅಭಿಮಾನಕ್ಕಿಂತ ಹೆದರಿಕೆಯೇ ಹೆಚ್ಚಾಗಿತ್ತು. ಈ ಹೆದರಿಕೆಗಳು ಮೂರು ರೀತಿಯವು. ಮೊದಲನೆಯದಾಗಿ ಮಾಧ್ಯಮಗಳನ್ನು ಸರಕಾರ ಮತ್ತಿತರ ಪ್ರಬಲ ಸಂಸ್ಥೆಗಳು ತಮಗೆ ಬೇಕಾದ ಹಾಗೆ ಉಪಯೋಗಿಸಿಕೊಳ್ಳಬಹುದು ಎನ್ನುವುದು. ಎರಡನೆಯದು ವಿಚಾರಶೀಲ ಜನ ಮಾಡಬೇಕಾದುದನ್ನೆಲ್ಲಾ ಈ ಮಾಧ್ಯಮಗಳು ಮಾಡಿ ಜನರಿಗೆ 'ಡೈಜೆಸ್ಟ್' ಸಾಮಗ್ರಿಗಳನ್ನು ಒದಗಿಸುವುದರಿಂದ ಜನರ ವಿವೇಚನಾಶೀಲತೆಯೇ ಹೋಗಿ ಜನ 'ಹೌದಪ್ಪ' ಗಳಾಗುತ್ತಾರೆ ಎನ್ನುವುದು. ಮೂರನೆಯದಾಗಿ ಸಾಮೂಹಿಕ ಮಾಧ್ಯಮಗಳ ಸಂಸ್ಕೃತಿ ಪ್ರಸಾರದಿಂದಾಗಿ ಜನರ ಸೌಂದರ್ಯ ಕಲ್ಪನೆ ಮತ್ತು ಕಲಾಪ್ರಜ್ಞೆಯಲ್ಲಿ ಆಗಬಹುದಾದ ಅವನತಿ.

ಮೊದಲನೆಯ ಹೆದರಿಕೆಯ ತಳಹದಿಯೆಂದರೆ ಸಂಪರ್ಕ ಮಾಧ್ಯಮಗಳ ಶಕ್ತಿಯಲ್ಲಿ ವಿಚಾರವಂತರಿಗೆ ಇದ್ದ ಪೂರ್ಣ ನಂಬಿಕೆ. ಖಡ್ಗಕ್ಕಿಂತ ಲೇಖಣಿ ಶಕ್ತ ಎನ್ನುವಂತೆ ಅಣುಬಾಂಬಿಗಿಂತ ಸಂಪರ್ಕ ಮಾಧ್ಯಮ ಶಕ್ತ ಎನ್ನುವ ನಾಣ್ಣುಡಿ ಪ್ರಚಲಿತವಾಗಿತ್ತು.

ಸಂಪರ್ಕ ಮಾಧ್ಯಮಗಳನ್ನು ನಾಜಿ ಜರ್ಮನಿಯಲ್ಲಿ ಉಪಯೋಗಿಸಿದ ರೀತಿಯನ್ನು ನೋಡಿದಾಗ ಈ ಭಯ ಹೆಚ್ಚಿತು. ಆದರೆ ಮುಂದೆ ಸಂಶೋಧನೆಗಳು ಸಂಪರ್ಕ ಮಾಧ್ಯಮಗಳ ಮಿತಿಯ ಮೇಲೆ ಸಾಕಷ್ಟು ಬೆಳಕು ಚೆಲ್ಲಿದವು. ಮುಂಚೆ ಜನರಲ್ಲಿ ಮಾಧ್ಯಮಗಳ ಬಗೆಗಿದ್ದ "ಬ್ರೈನ್ ವಾಷಿಂಗ್" ಭೀತಿಗೆ ಕಾರಣವಿಲ್ಲವೆಂದು ತಿಳಿದು ಬಂದಿತು. ಜರ್ಮನಿಯಲ್ಲಿ ಸಹ ತಾತ್ಕಾಲಿಕವಾಗಿ ಮಾಧ್ಯಮಗಳು ಗಳಿಸಿದ ಯಶಸ್ಸಿಗೆ ಮಾಧ್ಯಮಗಳ ಶಕ್ತಿಗಿಂತ ಪೋಲೀಸ್ ಆಡಳಿತ, ವಿರೋಧವನ್ನು ನಿರ್ದಯತೆಯಿಂದ ಹತ್ತಿಕ್ಕುತ್ತಿದ್ದ ರೀತಿ ಕಾರಣವೆಂದು ತಿಳಿದು ಬಂದಿತು. ಎರಡನೆಯ ಹೆದರಿಕೆಗೆ ಹೆಚ್ಚಿನ ಆಧಾರಗಳಿವೆ. ಇಂದು ಸಂಪರ್ಕ ಮಾಧ್ಯಮಗಳ ಹತೋಟಿ ಹೊಂದಿರುವವರು ತಮ್ಮ ಅಭಿಪ್ರಾಯಗಳನ್ನು ಕೇಳುವವರ ಮೇಲೆ ಹೇರುತ್ತಿದ್ದಾರೆ. ಅದಕ್ಕೆ ಪೂರಕವಾದಂತೆ ಇನ್ನೊಂದು ರೀತಿಯ ಪ್ರತಿಕ್ರಿಯೆಗೆ ಮಾಧ್ಯಮ ಕಾರಣವಾಗಿವೆ. ಇಂದು ಹೆಚ್ಚು ಹೆಚ್ಚು ಜನ ತಮ್ಮ ಹೆಚ್ಚು ಹೆಚ್ಚು ಸಮಯವನ್ನು ಸಂಪರ್ಕ ಮಾಧ್ಯಮಗಳೊಂದಿಗೆ ಕಳೆಯುತ್ತಿದ್ದಾರೆ. ಇದರಿಂದಾಗಿ ಕ್ರಿಯಾತ್ಮಕ ಕೆಲಸಕ್ಕೆ ಕಡಿಮೆ ವೇಳೆ ಸಿಗುತ್ತಿದೆ ಎನ್ನುವುದು ಒಂದು. ಇಂದು ಪ್ರಚಲಿತ ಸಮಸ್ಯೆಗಳ ಮೇಲೆ ಹೆಚ್ಚು ಹೆಚ್ಚು ಓದುತ್ತಾರೆ, ಕೇಳುತ್ತಾರೆ ನಿಜ. ಆದರೆ ಅದು ಓದುವುದು ಕೇಳುವುದರಲ್ಲೇ ನಿಂತು ಒಂದು ವ್ಯವಸ್ಥಿತ ಸಾಮಾಜಿಕ ಪ್ರತಿಕ್ರಿಯೆಯ ರೂಪದಲ್ಲಿ ವ್ಯಕ್ತವಾಗುವುದಿಲ್ಲ ಎನ್ನುವುದು ಎರಡನೆಯದು. ಸಮಸ್ಯೆಯ ಅರಿವು ಮತ್ತು ಅದರ ಬಗೆಗಿನ ತಿಳುವಳಿಕೆ ಅಷ್ಟರಲ್ಲೇ ನಿಂತು ನಿರ್ಧಾರ ಮತ್ತು ಕಾರ್ಯಸ್ವರೂಪಕ್ಕೆ ತಿರುಗುವುದಿಲ್ಲ. ಇಲ್ಲಿ ವಿಷಯದ ಬಗೆಗಿನ ವಿಪರೀತ ತಿಳಿವಳಿಕೆ ಕೇವಲ ಮಾದಕಪ್ರಾಯವಾಗುತ್ತದೆ. ಆ ಸಮಸ್ಯೆಯ ಬಗೆಗೆ ಆತನಿಗೆ ಆಸಕ್ತಿ ಇದೆ. ಅದರ ಬಗ್ಗೆ ತಿಳಿವಳಿಕೆ ಇದೆ. ಏನು ಮಾಡಲು ಸಾಧ್ಯವೆಂದು ಗೊತ್ತಿದೆ ಅಷ್ಟೆ, ಮುಂದಕ್ಕೆ ಏನೂ ಮಾಡುವುದಿಲ್ಲ. ಸಾಮೂಹಿಕ ಮಾಧ್ಯಮಗಳು ಹೆಚ್ಚು ಜನರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿವೆ ನಿಜ. ಆದರೆ ಈ ಅರಿವು ಕ್ರಿಯಾತ್ಮಕ ಸಹಕಾರಕ್ಕಿಂತ ಜಡಜ್ಞಾನದಲ್ಲಿ ಮಾತ್ರ ಪರ್ಯವಸಾನವಾಗುತ್ತಿದೆ.

ಸಾಮೂಹಿಕ ಸಂಸ್ಕೃತಿ

ಇಂದು ಮಾಧ್ಯಮಗಳಲ್ಲಿರುವ ಸಾಹಿತ್ಯ. ಸಂಗೀತ. ನಾಟಕ ಮತ್ತಿತರ ಕಲೆಗಳು ಕೆಳಮಟ್ಟದ್ದು ಎನ್ನುವುದು ನಿರ್ವಿವಾದ. ಅಮೆರಿಕದಂತಹ ದೇಶದಲ್ಲಿ ಈ ಮಾಧ್ಯಮಗಳೆಲ್ಲಾ ವಾಣಿಜ್ಯ ಸಂಸ್ಥೆಗಳ ಹತೋಟಿಯಲ್ಲಿರುವಾಗ ಅವುಗಳ ಮುಖ್ಯ ಗುರಿ ಜನರಿಗೆ ಮನೋರಂಜನೆಯನ್ನು ಕೊಡುವುದಾಗಿದೆ. ಕ್ಷಣಕಾಲ ಉದ್ರೇಕಿಸುವ ಅಗ್ಗದ ಸಂಗೀತ. ನಗಿಸುವ. ಕಣ್ಣೀರು ಕರೆಸುವ ಚತುರ ಕತೆಗಳು. ನಾಟಕಗಳು. ಪಲಾಯನವಾದಿ ಚಲನಚಿತ್ರಗಳು ಇಂದು ಮಾಧ್ಯಮಗಳಲ್ಲಿ ತುಂಬಿವೆ. ಇದರಿಂದಾಗಿ 'ಸಾಮೂಹಿಕ ಸಂಸ್ಕೃತಿ' ಎಂದು ಕರೆಯಬಹುದಾದ ಒಂದು ವ್ಯವಸ್ಥೆಯೇ ಹುಟ್ಟಿಕೊಂಡಿದೆ.

ಈ ಸಂಸ್ಕೃತಿಯಲ್ಲಿ ಜಾನಪದ ಸಂಸ್ಕೃತಿಯ ಸ್ವಪ್ರೇರಿತ ಸ್ವಾಭಾವಿಕತೆಯಾಗಲಿ ಉನ್ನತ ಕಲೆಯ ಸೂಕ್ಷ್ಮಾಭಿರುಚಿಯಾಗಲಿ ಇಲ್ಲದೆ ಒಂದೇ ರೀತಿಯ ಕೆಳ ಮಟ್ಟದ ಒರಟುತನ ಮುಖ್ಯ ಲಕ್ಷಣ ಎನಿಸುತ್ತದೆ. ಅದು ಕೇವಲ ಮನೋರಂಜನೆಯನ್ನು ಮಾತ್ರ ಮುಖ್ಯ ಗುರಿಯಾಗಿ ಇಟ್ಟುಕೊಂಡು ಒಂದು ಫಾರ್ಮುಲಾ ರೂಪದಲ್ಲಿ ಸಾಮೂಹಿಕವಾಗಿ ತಯಾರಾಗುತ್ತದೆ.

ರೋಸನ್ ಬರ್ಗ್ ಹೇಳುವಂತೆ ಮನುಷ್ಯ ಸಾವಿರಾರು ವರ್ಷಗಳ ಕಾಲ ಪ್ರಕೃತಿಯ ವಿರುದ್ಧ, ಶ್ರಮದ ಕೆಲಸದ ವಿರುದ್ಧ ಹೋರಾಡಿ ಇಂದು ಬಿಡುವಿನ ವೇಳೆಯನ್ನು ಪಡೆದಿದ್ದಾನೆ – ತನ್ನ ಮನಸ್ಸನ್ನು ಸಂಸ್ಕೃತಗೊಳಿಸಲು, ತನ್ನ ಅರಿವಿನ ಆಳ ಮತ್ತು ಅಗಲವನ್ನು ವಿಸ್ತಾರಗೊಳಿಸಿಕೊಳ್ಳಲು. ಆದರೆ ಇಂದು ಆಗಿರುವುದು ಇದರ ವಿಪರೀತ. ಬಣ್ಣ ಬಣ್ಣದ ಶ್ರೀಮಂತ ಜೀವನವನ್ನು ಅನುಭವಿಸಬೇಕೆಂದರೆ ಇಂದು ಇರುವುದು ಒಂದೇ ಸಮಾನಸಮ ನೀರಸ ಜೀವನ. ಇಂದು ಯಾವ ಕಲಾ ಪ್ರಕಾರವಾಗಲಿ ಯಾವ ಜ್ಞಾನ ವ್ಯವಸ್ಥೆಯಾಗಲಿ ಈ ವಿಕೃತ ರೂಪವನ್ನು ತಡೆಯಲಾರದಾಗಿದೆ. ಈ ಸಾಮೂಹಿಕ ಸಂಸ್ಕೃತಿ ಎಲ್ಲವನ್ನೂ ಅರ್ಥ ಮಾಡಿಕೊಳ್ಳಬಹುದು. ಎಲ್ಲವನ್ನೂ ಗೆಲ್ಲಬಹುದು ಎನ್ನುವ ತಳಹದಿಯ ಮೇಲೆ ನಿಂತು ಎಲ್ಲವನ್ನೂ ನಿರಾಯಾಸ ಮಾಡಿವೆ. ಅಶಾಂತಿಯನ್ನು ತಡೆಯುವ ಬದಲು ಅದನ್ನು ಇನ್ನೂ ಹೆಚ್ಚು ಮಾಡುತ್ತಿದೆ, ಎಂದು ಕೆಲವರ ವಾದ.

ಸಂಪರ್ಕ ಮಾಧ್ಯಮಗಳ ಸಾಮಗ್ರಿ ಕೆಳಮಟ್ಟದ್ದು ಎನ್ನುವುದು ನಿರ್ವಿವಾದ. ಆದರೆ ಸಂಪರ್ಕ ಮಾಧ್ಯಮಗಳೇ ಶ್ರೋತೃಗಳ ಅಭಿರುಚಿಯ ಮಟ್ಟವನ್ನು ತಗ್ಗಿಸಿವೆಯೇ ಎನ್ನುವುದು ಚರ್ಚಾಸ್ಪದ. ಸಾಮಾನ್ಯ ವಿದ್ಯಾಭ್ಯಾಸದಲ್ಲಿನ ತೀವ್ರ ಪ್ರಗತಿ ಮತ್ತು ಸಂಪರ್ಕ ಮಾಧ್ಯಮಗಳ ಹರಡುವಿಕೆಯಿಂದಾಗಿ ಇಂದು ಕಲೆಗೆ ವಿಸ್ತೃತ ಮಾರುಕಟ್ಟೆ ಏರ್ಪಟ್ಟಿದೆ. ಬಹಳಷ್ಟು ಜನ ಇಂದು ಅಕ್ಷರಸ್ಥರಾಗಿದ್ದಾರೆ. ಅಂದರೆ ಓದಲು ಮತ್ತು ಮೇಲಿನ ಅರ್ಥವನ್ನು ಗ್ರಹಿಸಲು ಶಕ್ತರಾಗಿದ್ದಾರೆ. ಆದರೆ ಆಳವಾಗಿ ಅಭ್ಯಾಸ ಮಾಡಲಾರರು. ಜನ ಹೆಚ್ಚು ಓದುತ್ತಾರೆ. ಆದರೆ ಕಡಿಮೆ ಅರ್ಥ ಮಾಡಿಕೊಳ್ಳುತ್ತಾರೆ. ಇಂದು ಹಿಂದಿಗಿಂತಲೂ ಆಳವಾಗಿ ಅರ್ಥಮಾಡಿಕೊಳ್ಳುವವರ ಸಂಖ್ಯೆ ಒಟ್ಟಿನಲ್ಲಿ ಜಾಸ್ತಿ ಇರಬಹುದು. ಆದರೆ ಅವರು ಅಕ್ಷರಸ್ಥರೊಂದಿಗೆ ಹೋಲಿಸಿದಾಗ ತೀರಾ ಕಡಿಮೆಯಾಗುತ್ತಾರೆ. ಆದರಿಂದಾಗಿ ಸರಾಸರಿ ಮಟ್ಟ ತೀರಾ ಕೆಳಗಿಳಿಯುತ್ತದೆ. ಆದರೆ ಇದಕ್ಕೆ ಮಾಧ್ಯಮಗಳು ಎಷ್ಟರ ಮಟ್ಟಿಗೆ ಕಾರಣವೆಂಬ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಮಾಧ್ಯಮದ ಸಾಮಗ್ರಿಯ ಕಲಾ ಮಟ್ಟವನ್ನು ಹೆಚ್ಚಿಸಿದರೆ ಜನರ ಮಟ್ಟ ಹೆಚ್ಚಾಗುತ್ತದೆ ಎನ್ನುವುದು ಅನುಮಾನಾಸ್ಪದ. ಹಲವು ಪ್ರಸಾರ ವ್ಯವಸ್ಥೆಗಳ ಅನುಭವ ಇದಕ್ಕೆ ವಿರುದ್ಧವಾಗಿದೆ. ಭಾರತದಲ್ಲಿ ಒಂದು ಉದಾಹರಣೆ ಎಂದರೆ ಕೇಸ್ಕರ್ ಕಾಲದಲ್ಲಿ ಆಕಾಶವಾಣಿಯಲ್ಲಿ ಚಲನಚಿತ್ರ ಸಂಗೀತಕ್ಕೆ ಹಾಕಿದ್ದ ಬಹಿಷ್ಕಾರ. ಆಗ ಜನ

ಸಿಲೋನ್ ರೇಡಿಯೋ ಕೇಳುತ್ತಿದ್ದರು. ಮುಂದೆ ಆ ಶ್ರೋತೃಗಳನ್ನು ಮತ್ತೆ ಪಡೆಯಲು ಆಕಾಶವಾಣಿ ವಿವಿಧ ಭಾರತಿ ವ್ಯವಸ್ಥೆಯನ್ನು ಪ್ರಾರಂಭ ಮಾಡಬೇಕಾಯಿತು.

ಭಾರತದಲ್ಲಿ ಮಾಧ್ಯಮಗಳು

ಮಾಧ್ಯಮಗಳಲ್ಲಿನ ಬೆಳವಣಿಗೆಗೆ ಮತ್ತು ರಾಷ್ಟ್ರೀಯ ಅಭಿವೃದ್ಧಿಗೆ ನೇರ ಸಂಬಂಧ ವಿದೆ. ಅಭಿವೃದ್ಧಿ ಹೊಂದಿದ ದೇಶದ ಒಂದು ಮುಖ್ಯ ಲಕ್ಷಣವೆಂದರೆ ಅಲ್ಲಿ ಸಂಪರ್ಕ ಮಾಧ್ಯಮಗಳ ಹೆಚ್ಚಿನ ಉಪಯೋಗ. ಆಧುನೀಕರಣಕ್ಕೆ ಸಂಪರ್ಕ ಮಾಧ್ಯಮಗಳ ಅವಶ್ಯಕತೆಯನ್ನು ಅರಿತ ಯುನೆಸ್ಕೋ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕನಿಷ್ಠವಾಗಿ ನೂರು ಜನರಿಗೆ 10 ಸಮಾಚಾರ ಪತ್ರಿಕೆಗಳು, ಐದು ರೇಡಿಯೋ ಸೆಟ್, ಎರಡು ಚಿತ್ರಮಂದಿರದ ಸೀಟ್ ಮತ್ತು ಎರಡು ಟೆಲಿವಿಷನ್ ಸೆಟ್ ಇರಬೇಕೆಂದು ಅಭಿಪ್ರಾಯ ಪಟ್ಟಿತು. ನಮ್ಮ ದೇಶದಲ್ಲಿ ಈ ಮಾಧ್ಯಮಗಳಲ್ಲಿ ಕಳೆದ 25 ವರ್ಷಗಳಲ್ಲಿ ಅಗಾಧ ಪ್ರಗತಿಯಾಗಿದ್ದರೂ, ಈ ಕನಿಷ್ಠ ಮಿತಿಯನ್ನು ಇನ್ನೂ ಮುಟ್ಟಿಲ್ಲ. ಈಚಿನ ಅಂಕಿ ಅಂಶಗಳಂತೆ ನಮ್ಮಲ್ಲಿ 84 ಲಕ್ಷ ದಿನಪತ್ರಿಕೆ ಪ್ರತಿಗಳು ಪ್ರಸಾರದಲ್ಲಿವೆ. ಸುಮಾರು 1,28 ಲಕ್ಷ ರೇಡಿಯೋ ಸೆಟ್‌ಗಳಿವೆ. ಟೆಲಿವಿಷನ್ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದು ಕೇವಲ 44 ಸಾವಿರ ಸೆಟ್‌ಗಳು ಭಾರತದಲ್ಲಿವೆ. ಸುಮಾರು 7000 ಚಲನಚಿತ್ರ ಮಂದಿರಗಳಿವೆ. ಅಂದರೆ ನೂರು ಜನಕೆ 1.6 ದಿನ ಪತ್ರಿಕೆಗಳು, 2.4 ರೇಡಿಯೋ ಸೆಟ್‌ಗಳು, ಸುಮಾರು ಒಂದು ಚಲನಚಿತ್ರ ಮಂದಿರದ ಸೀಟ್ ಇದೆ.

ಗ್ರಂಥಋಣ

Wilbur Schramm : The Process and effects of mass communication

Rosenberg & White (Editors): Mass culture in America.

Daniel Lerner : The passing of traditional society.

VOA : Panel Lectures on mass communication.

Kuppuswamy B : Communication and National Development in India (Unpublished)

ಶಬ್ದಮಣಿದರ್ಪಣದ 129 ನೆಯಸೂತ್ರ - ಒಂದು ವಿವೇಚನೆ

ಎಂ. ಎಲ್. ಲಲಿತಮ್ಮ

ಸಪ್ತಮೀ ವಿಭಕ್ತಿ ವಿಚಾರವನ್ನು ಕುರಿತು ಹೇಳುವಾಗ ಕೇಶಿರಾಜನ [1] ಶಬ್ದಮಣಿದರ್ಪಣದಲ್ಲಿ ಈ ಸೂತ್ರ ಬಂದಿದೆ:

ಅಲ್ಲಿಯೊಳೆಂಬಿವು ಮಿಕ್ಕೆಡೆ
ಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ಮ
ತ್ತಲ್ಲಿಯುದಂತಕ್ಕೆತ್ವಂ
ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್

ಸೂತ್ರ 129

ಇದರ ವೃತ್ತಿ :

"ಅಲ್ಲಿ ಎಂದುಂ ಒಳ್ ಎಂದುಂ ಸಪ್ತಮಿಗೆ ಸಾಮಾನ್ಯದಿನಕ್ಕುಂ;
ದಿಗ್ವಾಚಿಯಪ್ಪಕಾರಾಂತದ ಮೇಲೆ ವಿಕಲ್ಪದಿಂದಲ್ ಅಕ್ಕುಂ;
ಉಕಾರಾಂತ ದಿಗ್ವಾಚಕಂಗಳ್ಗೆಲ್ಲಮೆತ್ವಮಕ್ಕುಂ"

ಸೂತ್ರಾರ್ಥದಿಂದ ಹೊರಡುವ ಅಂಶಗಳು ಮೂರು :

1) ದಿಗ್ವಾಚಕಗಳಾದ ಅದಂತ ಉದಂತ ಶಬ್ದಗಳನ್ನು ಬಿಟ್ಟು ಮಿಕ್ಕ ಕಡೆಗಳಲ್ಲಿ 'ಅಲ್ಲಿ' ಮತ್ತು 'ಒಳ್' ಎಂಬ ಪ್ರತ್ಯಯಗಳು ಸಪ್ತಮೀ ವಿಭಕ್ತಿಯಲ್ಲಿ ಪ್ರಕೃತಿಗೆ ಸೇರುತ್ತವೆ.

2) ಅದಂತ ದಿಗ್ವಾಚಕಗಳ ಮೇಲೆ ವಿಕಲ್ಪವಾಗಿ ಸೇರುವ ಸಪ್ತಮೀ ವಿಭಕ್ತಿ ಪ್ರತ್ಯಯ 'ಅಲ್'.

3) ಉದಂತ ದಿಗ್ವಾಚಕಗಳ ಮೇಲೆ ವಿಕಲ್ಪವಾಗಿ ಸೇರುವ ಸಪ್ತಮೀ ವಿಭಕ್ತಿ ಪ್ರತ್ಯಯ 'ಎ'.

ಈ ಅಂಶಗಳಿಗೆ ಕೇಶಿರಾಜನು ಕೊಟ್ಟಿರುವ ಪ್ರಯೋಗಗಳನ್ನು ಗಮನಿಸಬಹುದು.

1. 'ಒಳ್', 'ಅಲ್ಲಿ' – ಇವು ಸಪ್ತಮೀ ವಿಭಕ್ತಿ ಪ್ರತ್ಯಯಗಳಾಗಿ ಪ್ರಯೋಗವಾಗಿರುವುದಕ್ಕೆ 'ಕೊಳದೊಳ್ – ಕೊಳದಲ್ಲಿ' ಇತ್ಯಾದಿ ಉದಾಹರಣೆಗಳನ್ನು ಕೊಟ್ಟು ಮೇಲೆ ಸೂತ್ರವೃತ್ತಿಗಳಲ್ಲಿರದ ಒಂದು ವಿಶೇಷ ವಿಚಾರದ ಪ್ರಸ್ತಾಪ ಮಾಡಿದ್ದಾನೆ:

---

1 ಡಿ.ಎಲ್.ಎನ್: ಸಂಪಾದಿತ ಶಬ್ದಮಣಿದರ್ಪಣ - 1968–(ಶಾರದಾ ಮಂದಿರ, ಮೈಸೂರು).

'ಅಲ್ಲಿ' ಎಂಬುದು ಸಪ್ತಮೀ ವಿಭಕ್ತಿ ಪ್ರತ್ಯಯವಾಗಿ ಮಾತ್ರವಲ್ಲ, ಸ್ಥಳವಾಚಕವಾಗಿಯೂ ಪ್ರಯೋಗವಾಗುತ್ತದೆ – "ಅಲ್ಲಿ, ಇಲ್ಲಿ, ಎಲ್ಲಿ ಎಂದು ಸ್ಥಳವಿಶೇಷದೊಳಮೀ ಶಬ್ದ ಮೊಳವು".

ಇದಕ್ಕೆ ಕೊಟ್ಟಿರುವ ಉದಾ:

1) "ಸಿರಿ ನೆಲೆಗೊಂಡುದಲ್ಲಿ ಮದನಂ ಮನೆಗಟ್ಟಿದನಲ್ಲಿ ಸೌಖ್ಯಮುಂಕುರಿಸಿ ಮಡು ಲ್ಗಿದಲ್ಲಿ......"

2) "ಅಲ್ಲಿಯ ಪೆಂಡಿರನಗ್ನಿ ಸುತ್ತಿದಂ."

ಇದಾದ ಕೂಡಲೆ "ಪ್ರಥಮೆಗಂ ಸಪ್ತಮಿಗಂ ಅಲ್ ಎಂದೇಕರೂಪಮಕ್ಕುಂ" ಎಂಬ ಬಿಡಿ ವಾಕ್ಯವಿದೆ. ಇದಕ್ಕೆ ಉದಾಹರಣೆ ಇಲ್ಲ.

2. ಸೂತ್ರದ ಎರಡನೆಯ ಅಂಶಕ್ಕೆ ಸಂಬಂಧಪಟ್ಟ ಪ್ರಯೋಗಗಳು:–

1. ದಿಗ್ವಾಚಕದದಂತಕ್ಕೆ :
"ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳಿಲ್ಲೆನಲ್
ನಡೆದು ಗೆಲ್ದು ......"
"ಎತ್ತಿದ ಕಯ್ಯೊಳ್ ಮುತ್ತಿದ
ನತ್ತಿತ್ತುತ್ತೆತ್ತ ಸಾರ್ವರಿನ್ನಹಿತರ್ಕಳ್" ॥

2. "ವಿಕಲ್ಪದಿಂದಲ್ಗೆ ಪ್ರಯೋಗಂ : ಮೂಡಲ್, ತೆಂಕಲ್,
ಪಡುವಲ್, ಬಡಗಲ್, ಅತ್ತಲ್, ಇತ್ತಲ್, ಉತ್ತಲ್. ಎತ್ತಲ್.
ಮೂಡಲಿರ್ದ ಪದದೊಳ್ ತಾರಾಮನೋವಲ್ಲಭಂ

ಅತ್ತಲ್ ದೇವೇಂದ್ರಂ ಮ
ತ್ತಿತ್ತಲ್ ಭುಜಗೇಂದ್ರನುತ್ತಲಾಶಾಧಿಪರೊಳ್
ಮುತ್ತಿರೆ ಭೇರೀಧ್ವನಿ ಪ
ರ್ವಿತ್ತೆತ್ತಲ್ ಮಸಗಿ ಘೋಷ ಶಿಕ್ಷಾದಕ್ಷಂ" ॥

3. ಅನಂತರ ಸೂತ್ರದ ಮೂರನೆಯ ಅಂಶದ "ಉದಂತವೆತ್ವಕ್ಕೆ : ಒಳಗು–ಒಳಗೆ; ಪೊಱಗು–ಪೊಱಗೆ; ಪೆಱಗು– ಪೆಱಗೆ; ಮೇಗು–ಮೇಗೆ: ಕೆಳಗು–ಕೆಳಗೆ"—ಈ ಉದಾಹರಣೆಗಳಿವೆ.

ಸೂತ್ರದ ಪ್ರಯೋಗ ಭಾಗದಲ್ಲಿ ಎರಡು ದೋಷಗಳಿರುವುದು ಕಂಡು ಬರುತ್ತದೆ.

ಮೊದಲನೆಯದು – "ಪ್ರಥಮೆಗಂ ಸಪ್ತಮಿಗಂ ಅಲ್ ಎಂದೇಕ ರೂಪಮಕ್ಕುಂ" ಎಂಬ ಬಿಡಿವಾಕ್ಯಕ್ಕೆ ಸಂಬಂಧಿಸಿದುದು. 129ನೆಯ ಸೂತ್ರದ ವ್ಯಾಪ್ತಿಯಲ್ಲಿ ಇದಕ್ಕೆ ಸ್ಥಾನವಿದೆಯೇ ಎಂಬುದನ್ನು ಪರಿಶೀಲಿಸಬೇಕು.

(ಅ) ಮೇಲಿನ ವಾಕ್ಯಾರ್ಥದ ಆಶಯದಂತೆ ಕೆಲವು ಪ್ರಕೃತಿಗಳಿಗೆ ಪ್ರಥಮಾ ವಿಭಕ್ತಿಯಲ್ಲೂ ಸಪ್ತಮೀ ವಿಭಕ್ತಿಯಲ್ಲೂ 'ಅಲ್' ಎಂಬ ಒಂದೇ ಪ್ರತ್ಯಯ ಸೇರಬೇಕು. ಆದರೆ ಹೀಗಾಗುವುದಕ್ಕೆ ಸೂತ್ರದಲ್ಲಾಗಲೀ ವೃತ್ತಿಯಲ್ಲಾಗಲೀ ಸೂಚನೆಯಿಲ್ಲ. ಹೋಗಲಿ, ಸೂತ್ರ ವೃತ್ತಿಗಳಲ್ಲಿ ಹೇಳಿರದ ಹೊಸ ವಿಚಾರಗಳನ್ನು ಪ್ರಯೋಗ ಭಾಗದಲ್ಲಿ ಹೇಳಿರುವ ಹಲವು ನಿದರ್ಶನಗಳಲ್ಲಿ ಇದೂ ಒಂದು ಎಂದು ಭಾವಿಸೋಣವೆಂದರೆ ಇವಕ್ಕೆ ತಕ್ಕ ವಿಶಿಷ್ಟ ಪ್ರಯೋಗಗಳೂ ಕಂಡುಬರುವುದಿಲ್ಲ. ಒಂದು ವಿಶೇಷ ವಿಚಾರವನ್ನು ಹೇಳುವಾಗಲಂತೂ ಅದಕ್ಕೆ ಉದಾಹರಣೆಯಿದ್ದರೆ ತಾನೇ ಅದರ ಪ್ರಯೋಗಾರ್ಹತೆಗೆ ಪ್ರಮಾಣ ದೊರೆತಂತಾಗುವುದು! (ಉದಾ.ಗೆ "ಆದಿ ದೀರ್ಘಮಾದೊಡಂ ಗುರುವಾದೊಡಂ ಶಿಥಿಲಮಿಲ್ಲ" – ಸೂತ್ರ52 – ಎಂದು ಪ್ರಯೋಗ ಭಾಗದಲ್ಲಿ ಹೇಳಿರುವ ವಿಶೇಷ ವಿಚಾರಕ್ಕೆ ಬಾಸುಟ್ಗಿಳ್, ಪೊಕ್ಕುಟ್ಗಿಳ್ ಮೊದಲಾದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಇಂಥ ನಿದರ್ಶನಗಳನ್ನು ಶಬ್ದಮಣಿ ದರ್ಪಣದಲ್ಲಿ ಹಲವು ಕಡೆಗಳಲ್ಲಿ ಕಾಣಬಹುದು.)

(ಆ) ಅಕಾರಾಂತ ದಿಗ್ವಾಚಕಕ್ಕೆ ವಿಕಲ್ಪವಾಗಿ ಸೇರುವ 'ಅಲ್' ಪ್ರತ್ಯಯದ ವಿಷಯವಾಗಿ ಏನೋ ಹೆಚ್ಚಿನ ವಿಚಾರವನ್ನು ಈ ವಾಕ್ಯ ತಿಳಿಸುತ್ತಿದೆಯೆಂದು ಭಾವಿಸುವುದಕ್ಕೂ ಅವಕಾಶವಿಲ್ಲ. ಹಾಗೆ ತಿಳಿಸುವುದಾಗಿದ್ದರೆ, ದಿಗ್ವಾಚಕಗಳ ಮೇಲೆ ಅಲ್ ಸೇರದ ಹಾಗೂ ಅಲ್ ಸೇರುವ ಎರಡು ಬಗೆಯ ಪ್ರಯೋಗಗಳನ್ನೂ ಕೊಟ್ಟು ಬಳಿಕ ಈ ವಿಶೇಷ ವಿಚಾರವನ್ನು ಹೇಳಬೇಕಾಗಿತ್ತು. ಆದರೆ ಈಗಿರುವಂತೆ ಅಕಾರಾಂತ ದಿಗ್ವಾಚಕಗಳನ್ನು ಕುರಿತು ಹೇಳುವ ಮೊದಲೇ ಈ ವಾಕ್ಯ ಬಂದಿದೆ.

(ಇ) ಈ ವಾಕ್ಯಾರ್ಥವನ್ನು 'ದಿಗ್ವಾಚಕದದಂತಕ್ಕೆ'ಂದೂ 'ಅದಂತದ ವಿಕಲ್ಪದಲ್ಗೆ'ಂದೂ ಕೊಟ್ಟಿರುವ ಪ್ರಯೋಗಗಳೊಡನೆ ಹೊಂದಿಸಿಕೊಳ್ಳೋಣವೆಂದರೆ ಅಲ್ಲೂ ಸಹ 'ಅಲ್' ಎಂಬ ಪ್ರತ್ಯಯವೇ ಪ್ರಥಮಾ ಸಪ್ತಮೀ ವಿಭಕ್ತಿಗಳೆರಡರಲ್ಲೂ ಸೇರಿ ನಿಷ್ಪನ್ನವಾಗಿರುವ ಪ್ರಯೋಗಗಳು ಕಂಡುಬರುವುದಿಲ್ಲ. 'ಅಲ್' ಸೇರಿರುವ ಸಪ್ತಮೀ ವಿಭಕ್ತಿ ರೂಪಗಳಿವೆಯೇ ಹೊರತು ಅಲ್ ಸೇರದಿರುವ ಪ್ರಥಮಾ ವಿಭಕ್ತಿರೂಪಗಳಿಲ್ಲ. ಅದ್ದರಿಂದ ಪರಿಶೀಲನೆಯಲ್ಲಿರುವ ವಾಕ್ಯಕ್ಕೂ ಈ ಪ್ರಯೋಗಗಳಿಗೂ ಪೂರ್ಣ ಸಂಬಂಧ ಕಲ್ಪಿಸುವುದು ಸಾಧ್ಯವಾಗುವುದಿಲ್ಲ.

ಹಾಗಾದರೆ ಈ ವಾಕ್ಯದ ಸಾರ್ಥಕತೆ ಹೇಗೆ ? ಎಂಬ ಪ್ರಶ್ನೆ ಏಳುತ್ತದೆ.

ಪ್ರಕೃತ ಸೂತ್ರದ ಅರ್ಥವ್ಯಾಪ್ತಿಯಲ್ಲೂ ಪ್ರಯೋಗಭಾಗದಲ್ಲೂ ಈ ವಾಕ್ಯಾರ್ಥಕ್ಕೆ ಹೊಂದಿಕೆ ಕಾಣಸಿಗದುದರಿಂದಲೇ ಕಿಟ್ಟೆಲ್ ತಾನು ಸಂಪಾದಿಸಿರುವ ಶಬ್ದಮಣಿ ದರ್ಪಣ[1] ದಲ್ಲಿ ಈ ಸೂತ್ರದ (ಸೂತ್ರಸಂಖ್ಯೆ 119) ಪ್ರಯೋಗ ಭಾಗದಲ್ಲಿ:

---

[1] ಮೊದಲ ಮುದ್ರಣ – ಅಕ್ಟೋಬರ್ 3, 1871.

"ಪ್ರಥಮೆಗಂ ಸಪ್ತಮಿಗಮಲ್ ಎಂದೇಕರೂಪಮಕ್ಕುಂ" ಎಂದು ಕೊಟ್ಟು ಮುಂದೆ ಕಂಸದಲ್ಲಿ [2] 'See S. 121' ಎಂದು ಈ ವಾಕ್ಯಾರ್ಥದ ಅನ್ವಯಕ್ಕೆ [3] 121ನೆಯ ಸೂತ್ರದ ಕಡೆಗೆ ಮಾರ್ಗದರ್ಶನ ಮಾಡಿದ್ದಾನೆ. ಈ ಸೂಚನೆ ಕಿಟ್ಟೆಲ್ ಪ್ರತಿಯ ನಾಲ್ಕನೆಯ ಆವೃತ್ತಿಯಲ್ಲಿ ಬಿಟ್ಟು ಹೋಗಿದೆ.

ಕಿಟ್ಟೆಲ್ ಸೂಚಿಸಿರುವ ಸೂತ್ರದಲ್ಲಿ ಪ್ರಸ್ತಾಪಿತವಾಗಿರುವ ವಿಷಯದ ಸ್ವರೂಪ ವೇನೆಂಬುದನ್ನರಿತರೆ, ಈ ಸೂಚನೆ ಪ್ರಯೋಜನಕರವಾಗಿದೆಯೋ ಇಲ್ಲವೇ ಎಂಬುದನ್ನು ನಿರ್ಧರಿಸಬಹುದು.

ಸೂತ್ರದ ಪೂರ್ವಾರ್ಧದಲ್ಲಿ "ಮೊದಲೆರಡು ವಿಭಕ್ತಿಯೊಳಂ ಪೊದಟ್ಟುಗುಮಲ್" ಎಂದಿದ್ದು ವೃತ್ತಿಯಲ್ಲಿ "ಸಪ್ತಮಿಗೆ ಬಂದ ಅಲ್ ಎಂಬುದು "ಪ್ರಥಮೆಗಂ ದ್ವಿತೀಯೆಗಂ ಪತ್ತುಗುಂ" ಎಂಬ ವಿವರಣೆಯಿದೆ. ಸೂತ್ರದ ಉತ್ತರಾರ್ಧದಲ್ಲಿ ಕಾಲವಾಚಿಗಳಾದ ಅಂದು, ಇಂದು, ಉಂದುಗಳಿಗೆ ಪ್ರಥಮಾ ದ್ವಿತೀಯಾ ಹಾಗೂ ಸಪ್ತಮಿಗಳಲ್ಲಿ ಅಂದು, ಇಂದು, ಉಂದು ಎಂಬ ರೂಪಗಳೇ ಬಳಕೆಯಾಗುತ್ತವೆ ಎಂಬ ಅಂಶವಿದೆ. ಪೂರ್ವಾರ್ಧಕ್ಕೆ ಉದಾಹರಣೆಯಾಗಿ ಮೂಡಲ್, ಮೂಡಲ್, ಮೂಡಣೆಂ, ಮೂಡಣ್ಗೆ, ಮೂಡಣತ್ತಣಿಂ, ಮೂಡಣ, ಮೂಡಲ್" ಎಂಬ ವಿಭಕ್ತಿ ರೂಪಗಳಿವೆ. ಮೇಲೆ ಹೇಳಿರುವ ಮೂರು ವಿಭಕ್ತಿಗಳಲ್ಲೂ 'ಅಲ್' ಪ್ರತ್ಯಯ ಸೇರುವ ವಿಚಾರದ ಕಡೆಗೇ ಕಿಟ್ಟೆಲ್ ನಮ್ಮ ಗಮನವನ್ನು ಸೆಳೆದಿರುವುದು. ಇಲ್ಲಿ ಈ ಅಂಶ ಸೂತ್ರದ ಪ್ರಧಾನವಾದ ಎರಡು ಅಂಶಗಳಲ್ಲಿ ಒಂದು–ಮೊದಲನೆಯದು, ಸೂತ್ರದಲ್ಲಿ ಉಕ್ತವಾಗಿರುವುದೇ ಅಲ್ಲದೆ, ವೃತ್ತಿ ಭಾಗದಲ್ಲಿ ವಿವರಣೆ ಇದ್ದು ಪ್ರಯೋಗಾನುರೂಪತೆಯನ್ನು ಪಡೆದಿದೆ. ಇಷ್ಟು ಪ್ರಮುಖವಾಗಿ ಪುಷ್ಟವಾಗಿ ಈ ವಿಚಾರವನ್ನು ಮುಂದೊಂದು ಸೂತ್ರದಲ್ಲಿ ಹೇಳುವ ಉದ್ದೇಶವಿರುವಾಗ ಹಿಂದಿನ ಒಂದು ಸೂತ್ರದ ಪ್ರಯೋಗ ಭಾಗದಲ್ಲಿ ಮಾತ್ರ, ಪೂರ್ವಾಪರ ಸಂಬಂಧವಾಗಲೀ ಪ್ರಯೋಗಾಧಾರವಾಗಲೀ ಇಲ್ಲದಂತೆ. ದ್ವಿತೀಯಾ ವಿಭಕ್ತಿಯೊಂದನ್ನು ಬಿಟ್ಟು ಪ್ರಥಮಾ ಸಪ್ತಮಿಾ ವಿಭಕ್ತಿಗಳೆರಡರಲ್ಲಿ ಮಾತ್ರ 'ಅಲ್' ಸೇರುವುದೆಂದು ಸಂದಿಯಲ್ಲಿ ಸಮಾರಾಧನೆ ಮಾಡಿ ಹೇಳಿರುವುದೇಕೆ ಎಂಬ ಸಂಶಯ ಪ್ರಬಲವಾಗುತ್ತದೆ. ಜೊತೆಗೆ ಪ್ರಥಮಾ ಸಪ್ತಮಿಗಳೆರಡರಲ್ಲಿ ಮಾತ್ರ ಒಂದೇ ರೂಪವುಳ್ಳ ಇನ್ನಾವುದಾದರೂ ಪ್ರಕೃತಿಯನ್ನು ಕುರಿತು ಹೇಳಿರುವನೋ ಎಂಬ ಕುತೂಹಲಕ್ಕೂ ಎಡೆಯಾಗುತ್ತದೆ.

---

[2] S. means "Sutra" : — Preface XII

[3] ಆಚಾರ್ಯ ಡಿ. ಎಲ್; ಎನ್. ಸಂಪಾದಿತ ಶ. ಮ. ದ. ಗ್ರಂಥದ ಮೂರನೆಯ ಮುದ್ರಣದಲ್ಲಿ ಇದಕ್ಕೆ ಸಮಾನವಾದ ಸೂತ್ರಸಂಖ್ಯೆ 131.

ಮುಂದೆ ಮತ್ತೊಮ್ಮೆ ಈ ಪ್ರಸ್ತಾಪವೇ ಬರದಿದ್ದರೂ, ಏನೋ ಒಂದು ವಿಶೇಷ ವಿಚಾರವನ್ನು ಹೇಳಬೇಕೆಂದೆನಿಸಿ ಅಲ್ಲಿ ಹೇಳಿರಬಹುದು, ಉದಾಹರಣೆ ಕೊಟ್ಟಿಲ್ಲ ಅಷ್ಟೆ ಎಂದು ಸಮಾಧಾನಪಟ್ಟುಕೊಳ್ಳಬಹುದಾಗಿತ್ತು. ಮುಂದೆ ಇದರ ವಿಸ್ತೃತ ನಿರೂಪಣೆಯಿರುವುದರಿಂದ ಹೀಗೆ ಭಾವಿಸುವುದಕ್ಕೂ ಅವಕಾಶವಿಲ್ಲ.

ಬೇರೊಂದು ಸೂತ್ರವನ್ನು ಎಳೆದು ತರಬೇಕು, ಈ ವಾಕ್ಯ ಅರ್ಥವಾಗಬೇಕಾದರೆ ಎಂಬ ಕಿಟ್ಟೆಲ್ ಸೂಚನೆಯಿಂದಲೇ ಈ ಸೂತ್ರದಲ್ಲಿ ಇದರ ಸ್ಥಾನ ಭದ್ರವಿಲ್ಲವೆಂಬುದು ಸ್ಪಷ್ಟವಾಗುತ್ತದೆ; ಸಂಶೋಧನೆಗೆ ದಾರಿಯಾಗುತ್ತದೆ.

ಈ ವಾಕ್ಯಕ್ಕೆ ಪಾಠಾಂತರಗಳೇನಾದರೂ ದೊರೆತು ಸಮಸ್ಯೆ ಪರಿಹಾರವಾಗುತ್ತದೆಯೇ ಎಂದು ನೋಡಬಹುದು.

ಶಬ್ದಮಣಿದರ್ಪಣದ ಕನ್ನಡ ಸಾಹಿತ್ಯ ಪರಿಷತ್ ಮುದ್ರಣದಲ್ಲೂ ಕಿಟ್ಟೆಲ್ ಮುದ್ರಣದಲ್ಲೂ ಇದಕ್ಕೆ ಯಾವ ಪಾಠಭೇದವನ್ನೂ ಸೂಚಿಸಿಲ್ಲ. ಮದ್ರಾಸ್ ವಿಶ್ವ ವಿದ್ಯಾನಿಲಯದ ಮುದ್ರಣ (1939) ದಲ್ಲಿ, "ಪ್ರಥಮೆಗಂ ಸಪ್ತಮಿಗಮಲ್ಲಿಯೊಂದೇಕ ರೂಪಮಕ್ಕುಂ" ಎಂಬ ಲಿಂಗಣಾರಾಧ್ಯನ ವೃತ್ತಿಯ ಪಾಠವಿದ್ದು, ಅಡಿ ಟಿಪ್ಪಣಿಯಲ್ಲಿ ಗ್ರಂಥಸಂಪಾದನ ಕಾರ್ಯದಲ್ಲಿ ಉಪಯೋಗಿಸಿಕೊಂಡಿರುವ, ಲಿಂಗಣಾರಾಧ್ಯನ ವೃತ್ತಿ ಇರದ ಶಬ್ದಮಣಿದರ್ಪಣದ ಇತರ ಪ್ರತಿಗಳ[1] ಆಧಾರದಿಂದ, 'ಪ್ರಥಮೆಗಂ' ಎಂಬುದರಿಂದ ಮುಂದಕ್ಕೆ 'ಸಪ್ತಮಿಗಮಲ್ ಎಂದೇಕ ರೂಪಮಕ್ಕುಂ' ಎಂಬ ಪಾಠಾಂತರ ವನ್ನು[2] ಕೊಟ್ಟಿದೆ. ಆಚಾರ್ಯ ಡಿ. ಎಲ್. ಎನ್.ರವರು ಸಂಪಾದಿಸಿರುವ ಶಬ್ದಮಣಿ ದರ್ಪಣದ ಮೂರನೆಯ ಮುದ್ರಣದಲ್ಲಿ "ಪ್ರಥಮೆಗಂ ಸಪ್ತಮಿಗಂ ಅಲ್ ಎಂದೇಕ ರೂಪಮಕ್ಕುಂ" ಎಂಬ ಪಾಠ ಗ್ರಂಥಭಾಗದಲ್ಲಿದ್ದು, ಇದರ 'ಲ್ ಎಂ' ಎಂಬ ಭಾಗಕ್ಕೆ ಅಡಿ ಟಿಪ್ಪಣಿಯಲ್ಲಿ 'ಲಿಯೆಂ' ಎಂಬ ಪಾಠ ಭೇದವನ್ನು, ಸಂಪಾದನ ಕಾರ್ಯದಲ್ಲಿ ಅವರು ಬಳಸಿಕೊಂಡಿರುವ ಕ, ಖ, ಓಲೆಯ ಪ್ರತಿಗಳ ಆಧಾರದಿಂದ ಕೊಡಲಾಗಿದೆ. ಗ್ಯಾರೆಟ್ ಸಂಪಾದಿಸಿರುವ ಶಬ್ದಮಣಿದರ್ಪಣದ ಪ್ರತಿಯಲ್ಲಿ (1868) 'ಪ್ರಥಮೆಗಂ ಸಪ್ತ ವಿಭಕ್ತಿಗಮಲ್ಲಿಯೆಂದೇಕರೂಪಮಕ್ಕುಂ' ಎಂದಿದೆ.

ಈಗ ದೊರೆತಿರುವ ಭಿನ್ನ ಪಾಠಗಳುಳ್ಳ ವಾಕ್ಯಗಳಿವು :

1. ಪ್ರಥಮೆಗಂ ಸಪ್ತಮಿಗಂ ಅಲ್ ಎಂದೇಕರೂಪಮಕ್ಕುಂ
2. ಪ್ರಥಮೆಗಂ ಸಪ್ತಮಿಗಂ ಅಲಿ ಎಂದೇಕರೂಪಮಕ್ಕುಂ

---

1 ಇವು ಕೇಶಿರಾಜಕೃತವೆಂದು ಭಾವಿಸಿರುವ ವೃತ್ತಿಪಾಠಗಳನ್ನುಳ್ಳುವು.

2 ಅಡಿಟಿಪ್ಪಣಿಯ ಸಂಖ್ಯೆ (2) ಗ್ರಂಥಭಾಗದಲ್ಲಿ ಬಿಟ್ಟುಹೋಗಿದೆ. ಆದರೆ ಪಾಠಾಂತರದಲ್ಲಿರುವ ಸಪ್ತಮಿಗಂ ಎಂಬಲ್ಲಿನ ಸಮುಚ್ಚಯ ವಶದಿಂದ 'ಪ್ರಥಮೆಗಂ' ಎಂಬುದರಿಂದ ಮುಂದಕ್ಕೆ ಈ ಪಾಠವಿರಬೇಕೆಂದು ಭಾವಿಸಿದೆ.

3. ಪ್ರಥಮೆಗಂ ಸಪ್ತಮಿಗಮಲ್ಲಿಯೊಂದೇಕರೂಪಮಕ್ಕುಂ
4. ಪ್ರಥಮೆಗಂ ಸಪ್ತವಿಭಕ್ತಿಗಮಲ್ಲಿಯೆಂದೇಕರೂಪಮಕ್ಕುಂ

ಇವುಗಳಲ್ಲಿ ಮೊದಲಿನ ವಾಕ್ಯಕ್ಕೆ ಸುಸಂಬದ್ಧತೆ ಆ ಸೂತ್ರದಲ್ಲಿ ಒದಗದಿರುವುದನ್ನು ಆಗಲೇ ಗಮನಿಸಿದ್ದಾಗಿದೆ. ಪರಿಶೀಲನೆಗೆ ಉಳಿದಿರುವುವು ಕೊನೆಯ ಮೂರು ವಾಕ್ಯಗಳು. ಇವುಗಳ ಸಹಾಯದಿಂದ ಸೂಕ್ತ ಪಾಠವೇನಿರಬಹುದೆಂದು ಊಹಿಸಲು ಸಾಧ್ಯವಾಗುತ್ತದೆಯೇ ನೋಡೋಣ.

ಕ, ಖ ಓಲೆಯ ಪ್ರತಿಗಳಲ್ಲಿರುವ ವಾಕ್ಯದಿಂದ ಪ್ರಥಮಾ ವಿಭಕ್ತಿಗೂ ಸಪ್ತಮೀ ವಿಭಕ್ತಿಗೂ 'ಅಲಿ' ಎಂಬ ಒಂದೇ ರೂಪವಾಗುತ್ತದೆ ಎಂದು ಅರ್ಥಬರುತ್ತದೆ. ಈ 'ಅಲಿ' ಏನು ? 'ಅಲಿ' ಎಂಬ ಒಂದು ಪ್ರತ್ಯಯವನ್ನು ಕೇಶಿರಾಜನು ಸೂತ್ರದಲ್ಲಾಗಲೀ ಅಥವಾ ವೃತ್ತಿ ಪ್ರಯೋಗಗಳಲ್ಲಾಗಲೀ ಹೇಳಿದ್ದಾನೆಯೇ ? ಇಲ್ಲ. ಸೂತ್ರದಲ್ಲಿ ಹೇಳಿರುವ ಸಪ್ತಮೀ ವಿಭಕ್ತಿ ಪ್ರತ್ಯಯಗಳು ನಾಲ್ಕು – ಒಳ್, ಅಲ್ಲಿ, ಅಲ್, ಎ. ಇವುಗಳಲ್ಲಿ 'ಒಳ್' 'ಎ' ಗಳಿಗೆ 'ಅಲಿ' ಯೊಡನೆ ರೂಪಸಾಮ್ಯವೇ ಇಲ್ಲದುದರಿಂದ ಅವು ಸದ್ಯದ ವಿಮರ್ಶೆಗೆ ಪ್ರಕೃತವಲ್ಲ, ಉಳಿದೆರಡರಲ್ಲಿ'ಅಲ್' ಸುಸಂಗತವಾಗಿಲ್ಲದಿರುವುದನ್ನು ಆಗಲೇ ಗಮನಿಸಿದ್ದಾಗಿದೆ. ಇನ್ನು ಉಳಿಯುವುದು 'ಅಲ್ಲಿ'. ಇದು ಸಪ್ತಮೀ ವಿಭಕ್ತಿ ಪ್ರತ್ಯಯವಾದರೂ ಆಗಬಹುದು; ಸ್ಥಳವಾಚಕವಾದರೂ ಆಗಬಹುದು. ಇವೆರಡರಲ್ಲಿ ಯಾವುದನ್ನು ಕುರಿತು ಹೇಳಬೇಕಾದರೂ 'ಅಲ್ಲಿ' ಎಂಬ ರೂಪವನ್ನೇ ಬಳಸಬೇಕು. ಈ ಅಂತಸ್ಸಂಭಾವ್ಯತೆಯ ಆಧಾರದಿಂದ "ಲ್ಲಿಯೆಂ" ಎಂದೇ ಪಾಠವಿದ್ದಿರಬೇಕು; ಪ್ರತಿಕಾರನ ಅನವಧಾನದಿಂದ ಒಂದು ಲವೊತ್ತು ಬಿಟ್ಟು ಹೋಗಿ 'ಲಿಯೆಂ' ಎಂಬ ಪಾಠವಾಗಿ ಉಳಿದಿರಬಹುದು ಎಂದು ಸಕಾರಣವಾಗಿ ಊಹಿಸಲವಕಾಶವಿದೆ.

ಈ ಊಹೆಗೆ ಮದ್ರಾಸ್ ಪ್ರತಿಯಲ್ಲಿ ಕೊಟ್ಟಿರುವ ವಾಕ್ಯಸ್ವರೂಪವೂ ಬೆಂಬಲವಾಗಿದೆ. ಇದರಲ್ಲಿ ಕಾಣುವ ಒಂದು ದೋಷಕ್ಕೆ ಮೊದಲು ಪರಿಹಾರವನ್ನು ಸೂಚಿಸುವುದು ಅಗತ್ಯ. 'ಒಂದೇಕರೂಪಮಕ್ಕುಂ' ಎಂಬ ಭಾಗದಲ್ಲಿ ಪುನರುಕ್ತ ದೋಷವಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಅಕ್ಷರ ರೂಪದಲ್ಲಾಗಿರುವ ಒಂದು ಸಣ್ಣ ವ್ಯತ್ಯಾಸ – 'ಯೆ' ಕಾರವನ್ನು 'ಯೊ' ಕಾರವಾಗಿ ಓದಿಕೊಂಡಿರುವುದರಿಂದಾಗಿರುವುದು. ಬದ್ಧರೂಪದಲ್ಲಿ 'ಎ' ಕಾರವನ್ನು 'ಒ' ಕಾರವಾಗಿ ಓದಿಕೊಂಡು ಪ್ರತಿಮಾಡುವುದು ಸಾಧಾರಣ ಹಾಗೂ ಸಂಭಾವ್ಯವೆಂಬುದಕ್ಕೆ ನಿದರ್ಶನಗಳನ್ನು ಆಚಾರ್ಯ ಡಿ. ಎಲ್. ಎನ್. ರವರ "ಕನ್ನಡ ಗ್ರಂಥ ಸಂಪಾದನೆ"ಯಲ್ಲಿ (81ನೆಯ ಪುಟ) ಕಾಣಬಹುದು. ಈ ವ್ಯತ್ಯಾಸವನ್ನು ಸರಿಪಡಿಸಿಕೊಂಡ ಪಕ್ಷಕ್ಕೆ "ಪ್ರಥಮೆಗಂ ಸಪ್ತಮಿಗಮಲ್ಲಿಯೆಂದೇಕರೂಪಮಕ್ಕುಂ" ಎಂಬ ಪುನರುಕ್ತದೋಷಮುಕ್ತವಾದ ವಾಕ್ಯ ಸಿದ್ಧವಾಗುತ್ತದೆ ದೋಷವಿರುವ ವಾಕ್ಯದಲ್ಲೂ ಅದು 'ಅಲ್ಲಿ' ಎಂಬ ಕಡೆಗೆ ತಾಕದಿರುವುದು ಗಮನಾರ್ಹ..

'ಅಲಿ' ಯೆಂಬಲ್ಲಿ ಒತ್ತಕ್ಷರ ಬಿಟ್ಟುಹೋಗಿರಬೇಕೆಂಬ ತರ್ಕಕ್ಕೆ ಇಲ್ಲಿ ಪ್ರಮಾಣ ದೊರ ಕುತ್ತವೆ. 'ಅಲ್ಲಿ' ಎಂಬ ರೂಪಸಮೇತವಾದ ವಾಕ್ಯವಿರುವ ಕೇಶಿರಾಜ ವಿರಚಿತ[1] ವೃತ್ತಿಯನ್ನು ನೋಡಿರದ ಹೊರತು ಲಿಂಗಣಾರಾಧ್ಯ ಹೀಗೆ ವೃತ್ತಿಯನ್ನು ಬರೆಯು ವುದು ಸಾಧ್ಯವಾಗುತ್ತಿರಲಿಲ್ಲ. 'ಅಲ್ಲಿ' ಎಂಬ ರೂಪವುಳ್ಳ ದೋಷದೂರವಾದ ವಾಕ್ಯ ವಿರುವ ಪ್ರತಿ ನಮಗೆ ದೊರಕಿಲ್ಲವಾದರೂ ಅದು ಲಿಂಗಣ್ಣನಿಗೆ ದೊರೆತಿರಬೇಕು. ಅದರ ಆಧಾರದಿಂದಲೇ ಅವನು ಹಾಗೆ ಬರೆಯುವುದು ಸಾಧ್ಯವಾಗಿರುವುದು. ಗ್ಯಾರೆಟ್ ಮುದ್ರಣದಲ್ಲಿ ಮುದ್ರಾರಾಕ್ಷಸನ ಹಿಡಿತ ಎಷ್ಟೇ ಪ್ರಬಲವಾಗಿರಲಿ, ನಮಗೆ ಅಗತ್ಯವಾದ ವಾಕ್ಯಭಾಗ ದೋಷಮುಕ್ತವಾಗಿದೆಯೆಂಬುದು ಗಮನಾರ್ಹವಾದ ಸಂಗತಿ: "...... ಮಲ್ಲಿಯೆಂದೇಕ ರೂಪಮಕ್ಕುಂ". ಆದರೆ ಇಲ್ಲಿ 'ಪ್ರಥಮೆಗಂ ಸಪ್ತವಿಭಕ್ತಿಗಂ' ಎಂದಿರು ವುದೇಕೆ? ಸಪ್ತ ವಿಭಕ್ತಿಗಳಲ್ಲಿ ಪ್ರಥಮೆಯೂ ಸೇರುವುದಿಲ್ಲವೇ ಎಂಬ ಪ್ರಶ್ನೆಯೇಳು ತ್ತದೆ. 'ಪ್ರಥಮೆಗಂ' ಎಂಬಲ್ಲಿಯ ಸಮುಚ್ಚಯದ ಆಕಾಂಕ್ಷೆಯಂತೆ ಆ ವಾಕ್ಯದಲ್ಲಿ ಸೂಚಿತವಾಗಬೇಕಾದುದು ಮತ್ತೊಂದು ವಿಭಕ್ತಿಯೇ ಹೊರತು ಸಪ್ತ ವಿಭಕ್ತಿಯಲ್ಲ ಎಂಬುದು ಸ್ಪಷ್ಟ. ಈ ವಿಭಕ್ತಿ ಸಪ್ತಮೀ ಎಂಬುದು ಮಿಕ್ಕೆಲ್ಲ ಮುದ್ರಣಗಳಲ್ಲೂ ವ್ಯಕ್ತವಾಗಿಯೇ ಇದೆ. ಆದಕಾರಣ 'ಮೀ' ಎಂಬ ಅಕ್ಷರ ಲುಪ್ತವಾಗಿ ಪಾಠ ಕೆಟ್ಟಿದೆಯೆಂದೂ ಇದನ್ನು ಸಪ್ತ (ಮೀ) ವಿಭಕ್ತಿಗಂ ಎಂದು ತಿದ್ದಿಕೊಂಡರೆ ಅರ್ಥ ಸ್ಪಷ್ಟವಾಗುವುದೆಂದೂ ತಿಳಿಯಬಹುದು. ಗ್ಯಾರೆಟ್ ಗೂ 'ಅಲ್ಲಿ' ಎಂಬ ರೂಪ ವಿರುವ ವೃತ್ತಿ ಪಾಠವುಳ್ಳ ಪ್ರತಿ ದೊರೆತಿರಬೇಕು. ಅಲಿ ಎಂಬ ಪಾಠಾಂತರ ದೊರೆ ತಿರುವುದರಿಂದಲೂ. ಲಿಂಗಣಾರಾಧ್ಯನ ವೃತ್ತಿಯಲ್ಲೂ ಗ್ಯಾರೆಟ್ ಪ್ರತಿಯಲ್ಲೂ 'ಅಲ್ಲಿ' ಯೆಂಬ ಪಾಠವೇ ಸ್ಪಷ್ಟವಾಗಿರುವುದರಿಂದಲೂ ಮೂಲ ಪಾಠ 'ಅಲ್ಲಿ' ಯೆಂದು ಇದ್ದಿರ ಬೇಕೆಂದು ಊಹಿಸುವುದು ಸಮಂಜಸವಾಗದಿರದು. ಅಂತಸ್ಸಂಭಾವ್ಯತೆಯ ಪ್ರಮಾ ಣವೂ ಈ ರೂಪಕ್ಕೆ ಒದಗುವುದನ್ನು ಮುಂದೆ ಪರಿಶೀಲಿಸಬಹುದು.

ಅಲ್ಲಿ ಎಂಬ ತಿದ್ದಿದ ಪಾಠವನ್ನಿಟ್ಟುಕೊಂಡರೆ ಮೇಲಿನ ವಾಕ್ಯ 'ಅಲ್ಲಿ' ಎಂಬರೂಪವೇ ಪ್ರಥಮಾ ವಿಭಕ್ತಿಯಲ್ಲೂ ಸಪ್ತಮೀ ವಿಭಕ್ತಿಯಲ್ಲಿಯೂ ಬರುತ್ತದೆ ಎಂಬ ಅರ್ಥವನ್ನು ಕೊಡುತ್ತದೆ. ಈಗ ಈ ವಾಕ್ಯ ಬಂದಿರುವ ಸಂದರ್ಭದಿಂದ ಇದು 'ಅಲ್ಲಿ' ಎಂಬ ಪ್ರತ್ಯಯ ವನ್ನು ಕುರಿತದ್ದೇ ಅಥವಾ 'ಅಲ್ಲಿ' ಎಂಬ ಸ್ಥಳವಾಚಕವನ್ನು ಕುರಿತದ್ದೇ ಎಂದು ಪರಿಶೀಲಿಸ ಬೇಕಾಗುತ್ತದೆ. 'ಒಳ್' ಮತ್ತು 'ಅಲ್ಲಿ' ಎಂಬ ಸಪ್ತಮೀ ವಿಭಕ್ತಿ ಪ್ರತ್ಯಯಗಳಿಗೆ ಉದಾಹರಣೆಗಳಾದಮೇಲೆ 'ಅಲ್ಲಿ' ಎಂಬುದು ವಿಭಕ್ತಿಯಾಗಿಯೇ ಅಲ್ಲದೆ ಸ್ಥಳವಾಚಕ

---

[1] ಕೇಶಿರಾಜ ವೃತ್ತಿಯನ್ನು ಬರೆದಿರದೆ ಕೇವಲ ಸೂತ್ರಗಳನ್ನು ಮಾತ್ರ ಬರೆದಿದ್ದು ಲಿಂಗಣಾರಾಧ್ಯ ನಂತೆಯೇ ಇತರರು ವೃತ್ತಿಯನ್ನು ಬರೆದು ಸೇರಿಸಿರಬೇಕೆಂಬ ಊಹೆಯಿದೆ – ಆಚಾರ್ಯ ಡಿ.ಎಲ್ ಎನ್.ರವರ ಶ.ಮ.ದ. ಮುನ್ನುಡಿಯನ್ನು ನೋಡಬಹುದು. ಒಟ್ಟಿನಲ್ಲಿ ವೃತ್ತಿ ಯಾರದ್ದೆ ಆಗಿರಲಿ, 'ಅಲ್ಲಿ' ರೂಪವಿರುವ ವೃತ್ತಿಯನ್ನು ನೋಡಿರಬೇಕು.

ವಾಗಿಯೂ ಬರುತ್ತದೆಂದು ಹೇಳಿ ಅದಕ್ಕೂ ಉದಾಹರಣೆಯನ್ನು ಕೊಟ್ಟು ಅನಂತರ ಈ ವಾಕ್ಯವನ್ನು ಹೇಳಿದ್ದಾನೆ. ಸಂದರ್ಭವಶದಿಂದ ಈ ಅಲ್ಲಿ ಸ್ಥಳವಾಚಕವನ್ನು ಕುರಿತದ್ದಾಗಿರಬೇಕೇ ಹೊರತು ಪ್ರತ್ಯಯವನ್ನಾಗಲಾರದು ಎಂಬುದು ಸ್ವತಃಸಿದ್ಧ. ಅದ ಕಾರಣ ಆ ವಾಕ್ಯದಿಂದ ಹೊರಡುವ ಅರ್ಥವಿಷ್ಟು: 'ಅಲ್ಲಿ' ಎಂಬ ಸ್ಥಳವಾಚಕಕ್ಕೆ ಪ್ರಥಮಾ ವಿಭಕ್ತಿಯಲ್ಲೂ ಸಪ್ತಮೀ ವಿಭಕ್ತಿಯಲ್ಲೂ ಒಂದೇ ರೂಪ. ಹೀಗೆ ಹೇಳಿರುವುದು ಸಮಂಜಸವಾಗಿದೆ. ಏಕೆಂದರೆ 'ಅಲ್ಲಿ' ಎಂಬುದರ ಪ್ರಥಮಾವಿಭಕ್ತಿ ರೂಪವೇನೋ 'ಅಲ್ಲಿ' ಎಂದು; ಆದರೆ ಇದರ ಸಪ್ತಮೀ ವಿಭಕ್ತಿ ರೂಪವೇನು ಎಂಬ ಕುತೂಹಲದ ಪ್ರಶ್ನೆಗೆ ಉತ್ತರ ನೀಡಬೇಕಾದುದು ಅಗತ್ಯ. ಮಿಕ್ಕ ಶಬ್ದಗಳಿಗೇನೋ 'ಅಲ್ಲಿ' ಅಥವಾ 'ಒಳ್' ಸೇರಿ ಸಪ್ತಮೀ ವಿಭಕ್ತಿ ರೂಪವಾಗುತ್ತದೆ. 'ಅಲ್ಲಿ' ಎಂಬುದಕ್ಕೆ ಯಾವ ಪ್ರತ್ಯಯ ಸೇರಬೇಕು ? ಅಲ್ಲಿ + ಅಲ್ಲಿ—ಅಲ್ಲಿಯಲ್ಲಿ ಎಂದಾಗಬೇಕೆ ? ಅಥವಾ ಅಲ್ಲಿ + ಒಳ್—ಅಲ್ಲಿಯೊಳ್ ಎಂದಾಗಬೇಕೇ? ಇದಕ್ಕೆ ಉತ್ತರ: 'ಅಲ್ಲಿ' ಯ ಸಪ್ತಮೀ ವಿಭಕ್ತಿ ರೂಪವೂ 'ಅಲ್ಲಿ' ಎಂದೇ ಎಂಬ ಕೇಶಿರಾಜನ ವಿವರಣೆ. 'ಅಲ್ಲಿ' ಶಬ್ದದ ಮಿಕ್ಕ ವಿಭಕ್ತಿ ರೂಪಗಳನ್ನು ಹೇಳುವುದಿರಲಿ, ಅದರ ಸಪ್ತಮೀ ವಿಭಕ್ತಿ ರೂಪವನ್ನು ಹೇಳಬೇಕಾದ್ದೇ ಬಹಳ ಮುಖ್ಯವಾದುದು. ಮಿಕ್ಕ ವಿಭಕ್ತಿಗಳಲ್ಲಿ (ಇದರ ದ್ವಿ.ವಿ. ರೂಪ ಬಳಕೆಯಲ್ಲಿಲ್ಲ) ಆಯಾ ವಿಭಕ್ತಿ ಪ್ರತ್ಯಯಗಳನ್ನು (ಇಂ, ಗೆ, ಅತ್ತಣಿಂ, ಅ) ಸೇರಿಸುವಂತೆಯೇ ಸಪ್ತಮೀ ವಿಭಕ್ತಿಯಲ್ಲೂ 'ಅಲ್ಲಿ' ಎಂಬುದನ್ನೋ 'ಒಳ್' ಎಂಬುದನ್ನೋ ಸೇರಿಸಿ ಬಿಟ್ಟರೆ. ಅರೂಢಿಯ ದೋಷ ತಾಕುತ್ತದಲ್ಲಾ ! ಹೀಗೆ ಸೇರಿಸುವುದು ವ್ಯಾಕರಣ ಶುದ್ಧವಿರಬಹುದು; ಆದರೆ ಪ್ರಯೋಗಬದ್ಧವಲ್ಲ. ಅದ್ದರಿಂದಲೇ ಕೇಶಿರಾಜ, 'ಅಲ್ಲಿ'ಯ ಸಪ್ತಮೀ ವಿಭಕ್ತಿ ರೂಪದ ಬಗ್ಗೆ ಎಚ್ಚರಿಕೆಯ ಮಾತನ್ನು ಹೇಳಬೇಕಾಯಿತು. ಹೀಗೆ ಹೇಳಿರುವುದು ಬಹು ಸುಸಂಗತವಾಗಿದೆ.

ಪ್ರಥಮಾ. ದ್ವಿತೀಯಾ. ಸಪ್ತಮೀ ವಿಭಕ್ತಿಗಳಲ್ಲಿ ಕೆಲವು ದಿಗ್ವಾಚಕಗಳು. ಕೆಲವು ಕಾಲವಾಚಿಗಳು (ಸೂತ್ರಗಳು 131) ಒಂದೇ ರೂಪವನ್ನು ತಳೆದಿರುವ ವ್ಯಾಕರಣ ವಿಶೇಷದಂತೆಯೇ. ಪ್ರಥಮಾ ಸಪ್ತಮೀಗಳಲ್ಲಿ 'ಅಲ್ಲಿ' ಎಂಬ ಸ್ಥಳವಾಚಕ ಒಂದೇ ರೂಪವನ್ನು ತಳೆದಿರುವುದು ಒಂದು ವ್ಯಾಕರಣವಿಶೇಷ. (ಅದೇ "ಪ್ರಥಮೆಗಂ ಸಪ್ತಮಿಗಮಲ್ಲಿಯೊಂದೇಕ ರೂಪಮಕ್ಕುಂ" ಎಂಬ ವಾಕ್ಯದಲ್ಲಿ ಉಕ್ತವಾಗಿರುವುದು.) ಬೇರೊಂದು ಸೂತ್ರದ ಕಡೆಗೆ ಕೈತೋರಿಸಿದ ಕಿಟ್ಟೆಲನ ಸೂಚನೆಯನ್ನರಿತಮೇಲೂ. ಪ್ರಥಮಾ ಸಪ್ತಮಿಗಳೆರಡರಲ್ಲೂ ಒಂದೇ ರೂಪವನ್ನು ತಳೆದಿರುವ ಯಾವುದೋ ಪ್ರಕೃತಿಯನ್ನು ಆ ವಾಕ್ಯ ಕುರಿತಿರಬೇಕೆಂದು ಸಂದೇಹ ಮೂಡಿದುದಕ್ಕೆ ಇಲ್ಲಿ ಪರಿಹಾರ ದೊರಕುತ್ತದೆ.

ಅಂದು. ಇಂದು. ಉಂದು ಮೊದಲಾದ ಕಾಲವಾಚಿಗಳಿಗೂ ಅಕಾರಾಂತ ದಿಗ್ವಾಚಿಗಳಿಗೂ ಪ್ರಥಮಾ ದ್ವಿತೀಯಾ ಸಪ್ತಮೀ ವಿಭಕ್ತಿಗಳಲ್ಲಿ ಒಂದೇ ರೂಪವೆಂದು ಹೇಳಿ ತತ್ಪ್ರಶಃ ಇವುಗಳಿಗೂ ಸಪ್ತವಿಭಕ್ತಿಗಳುಂಟೆಂದು ಸ್ಥಾಪಿಸಹೊರಟ ಕೇಶಿರಾಜನ ಪ್ರಯ

ತ್ತವೇ ಅಲ್ಲಿ. ಇಲ್ಲಿ ಮೊದಲಾದ ಸ್ಥಳವಾಚಕಗಳ ಸಂಬಂಧದಲ್ಲೂ ಕಾರ್ಯಶೀಲವಾಗಿದೆಯೆಂದು ಹೇಳಬಹುದು.

ಈ ಪಾಠ ಪರಿಷ್ಕರಣದಿಂದ "ಪ್ರಥಮೆಗಂ ಸಪ್ತಮಿಗಮಲ್ಲಿಯೆಂದೇಕರೂಪಮಕ್ಕುಂ" ಎಂಬ ವಾಕ್ಯಕ್ಕೆ ಸೂತ್ರವಲ್ಲಿ ಸಾವಯುವ ಸಂಬಂಧ ಕಲ್ಪಿತವಾಗುವುದೇ ಅಲ್ಲದೆ. 'ಅಲ್ಲಿ' ಎಂಬ ಶಬ್ದಕ್ಕೆ ಸಂಬಂಧಿಸಿದ ವ್ಯಾಕರಣ ವಿಶೇಷವೊಂದು ಬೆಳಕಿಗೆ ಬಂದಂತಾಗುತ್ತದೆ.

ಈ ವಾಕ್ಯಕ್ಕೆ ಪ್ರಯೋಗ ಭಾಗದಲ್ಲಿ ದೊರೆತಿರುವ ಸ್ಥಾನ (ಸ್ಥಳವಾಚಕವಾದ 'ಅಲ್ಲಿ'ಯ ವಿಚಾರವನ್ನು ಹೇಳಿದಮೇಲೆ 'ದಿಗ್ವಾಚಕದದಂತಕ್ಕೆ' ಎಂಬ ನಿರ್ದೇಶ ಬರುವ ಮೊದಲು) ಬಲದಿಂದಲೂ 'ಅಲ್ಲಿ' ಎಂಬ ಸ್ಥಳವಾಚಕಕ್ಕೇ ಈ ವಾಕ್ಯ ಸಂಬಂಧಪಟ್ಟಿರಬೇಕೆಂದು ತಿಳಿಯಬಹುದು.

ಸೂತ್ರದ ಪ್ರಯೋಗ ಭಾಗದಲ್ಲಿ ಕಂಡು ಬರುವ ಎರಡನೆಯ ದೋಷವೆಂದರೆ "ದಿಗ್ವಾಚಿಯುಪ್ಪಕಾರಾಂತದ ಮೇಲೆ ವಿಕಲ್ಪದಿಂದಲ್ ಅಕ್ಕುಂ" ಎಂಬ ವೃತ್ತಿ ಭಾಗದ ವಿವರಣೆಗೆ ಸಂಬಂಧಿಸಿದುದು. ಆಚಾರ್ಯ ಡಿ. ಎಲ್. ಎನ್. ರವರು ಸಂಪಾದಿಸಿರುವ ಶಬ್ದಮಣಿದರ್ಪಣದ ಮೂರನೆಯ ಮುದ್ರಣದಲ್ಲಿ

1. "ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳಿಲ್ಲಿನಲ್
   ನಡೆದು ಗೆಲ್ದು........."
2. "ಎತ್ತಿದ ಕಯ್ಯೊಳ್ ಮುತ್ತಿದ
   ನತ್ತಿತ್ತುತ್ತೆತ್ತ ಸಾರ್ವರಿನ್ನಹಿತರ್ಕಳ್"

—ಇವೆರಡು ಪ್ರಯೋಗಗಳನ್ನೂ "ದಿಗ್ವಾಚಕದದಂತಕ್ಕೆ" ಉದಾಹರಣೆಯಾಗಿ ಕೊಟ್ಟಿದೆ

ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣದಲ್ಲೂ ಕಿಟ್ಟೆಲ್ ಮುದ್ರಣದಲ್ಲೂ ಮೇಲಿನ ಪ್ರಯೋಗಗಳ ಜೊತೆಗೆ "ಮೂಡಲ್. ತೆಂಕಲ್. ಪಡುವಲ್. ಬಡಗಲ್, ಅತ್ತಲ್, ಇತ್ತಲ್, ಉತ್ತಲ್. ಎತ್ತಲ್

ಮೂಡಲಿರ್ದ ಪಡದೊಳ್ ತಾರಾಮನೋವಲ್ಲಭಂ.........
ಅತ್ತಲ್ ದೇವೇಂದ್ರಂ ಮ
ತ್ತಿತ್ತಲ್ ಭುಜಗೇಂದ್ರನುತ್ತಲಾಶಾಧಿಪರೊಳ್
ಮುತ್ತಿರೆ ಭೇರೀಧ್ವನಿ ಪ
ರ್ವಿತ್ತೆತ್ತಲ್ ಮಸಗಿ ಘೋಷ ಶಿಕ್ಷಾದಕ್ಷಂ ॥"

— ಈ ಪ್ರಯೋಗಗಳನ್ನೂ ಕೂಡಿಸಿ. ಎಲ್ಲವನ್ನೂ ಒಟ್ಟಿಗೆ "ಅದಂತದವಿಕಲ್ಪದಲ್ಲಿ" ಉದಾಹರಣೆಯಾಗಿ ಕೊಟ್ಟಿದೆ.

ಮದ್ರಾಸ್ ಮುದ್ರಣದಲ್ಲಿ ಮಾತ್ರ ಆಚಾರ್ಯ ಡಿ. ಎಲ್. ಎನ್. ಸಂಪಾದಿತ ಪ್ರತಿಯಲ್ಲಿರುವಂತೆಯೇ ಇದೆ. ಆದರೆ ಸಂಪಾದಕರು "ದಿಗ್ವಾಚಕದದಂತಕ್ಕೆ" ಎಂಬು ದಕ್ಕೆ "ಅದಂತದ ವಿಕಲ್ಪದಲ್ಗೆ" ಎಂಬ ಪಾಠಾಂತರವನ್ನು ಕೊಟ್ಟಿದ್ದಾರೆ.

ಈ ಭಾಗದಲ್ಲಿ ಎರಡು ಸಂದೇಹಗಳು ಮೂಡುತ್ತವೆ. 1. ಅಕಾರಾಂತ ದಿಗ್ವಾಚಕಗಳಿಗೆ ಇಲ್ಲಿ ಉದಾ. ಕೊಡುವ ಅಗತ್ಯವೇನಿತ್ತು ? 2. ಪ್ರಯೋಗ ಭಾಗದಲ್ಲಿ ಬರುವ ದಿಗ್ವಾಚಕದದಂತಕ್ಕೆ ಎಂಬ ನಿರ್ದೇಶದ ಔಚಿತ್ಯವೇನು ? ದಿಗ್ವಾಚಕ ಗಳ ವಿಚಾರ ಈ ಸೂತ್ರದಲ್ಲೇ ಪೊತ್ತಮೊದಲ ಸಲ ವ್ಯಾಕರಣದಲ್ಲಿ ಬರುತ್ತಿದ್ದ ಪಕ್ಷಕ್ಕೆ ಅಕಾರಾಂತ ದಿಗ್ವಾಚಕಗಳಿಗೆ ಇಲ್ಲಿ ಉದಾ. ಯನ್ನು ಕೊಟ್ಟಿರಬಹುದೆಂದು ಭಾವಿಸಬಹು ದಾಗಿತ್ತು. ಆದರೆ 120ನೆಯ ಸೂತ್ರದಲ್ಲಾಗಲೇ ದಿಗ್ವಾಚಕಗಳಿಗೆ ತೃತೀಯಾ ಮೊದ ಲಾದ ವಿಭಕ್ತಿಗಳು ಸೇರುವಾಗ ಅಣ್ ಆಗಮವಾಗುವ ವಿಚಾರ ವಿಸ್ತಾರವಾಗಿ ನಿರೂಪಿತ ವಾಗಿದೆ. ಆದ್ದರಿಂದ ಇಲ್ಲಿ ಮತ್ತೆ ಅದನ್ನು ವಿವರಿಸುವುದರ ಸಾರ್ಥಕತೆಯಾಗಲೀ ಅಗತ್ಯವಾಗಲೀ ಕಾಣಿಸುವುದಿಲ್ಲ.

ಸೂತ್ರದ ಎರಡನೆಯ ಅಂಶವು ಬಯಸುವ ವಿವರಣೆ ಎಂಥದೆಂಬುದನ್ನು ಆಲೋಚಿಸಿದರೆ, ಅಕಾರಾಂತ ದಿಗ್ವಾಚಕಗಳಿಗೆ ಕೊಟ್ಟಿರುವ ಉದಾ. ಗಳಿಗೆ ಇಲ್ಲಿ ಸ್ಥಾನ ವಿಲ್ಲವೆಂಬುದು ಮನದಟ್ಟಾಗುತ್ತದೆ. (ಪ್ರಯೋಗ ಭಾಗದಲ್ಲಿ ಬರುವ ಎರಡನೆಯ ಸಂದೇಹ "ದಿಗ್ವಾಚಕದದಂತಕ್ಕೆ" ಎಂಬ ನಿರ್ದೇಶಕ್ಕೆ ಸಂಬಂಧಿಸಿದುದು.)

ಸೂತ್ರದಲ್ಲೂ ವೃತ್ತಿಯಲ್ಲೂ ಅದಂತದ ದಿಗ್ವಾಚಕಕ್ಕೆ 'ಅಲ್' ಹತ್ತುವುದು ವಿಕಲ್ಪವಾಗಿ ಎಂದು ಹೇಳಿರುವುದರಿಂದ ಪ್ರಯೋಗ ಭಾಗದಲ್ಲಿ 'ಅಲ್' ಸೇರಿರುವ ಹಾಗೂ 'ಅಲ್' ಸೇರದಿರುವ ಎರಡು ಬಗೆಯ ರೂಪಗಳೂ ಇರಬೇಕಾದುದು ಅಗತ್ಯ. ಆದರೆ ಈಗಿರುವ ಪ್ರಕಾರ 'ವಿಕಲ್ಪದಿಂದಲ್ಗೆ ಪ್ರಯೋಗಂ' ಎಂಬುವರ ಕೆಳಗೆ ಕೊಟ್ಟಿರುವ ಪ್ರಯೋಗಗಳು ಪ್ರಕೃತಿಗೆ ಅಲ್ ಸೇರಿರುವ ಪ್ರಯೋಗ ಮಾತ್ರಗಳಾಗಿವೆ. ಅಲ್ ಸೇರದಿರುವ ಪ್ರಯೋಗಗಳೆಲ್ಲಿ ? ಉಕಾರಾಂತ ದಿಗ್ವಾಚಕಗಳಿಗೆ ವಿಕಲ್ಪರೂಪಗಳಿರು ವಾಗ ಅದಂತಗಳಿಗೇಕಿಲ್ಲ ?

ಅಲ್ ಸೇರುವುದು ಸೇರದಿರುವುದು ಅಕಾರಾಂತ ದಿಗ್ವಾಚಕಗಳಿಗೆ ಮಾತ್ರ ವಿಶಿಷ್ಟ ವಾಗಿರುವುದರಿಂದ, ದಿಗ್ವಾಚಕಗಳು ಅದಂತವಾಗಿರುವುದಕ್ಕೆ ಪ್ರತ್ಯೇಕವಾಗಿ ಉದಾಹರಣೆ ಕೊಡಬೇಕಾದ ಅಗತ್ಯವಿಲ್ಲ, ಕಾರಣವೂ ಇಲ್ಲ. ಅದು ದತ್ತಾಂಶ (data)· ಉದಾಹರಣೆಯ ಅಗತ್ಯವಿರುವುದೇನಿದ್ದರೂ ಇವುಗಳ ಮೇಲೆ 'ಅಲ್' ಸೇರಿರುವುದಕ್ಕೆ ಹಾಗೂ ಸೇರದಿರುವುದಕ್ಕೆ ಸಂಬಂಧಿಸಿದಂತೆ. ಆದರೆ 'ದಿಗ್ವಾಚಕದದಂತಕ್ಕೆ' "ಪಡುವ ಮೂಡ ....ಗೆಲ್ವು". "ಎತ್ತಿದ...... ....ರ್ಕಳ್" ‖ ಈ ಪ್ರಯೋಗಗಳನ್ನು ಉದಾಹರಣೆಯಾಗಿ ಭಾವಿಸಿರುವುದರಿಂದ 'ಅಲ್' ಸೇರದಿರುವ

ಅಕಾರಾಂತ ದಿಗ್ವಾಚಿಗಳ ಸಪ್ತಮಿ ವಿಭಕ್ತಿ ರೂಪಕ್ಕೆ ಉದಾ. ಇಲ್ಲದಂತಾಗುತ್ತದೆ. ಸಾಮಾನ್ಯವಾಗಿ ವಿಕಲ್ಪವೆಂದು ಹೇಳಿದಾಗ ಕೇಶಿರಾಜ ಎರಡು ರೂಪಗಳನ್ನು ಕೊಡುವುದು ವಾಡಿಕೆ. ಉದಾ. ಇನಾಗಮ ವಿಕಲ್ಪಕ್ಕೆ : ಪಗಲ. ಪಗಲಿನ; ಇರುಳ. ಇರುಳಿನ.

ಈಗಿರುವ ಪ್ರಯೋಗಗಳಲ್ಲೇ ಈ ವಿಕಲ್ಪ ರೂಪಗಳನ್ನು ಕಾಣುವುದು ಸಾಧ್ಯವೇ ಎಂದು ಪರಿಶೀಲಿಸಬೇಕು. ದಿಗ್ವಾಚಕದದಂತಕ್ಕೆ ಕೊಟ್ಟಿರುವ ಪ್ರಯೋಗಗಳನ್ನೂ ವಿಕಲ್ಪದಿಂದಲ್ಗೆ ಪ್ರಯೋಗಂ ಎಂದು ಕೊಟ್ಟಿರುವ ಉದಾ. ಗಳನ್ನೂ ಕೂಡಿಸಿ. ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣ ಮತ್ತು ಕಿಟ್ಟೆಲ್ ಮುದ್ರಣಗಳಲ್ಲಿರುವಂತೆ ಅದಂತದ ವಿಕಲ್ಪದಲ್ಗೆ ಪ್ರಯೋಗಗಳಾಗಿ ಇಟ್ಟುಕೊಂಡರೆ ಆಗ ಅವು. "ದಿಗ್ವಾಚಿಯಪ್ಪಕಾರಾಂತದ ಮೇಲೆ ವಿಕಲ್ಪದಿಂದಲ್ ಅಕ್ಕುಂ" ಎಂಬ ವೃತ್ತಿಭಾಗಕ್ಕೆ ಅನುರೂಪವಾದ ವಿಕಲ್ಪರೂಪ ಗಳನ್ನುಳ್ಳ ಉದಾ. ಗಳಾಗುತ್ತವೆ. "ಪಡುವ. ಮೂಡ......।......ಗೆಲ್ದು" ಇತ್ಯಾದಿ ಪ್ರಯೋಗಗಳಲ್ಲಿ 'ಪಡುವ', 'ಮೂಡ' ಮೊದಲಾದ ಅಕಾರಾಂತ ದಿಗ್ವಾಚಕ ಗಳು ಅಲ್ ಸೇರದಿದ್ದರೂ ಸಪ್ತಮ್ಯರ್ಥವನ್ನು ಕೊಡುತ್ತಿವೆ. ಪಡುವ, ಮೂಡ...... ಪೊಡವಿಪತಿಗಳ್ ಎಂದರೆ ಪಡುವಲಲ್ಲಿ. ಮೂಡಲಲ್ಲಿ...... ಇರುವ ಪೊಡವಿಪತಿಗಳು ಎಂದೇ ಅರ್ಥ. 'ಅಲ್' ಸೇರಿ ಸಪ್ತಮ್ಯರ್ಥವನ್ನು ಕೊಡುತ್ತಿರುವುದಕ್ಕೆ 'ಮೂಡಲ್, ತೆಂಕಲ್......' ಇತ್ಯಾದಿ ರೂಪಗಳು ಉದಾಹರಣೆಗಳಾಗುತ್ತವೆ. ಆದ್ದರಿಂದ 'ದಿಗ್ವಾಚಕದದಂತಕ್ಕೆ' ಎಂಬ ನಿರ್ದೇಶ ಪ್ರಯೋಗ ಭಾಗದಲ್ಲಿ ದೋಷಕಾರಕವಾಗಿದೆ. ಅದರ ಸ್ಥಾನದಲ್ಲಿ ('ಅದಂತದ ವಿಕಲ್ಪದಲ್ಗೆ' ಎಂದಿರಬೇಕು.) ಲಿಂಗಣಾರಾಧ್ಯನ ವೃತ್ತಿ ಯಲ್ಲೇ ನಮಗೆ ತಿಳಿದಿರುವ ಮಟ್ಟಿಗೆ ಈ ದೋಷ ಮೊದಲ ಸಲ ತಲೆ ಹಾಕಿರುವುದು.

ಉದಂತ ದಿಗ್ವಾಚಿಗಳಿಗೆ ವಿಕಲ್ಪದ ಎತ್ವ ಸೇರುವಾಗಲೂ ವಿಕಲ್ಪ ರೂಪಗಳನ್ನು ಒಟ್ಟಿಗೆ ಕೊಟ್ಟಿರುವುದು ಮೇಲಿನ ನಿರ್ಣಯಕ್ಕೆ ಪೋಷಕವಾಗಿದೆ.—'ಉದಂತದೆತ್ವಕ್ಕೆ:— ಒಳಗು—ಒಳಗೆ. ಪೊಜಗು—ಪೊಜಗೆ......' ಇತ್ಯಾದಿ.

"ಉದಂತದೆತ್ವಕ್ಕೆ" ಎಂಬಲ್ಲಿ ದಿಗ್ವಾಚಕ ಯಾವ ಅಂತ. ಅಲ್ಲಿ ಸೇರುವ ಸಪ್ತಮಿ ವಿಭಕ್ತಿ ಪ್ರತ್ಯಯ ಯಾವುದು ಇವೆರಡರ ಸೂಚನೆಯೂ ಇದೆ. ಅಕಾರಾಂತ ದಿಗ್ವಾಚಿ ಗಳಿಗೆ ಸಂಬಂಧಿಸಿದಂತೆ. ಇದಕ್ಕೆ ಸಮಾನವಾದ ರೂಪ 'ಅದಂತದ ವಿಕಲ್ಪದಲ್ಗೆ' ಎಂಬುದೇ ಹೊರತು "ದಿಗ್ವಾಚಕದದಂತಕ್ಕೆ" ಎಂಬುದೂ ಅಲ್ಲ. ಕೆಲವು ಪ್ರತಿಗಳಲ್ಲಿ ಕಂಡು ಬರುವ "ವಿಕಲ್ಪದಿಂದಲ್ಗೆ ಪ್ರಯೋಗಂ" ಎಂಬುದೂ ಅಲ್ಲ. ವಾಕ್ಯರಚನಾರೀತಿಯಿಂದ "ಅದಂ ತದ ವಿಕಲ್ಪದಲ್ಗೆ" ಎಂಬ ನಿರ್ದೇಶವೇ ಸಮರ್ಪಕವಾಗಿ ತೋರುತ್ತದೆ.

ಪ್ರಕೃತ ವಿವೇಚನೆಯಿಂದ ಪರಿಷ್ಕರಿಸಿದ ಪ್ರಯೋಗ ಭಾಗವನ್ನು ಹೀಗೆ ಬರೆಯ ಬಹುದು:

ಅಲ್ಲಿ, ಇಲ್ಲಿ, ಎಲ್ಲಿ ಎಂದು ಸ್ಥಳವಿಶೇಷದೊಳಮಾ ಶಬ್ದ ಪೊಳಪ್ಪು:
ಸಿರಿನೆಲೆಗೊಂಡುದಲ್ಲಿ ಮದನಂ ಮನೆಗಟ್ಟಿದನಲ್ಲಿ ಸೌಖ್ಯಮಂ-
ಕುರಿಸಿ ಮಡುಲಿತ್ತುದಲ್ಲಿ..
....ಅಲ್ಲಿಯ ಪೆಂಡಿರನಗ್ನಿ ಸುತ್ತಿದಂ

ಪ್ರಥಮೆಗಂ ಸಪ್ತಮಿಗಂ ಅಲ್ಲಿಯೆಂದೇಕರೂಪಮುಕ್ಕುಂ ಅದಂತದ ವಿಕಲ್ಪದಲ್ಗೆ :

ಪಡುವ ಮೂಡ ತೆಂಕ ಬಡಗ ಪ್ರೊಡವಿಪತಿಗಳಿಲ್ಲಿನಲ್
ನಡೆದು ಗೆಲ್ದು......
ಎತ್ತಿದ ಕಯ್ಯೊಳ್ ಮುತ್ತಿದ
ನತ್ತಿತ್ತುತ್ತೆತ್ತ ಸಾರ್ವರಿನ್ನಹಿತರ್ಕಳ್.
ಮೂಡಲ್ ತೆಂಕಲ್ ಪಡುವಲ್ ಬಡಗಲ್
ಅತ್ತಲ್ ಇತ್ತಲ್ ಉತ್ತಲ್, ಎತ್ತಲ್
ಮೂಡಲಿರ್ದ ಪದದೊಳ್ ತಾರಾಮನೋವಲ್ಲಭಂ
ಅತ್ತಲ್ ದೇವೇಂದ್ರಂ ಮ
ತ್ತಿತ್ತಲ್ ಭುಜಗೇಂದ್ರನುತ್ತ ಲಾಶಾಧಿಪರೊಳ್
ಮುತ್ತಿರೆ ಭೇರೀಧ್ವನಿ ಪ
ರ್ವಿತ್ತೆತ್ತಲ್ ಮಸಗಿ ಘೋಷ ಶಿಕ್ಷಾದಕ್ಷಂ ॥

ಭಾರತದಲ್ಲಿ ಸಣ್ಣ ಉಳಿತಾಯ ಚಳುವಳಿ

ಎನ್. ಪ್ರಭುಸ್ವಾಮಿ

ಬ್ರಿಟಿಷರ ಆಳ್ವಿಕೆ ಇದ್ದಾಗ ಭಾರತದ ಮೂರು ಮುಖ್ಯ ಪ್ರಾಂತ್ಯಗಳಾಗಿದ್ದ ಬಂಗಾಳ, ಮದ್ರಾಸ್ ಮತ್ತು ಮುಂಬಯಿಗಳಲ್ಲಿ ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ಸ್ಥಾಪಿಸಿದ ಮೇಲೆ ಸಣ್ಣ ಉಳಿತಾಯ ಚಳುವಳಿಯು ಭಾರತದಲ್ಲಿ ಆರಂಭವಾಯಿತು ಎನ್ನಬಹುದು. ಮೇಲ್ಕಂಡ ಪ್ರಾಂತ್ಯಗಳಲ್ಲಿ ಕ್ರಮವಾಗಿ 1833. 1840 ಮತ್ತು 1843ರಲ್ಲಿ ಪ್ರೆಸಿಡೆನ್ಸಿ ಬ್ಯಾಂಕುಗಳು ಆರಂಭವಾದುವು. ಈ ಬ್ಯಾಂಕುಗಳು ಸಣ್ಣ ಠೇವಣಿಗಳನ್ನು ಸ್ವೀಕರಿಸುವುದರ ಮೂಲಕ ಸಣ್ಣ ಉಳಿತಾಯ ಯೋಜನೆಯನ್ನು ಆರಂಭಿಸಿದವು. ಆದರೆ ಈ ಬ್ಯಾಂಕುಗಳ ಚಟುವಟಿಕೆಗಳು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತಿದ್ದುವು.

1860 ಆದಮೇಲೆ ಸಣ್ಣ ಉಳಿತಾಯ ಯೋಜನೆಯನ್ನು ಭಾರತದ ಎಲ್ಲೆಡೆಗೂ ವಿಸ್ತರಿಸುವ ಯತ್ನ ಮಾಡಲಾಯಿತು. ಬ್ರಿಟನ್ನಿನಲ್ಲಿ ಅಂಚೆ ಕಚೇರಿಗಳು ಉಳಿತಾಯ ಬ್ಯಾಂಕುಗಳ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದವು. ಇದನ್ನು ನೋಡಿ ಇದೇ ರೀತಿಯ ಕಾರ್ಯವನ್ನು ಭಾರತದಲ್ಲಿರುವ ಅಂಚೆ ಕಚೇರಿಗಳು ನಿರ್ವಹಿಸುವಂತೆ ಮಾಡಬೇಕೆಂದು ಬ್ರಿಟಿಷ್ ಮಂತ್ರಿಮಂಡಲದ ಭಾರತದ ವ್ಯವಹಾರಗಳ ಸಚಿವರು ನಿರ್ಧರಿಸಿದರು. ಆದರೆ ಭಾರತ ಸರ್ಕಾರ ಬ್ರಿಟಿಷ್ ಮಂತ್ರಿ ಮಂಡಲದ ಈ ಸಲಹೆಯನ್ನು ಒಪ್ಪಲಿಲ್ಲ. ಏಕೆಂದರೆ ಭಾರತದಲ್ಲಿರುವ ಅಂಚೆ ಕಚೇರಿಗಳು ಬ್ಯಾಂಕಿಂಗ್ ಕೆಲಸ ನಿರ್ವಹಿಸುವಷ್ಟು ಶಕ್ತಿಯನ್ನು ಪಡೆದಿಲ್ಲವೆಂಬುದು ಭಾರತ ಸರ್ಕಾರದ ಅಭಿಪ್ರಾಯವಾಗಿತ್ತು.

1870 ರಲ್ಲಿ ಜಿಲ್ಲಾ ಉಳಿತಾಯ ಬ್ಯಾಂಕುಗಳ ಯೋಜನೆಯನ್ನು ಭಾರತದಲ್ಲಿ ಜಾರಿಗೆ ತರಲಾಯಿತು. ಪ್ರೆಸಿಡೆನ್ಸಿ ಬ್ಯಾಂಕುಗಳ ಶಾಖೆ ಇದ್ದ ಕಡೆಯೆಲ್ಲಾ ಅವುಗಳು ಉಳಿತಾಯ ಬ್ಯಾಂಕಿನ ಕೆಲಸ ನಿರ್ವಹಿಸಲಾರಂಭಿಸಿದವು. ಉಳಿದ ಕಡೆ ಜಿಲ್ಲಾ ಖಜಾನೆಗಳು ಉಳಿತಾಯ ಬ್ಯಾಂಕಿನ ಕೆಲಸ ವಹಿಸಿಕೊಂಡವು. ಜನಸಾಮಾನ್ಯರಲ್ಲಿ ಉಳಿತಾಯ ಮನೋಭಾವನೆ ಉಂಟುಮಾಡಲು ಸಮಿತಿಗಳನ್ನು ರಚಿಸಿ ಪ್ರಚಾರ ಕಾರ್ಯ ಆರಂಭಿಸಲಾಯಿತು.

ಉಳಿತಾಯ ಬ್ಯಾಂಕಿನಲ್ಲಿ ಖಾತೆಯನ್ನು ಆರಂಭಿಸಬೇಕಾದರೆ ಕಡೆಯ ಪಕ್ಷ 1 ರೂಪಾಯಿ ಠೇವಣಿಯಿಡಬೇಕಾಗಿತ್ತು. 3000ರೂ. ಗಳವರೆಗೆ ಠೇವಣಿ ಇಡಬಹು

ದಾಗಿತ್ತು. ಶೇಕಡಾ 3ರಷ್ಟು ಬಡ್ಡಿಯನ್ನು ಕೊಡಲಾಗುತ್ತಿತ್ತು. ಪ್ರತಿ ಸೋಮವಾರ ಉಳಿತಾಯ ಯೋಜನೆಗೆ ಸಂಬಂಧಿಸಿದಂತೆ ಠೇವಣಿಗಳನ್ನು ಸ್ವೀಕರಿಸುವುದಕ್ಕಾಗಿ ಒಂದು ಘಂಟೆ ಕಾಲ ಖಜಾನೆಗಳು ಕೆಲಸ ಮಾಡುತ್ತಿದ್ದವು.

1873 ರಲ್ಲಿ ಉಳಿತಾಯ ಬ್ಯಾಂಕುಗಳ ಕಾನೂನು ಜಾರಿಗೆ ಬಂದಿತು. ಇದರ ಪ್ರಕಾರ ಖಾಸಗಿಯವರು ಉಳಿತಾಯ ಬ್ಯಾಂಕುಗಳನ್ನು ಸ್ಥಾಪಿಸಿದರೆ ಅವುಗಳಿಗೆ ಸರ್ಕಾರದ ಮನ್ನಣೆ ದೊರೆಯುವಂತಾಯಿತು. 1879ರಲ್ಲಿ ಉಳಿತಾಯ ಬ್ಯಾಂಕುಗಳಲ್ಲಿ ಇಡಬಹುದಾದ ಪರಮಾವಧಿ ಠೇವಣಿಯನ್ನು 5000 ರೂಪಾಯಿ ಮೊತ್ತಕ್ಕೆ ಏರಿಸಲಾಯಿತು. ಅವುಗಳ ಮೇಲೆ ಕೊಡಲ್ಪಡುತ್ತಿದ್ದ ಬಡ್ಡಿ ದರವನ್ನು ಶೇಕಡಾ $4\frac{1}{2}$ಗೆ ಏರಿಸಲಾಯಿತು.

1882 ರಲ್ಲಿ ಅಂಚೆ ಕಚೇರಿಗಳು ಉಳಿತಾಯ ಬ್ಯಾಂಕುಗಳ ಕೆಲಸ ನಿರ್ವಹಿಸಲಾರಂಭಿಸಿದವು. ಈ ವೇಳೆಗೆ ಭಾರತದ ಎಲ್ಲೆಡೆಯೂ ಅಂಚೆ ಕಚೇರಿಗಳು ಇದ್ದುದರಿಂದ ಉಳಿತಾಯ ಬ್ಯಾಂಕಿನ ಯೋಜನೆಯು ಭಾರತದ ಎಲ್ಲಾ ಕಡೆಯೂ ಆರಂಭವಾದಂತಾಯಿತು.

ಅಂಚೆ ಕಚೇರಿಗಳು ಉಳಿತಾಯ ಬ್ಯಾಂಕುಗಳ ಕಾರ್ಯ ಆರಂಭಿಸಿದಮೇಲೆ ಅವುಗಳ ಮುಖ್ಯ ಲಕ್ಷಣಗಳು ಹೀಗಿದ್ದವು :

1) ರಜಾದಿನಗಳನ್ನುಳಿದು ಉಳಿದ ದಿನಗಳಲ್ಲಿ ಮಧ್ಯಾಹ್ನ 12 ರಿಂದ ಸಾಯಂಕಾಲ 4 ಗಂಟೆಯವರೆಗೆ ಬ್ಯಾಂಕಿನ ಕೆಲಸ ನಿರ್ವಹಿಸುತ್ತಿದ್ದವು.

2) ಬ್ಯಾಂಕಿನಲ್ಲಿ ಇಡುವ ಕನಿಷ್ಠ ಠೇವಣಿ ನಾಲ್ಕಾಣೆ (25ಪೈಸಾ) ಯಾಗಿತ್ತು. ಒಂದು ವರ್ಷದ ಅವಧಿಯಲ್ಲಿ ಇಡಬಹುದಾದ ಪರಮಾವಧಿ ಠೇವಣಿ ಮೊತ್ತ 500 ರೂ.ಗಳಾಗಿತ್ತು.

3) ಬಡ್ಡಿದರ ಶೇಕಡಾ $3\frac{3}{4}$ ರಷ್ಟಿತ್ತು.

4) ಠೇವಣಿದಾರನು ವಾರಕ್ಕೊಂದಾವರ್ತಿ ನಾಲ್ಕಾಣೆಗಿಂತ ಕಡಿಮೆ ಇಲ್ಲದೆ ತನ್ನ ಖಾತೆಯಿಂದ ಹಣವನ್ನು ವಾಪಸ್ಸು ಪಡೆಯಬಹುದಾಗಿತ್ತು.

5) ಯಾವ ಖಾತೆದಾರನಿಗೇ ಆಗಲೀ ಒಂದು ತಿಂಗಳಿಗೆ ಬರತಕ್ಕಂಥ ಬಡ್ಡಿ 9 ರೂ 6 ಆಣೆಗಳಿಗಿಂತ ಹೆಚ್ಚಾಗಿರಕೂಡದೆಂದು ನಿರ್ಧರಿಸಲಾಗಿತ್ತು.

1882 ರ ಕೊನೆಯ ವೇಳೆಗೆ 4066 ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳಿದ್ದವು. ಅವುಗಳು 39,129 ಖಾತೆಗಳನ್ನು ಹೊಂದಿದ್ದು 27.96.796 ರೂಪಾಯಿ ಮೊತ್ತದ ಠೇವಣಿಯನ್ನು ಹೊಂದಿದ್ದವು.

1886 ರಲ್ಲಿ ಜಿಲ್ಲಾ ಖಜಾನೆಗಳು ತಾವು ನಡೆಸುತ್ತಿದ್ದ ಉಳಿತಾಯ ಬ್ಯಾಂಕುಗಳ ಕೆಲಸವನ್ನು ಅಂಚೆ ಕಚೇರಿಗಳಿಗೆ ವರ್ಗಾಯಿಸಿದವು. ಇದರಿಂದ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳಲ್ಲಿದ್ದ ಠೇವಣಿ ಮೊತ್ತ 425.5 ಲಕ್ಷಗಳನ್ನು ಮುಟ್ಟಿತು. 1896 ರಲ್ಲಿ ಪ್ರೆಸಿಡೆನ್ಸಿ ಬ್ಯಾಂಕುಗಳು ತಾವು ನಡೆಸುತ್ತಿದ್ದ ಉಳಿತಾಯ ಬ್ಯಾಂಕಿನ ಕೆಲಸವನ್ನು ಅಂಚೆ ಕಚೇರಿಗಳಿಗೆ ವಹಿಸಿಕೊಟ್ಟವು. ಅವುಗಳು ಹೊಂದಿದ್ದ ಖಾತೆಗಳನ್ನು ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳಿಗೆ ವರ್ಗಾಯಿಸಲಾಯಿತು.

1896 ರಿಂದ 1914 ರ ವರೆಗೆ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ಒಂದೇ ಸಮನೆ ಪ್ರಗತಿಯ ಹಾದಿಯಲ್ಲಿ ಇದ್ದವು. ಆದರೆ ಮೊದಲನೆ ಮಹಾಯುದ್ಧ ಆರಂಭವಾದೊಡನೆ ಠೇವಣಿದಾರರ ಧೋರಣೆಯಲ್ಲಿ ಬದಲಾವಣೆ ತಲೆದೋರಿತು. ಅದರ ಪರಿಣಾಮವಾಗಿ ಠೇವಣಿಗಳ ಮೊತ್ತ ಯುದ್ಧಕ್ಕೆ ಮುನ್ನ 23 ಕೋಟಿ ರೂಪಾಯಿಗಳಷ್ಟು ಇದ್ದದ್ದು ಯುದ್ಧ ಪೂರೈಸುವ ವೇಳೆಗೆ 15 ಕೋಟಿ ರೂಪಾಯಿಗಳಿಗೆ ಇಳಿಯಿತು. ಠೇವಣಿದಾರರಲ್ಲಿ ಉಂಟಾಗಿದ್ದ ಅಪನಂಬಿಕೆ ಬಹಳ ಕಾಲ ಮುಂದುವರಿಯಲಿಲ್ಲ. ಮೊದಲನೆ ಮಹಾಯುದ್ಧ ಮುಗಿದೊಡನೆ ಪುನಃ ಠೇವಣಿಗಳು ಅಧಿಕಗೊಳ್ಳಲಾರಂಭಿಸಿದವು. ಎರಡನೆ ಮಹಾಯುದ್ಧದ ಅವಧಿಯಲ್ಲಿ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳ ಮೇಲೆ ಯಾವ ಕೆಟ್ಟ ಪರಿಣಾಮವೂ ಉಂಟಾಗಲಿಲ್ಲ.

ಮೊದಲನೆ ಮಹಾ ಯುದ್ಧವಾದನಂತರ ಈ ಕೆಳಗೆ ಕಂಡ ಬದಲಾವಣೆಗಳು ಉಂಟಾದವು :

1) ಠೇವಣಿದಾರನು ಒಂದು ವರ್ಷದ ಅವಧಿಯಲ್ಲಿ ಇಡಬಹುದಾದ ಠೇವಣಿ ಮೊತ್ತವು 1914 ರಲ್ಲಿ 500 ರೂಗಳಿಂದ 750 ರೂ. ಗಳಿಗೆ ಏರಿಸಲ್ಪಟ್ಟಿತು. ಈ ಮೊತ್ತವು 1943 ರಲ್ಲಿ 1200 ರೂ. ಗಳಿಗೆ ಮತ್ತು 1946 ರಲ್ಲಿ 5000 ರೂಗಳಿಗೆ ಏರಿತು.

2) 1920 ರಲ್ಲಿ ಅಧ್ಯಾಪಕರಿಗೆ ಅನ್ವಯಿಸುವ ಪ್ರಾವಿಡೆಂಟ್ ಫಂಡ್ ಖಾತೆಯನ್ನು ತೆರೆಯಲು ಅವಕಾಶ ಮಾಡಿಕೊಡಲಾಯಿತು.

3) 1944 ರಲ್ಲಿ. 12ವರ್ಷಗಳ ಅವಧಿಯ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳನ್ನು ಹಂಚುವುದರ ಮೂಲಕ ಹಣವನ್ನು ಶೇಖರಿಸುವ ಕಾರ್ಯ ಆರಂಭವಾಯಿತು.

ಇದುವರೆಗೆ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿದಾಗ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ಸಣ್ಣ ವರಮಾನ ಪಡೆಯುವ ವರ್ಗದ ಜನರ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದವು ಎಂದು ತಿಳಿದು ಬರುತ್ತದೆ. ವಾಣಿಜ್ಯ ಬ್ಯಾಂಕುಗಳೊಡನೆ

ಪೈಪೋಟಿ ನಡೆಸುವ ಇಚ್ಛೆ ಅವುಗಳಿಗಿರಲಿಲ್ಲ. ಆದುದರಿಂದಲೇ ಠೇವಣಿದಾರನು ಇಡಬಹುದಾದ ಠೇವಣಿ ಮೊತ್ತದ ಮೇಲೆ ಮಿತಿ ವಿಧಿಸಲಾಗಿತ್ತು.

ಸ್ವಾತಂತ್ರ್ಯ ಬಂದೊಡನೆ ಅಂಚೆ ಕಚೇರಿ ಬ್ಯಾಂಕುಗಳ ಕಾರ್ಯವನ್ನು ವಿಸ್ತರಿಸಲು ಭಾರತ ಸರ್ಕಾರ ನಿರ್ಧರಿಸಿತು. ಯಾವ ರೀತಿ ಇವುಗಳ ಚಟುವಟಿಕೆಯನ್ನು ವಿಸ್ತರಿಸಬಹುದು ಎಂಬುದನ್ನು ಪರಿಶೀಲಿಸಲು 1950ರಲ್ಲಿ ಭಾರತ ಸರ್ಕಾರ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಮಾಡಿದ ಶಿಫಾರಸುಗಳಿಗೆ ಅನುಗುಣವಾಗಿ ಕೆಲವು ಬದಲಾವಣೆಗಳನ್ನು ತರಲಾಯಿತು. ಜಾರಿಗೆ ತರಲಾದ ಬದಲಾವಣೆಗಳು ಹೀಗಿವೆ :

(1) ಚೆಕ್ಕುಗಳ ಮೂಲಕ ಠೇವಣಿದಾರನು ಠೇವಣಿ ಇಡುವುದಕ್ಕೂ ಮತ್ತು ಠೇವಣಿಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೂ ಅವಕಾಶಮಾಡಿಕೊಡಲಾಯಿತು. ಇಂತಹ ಸೌಕರ್ಯವನ್ನು ಪ್ರಧಾನ ಮತ್ತು ಉಪ ಅಂಚೆಕಚೇರಿ ಉಳಿತಾಯ ಬ್ಯಾಂಕುಗಳಲ್ಲಿ ಮಾತ್ರ ಒದಗಿಸಲಾಯಿತು. ಈ ಸೌಕರ್ಯ 1958 ನೆ ಇಸವಿ ಏಪ್ರಿಲ್‌ಮಾಹೆ ಒಂದನೇ ತಾರೀಖಿನಿಂದ ಜಾರಿಗೆ ಬಂದಿತು.

(2) ವಾರಕ್ಕೆ ಎರಡಾವರ್ತಿ ಠೇವಣಿದಾರನು ತನ್ನ ಖಾತೆಯಿಂದ ಹಣವನ್ನು ವಾಪಸ್ಸು ಪಡೆಯುವ ಸೌಲಭ್ಯ ದೊರೆಯಿತು. ಆದರೆ ವಾಪಸ್ಸು ಪಡೆಯಬಹುದಾದ ಹಣದ ಮೊತ್ತ 1000 ರೂ. ಗಳಿಗಿಂತ ಹೆಚ್ಚಾಗಿರಕೂಡದು.

(3) ಠೇವಣಿದಾರನು ತನ್ನ ಖಾತೆಗೆ ಹಕ್ಕುದಾರರನ್ನು ಸೂಚಿಸುವ ಅವಕಾಶ ಪಡೆದನು.

(4) 1965ನೆ ಇಸವಿ ಜುಲೈ ಮಾಹೆ ಒಂದರಿಂದ ಠೇವಣಿದಾರನು ಇಡಬಹುದಾದ ಠೇವಣಿಯನ್ನು 25 ಸಾವಿರ ರೂಪಾಯಿ ಮೊತ್ತಕ್ಕೆ ಏರಿಸಲಾಗಿದೆ.

ಸಣ್ಣ ಉಳಿತಾಯ ಯೋಜನೆಯನ್ನು ವಿಸ್ತರಿಸುವುದಕ್ಕಾಗಿ ಭಾರತ ಸರ್ಕಾರ. ಗ್ರಾಮಾಂತರ ಪ್ರದೇಶಗಳಲ್ಲಿರುವ ಅಂಚೆ ಕಚೇರಿಗಳು ಕೂಡ ಉಳಿತಾಯ ಬ್ಯಾಂಕುಗಳ ಕೆಲಸ ನಿರ್ವಹಿಸಲು. ಏರ್ಪಾಡು ಮಾಡಿತು. ಇದರ ಫಲವಾಗಿ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳ ಸಂಖ್ಯೆ 1965 ರಲ್ಲಿ 52.000 ಇದ್ದದ್ದು 1971ರ ವೇಳೆಗೆ 70.000 ಕ್ಕೆ ಏರಿತು. ಹೊಸ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳನ್ನು ಹಂಚುವುದರ ಮೂಲಕ ಹಣ ಶೇಖರಿಸುವ ವಿಧಾನವನ್ನು ಭಾರತ ಸರ್ಕಾರ ಜಾರಿಗೆ ತಂದಿದೆ. ಈ ಸರ್ಟಿಫಿಕೇಟುಗಳನ್ನು ಕೊಂಡವರಿಗೆ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿ ಕೊಡಲಾಗುತ್ತದೆ ಮತ್ತು ಆದಾಯ ತೆರಿಗೆಯಿಂದ ವಿನಾಯಿತಿ ಕೊಡಲಾಗಿದೆ.

ಕಂತುಗಳ ಮೂಲಕ ಠೇವಣಿಯನ್ನು ಒದಗಿಸಬೇಕೆಂದಿರುವ ಜನರ ಸೌಕರ್ಯಕ್ಕಾಗಿ ಸಂಗ್ರಹಕಾರಕ ಕಾಲಾವಧಿ ಠೇವಣಿ ಯೋಜನೆಯನ್ನು ಅಂಚೆ ಕಚೇರಿ ಉಳಿತಾಯ

ಬ್ಯಾಂಕುಗಳು 1959ನೆ ಇಸವಿ ಜನವರಿ ಮಾಹೆಯಿಂದ ಜಾರಿಗೆ ತಂದಿವೆ. ಈ ಯೋಜನೆ ಮೂಲಕ 1971ನೆ ಇಸವಿ ಮಾರ್ಚಿ ತಿಂಗಳ ಕೊನೆ ವೇಳೆಗೆ 110.91 ಕೋಟಿ ರೂಪಾಯಿಗಳಷ್ಟು ಠೇವಣಿಯನ್ನು ಶೇಖರಿಸಿದ್ದವು. ಇದಲ್ಲದೆ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು 1970 ನೆ ಇಸವಿ ಏಪ್ರಿಲ್ ಮಾಹೆ ಒಂದರಿಂದ ಒಂದು. ಮೂರು ಅಥವಾ ಐದು ವರ್ಷಗಳ ಕಾಲಾವಧಿ ಠೇವಣಿಗಳನ್ನು ಸ್ವೀಕರಿಸಲು ಆರಂಭಿಸಿವೆ. ಅದರ ಪರಿಣಾಮವಾಗಿ ಮೊದಲನೆ ವರ್ಷವೇ (1970–1971) 73.51 ಕೋಟಿ ರೂಪಾಯಿ ಮೊತ್ತದ ಠೇವಣಿಯನ್ನು ಪಡೆದವು. 1966 ನೆ ಇಸವಿಯಿಂದ ಯೂನಿಟ್ ಟ್ರಸ್ಟುಗಳನ್ನು ಹಂಚುವುದರ ಮೂಲಕ ಠೇವಣಿಗಳನ್ನು ಪಡೆಯುವ ಕಾರ್ಯವನ್ನು ಆರಂಭಿಸಲಾಗಿದೆ.

ಹೀಗೆ ಸಣ್ಣ ಉಳಿತಾಯ ಯೋಜನೆಯನ್ನು ವಿಸ್ತರಿಸುವಲ್ಲಿ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ಮಹತ್ವ ಪಾತ್ರವನ್ನು ನಿರ್ವಹಿಸುತ್ತಿವೆ. ದೇಶಾದ್ಯಂತ 70 ಸಾವಿರ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ಜನರನ್ನು ಆಕರ್ಷಿಸುತ್ತಿವೆ. 2 ಕೋಟಿಗಿಂತ ಹೆಚ್ಚಿಗೆ ಜನರು ತಮ್ಮ ಖಾತೆಗಳನ್ನು ಈ ಬ್ಯಾಂಕುಗಳಲ್ಲಿ ತೆರೆದಿದ್ದಾರೆ. ಒಟ್ಟು 2220 ಕೋಟಿ ರೂಪಾಯಿ ಮೊತ್ತದ ಠೇವಣಿಯನ್ನು ವಿವಿಧ ರೂಪದಲ್ಲಿ ಬ್ಯಾಂಕುಗಳು ಶೇಖರಿಸಿವೆ. ದೇಶಾದ್ಯಂತ ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಠೇವಣಿ ಮೊತ್ತದೊಡನೆ. ಈ ಬ್ಯಾಂಕುಗಳು ಹೊಂದಿರುವ ಠೇವಣಿಯನ್ನು ಹೋಲಿಸಿದರೆ ಸುಮಾರು ಶೇಕಡಾ 50 ರಷ್ಟು ಆಗುತ್ತದೆ.

ಅಲ್ಪ ವರಮಾನ ಪಡೆಯುವ ಜನರು ತಾವು ಕಷ್ಟಪಟ್ಟು ಉಳಿಸಿದ ಹಣವನ್ನು ಶೇಖರಿಸಿಡಲು ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ವಿವಿಧ ಮಾರ್ಗಗಳನ್ನು ಕಲ್ಪಿಸಿಕೊಟ್ಟು ಮಹದುಪಕಾರ ಮಾಡಿವೆ. ಅವು ಶೇಕಡಾ 4 ರಷ್ಟು ಬಡ್ಡಿಯನ್ನು ಠೇವಣಿಗಳ ಮೇಲೆ ಒದಗಿಸುತ್ತವೆ. ಅಲ್ಲದೆ ಆ ಬಡ್ಡಿಯಿಂದ ಪಡೆಯುವ ವರಮಾನಕ್ಕೆ ವರಮಾನ ತೆರಿಗೆ ವಿನಾಯಿತಿ ಇದೆ. ಆದುದರಿಂದ ಠೇವಣಿದಾರರನ್ನು ಸಾಕಷ್ಟು ಪ್ರಮಾಣದಲ್ಲಿ ಆಕರ್ಷಿಸಿವೆ. ದೇಶದ ಆರ್ಥಿಕಾಭಿವೃದ್ಧಿಗಾಗಿ ಅವಶ್ಯಕವಾದ ಬಂಡವಾಳವನ್ನು ಶೇಖರಿಸುವಲ್ಲಿ ಪ್ರಮುಖ ಪಾತ್ರ ವಹಿಸಿ. ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ಗಮನಾರ್ಹ ಸೇವೆ ಸಲ್ಲಿಸುತ್ತಿವೆ.

ವಿ. ಸೂ : ಈ ಲೇಖನವನ್ನು, ಅಂಚೆ ಮತ್ತು ತಂತಿ ಇಲಾಖೆ ಆಗಿಂದಾಗ್ಗೆ ಹೊರಡಿಸಿದ ಪ್ರಕಟಣೆಗಳ ಆಧಾರದ ಮೇಲೆ ಬರೆಯಲಾಗಿದೆ. ಇದರೊಂದಿಗೆ ಕೆಲವೆಡೆ ಮೈಸೂರು ಸರ್ಕಾರದ ಪ್ರಕಟಣೆಗಳನ್ನೂ ಉಪಯೋಗಿಸಿಕೊಳ್ಳಲಾಗಿದೆ.

ಜಾನಪದ ಅಭಿಮನ್ಯು

ಎಲ್. ಆರ್. ಹೆಗಡೆ

ಜಾನಪದ ಮಹಾಭಾರತದ ಕಥೆಯ ಪದ–ಹಾಡುಗಳು ನಮ್ಮ ಜಿಲ್ಲೆಯಲ್ಲಿ ಹಿಂದೆ ಬಹಳವಾಗಿ ಪ್ರಚಾರದಲ್ಲಿದ್ದವು. ಐದು ಹಗಲು. ಐದು ರಾತ್ರಿಗಳವರೆಗೂ ಹೇಳಿ ಮುಗಿಸಬೇಕಾದ ಪದಗಳು ಒಟ್ಟೊಟ್ಟು ಗುಮಟೆ ಪದ ಹೇಳುವ ಒಕ್ಕಲಿಗರಿಗೆ ಬರುತ್ತಿದ್ದುವು ಎಂದು ಬಿಣಗಾದ ವೃದ್ಧ ಹಾಡುಗಾರ ಬುದ್ದು ಶೇಶು ಗೌಡರು ಹೇಳಿದ್ದಾರೆ. ಜಾನಪದ ಮಹಾಭಾರತದ ಹಾಡುಗಳಲ್ಲಿಯೂ ಹಲವಾರು ನೂತನ ಕಥಾಸರಣೆಗಳಿದ್ದು ಬಹಳ ತರದ ಪಾಠಗಳೂ ಅವುಗಳಲ್ಲಿದ್ದವು. ಅಳಿದುಳಿದ ಆ ಹಾಡುಗಳಲ್ಲಿ ಈ ಸಂಗ್ರಾಹಕನು ಕೆಲವು ವರ್ಷದಿಂದ ದೊರಕಿಸಿದ ಹಾಡುಗಳಿವೆ. ಸುಮಾರು ಆರು ನೂರು ಪುಟಗಳನ್ನು ಮಿಕ್ಕುವಷ್ಟು ಜಾನಪದ ಮಹಾಭಾರತ ಕಥೆಯ ಹಾಡುಗಳು ಉಂಟು. ಕಥೆಯ ವಿವಿಧ ಹಂತದ ಹಾಡುಗಳಲ್ಲಿ ಮಧ್ಯಮಧ್ಯದಲ್ಲಿನ ಅನೇಕ ಕಥೆಗಳ ಹಾಡುಗಳು ಈಗ ದೊರೆಯುತ್ತಿಲ್ಲ. ಈ ಜಾನಪದ ಮಹಾಭಾರತ ಹಾಗೂ ರಾಮಾಯಣದ ಹಾಡುಗಳು ಕೆಲವೊಮ್ಮೆ ಯಕ್ಷಗಾನ ಪ್ರಸಂಗಗಳಿಂದ ಪ್ರೇರಣೆ ಹೊಂದಿದರೂ ಅನೇಕ ವಿಶಿಷ್ಟ ಕತೆಗಳೂ ಇವುಗಳಲ್ಲಿವೆ.

ಈ ಲೇಖನದಲ್ಲಿ ಜಾನಪದ ಮಹಾಭಾರತದ ಅಭಿಮನ್ಯುವಿನ ಕಥೆಗೆ ಸಂಬಂಧಿಸಿದ ಹಾಡುಗಳಲ್ಲಿ ಮೂಡಿರುವ ಚಿತ್ರಣವನ್ನು ಅಳವಡಿಸಿಕೊಳ್ಳಲಾಗಿದೆ. ಈ ಕಥೆಯ ಬೇರೆ ಬೇರೆ ಹಂತಗಳಲ್ಲಿನ ಇನ್ನೂ ಹಲವು ಪಾಠಗಳು ದೊರೆಯಬಹುದಾಗಿದ್ದರೂ ಈಗ ದೊರೆತ ಹಾಡುಗಳೇ ನೂರಾರು ಪುಟಗಳನ್ನು ಮಿಕ್ಕುತ್ತವೆ.

ಅಭಿಮನ್ಯುವಿನ ಜನ್ಮದ ಹಿನ್ನೆಲೆ: ಅಭಿಮನ್ಯುವಿನ ತಾಯಿ ಸುಭದ್ರೆ ಗರ್ಭಿಣಿಯಾಗುವ ಸಂದರ್ಭದ ವರ್ಣನೆಯಿಂದ ಅಭಿಮನ್ಯು ಜನನದ ಹಾಡುಗಳು ಪ್ರಾರಂಭವಾಗುವುದು ಸಾಮಾನ್ಯವಾಗಿದೆ.

ಒಂದು ಪಾಠದಲ್ಲಿ ಗರ್ಭಿಣಿಯಾದ ಸುಭದ್ರೆಗೆ ಏಳು ಸಮುದ್ರದ ಆಚೆಯಲ್ಲಿದ್ದ ಮಾವಿನ ಮರದ ಹಣ್ಣನ್ನು ತಿನ್ನುವ ಬಯಕೆಯಾಗುತ್ತದೆ. ಆ ಮರವನ್ನು ಸರ್ಪಗಳೂ ರಾಕ್ಷಸರೂ ಕಾಯುತ್ತಾರೆ. ಅರ್ಜುನನು ಋಷಿಯು ಕೊಟ್ಟ ಮಂತ್ರದ ಕಲ್ಲು ಹರಳುಗಳ ಸಹಾಯದಿಂದ ಸಮುದ್ರವನ್ನು ಕಳೆದು ಹೋಗಿ ಮಾವಿನ ಹಣ್ಣನ್ನು ತರುತ್ತಾನೆ.

ಆ ಮಾವಿನ ಹಣ್ಣಿನ ಓಟೆಯನ್ನು ಸುಭದ್ರೆಯೂ ಅದರ ತಿರುಳನ್ನು ಸತ್ಯಭಾಮೆಯೂ ಮೆಲ್ಲುತ್ತಾರೆ. ಅದರಿಂದ ಸುಭದ್ರೆಗೆ ಗಂಡು ಮಗನೂ ಸತ್ಯಭಾಮೆಗೆ ಹೆಣ್ಣು ಮಗಳೂ ಹುಟ್ಟುತ್ತಾರೆ. ಗರ್ಭಿಣಿ ಸುಭದ್ರೆ ಯಾವ ಯಾವ ತಿಂಗಳಲ್ಲಿ ಯಾವ ಯಾವ ವಸ್ತುಗಳನ್ನು ಬಯಸಿದಳು ಎಂಬುದೂ ಈ ಹಾಡುಗಳಲ್ಲಿ ಸಾಮಾನ್ಯವಾಗಿ ಬರುತ್ತದೆ. (ಸುಭದ್ರೆಯ ಬಯಕೆ, ಮತ್ತು ಅಭಿಮನ್ಯು ಜನನ ಕುರಿತ ಜಾನಪದ ಹಾಡಿನಲ್ಲಿ ಸೂರ್ಯನನ್ನು ಪ್ರಾರ್ಥಿಸಿ ಅವಳು ಮಗನನ್ನು ಪಡೆಯುತ್ತಾಳೆ. ಹೊನ್ನಬಿತ್ತೇವು ಹೊಲಕೆಲ್ಲ, ಪು.674).

ಇನ್ನೊಂದು ಪಾಠದಲ್ಲಿ ಈ ಮಾವಿನ ಹಣ್ಣು ಕೆಂಗೆರಿ ಹೊಳೆಯಲ್ಲಿ ಬಳಿದು ಬರುತ್ತದೆ. ಸುಭದ್ರೆ ಮತ್ತು ಅವಳ ಅತ್ತಿಗೆ ಹೀಗೆಯೇ ಅದನ್ನು ಮೆಲ್ಲುತ್ತಾರೆ.

ಇನ್ನೊಂದು ಪಾಠದಲ್ಲಿ ಅರಣ್ಯಕ್ಕೆ ಹೋಗುವ ಪಾಂಡವರ ಜೊತೆಗೆ ಹೋಗುವೆನೆಂದ ಗರ್ಭಿಣಿ ಸುಭದ್ರೆಯನ್ನು ಹುಣಸೆಯ ಬರಲಿನಿಂದ (ಕೋಲಿನಿಂದ) ಅರ್ಜುನನು ಹೊಡೆದನು. ಕೃಷ್ಣನು ಬಳ್ಳಿಗೆ ಕಾಯಿ ಹೊರೆಯಲ್ಲವೆಂದು ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ರುಕ್ಮಿಣಿಗೆ ಅವಳು ತನ್ನ ಮನೆಗೆ ಬರುವುದು ಬೇಕಾಗಿರಲಿಲ್ಲ. ಅವಳಿಗೆ ಅಪಶಕುನವಾಗುವಂತೆ ನಾನಾ ವಿಧ ಹೂಟ ಹೂಡುತ್ತಾಳೆ. ಅವಳು ಬರುವಾಗ ಅಪಶಕುನವಾಗಲೆಂದು ಬಾಗಿಲಿಗೆ ಮಣ್ಣನ್ನು ಮೆತ್ತುವುದು ಅವುಗಳಲ್ಲೊಂದು. (ಒಂದು ಪಾಠದಲ್ಲಿ ಹಾಲನ್ನು ನೆರೆಮನೆಗೆ ಕೊಟ್ಟು ಹುಳಿಮಜ್ಜಿಗೆಯನ್ನು ತರುತ್ತಾಳೆ. ಚೆನ್ನಾದ ಅಕ್ಕಿಯನ್ನು ಕೊಟ್ಟು ಅಕ್ಕಿನುಚ್ಚನ್ನು ತರುತ್ತಾಳೆ. ಹೊಸ ಕುಂಭವನ್ನು ತಂದು ಎರಡು ವಿಧ ಅಡಿಗೆ ಮಾಡುತ್ತಾಳೆ. ಗಂಡನಿಗೆ ಉತ್ತಮವಾದ ಪಾಯಸದ ಅಡಿಗೆ. ಸುಭದ್ರೆಗೆ ಕಲ್ಲುಬೆರೆತ ಗಂಜಿಯ ಅಡಿಗೆ!) ಕೃಷ್ಣನು ತಂಗಿಯ ಎಡೆಯ ಅನ್ನವನ್ನುಂಡು ಅವಳಿಗೆ ತನ್ನ ಎಡೆಯನ್ನು ನೀಡುವದು ಈ ಕಥೆಯಲ್ಲಿ ಸಾಮಾನ್ಯವಾಗಿದೆ.

ಗರ್ಭಿಣಿ ಸುಭದ್ರೆಗೆ ಕೃಷ್ಣ ಕಥೆಯನ್ನು ಹೇಳುತ್ತಾನೆ. (ಹವ್ಯಕರ ಹಾಡಿನಲ್ಲಿ ಮುಂದೆ ನಡೆವ ಭಾರತದ ಕಥೆಯನ್ನು ಹೇಳುತ್ತಾನೆ ಎಂದು ಹೇಳಿದ್ದಿದೆ.) ಸುಭದ್ರೆಗೆ ಮಾಯದ ನಿದ್ರೆ ಬಂದಿತು. ಅವಳ ಹೊಟ್ಟೆಯಲ್ಲಿ ಏಳು ಹೆಡೆಗಳ ಮಹಾಶೇಷವಿತ್ತು. (ಅದು ಕಥೆ ಕೇಳಿ ಹೂಂ ಎನ್ನಲಾರಂಭಿಸಿತು. ಧ್ವನಿವ್ಯತ್ಯಾಸದಿಂದ ಇದನ್ನು ತಿಳಿದು) ಕೃಷ್ಣನು ವಜ್ರದ ತುಂಬಿಯಾಗಿ, ಉಕ್ಕಿನ ಚೂರಿಯನ್ನು ತಕ್ಕೊಂಡು. ತಂಗಿಯ ಹೊಟ್ಟೆಯನ್ನು ಹೊಕ್ಕು ಶೇಷನನ್ನು ಸವರಿದನು. ಆ ಚೂರಿಯನ್ನು ತಂಗಿಯ ಹೊಟ್ಟೆಯಲ್ಲೇ ಬಿಟ್ಟು ಬಂದಿದ್ದನು ಕೃಷ್ಣ. ಅಭಿಮನ್ಯು ಹುಟ್ಟುವಾಗ ಆ ಚೂರಿಯನ್ನು ಹಿಡಿದುಕೊಂಡು ಬಂದು ನೂರಾ ಒಂದು ಸೂಲಗಿತ್ತಿಯರ ಮೂಗುಗಳನ್ನು ಕೊಯ್ದನು! ಸೂಲಗಿತ್ತಿಯರು ಸುಭದ್ರೆಗೆ ಹುಟ್ಟುವ ಶಿಶುವನ್ನು ಕೊಲ್ಲಲು ನೇಮಕವಾದವರು ಎಂಬುದು ಈ ಕಥೆಯಲ್ಲಿ ಸಾಮಾನ್ಯ ಅಂಶವಾಗಿದೆ.

ಇಲ್ಲಿ ಮೊದಲು ಉಲ್ಲೇಖಮಾಡಿದ ಹಾಡಿನಲ್ಲಿ ಅಭಿಮನ್ಯು ಹುಟ್ಟುವ ಮೊದಲು ತನ್ನನ್ನು ಕೊಲ್ಲಲಿಕ್ಕೆ ಕಾದು ಕುಳಿತ ಮೂವರು ಸೂಲಗಿತ್ತಿಯರನ್ನು ಅಲ್ಲಿಂದ ಎಬ್ಬಿಸಲು ಮೂರು ಪಾರಿವಾಳಗಳನ್ನು ತಾಯಿಯ ಹೊಟ್ಟೆಯಿಂದ ಹಾರಿಸಿದನು! ಅವರು ಮೂವರೂ ಒಂದೊಂದು ಪಾರಿವಾಳವನ್ನು ಹಿಡಿಯಲು ಓಡಿದರು! ಅಭಿಮನ್ಯು ತಾಯಿ ಹೊಟ್ಟೆಯಿಂದ ಹೊರಬಿದ್ದು ಬಂದು. ಅವರನ್ನು ಒಬ್ಬೊಬ್ಬರನ್ನಾಗಿ ಹಿಡಿದು. ಒಬ್ಬಳ ಮೂಗನ್ನು ಕೊಯ್ದನು. ಒಬ್ಬಳ ಮೊಲೆಯನ್ನು ಕೊಯ್ದನು. ಒಬ್ಬಳ ಜಂಡಿಕೆಯನ್ನು ಕೊಯ್ದನು.!

ಮುಂದೆ ಸಹ ಅವನನ್ನು ಕೊಲ್ಲಲು ಅವರು ಬಿಸಿನೀರಿನ ಪಾತ್ರೆಯಲ್ಲಿ ಶಿಶುವನ್ನು ಹಾಕಿದರು. ಅಭಿಮನ್ಯು ಬಿಸಿನೀರನ್ನೇ ಅವರ ಮೋರೆಗಳಿಗೆ ತೂರಿದನು. ಎಣ್ಣೆಯ ಕಾವಲಿಯಲ್ಲಿ ಹಾಕಿದಾಗ ಕಾದ ಎಣ್ಣೆಯನ್ನೇ ಚೆಲ್ಲಲು ಅವರು ಸೂಲಗಿತ್ತಿತನವೇ ಬೇಡವೆಂದು ಓಡಿಹೋದರು.

ಶ್ರೀ ಚಂದ್ರಶೇಖರ ಐತಾಳರ 'ಕೈಲಿಯ ಕರೆದ ನೊರೆಹಾಲು'[1] ಎಂಬ ಸಂಗ್ರಹ ದಲ್ಲಿಯೂ ಈ ಕಥೆಯ ಪಾಠವೊಂದು ಉಂಟು.

ಇದರಲ್ಲಿ ವಿವರದಲ್ಲಿ ವ್ಯತ್ಯಾಸಗಳುಂಟು. ಮುಖ್ಯ ವ್ಯತ್ಯಾಸವೆಂದರೆ. ಕೃಷ್ಣನು ರಾಮಾಯಣದ ಕಥೆಯನ್ನು ತಂಗಿಗೆ ಓದುತ್ತಿದ್ದುದು. ತಾಯಿ ನಿದ್ರಿಸಿದರೂ ಹೊಟ್ಟೆಯೊಳಗಿನ ಶಿಶು ಹೂಂಗುಟ್ಟಿದ್ದರಿಂದ ಒಳಗಿರುವ ಶಿಶುವೇ ಇಷ್ಟು ಜೋರಾದರೆ ಇವನು ಹೊರಕ್ಕೆ ಬಂದರೆ ಪ್ರಪಂಚವನ್ನು ಉಳಿಸುವನೇ ಎಂದು ಕೃಷ್ಣನು ಸುದರ್ಶನ ಚಕ್ರವನ್ನು ಪ್ರಯೋಗಿಸಿ ಆ ಶಿಶುವಿನ ಆಯುಸ್ಸನ್ನು ಅರ್ಧಗೊಳಿಸಿದನು.

ಕುಮಾರವ್ಯಾಸ ಭಾರತದಲ್ಲಿ ಇಂಥ ಕಥೆಗಳ ಹಿನ್ನೆಲೆಯನ್ನು ಕೊಡದೆ. ಇವನು ಬಲುಗೈ, ಇವನು ಬದುಕಿದರೆ ಕಲಿಯುಗಕ್ಕೆ ಆಸ್ಪದವಿಲ್ಲ ಎಂದು ಕೃಷ್ಣ ಅವನ ಮರಣವನ್ನು ಯೋಜಿಸಿದನು ಎಂದು ಇದೆ.[2]

ಅಭಿಮನ್ಯು ತಾಯಿ ಹೊಟ್ಟೆಯಲ್ಲಿರುವಾಗಲೇ ಕೃಷ್ಣನು ಚಕ್ರಬಿಂಬದ (ಚಕ್ರ ವ್ಯೂಹದ) ಕೋಟೆಯನ್ನು ಹೊಕ್ಕುವ ಕಥೆಯನ್ನು ಹೇಳುತ್ತಿದ್ದಾಗ ತಾಯಿಯ ಬದಲು ಹೂಂ ಎಂದ ಶಿಶುವಿನ ದನಿ ಬೇರೆ ಎಂದು ತಿಳಿದ ಕೃಷ್ಣನು ಮುಂದೆ ಕಥೆಯನ್ನು ಹೇಳುವುದನ್ನು ನಿಲ್ಲಿಸಿದನು. ಅದರಿಂದಲೇ ಅಭಿಮನ್ಯುವಿಗೆ ಆ ಕೋಟೆಯನ್ನು ಪ್ರವೇಶಿಸುವ ರಹಸ್ಯ ಗೊತ್ತಾದರೂ ಅದರಿಂದ ಹೊರಬಿದ್ದು ಬರುವ ರಹಸ್ಯ

---

[1] ಪುಟ 86-64

[2] ಕರ್ಣಾಟ ಭಾರತ ಕಥಾಮಂಜರಿ ದ್ರೋಣಪರ್ವ 4 ನೆ ಸಂಧಿ - ಪದ್ಯ 26

ತಿಳಿಯದೆ ಇದ್ದುದರಿಂದ ಅವನಿಗೆ ಕೋಟೆಯ ಹೊರಬಿದ್ದು ಬರುವುದು ಅಸಾಧ್ಯವಾಗಿ ಅವನ ಮರಣಕ್ಕೆ ಕಾರಣವಾಯಿತು ಎಂಬುದು ನಮ್ಮ ಜಾನಪದ ಕಥೆಗಳ ತಿರುಳು.

ಆದರೆ ಸಂಸ್ಕೃತ ಮಹಾಭಾರತದಲ್ಲಿ ಕೃಷ್ಣನು ಆ ಕೋಟೆಯ ಪ್ರವೇಶ ವಿಷಯವನ್ನು ಹೇಳಿದುದಿಲ್ಲ. ಅಭಿಮನ್ಯು ಅರ್ಜುನನು ತನಗೆ ಚಕ್ರ ವ್ಯೂಹವನ್ನು ಪ್ರವೇಶಿಸುವ ವಿಷಯವನ್ನು ಹೇಳಿದ್ದಾನೆ ಎಂದು ಯುಧಿಷ್ಠಿರನಿಗೆ ತಿಳಿಸಿದ್ದನು. [3]

ಅಲ್ಲದೆ ಅಭಿಮನ್ಯು ಚಂದ್ರನ ಮಗ ವರ್ಚಾನ ಅವತಾರವೆಂದೂ ಚಂದ್ರನು ತನಗೆ ಬೇಗನೆ ಮಗನ ಪುನಃ ಸಮಾಗಮವಾಗಬೇಕೆಂದು ಹೇಳಿಕಳಿಸಿದ್ದನೆಂದೂ ಜನ್ಮಾಂತರ ಕಥೆಯನ್ನು ಹೇಳಿ. ಅಭಿಮನ್ಯು ಹದಿನಾರನೆಯ ವಯಸ್ಸಿನಲ್ಲಿ ಮರಣ ಹೊಂದುವುದಕ್ಕೆ ಕಾರಣವನ್ನು ಕಲ್ಪಿಸಿದುದುಂಟು. [4]

ಆದರೆ ಅಭಿಮನ್ಯು ಹಿಂದಿನ ಜನ್ಮದಲ್ಲಿ ರಾಕ್ಷಸನಾಗಿದ್ದನೆಂದೂ ಕೃಷ್ಣನು ಪೂರ್ವ ವೈರದ ಕಾರಣದಿಂದ ಅವನು ಯುದ್ಧದಲ್ಲಿ ಮರಣಹೊಂದಬೇಕೆಂದು ಯೋಜಿಸಿದನೆಂದೂ ನಿರ್ಣಯಿಸುವುದಕ್ಕೆ 'ಅಭಿಮನ್ಯು ಉಪಾಖ್ಯಾನ' ಎಂಬ 15ನೆಯ ಶತಕದ ಸಂಸ್ಕೃತ ಗ್ರಂಥದಲ್ಲಿ ಒಂದು ಕಥೆಯುಂಟು.

ಆ ಕಥೆ ಸಂಕ್ಷಿಪ್ತವಾಗಿ ಹೀಗಿದೆ. ವಿಷ್ಣುವು ಕೃಷ್ಣಾವತಾರದಲ್ಲಿ ಒಬ್ಬ ಬ್ರಹ್ಮ ರಾಕ್ಷಸನನ್ನು ವಧಿಸುತ್ತಾನೆ. ಅವನ ಹೆಂಡತಿ ಅಯಲೋಚನನಿಗೆ ಜನ್ಮ ಕೊಡುತ್ತಾಳೆ. ತನ್ನ ತಾಯಿಯಿಂದ ಕೃಷ್ಣನು ತನ್ನ ತಂದೆಯನ್ನು ಕೊಂದವನೆಂದು ತಿಳಿದು. ಅಯಲೋಚನನು ಅವನನ್ನು ವಧಿಸಲು ಸಂಕಲ್ಪಿಸಿ. ಶಂಕರನನ್ನು ಕುರಿತು ತಪಸ್ಸು ಮಾಡಿ. ಆಯುಧಗಳಿಂದ ನಾಶವಾಗದ ವರವನ್ನು ಪಡೆಯುತ್ತಾನೆ. ಆ ಮೇಲೆ ಮರದಿಂದ ಪೆಟ್ಟಿಗೆಯೊಂದನ್ನು ಮಾಡಿಸಿ ದ್ವಾರಕೆಗೆ ಕೊಂಡೊಯ್ಯುತ್ತಾನೆ. ಕೃಷ್ಣನು ಮುದಿ ಬ್ರಾಹ್ಮಣನ ವೇಷದಲ್ಲಿ ಬಂದು. ಅವನ ಮನೆತನದ ಪುರೋಹಿತನೆಂದು ನಂಬಿಸಿ. ಅಯಲೋಚನನು ಕೃಷ್ಣನನ್ನು ಪೆಟ್ಟಿಗೆಯಲ್ಲಿ ಕೂರಿಸಿ ಕೊಲ್ಲಬೇಕೆಂದಿರುವುದನ್ನು ತಿಳಿದು. "ಕೃಷ್ಣನು ಈ ಪೆಟ್ಟಿಗೆಯಲ್ಲಿ ಹಿಡಿಯಬಹುದೇ?" ಎಂದು ಕೇಳುತ್ತಾನೆ. ಕೃಷ್ಣನ ಆಕಾರ ಎಷ್ಟು ದೊಡ್ಡದು ಎಂದು ಕೇಳಿದ್ದಕ್ಕೆ ನಿನ್ನಷ್ಟೇ ದೊಡ್ಡವನು ನೀನು ಈ ಪೆಟ್ಟಿಗೆಯಲ್ಲಿ ಹಿಡಿದರೆ. ಅವನೂ ಹಿಡಿಯಬಹುದೆಂದು ಕೃಷ್ಣ ಹೇಳಲು ಅಯಲೋಚನನು ಅದನ್ನು ಪರೀಕ್ಷಿಸಲು ಪೆಟ್ಟಿಗೆಯೊಳಕ್ಕೆ ಸೇರಿದನು. ಕೃಷ್ಣನು ಅದರ ಬಾಗಿಲು ಹಾಕಿಬಿಟ್ಟನು. ಅಯಲೋಚನನು ಉಸಿರುಕಟ್ಟಿ ಸತ್ತುಹೋದನು.

ಕೃಷ್ಣನು ದ್ವಾರಕೆಗೆ ಆ ಪೆಟ್ಟಿಗೆಯನ್ನು ತೆಗೆದುಕೊಂಡು ಹೋದನು. ಆತನ

---

3 Abhimanyu Upakhyana (ABORI XXV)

4 ಆದಿ. 67 : 112–115 (ಗೀತಾಪ್ರೆಸ್ ಆವೃತ್ತಿ.)

ರಾಣಿಯರು ಅವಸಿಲ್ಲದಾಗ ಕುತೂಹಲದಿಂದ ಸುಭದ್ರೆಯು ಕೈಯಿಂದ ಪೆಟ್ಟಿಗೆಯ ಮುಚ್ಚಳವನ್ನು ತೆಗೆಸಿದರು. ಆಗ ಅಯಲೋಚನನ ಭೂತವು ಗರ್ಭಿಣಿ ಸುಭದ್ರೆಯ ಗರ್ಭವನ್ನು ಪ್ರವೇಶಿಸಿತು. ಮುಂದಿನ ಕಥೆ ಮೇಲಿನ ನಮ್ಮ ಜಾನಪದ ಕಥೆಗಳಲ್ಲಿ-ಯಂತೆ ಇದೆ.

ಈಗ ನಷ್ಟವಾಗಿರುವ ಸಂಸ್ಕೃತ ಜೈಮಿನಿ ಭಾರತದಲ್ಲಿ ಮಹಾಭಾರತದ ಜಾನಪದ ಕಥೆಗಳು ಅನೇಕ ಅಡಕವಾಗಿದ್ದವೆಂದೂ ಅಭಿಮನ್ಯು ಉಪಾಖ್ಯಾನವು ಅದರಲ್ಲಿ ಒಂದೆಂದೂ ಈ ಕುರಿತು ಲೇಖ ಬರೆದಿರುವ ಶ್ರೀ ಎಂ. ಆರ್. ಮಜುಮದಾರರು ಬರೆದಿದ್ದಾರೆ. [5] ನಮ್ಮ ಜಾನಪದ ಹಾಡುಗಳಲ್ಲಿಯೂ ಇಂಥ ಕಥೆಯೊಂದು ಇನ್ನೂ ದೊರೆಯದಿದ್ದರೂ ಅಭಿಮನ್ಯುವಿನ ಮರಣದ ಹಿನ್ನೆಲೆಯು ಇದ್ದಿರಬೇಕು.

ಡಾ. ದ. ರಾ. ಬೇಂದ್ರೆಯವರು ಈ ಲೇಖಕನೊಡನೆ ಮಾತಾಡುವಾಗ ಸಂಸ್ಕೃತ ವ್ಯಾಸ ಮಹಾಭಾರತದ ಕಥೆಗೆ ವ್ಯತಿರಿಕ್ತವಾದ ಕಥೆಗಳೆಲ್ಲಾ ಸಂಸ್ಕೃತ ಜೈಮಿನಿ ಭಾರತದಲ್ಲಿದ್ದವೆಂದು ಹೇಳಿದ್ದರು. ಆದರೆ ನಮ್ಮ ಜಾನಪದ ಮಹಾಭಾರತದ ವಿವಿಧ ಕಥೆಗಳೆಲ್ಲಾ ಆ ಗ್ರಂಥದಲ್ಲಿದ್ದಿರಲಿಕ್ಕಿಲ್ಲ.

ನಮ್ಮ ಜಾನಪದ ಕತೆಗಳಲ್ಲಿನ ಕಲ್ಪನಾ ಚಮತ್ಕಾರಗಳು ಅಸಂಭಾವ್ಯವಾದ ಘಟನೆಗಳನ್ನು ಹೆಣೆಯುವಲ್ಲಿ ವಿಶೇಷ ವ್ಯಕ್ತವಾಗುವುದು ಅಭಿಮನ್ಯು ಜನ್ಮದ ಕಥೆಯಲ್ಲಿ ಕಾಣುತ್ತದೆ. ಅತ್ತಿಗೆ–ಮೈದುನಿಯರಲ್ಲಿ ಸಮಾಜದಲ್ಲಿ ಆಗೀಗ ಕಾಣುವ ವೈಮನ-ಸ್ಯವನ್ನು ಪೌರಾಣಿಕ ಕಥೆಯೊಂದಕ್ಕೆ ಆರೋಪಿಸಿ. ಅದರಲ್ಲಿ ಹಾಸ್ಯದೃಷ್ಟಿಯನ್ನು ಬಹು ಸ್ವಾರಸ್ಯವಾಗಿ ಪ್ರಕಟಿಸಿದುದನ್ನು ಈ ಕಥೆಗಳಲ್ಲಿ ಕಾಣಬಹುದು. ರಾಜನು ಇಬ್ಬರು ಹೆಂಡಿರನ್ನು ಮದುವೆಯಾಗಿ ದಂಡಿಗೆ ಹೋದಾಗ ಅವನ ಕಿರಿ ಹೆಂಡತಿಗೆ ಹುಟ್ಟಿದ ಮಗನನ್ನು ಕೊಲ್ಲಿಸಲು ಹಿರಿರಾಣಿಯು ಸೂಲಗಿತ್ತಿಯ ಸಹಾಯದಿಂದ ಮಾಡುವ ಉಪಾಯಗಳು ಈ ಕಥೆಯ ಸರಣಿಯನ್ನು ಅಲ್ಲಲ್ಲಿ ಹೋಲುತ್ತವೆ. 'ಕಾಣ್ ಕಾಣ್ ಕನ್ನಡಿ' 'ರಾಮ ಕೆಂದಾಲಿ ಹೂಗು' [6] ಮುಂತಾದ ಹಾಡುಗಳನ್ನು ನೋಡಬಹುದು.

ಅಭಿಮನ್ಯು ವಿವಾಹ : ಅಭಿಮನುವಿಗೆ ಬಲರಾಮನ ಮಗಳು ವತ್ಸಲೆಯನ್ನು ಮದುವೆ ಮಾಡಿಕೊಡಬೇಕೆಂಬುದು ನಿಶ್ಚಿತವಾದ ಮಾತಾಗಿತ್ತು. ಆದರೆ ಪಾಂಡವರು ವನವಾಸಕ್ಕೆ ಹೋದಮೇಲೆ ಬಲರಾಮನು ಆ ಅಭಿಪ್ರಾಯವನ್ನು ಬದಲಾಯಿಸಿ ಕೌರವನ ಮಗ ಲಕ್ಷಣನಿಗೆ ಅವಳನ್ನು ಮದುವೆಮಾಡಿ ಕೊಡಬೇಕೆಂದು ನಿಶ್ಚಯಿಸಿ ಮದುವೆಯನ್ನು ಹೂಡುತ್ತಾನೆ. ಆಗ ಅಭಿಮನ್ಯು ಸುಭದ್ರೆಯನ್ನು ಕರೆದುಕೊಂಡು ಹೋಗಿ ಘಟೋದ್ಗಜನ ಸಹಾಯದಿಂದ ವತ್ಸಲೆಯನ್ನು ಮದುವೆಯಾಗುತ್ತಾನೆ.

---

[5] Abhimanyu upakhyana ABOR1. XXV

[6] ತಿಮ್ಮಕ್ಕನ ಪದಗಳು ಪುಟ. 133–147

ಈ ವಿಷಯವು ಸಂಸ್ಕೃತ ಜೈಮಿನಿ ಭಾರತದಲ್ಲಿದೆಯೆಂದು ಊಹಿಸಲಾಗಿದೆ. ಆದರೆ ಗ್ರಂಥದ ಬಹುಭಾಗ ನಷ್ಟವಾಗಿದೆ. ಇದು ನಮ್ಮ ಕೆಲವು ಯಕ್ಷಗಾನ ಪ್ರಸಂಗಗಳಿಗೂ ಆಧಾರವಾಗಿದ್ದು, ಅವುಗಳ ಮೂಲಕ ಜಾನಪದದಲ್ಲಿಯೂ ಬಗೆಬಗೆಯ ಕಥೆಗಳ ರೂಪವನ್ನು ಧಾರಣಮಾಡಿರಬೇಕೆಂಬುದು ತಿಳಿಯುತ್ತದೆ.

ವತ್ಸಲೆ ಎಂಬ ಹೆಸರನ್ನು ಕೆಲವು ಕಡೆ ಉಳಿಸಿಕೊಂಡರೆ[7], ಕೆಲವು ಆಖ್ಯಾನಗಳಲ್ಲಿ ಕನಕಾಂಗಿ. ಶಶಿರೇಖಾ ಎಂಬ ಹೆಸರುಗಳೂ ಇರುವಂತೆ ಕಾಣುತ್ತದೆ. ಆದರೆ ಕಥೆ ಜೈಮಿನಿ ಭಾರತದ ವತ್ಸಲೆಯ ಕಥೆಯ ವಿಸ್ತೃತ ರೂಪವಾಗಿದೆ.

ಯಕ್ಷಗಾನ ಕನಕಾಂಗಿ ಕಲ್ಯಾಣದ ಕಥೆಯನ್ನೇ ಹೋಲುವ "ಕನಕಾಂಗಿ ಕಲ್ಯಾಣ" ಎಂಬ ಮುದ್ರಿತ ಜಾನಪದ ಕಾವ್ಯವೊಂದುಂಟು. ಅದರಲ್ಲಿ ಬಲರಾಮನು "ಲಕ್ಷ್ಮಣನಿಗೆ ಕನಕಾಂಗಿಯ ಕೊಡುವೆ। ಲಕ್ಷರಾಜ್ಯಗಳ ಉಂಬಳಿಯನೆ ಬಿಡುವೆ ॥"ಎಂದು ನಿರ್ಧಾರ ಮಾಡುತ್ತಾನೆ. ಸುಭದ್ರೆಯು ಬಲರಾಮನ ಹತ್ತಿರವೂ ಅತ್ತಿಗೆ ರೇವತಿಯ ಹತ್ತಿರವೂ ಮಗನಿಗಾಗಿ ಕನಕಾಂಗಿಯನ್ನು ಕೇಳುತ್ತಾಳೆ.

> ಅತ್ತಿಗೆ ರೇವತಿ ಮುತ್ತಿನ ಮಣಿಯೇ । ರತ್ನಗಳೆರಡು ಜೋಡಾದಂತೆ ಕೂಡಿಸಿ ।
> ...... ಮಿತ್ರನಿನ್ ಮಗಳ ಕೊಡಬೇಕು ॥ ಎಂದರೂ, ರೇವತಿ,
> ಹೆಣ್ಣ ಕೊಡುವವರಿಗೆ ಕಣ್ಣಿಲ್ಲವೇನೇ ? ಬಣ್ಣನೆಗಳ ಮಾತ್ಯಾಕೆನುತಾ ।
> ಕಣ್ಣ ಕಿಡಿಗಳನೆ ಕೆದರಿ ನುಡಿದಳು ॥

ಕಾಮ್ಯಕ ವನದಲ್ಲಿ ಅಭಿಮನ್ಯು ಘಟೋದ್ಗಜನ ಉಪವನದ ಹಣ್ಣನ್ನು ತಿಂದುದೇ ಕಾರಣವಾಗಿ ಅಭಿಮನ್ಯುವೆಂದು ತಿಳಿಯದ ಘಟೋದ್ಗಜನೊಡನೆ ಯುದ್ಧವನ್ನು ಮಾಡಿ ಮೈಮರೆತು ಬೀಳುತ್ತಾನೆ. ಸೌಭದ್ರೆ ಬಂದು ದುಃಖ ಮಾಡುವ ನುಡಿಗಳಿಂದ ತಿಳಿದುಕೊಂಡು ಪಂಚರತ್ನಗಳಿಂದ ಅವನ ಪ್ರಾಣವನ್ನು ಬರಿಸಿ, ಪಂಚಾಮೃತ–ಪರ ಮಾನ್ನ ತುಪ್ಪವನಿಕ್ಕಿ ಬದುಕಿಸಿದನು.

ಮಾಯೆಯಿಂದ ಅಭಿಮನ್ಯುವಿನ ದಿಬ್ಬಣವನ್ನೇ ಕೌರವನ ದಿಬ್ಬಣವಾಗಿ ಪರಿವರ್ತಿಸಿ ಕನಕಾಂಗಿಯನ್ನು ಅಭಿಮನ್ಯುವಿಗೆ ಮದುವೆಮಾಡಿಸುತ್ತಾನೆ.

ಈ ಮುದ್ರಿತ ಗ್ರಂಥವನ್ನವಲಂಬಿಸಿದ ಹವ್ಯಕ ಭಾಷೆಯ ಹಾಡೊಂದು ಈ ಲೇಖಕನಿಗೆ ಅಸಮಗ್ರವಾಗಿ ದೊರೆತಿದೆ.[8]

---

7 ಶ್ರೀ ಸಿಂಪಿ ಲಿಂಗಣ್ಣನವರು "ಸುವರ್ಣ ಸಂಚಯ" ಎಂಬ ಗ್ರಂಥದ "ಜನಪದ ಗೀತೆಗಳು ಹಾಗೂ ಲಾವಣಿಗಳು" ಎಂಬ ಲೇಖನದಲ್ಲಿ "ವತ್ಸಲಾ ಹರಣ" ಪ್ರಸಂಗದ ವಿವೇಚನೆ ಮಾಡಿದ್ದಾರೆ. ಇದು ಬೈಲುಸೀಮೆಯ ಯಕ್ಷಗಾನವೋ ಜಾನಪದ ಕಾವ್ಯವೋ ತಿಳಿಯಲಿಲ್ಲ.

8 ಅದರಿಂದಲೇ ಈ ಉದಾಹರಣೆಗಳನ್ನು ಎತ್ತಿದ್ದು.

ಸಾಮಾನ್ಯವಾಗಿ ಸೋದರರದ ಹೆಣ್ಣನ್ನು ಬಡವರಿಗೆ ಕೊಡಬಾರದು. ಶ್ರೀಮಂತಿಕೆ ಯಿರುವವರಿಗೇ ಕೊಡಬೇಕೆಂಬ ವಿಚಾರ ಮತ್ತು ಆಚಾರಗಳು ಸಾಮಾಜಿಕ ಜೀವನದಲ್ಲಿ ಸಾಮಾನ್ಯವಾಗಿ ನಡೆದು ಬಂದ ವಿಷಯ. "ಬಡವ್ರೋರಿಗೆ ಕೊಡುವ ಮಗಳಲ್ಲ" ಎಂದು "ಮಾರಕ್ಕ ದೇವಿಯ ಮದುವೆ" ಹಾಡಿನಲ್ಲಿದೆ. ಇಂಥ ವಿಷಯವಿರುವ ಅನೇಕ ಹಾಡುಗಳಿಗೆ "ಸೋದರದ ಹಾಡು" ಎಂದೇ ಹೆಸರುಂಟು. ಕೊನೆಯಲ್ಲಿ ಯಾವುದೋ ಉಪಾಯದಿಂದ ಸೋದರಳಿಯನೇ ಆ ಹುಡುಗಿಯನ್ನು ಮದುವೆಯಾಗುತ್ತಾನೆ.

ಕೌರವನಿಗೆ ಸುಭದ್ರೆಯನ್ನು ಮದುವೆಮಾಡಿಕೊಡಬೇಕೆಂದು ಬಲರಾಮನು ನಿಶ್ಚಯಿಸಿದಾಗ – ಅರ್ಜುನನು ಜೋಗಿಯ ವೇಷದಿಂದ ಹೋಗಿ. ಅವಳನ್ನು ಹರಣ ಮಾಡಿದ ವಿಷಯ ಸಂಸ್ಕೃತ ಭಾರತದ ಕಥೆಯಲ್ಲಿಗಿಂತಲೂ ಸಂಸ್ಕೃತ ಭಾಗವತದಲ್ಲಿ ಹೆಚ್ಚು ಹೃದಯಂಗಮವಾಗಿ ಬಂದಿದೆ. ಆ ಅರ್ಜುನ ಜೋಗಿಯ ಹಾಡಿನ ಸರಣಿ ನಮ್ಮ "ಜಾನಪದ ಸುಭದ್ರಾಹರಣ" ಹಾಡುಗಳಲ್ಲಿಯೂ "ಸೋದರದ ಹಾಡು" ಎಂದು ಹೇಳುವ ಹಾಡುಗಳಲ್ಲಿಯೂ ಅರ್ಜುನನ ಕಥೆಯಾಗಿ ಕಂಡರೆ ಬೇರೆ ಹೆಸರು ಗಳಿಂದಲೂ ಈ ಕಥೆ ಪ್ರಚಾರದಲ್ಲಿದೆ. "ನಕುಮಣಿ ಜೋಗಿ" ಎಂಬ ಬಹು ಸ್ವಾರಸ್ಯ ವಾದ ಜಾನಪದ ಕಥೆಯ ಹಾಡಿನಲ್ಲಿ ನಕುಮಣಿನ ವಿವಿಧ ತಂತ್ರಗಳಿಂದಾಗಿ ಅವನಿಗೇ ಮಗಳನ್ನು ಮದುವೆ ಮಾಡಿಕೊಟ್ಟು ದಿಬ್ಬಣವನ್ನು ತಂದ ಕೈಲೋರ (ಕೌರವ)ನಿಗೆ ಆರುತಿಂಗಳ ಶಿಶುವನ್ನು ತೊಟ್ಟಿಲ ಧಾರೆಯೆರೆದು ಕೊಡುತ್ತಾರೆ. [9]

ಆದರೆ ಅಭಿಮನ್ಯು ವಿವಾಹದ ಜಾನಪದ ಕಥೆಯಲ್ಲಿ ಅಭಿಮನ್ಯು ಕೃಷ್ಣನ ಮಗಳನ್ನು ಮದುವೆಯಾಗುತ್ತಾನೆ. ಇದಕ್ಕೆ ಸಂಸ್ಕೃತ ವ್ಯಾಸಭಾರತದಲ್ಲಿ ಆಧಾರ ವಿಲ್ಲ. ಅಲ್ಲಿ ವಿರಾಟನ ಮಗಳು ಉತ್ತರೆಯನ್ನು ಅಭಿಮನ್ಯು ಮದುವೆಯಾಗುತ್ತಾನೆ. ಆದರೆ ಜೈನ ಭಾರತದಲ್ಲಿ ಈ ಸಂಗತಿಯುಂಟು. [10]

ಅಭಿಮನ್ಯು ಕೃಷ್ಣನ ಮಗಳನ್ನು ಮದುವೆಯಾಗುವ ಮೊದಲು ಅವಳು ಸಾಹಸಮಾಡಿ ಪಾಂಡವರನ್ನೂ ಅಭಿಮನ್ಯುವನ್ನೂ ಬದುಕಿಸಿದ ಹಾಡು ನಮ್ಮ ಕಡೆ ವಿಶಿಷ್ಟವಾದ ಹಾಡು. ಕೃಷ್ಣನ ಮಗಳ ಹೆಸರು ಗಂದುರಿ (ಗಾಂಧಾರಿ) ಎಂದು ಹಲವು ಹಾಡುಗಳಲ್ಲಿದೆ. ಬ್ರಹ್ಮಶಾಂಕನ ಜಿನ ಭಾರತದಲ್ಲಿ ಕೃಷ್ಣನ ಮಗಳ ಹೆಸರು ಸುಂದರಿಯೆಂದು ಇದೆ.

ಪಾಂಡವರು ಕಾಳಿಂಗ ಋಷಿಯೊಡನೆ ಕದನಕ್ಕೆ ಹೋಗುವುದೇ ಆ ಹಾಡು. ತಾಯಿ ಕುಂತಿ "ಅಲ್ಲಿಗೆ ಹೋದೋರುಂಟು: ಬಂದೋರಿಲ್ಲ. ಹೋಗಬೇಡಿ" ಎಂದರೂ ಕೇಳದೆ, ಅರ್ಜುನ. ಭೀಮಾದಿಗಳು ಹೊರಟೇ ಬಿಟ್ಟರು.

---

9 ತಿಮ್ಮಕ್ಕನ ಪದಗಳು. ಮೈಸೂರು ವಿಶ್ವವಿದ್ಯಾಲಯ

10 ಜೈನ ಭಾರತಗಳು. ಡಾ. ಬಿ. ಎಸ್. ಕುಲಕರ್ಣಿ- ಪ್ರ. ಕ. 38 – 1 ಪು. 187

ಕಾಳಿಂಗ ಋಷಿ ಮಾಟಗಾರ – ಅವನು ಭಸ್ಮದ ಬೀಸಣಿಕೆಯನ್ನು ಹಿಡಿದು, ಪಾಂಡವರನ್ನು ಭಸ್ಮಮಾಡಿ. ಅವರನ್ನು ಕರಿಕಲ್ಲುಗಳನ್ನಾಗಿ ಮಾಡಿದನು. ಅಭಿಮನ್ಯು ಸುಭದ್ರೆ ಬೇಡವೆಂದರೂ ಕೇಳದೆ. ಅವರೆಲ್ಲಿಗೆ ಹೋಗಿರುವರೆಂದು ಹೇಳದಿದ್ದರೆ ಪ್ರಾಣ ಕಳಕೊಳ್ಳುವೆನೆಂದು ಹೇಳಿ ಹೋದನು. ತಾಯಿ ಬೆಳ್ಳಟ್ಟೆ ಮರದ ಟೊಂಗೆಯ ಬಿಲ್ಲನ್ನೂ ತಗಟೆ ಟೊಂಗೆಯ ಬಾಣವನ್ನೂ ಮಾಡಿಕೊಟ್ಟಳು. ಅಭಿಮನ್ಯು ಸಹ ಭಸ್ಮವಾಗಿ ಬಿಳಿಯ ಶಿಲೆಯಾದನು.

ಗಾಂಧಾರಿ ಈ ಸುದ್ದಿಯನ್ನು ತಿಳಿದು. ಬೇಡೆಂದರೂ ಕೇಳದೆ ಹೊರಟು, ಚಿಕ್ಕ ಹುಡುಗಿಯ ರೂಪ ಧರಿಸಿ. 'ಅಜ್ಜ' ಎಂದು ಕರೆಯುತ್ತ ಋಷಿಯಿದ್ದಲ್ಲಿ ಹೋದಳು. ಅವನು ಅವಳನ್ನು ಸಾಕಿದನು. ಅವಳು ಕರಿಕಲ್ಲು ಬಿಳಿಕಲ್ಲುಗಳ ರಹಸ್ಯವನ್ನು ತಿಳಿದುಕೊಂಡಳು. ಮಾಳಿಗೆಯಲ್ಲಿ ಅಜ್ಜನ ಹತ್ತಿರ ಪೆಟ್ಟಿಗೆಯ ಮೇಲಿನ ಗಂಟು ಏನು? ಎಂದು ಕೇಳಿದಳು. ಅದರಲ್ಲಿ ನಾಗಬೆತ್ತ. ಹೀಲಿಕುಂಚ. ಜೀವದ ಕಡಿ. ಅಮೃತದ ನೀರು – ಸತ್ತವರನ್ನು ಬದುಕಿಸುವ ಜಾನಪದ ಸಾಧನಗಳು – ಇವೆಯೆಂದು ತಿಳಿದುಕೊಂಡಳು.

ಈ ಪೆಟ್ಟಿಗೆಯ ಗಂಟನ್ನು ಬೇಡಿ ತೆಗೆದುಕೊಂಡು ಊರಿಗೆ ಬಂದಳು. ಹುತ್ತದಲ್ಲಿ ಮುಚ್ಚಿಹೋಗಿದ್ದ ಅಜ್ಜಿ ಕುಂತಿಯನ್ನು ಎಬ್ಬಿಸಿ, ತಿರುಗಿ ಹೋಗಿ ಪಾಂಡವರನ್ನು ಬದುಕಿಸಿ ಕರೆತಂದಳು. ಕೊನೆಗೆ ಅಭಿಮನ್ಯುವನ್ನು ಬದುಕಿಸಿದಾಗ ಅವನು ಅವಳನ್ನು ಹೊಡೆಯಲಿಕ್ಕೇ ಹೋದನು! ಅವಳು 'ನಾನು ನಿನ್ನ ಮಾವನ ಮಗಳು' ಎಂದ ಮೇಲೆ ಮದುವೆಯಾಗುವೆನೆಂದನು.

ಈ ಕಥೆಯಲ್ಲಿ ಪ್ರಾರಂಭದಲ್ಲಿ ಕೆಲವು ಭಾಗ ಹಾಡಿನಲ್ಲಿ ದೊರೆಯದಿರಬೇಕು. ಕಾಳಿಂಗ ಋಷಿಯ ಹತ್ತಿರ ಪಾಂಡವರು ಹೋರಾಟ ಮಾಡಲು ಹೋಗಲು ನಿಮಿತ್ತ ಏನು? ಅವನ ಹತ್ತಿರ ಇರುತ್ತಿದ್ದ ನಾಗಬೆತ್ತ ಇತ್ಯಾದಿಗಳನ್ನು ವಶಮಾಡಿಕೊಳ್ಳುವದೇ ಅವರ ಉದ್ದೇಶವಾಗಿತ್ತೋ ಏನು ಎಂಬುವನ್ನು ನಮ್ಮ ಊಹೆಗೇ ಬಿಡಲಾಗಿದೆ ಇಲ್ಲಿ.

ಸುಭದ್ರೆಯು ಗಂದೂರಿಯನ್ನು ತನ್ನ ಮಗ ಅಭಿಮನ್ಯುವಿಗೆ ಮದುವೆ ಮಾಡಿಸಿಕೊಳ್ಳಬೇಕೆಂಬ ಇಚ್ಛೆಯಿಂದ ಸೊಸೆಯಾಗುವವಳಿಗೆ ಮದುವೆಗೇ ಮುಂಚೆಯೇ "ಒಪ್ಪು ಚಿನ್ನ"ವನ್ನಿಡಲು ಹೋದ ಹಾಡು ಉಂಟು. ಸೊಸೆಯಾಗುವವಳನ್ನು ಅತ್ತೆಯ ಮನೆಯವರು ಒಪ್ಪಿ, ತಮ್ಮವಳೆಂದು ಸೂಚಿಸಲು ತಮ್ಮ ವಸ್ತ್ರ–ಒಡವೆಗಳಿಂದ ಅವಳನ್ನು ಶಿಂಗರಿಸುವ ಪದ್ಧತಿ ಹಳ್ಳಿಗರಲ್ಲಿ ಉಂಟು. ಅತ್ತಿಗೆ ಮೈದುನಿ ಮಾವಿನ ಹಣ್ಣನ್ನು ಪಾಲುಮಾಡಿಕೊಂಡು ತಿನ್ನುವಾಗ ಮಾತಾಡಿಕೊಂಡ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ವ್ಯತ್ಯಾಸವಾಗಿದ್ದಿರಬೇಕೆಂಬುದು ದೊರೆತಷ್ಟು ಹಾಡಿನಲ್ಲಿ ಸ್ಪಷ್ಟವಾಗುವುದಿಲ್ಲ. ಆದರೆ ಸತ್ಯಭಾಮೆಗೆ ಈ ಸಂಬಂಧ ಇಷ್ಟವಿರಲಿಲ್ಲ ಎಂಬುದು ಸ್ಪಷ್ಟವಾಗಿದೆ.

ಸುಭದ್ರೆಯು ತಂದೆಯ ಮನೆಗೆ ಬರುವಾಗ ಹೋಳಿಗೆಗಳನ್ನು ಕಟ್ಟಿಕೊಂಡು ತಂದಿದ್ದಳು. ನೆಂಟರ ಮನೆಗೆ ಹೋಗುವಾಗ ಕಜ್ಜಾಯ ಮಾಡಿಕೊಂಡು ಹೋಗುವ ಪದ್ಧತಿ ಇಂದಿಗೂ ಹಳ್ಳಿಗರಲ್ಲಿ ರೂಢವಾಗಿದೆ. (ಬೈಲುಸೀಮೆಯಲ್ಲಿ ರೈತರು ನೆಂಟರ ಮನೆಗೆ ಹೋಗುವಾಗ ಜೋಳದ ಬಕ್ಕರಿಯ ಬುತ್ತಿ ಕಟ್ಟಿಕೊಂಡು ಹೋಗಿ ಮಕ್ಕಳಿಗೆಲ್ಲ ಹಂಚುವರು) ಸುಭದ್ರೆ ಇಲ್ಲಿ ಹೋಳಿಗೆಗಳನ್ನು ಮುರಿದು ಮಕ್ಕಳಲ್ಲಿ ಹಂಚಿದಳು.

ಗಂದೂರಿಯನ್ನು ತೊಡೆಯಮೇಲೆ ಕೂರಿಸಿಕೊಂಡು ತಂದ ಶಾಲೆ(ಸೀರೆ) ಯನ್ನು ಬಿಡಿಸಿ ಗಂದೂರಿಯ ನಡತುಂಬ ಉಡಿಸಿದಳು. ಸತ್ಯವುಳ್ಳ ಪಾಂಡವರು ಉಡಿಸಿದ ಉಡಿಗೆ ಎಷ್ಟು ಬಿಡಿಸಿದರೂ ಸೀರೆ ಉಡಿಗೆ ಮುಗಿಯಿತೆಂದು ಆಗಬಾರದು ಎಂದು ಶಾಪ (ಇಲ್ಲಿ ವರ ಎಂಬ ಅರ್ಥ) ಹಾಕಿದಳು. ಅವಳ ತಲೆಗೆ ಎಣ್ಣೆಯನ್ನೆರೆದು ಕೂದಲು ಬಾಚಿ ಮುಡಿಬಿಗಿದು, ಮುಡಿಗಟ್ಟಿಯಾಗಲೆಂದು ಮುಡಿಯಮೇಲೆ ಮೂರು ಗುದ್ದು ಹೊಡೆದಳು! ಇದು ಇಂದಿಗೂ ಹೆಂಗಸರಲ್ಲಿ ಜಡೆ ಗಂಟು ಸುತ್ತುವಾಗಿನ ಪದ್ಧತಿಯಾಗಿದೆ. ಹೂ ಮುಡಿಸಿ. ಕಾಲಿಗೆ ಗಗ್ಗರವನ್ನು ಇಟ್ಟಳು. ಮೈಗೆ ಚಿನ್ನ ಹಾಕಿದಳು.

ಗಂದೂರಿಯು ತಾಯಿಗೆ ಇವನ್ನೆಲ್ಲಾ ಹಿಗ್ಗಿನಿಂದ ಕಾಣಿಸಿದಳು. 'ಕಂಡವರ ಆಭರಣ ಹಾಕಿದಿಯೋ!' ಎಂದು ಗದರಿಸಿ, ಮಗಳಿಗೆ ಹೊಡೆದು. ಉಟ್ಟ ಉಡಿಗೆಯನ್ನು ಬಿಡಿಸಿದಳು. ಇಲ್ಲಿಯೂ ಸತ್ಯಭಾಮೆ ಹೊಸ ಗಡಿಗೆಯನ್ನು ತರುವುದೂ ಗಂಡನಿಗೊಂದು ಅಡಿಗೆಯನ್ನೂ ಸುಭದ್ರೆಗೊಂದು ತರದ ಅಡಿಗೆಯನ್ನೂ ಮಾಡಿದುದುಂಟು. ಸುಭದ್ರೆಗೆ ಮಾಡಿದ ಅಡಿಗೆಯಲ್ಲಿ ಕಲ್ಲಿತ್ತು . ಅದನ್ನು ನಾರಾಯಣಸ್ವಾಮಿ ಉಂಡಾಗ ಅವನ ಒಂದು ಹಲ್ಲು ಮುರಿದುಹೋಯಿತು.

ಮತ್ತೊಮ್ಮೆ ಗಂದೂರಿ ಪ್ರಾಯಕ್ಕೆ ಬಂದ ಮೇಲೆ ಸುಭದ್ರೆ ಹೆಣ್ಣು ಕೇಳಲು ಹೋಗಿ ಹೊಡೆತವನ್ನು ತಿನ್ನುತ್ತಾಳೆ. ಈ ಹಾಡು ಇನ್ನೂ ದೊರೆತಿಲ್ಲ. ಅದರಂತೆಯೇ ಅಭಿಮನ್ಯು ಇಷ್ಟು ವಿರೋಧವಿದ್ದರೂ ಹೇಗೆ ಗಂದೂರಿಯನ್ನು ಮದುವೆಯಾಗುವಲ್ಲಿ ಯಶಸ್ವಿಯಾದ ಎಂಬ ಕುರಿತೂ ಹಾಡು ಇದ್ದಿರಬೇಕು. ಮೇಲೆ ಉಲ್ಲೇಖಿಸಿದ ಕನಕಾಂಗಿಯ ಕಥೆಯ ಹೋಲಿಕೆಯ ಹಾಡುಗಳೂ ಸಹ ಇದ್ದಿರಬಹುದು.

ಅಭಿಮನ್ಯುವಿನ ಮರಣ : ಅಭಿಮನ್ಯುವನ್ನು ಕೊಲ್ಲಿಸುವ ಉದ್ದೇಶವು ಕೃಷ್ಣನಿಗೆ ಇದ್ದಿತೆಂಬುದಕ್ಕೆ ಮೊದಲಿಗೆ ಉಲ್ಲೇಖಿಸಿದ ಕಾರಣದ ಜೊತೆಗೆ ಇನ್ನೊಂದು ವಿಚಿತ್ರ ಕಾರಣವನ್ನು ಜಾನಪದ ಕವಿ ಕಲ್ಪಿಸಿದ್ದಾನೆ.

ಮಾವನ ಮನೆಯಲ್ಲಿ ತನ್ನ ತಾಯಿಗೆ ಹೊಡೆದ ಸಿಟ್ಟಿನಿಂದ ಅಭಿಮನ್ಯು ಕುದಿಯುತ್ತಿದ್ದನು. ಇಷ್ಟರಲ್ಲಿ ಅವನೊಡನೆ ಗಂದೂರಿಯ ಮದುವೆಯಾದ ಕುರಿತು

ಹಾಡೊಂದಿದ್ದಿರಬಹುದು. ಮದುವೆಯಾದ ಮೇಲೆ ಅಭಿಮನ್ಯು ತಾಯಿ ಎಷ್ಟು ಬೇಡವೆಂದರೂ ಕೇಳದೆ. ಬಿಲ್ಲು ಬಾಣ ಹಿಡಿದು ಮಾವನ ಮನೆಗೆ ಹೋದನು. ಕೃಷ್ಣನಿಗೆ ಅವನನ್ನು ನೋಡಿ ಹೆದರಿಕೆಯಾಯಿತು. ಅವನು ಸತ್ಯಭಾಮೆಯ ಹತ್ತಿರ "ಅಭಿಮನ್ಯು ಸಿಟ್ಟಿನಿಂದ ಬರುತ್ತಾನೆ. ನೀನು ಸೂಳೆಯ ವೇಷದಲ್ಲಿ ಹೋಗಿ ಅವನ ದಾರಿಯಲ್ಲಿ ನಿಲ್ಲು. ಅವನ ಸಿಟ್ಟು ಇಳಿದುಹೋಗುವುದು." ಎಂದು ಹೇಳಿದನು. ಅವಳು ಹಾಗೆಯೇ ವೇಷಧರಿಸಿ ಹೋಗಿ. 'ವೀಳ್ಯವನ್ನು ಮೆಲ್ಲು ' ಎಂದು ಅವನಿಗೆ ನೀಡಿದಳು. ಅವನು "ನೀನು ಯಾರೆಂದು ಬಲ್ಲೆ. ನಿನ್ನ ವೀಳಯವನ್ನು ಮೆಲ್ಲುವುದಕ್ಕೆ ನಾನು ಬರಲಿಲ್ಲ. ಸೂಳೆಯರ ಮಂಟಪದ ಬಯಲಲ್ಲಿ ಕುದುರೆಯ ಕಾಸ್ಪಾರನಿದ್ದಾನೆ. ಅಲ್ಲಿಗೆ ಹೋದರೆ ಅವನು ನಿನ್ನ ವೀಳಯವನ್ನು ಮೆಲ್ಲುವನು!" ಎಂದು ಹೇಳಿದನು. ಅವಳು ಅಪಮಾನಿತಳಾಗಿ ತಿರುಗಿ, ನಾರಾಯಣಸ್ವಾಮಿಯನ್ನು ದೂರಿದಳು. ಅಭಿಮನ್ಯು ಮಾವನ ಮನೆಗೆ ಬೆಂಕಿಹಚ್ಚಿ ಕುಳಿತನು.

ಇದು ತಿಳಿದ ನಾರಾಯಣಸ್ವಾಮಿ ಅಭಿಮನ್ಯುವನ್ನು ಹೇಗಾದರೂ ಮಾಡಿ ಕೊಲ್ಲಿಸಬೇಕು ಎಂದು ನಿಶ್ಚಯ ಮಾಡಿದನು.

ಒಂದು ಪಾಠದ ಪ್ರಕಾರ ತಾನೇ ಕೌರವರ ಮನೆಗೆ ಹೋಗಿ, ಚತ್ತ್ರರಬಿಂಬ ಕೋಟೆ ಕಟ್ಟಿ ಅದನ್ನು ಗೆಲ್ಲುವುದಕ್ಕೆ ಬರಬೇಕೆಂದು ಪಾಂಡವರಿಗೆ ವೀಳ್ಯ ಕೊಡಬೇಕು ಎಂದು ಹೇಳಿದನು. ಇನ್ನೊಂದು ಪಾಠದ ಪ್ರಕಾರ ಪತ್ರ ಬರೆದನು.

ಧರ್ಮರಾಜನು ಯುದ್ಧದ ಕರೆಬಂದ ಮೇಲೆ ಕೋಟೆಯನ್ನು ಗೆಲ್ಲಲು ಯಾರು ಹೋಗಬೇಕು ಎಂಬ ಕುರಿತ ಶಾದಿ (ತಾಂತ್ರಿಕ ರೂಪದ "ನೋಟ"ದ ಮೂಲಕ ಸೋದಿಕೆ, ಶೋಧ) ನೋಡಿ, ಯಾರು ಹೋಗುವುದು ಯೋಗ್ಯವೆಂದು ನಿರ್ಧರಿಸುವುದನ್ನು ಏರ್ಪಡಿಸಿದನು. ಆಗ ಧರ್ಮರಾಯನಿಗೂ ಅರ್ಜುನ, ಶಕಲ (ನಕುಲ) ಯಾರಿಗೂ ಶಾದಿ ಬರಲಿಲ್ಲ.

ಅಭಿಮನ್ಯು ಬಂದು ಯುದ್ಧಕ್ಕೆ ಕೊಟ್ಟ ವೀಳ್ಯವನ್ನು ಹಿಂದೆ ಕಳುಹಿಸಬಾರದು– ನನಗೂ ಶಾದಿ ನೋಡಿ ಎಂದನು. ಅವನು ಹೋಗಬೇಕೆಂದು ಬಂದಿತು. ಅಭಿಮನ್ಯು ರಥವೇರಿ ಹೊರಟನು. ಅವನ ರಥ ಬರುವುದನ್ನು ನೋಡಿ ನಾರಾಯಣಸ್ವಾಮಿಯ ನಾಟಕದ ಬೊಂಬೆಗಳು ಅವನಿಗೆ ವರ್ತಮಾನವಿತ್ತವು. ನಾರಾಯಣನು ಮಗಳ ಹತ್ತಿರ ಹೋಗಿ. 'ಬರುತ್ತಿರುವ ರಥಕ್ಕೆ ಅಪಶಕುನ ಮಾಡಬೇಕು. ಕೈಯಲ್ಲಿ ಕಸಬರಿಕೆ ಹಿಡಿದು ಮಾರ್ಗದಲ್ಲಿ ಕಸ ಗುಡಿಸಬೇಕು' ಎಂದನು. ಅಭಿಮನ್ಯು ತನ್ನ ಮಡದಿ ತಲೆಯ ಮೇಲೆ ಸೆಂದರ (ಸೆರಗು) ಮುಚ್ಚಿದ್ದನ್ನು ಕಂಡು 'ನಿನ್ನ ತಂಗಿಯ ಗಂಡ ಸತ್ತಿರುವನೋ?' ಎಂದು ಭಾವನೊಡನೆ ಕೇಳಿದನು. ಗಂದೂರಿ ನಲ್ಲಿನ ಗುರುತು

ಹಿಡಿದು ಸೆರಗನ್ನು ತೆಗೆದುಹಾಕಿ ಅವನ ರಥವೇರಿದಳು. ಅಭಿಮನ್ಯು "ಸೂಳೆಯ ಮಂಟಪದ ಬಯಲಲ್ಲಿ ಬೀಡಿಕೆ ಬಿಡೋಣ" ಎಂದು ಹೇಳಿ ಅವಳನ್ನೊಳಿಸಿ ಕಳಿಸಿದನು.

ಆ ಮೇಲೆ ರಥದ ಮೇಲೆ ಹೆಂಗಸು ಕುಳಿತಳು, ರಥ ಅಶುಚಿಯಾಯಿತು! ಅದನ್ನು ಕಲ್ಯಾಣ ಭಟ್ಟರನ್ನೂ ಅತ್ಯಾಣ ಜ್ಯೋಯ್ಸರನ್ನೂ ತಂದು ಶುದ್ಧ ಮಾಡಿಸಬೇಕು ಎಂದು ತಿಳಿದು ಆದರಂತೆ ಮಾಡಿಸಿ ಅಭಿಮನ್ಯು ಸೂಳೆಯ ಮಂಟಪದ ಬಯಲಿಗೆ ಹೋದನು.

ಗಂಡೂರಿ ಅಜ್ಜ (ಬ್ರಹ್ಮ?) ಇದ್ದಲ್ಲಿಗೆ ಹೋಗಿ. 'ತನಗೆ ಅಭಿಮನ್ಯುವಿನ ಸಂಗ ಮಾಡಲು ಅನುಕೂಲವಾಗಲೆಂದು ಏಳು ಹಗಲುಗಳನ್ನು ಏಳು ರಾತ್ರಿಗಳನ್ನಾಗಿ ಮಾಡು' ಎಂದು ಕೇಳಿಕೊಂಡಳು. ಆಗ ಅವನು "ಹಾಗೆ "ಮಾಡಿದರೆ ಮನುಷ್ಯರೂ ಪ್ರಾಣಿಗಳೂ ಸಾಯುತ್ತಾರೆ. ಒಂದೇ ಹಗಲನ್ನು ಒಂದು ರಾತ್ರಿ ಮಾಡುವೆ" ಎಂದು ವರಕೊಟ್ಟನು.

ಆ ಸೂಳೆಯರ ಬಯಲಲ್ಲಿ ಬಣ್ಣದ ಹಾಸಿಗೆ ಬಿಡಿಸಿ ಅವರು ಮಲಗಿರುವಾಗ ನಾರಾಯಣನ ಕೊಸ್ನಾಟದ (ಕುಣಿವ ?) ಗೊಂಬೆಗಳು ಅವನಿಗೆ ಈ ವಿಷಯವನ್ನು ಹೇಳಿದುವು. ನಾರಾಯಣನು ಅವರ ಹಾಸಿಗೆ ಕೆಳಗೆ ಕರಿಕಲ್ಲು. ಹೇಗೆಮುಳ್ಳು ಇತ್ಯಾದಿ ಆಗಿ ಅವರ ಏಕಾಂತ ಭಂಗಮಾಡಿ, ಮಧ್ಯರಾತ್ರಿಯಲ್ಲೇ ಕಲ್ಲು ಕೋಳಿಯಾಗಿ ಕೂಗಿ ಬೆಳಗನ್ನು ಮಾಡಿದನು.

ಅಭಿಮನ್ಯು ಚಕ್ರವ್ಯೂಹದ ಕೋಟೆಯಲ್ಲಿ ಮಡಿಯುತ್ತಾನೆ.

ಇನ್ನೊಂದು ಪಾಠದ ಪ್ರಕಾರ ಅರ್ಜುನ ಮನೆಯಲ್ಲಿಲ್ಲದ್ದರಿಂದ ಅಭಿಮನ್ಯು ಯುದ್ಧಕ್ಕೆ ಹೋಗುತ್ತಾನೆ. ಅಲ್ಲಿ ಚಕ್ರವ್ಯೂಹದ ಯುದ್ಧದಲ್ಲಿ ಜಲಕರಣಿ (ಜಯದ್ರಥ?) ಅವನನ್ನು ಕೊಲ್ಲುತ್ತಾನೆ. (ಸಂಸ್ಕೃತ ಭಾರತದ ಪ್ರಕಾರ ಜಯದ್ರಥನು ಭೀಮನು ಕೋಟೆಯ ಒಳಗೆ ಅಭಿಮನ್ಯುವಿನ ಸಹಾಯಕ್ಕೆ ಬಾರದಂತೆ ತಡೆದನು – ಕರ್ಣನು ಹಿಂದಿನಿಂದ ಹೊಡೆದು ಇವನ ಅಸ್ತ್ರ ಶಸ್ತ್ರಗಳನ್ನು ಛೇದಿಸಿದನು – ದುಶ್ಶಾಸನನ ಮಗನು ಅವನನ್ನು ಕೊಂದು ತಾನೂ ಮಡಿದನು.)

ಕೃಷ್ಣನಿಗೆ ಇದು ತಿಳಿಯಿತು. ಅರ್ಜುನನೊಡನೆ ಮನೆಗೆ ಬರುವಾಗ ದಾರಿಯಲ್ಲಿ 'ಕೆರೆಯಲ್ಲಿ ಮಿಂದು ಹೋಗೋಣ' ಎಂದು ಹೇಳಿದನು. ಕೆರೆಯಲ್ಲಿ ಇಬ್ಬರೂ ಮುಳುಗಿದರು. ಅರ್ಜುನ ಮುಳುಗಿದ್ದಾಗ. ಕೃಷ್ಣ ಎದ್ದು. "ಚಕ್ರಬಿಂಬದ ಕೋಟೆ ಯೊಳಗೆ ಅಭಿಮನ್ಯು ಸತ್ತ" ಎಂದು ಬೊಬ್ಬೆ ಹೊಡೆದನು. ಅರ್ಜುನ ಮುಳು ಗಿದಲ್ಲಿಯೇ ಕೇಳಿ. 'ಏನು ಆಶ್ಚರ್ಯ' ಎಂದು ಎದ್ದಾಗ ನಾರಾಯಣನು ಮತ್ತೆ ಮುಳು ಗಿದ್ದನು. ಅರ್ಜುನ ಮತ್ತೆ ಮುಳುಗಿದಾಗ ಎದ್ದು ಹಾಗೆಯೇ ಬೊಬ್ಬೆಹೊಡೆದನು ನಾರಾಯಣ.

ಅಭಿಮನ್ಯುವಿನ ಮರಣದ ಸುದ್ದಿಯನ್ನು ಪಂಪನು[11] ವರ್ಣಿಸಿದ ರೀತಿಯಲ್ಲಿ ಕುಮಾರವ್ಯಾಸನು ವರ್ಣನೆ ಮಾಡಿದ್ದಾನೆ.[12] ಕೃಷ್ಣ ಒಂದು ಸಲ ಅದನ್ನು ನುಡಿದು ಮುಳುಗಿದ ಎಂದು ಪಂಪ ಹೇಳಿದರೆ. ಜಾನಪದವಲ್ಲಿ ಎರಡು ಸಲ ಹೇಳಿದ್ದಿದೆ.

ಈ ಸ್ವಾರಸ್ಯ ನಿರೂಪಣೆ ಯಕ್ಷಗಾನ ಪ್ರಸಂಗಗಳ ಮೂಲಕ ಹಬ್ಬಿ, ಅವುಗಳ ಪ್ರಭಾವದಿಂದ ಜಾನಪದ ಕಾವ್ಯದಲ್ಲಿಯೂ ಬಂದಿದೆ.

ಆ ಮೇಲೆ ಅಭಿಮನ್ಯುವನ್ನು ಬದುಕಿಸಲು ಧರ್ಮರಾಜನು ಪ್ರಯತ್ನ ಮಾಡುವುದು ಈ ಹಾಡಿನ ವಿಶೇಷವಾಗಿದೆ.

ಅರ್ಜುನನು ಮಗನ ಹೆಣವನ್ನು ಹೊತ್ತು ತರುವಾಗ ದಾರಿಯಲ್ಲಿ ಒಣಗಿದ ಮರ ಕಾಣುತ್ತದೆ. ನಾರಾಯಣನು 'ಸತ್ತ ಹೆಣವನ್ನು (!) ಬತ್ತ (ಬತ್ತಿದ, ಒಣಗಿದ) ಮರದೊಡನೆ ಭಸ್ಮಮಾಡೋಣ' ಎಂದು ಹೇಳಿದನು.

ಧರ್ಮರಾಜನಿಗೆ ಇದು ಗೊತ್ತಾದಮೇಲೆ ಅಭಿಮನ್ಯುವಿನ ಬೂದಿಯನ್ನೂ ಒಟ್ಟುಮಾಡಿ. ಹುಲ್ಲಿನಿಂದ ಮಂತ್ರಮಾಡಿ ಅವನ ಜೀವ ಪಡೆಯಲು ನೋಡಿದನು. ನಾರಾಯಣನು ಮೊಲದ ಹತ್ತಿರ ಆ ಶ್ಮಶಾನದ ಹುಲ್ಲನ್ನೆಲ್ಲ ತಿನ್ನಲು ಹೇಳಿದನು. ಇನ್ನೂ ಕೆಲವು ಪ್ರಯತ್ನಗಳನ್ನು ನಾರಾಯಣನು – ಬೇರೆ ಉಪಾಯಗಳಿಂದ ವಿಫಲ ಗೊಳಿಸಿರಬೇಕು. (ಕೊನೆಯಭಾಗ ಸಮಗ್ರವಾಗಿ ಸಿಗಲಿಲ್ಲ)

ಸ್ವರ್ಗಕ್ಕೆ ಹೋಗಿ ಅಲ್ಲಿ ರೊಟ್ಟಿ–ಅನ್ನ ಮಾಡಿ, ಅಭಿಮನ್ಯುವಿಗೆ ಉಣ್ಣಿಸಬೇಕೆಂದು ಮಾಡಿದಾಗ, ನಾರಾಯಣನು ಎಡಗಾಲಿನಿಂದ ಸ್ವರ್ಗದ ಬಾಗಿಲನ್ನು ಎಳೆದು ಮುಚ್ಚಿದನು. (ಕನಕದಾಸರು ಅಭಿಮನ್ಯುವಿನ ಸಾವಿಗೆ ಕುಹಕಿಯಾದ ಕೃಷ್ಣನೇ ಕಾರಣವೆಂದಿದ್ದಾರೆ.)

ನಾರಾಯಣಸ್ವಾಮಿಯ ಕಥೆಯ ಹಾಡಿನಲ್ಲಿ ಈ ಅಭಿಮನ್ಯುವಿನ ಯುದ್ಧ ವಿಷಯ ಬೇರೆಯವರ ಕಥೆಯ ರೂಪವನ್ನು ತಳೆದಿದೆ. ಅಲ್ಲಿ ನಾರಾಯಣಸ್ವಾಮಿಯ ಅಳಿಯ ಈಸರಾಯ. ಇನ್ನೊಂದು ಪಾಠದಲ್ಲಿ ದೊರೆರಾಯ. ನಾರಾಯಣಸ್ವಾಮಿಯ ಮಗಳು ರುಪ್ಪಾಣಿಯ ಗಂಡ. ಮಡದಿ ಚಿಕ್ಕವಳೆಂದು ಈಸರಾಯ ಸೂಳೆಯ ಸಂಗದಲ್ಲಿರುತ್ತಾನೆ. ನಾರಾಯಣಸ್ವಾಮಿ ಕಾಳಗಕ್ಕೆ ಅವನನ್ನು ಕರೆಯುತ್ತಾನೆ. ರುಪ್ಪಾಣಿಯು ಅನೇಕ ಉಪಾಯಗಳಿಂದ ಗಂಡನನ್ನು ಬದುಕಿಸಲು ನೋಡಿದರೂ ಅವಳ ತಂದೆ ಅನೇಕ ಉಪಾಯಗಳಿಂದ ಅವನ್ನು ಭಂಗಗೊಳಿಸುತ್ತಾನೆ. ಈಸರಾಯನ

---

11 ಪಂಪಭಾರತ XI ಪದ್ಯ 111–112.

12 ಕರ್ನಾಟಕ ಭಾರತ ಕಥಾಮಂಜರಿ ದ್ರೋಣ ಪರ್ವ. 8 ನೆ ಸಂಧಿ–ಪದ್ಯ 4–6.

ರುಂಡ ಜೀಳುತ್ತದೆ. ರುಪ್ವಾಣಿ ಗಂಡನೊಡನೆ ಸಹಗಮನ ಮಾಡಲು ಸೋಡಿದಾಗ ಅವಳನ್ನು ತಂದೆ ಬೆಂಕಿಯಿಂದ ಎಳೆದನು. ತನ್ನಂಥದೇ ಬೊಂಬೆಯನ್ನು ಮಾಡಿಸಿ. ಬೊಂಬೆಯನ್ನು ಕೊಂಡಕ್ಕೆ ಬಿಟ್ಟು, ಅದನ್ನು ತನ್ನ ತಂದೆ ಎಳೆದುಕೊಳ್ಳಲು, ತಾನು ಕೊಂಡಕ್ಕೆ ಧುಮುಕಿ ಮಾಸತಿಯ ರೂಪ ತಾಳುತ್ತಾಳೆ ರುಪ್ವಾಣಿ. ವಿವರಗಳು ಬೇರೆ ಯಾದರೂ ಅನೇಕ ಹೋಲಿಕೆಯ ಅಂಶಗಳೂ ಇಲ್ಲಿವೆ.

ಅಭಿಮನ್ಯುವಿನ ಪರಾಕ್ರಮದ ವರ್ಣನೆಯನ್ನು ಸಂಸ್ಕೃತ ಭಾರತದಲ್ಲಿಯೂ ಪಂಪ–ಕುಮಾರವ್ಯಾಸರಲ್ಲಿಯೂ ವರ್ಣಿಸಿದಂತೆ ಅವನ ಶೌರ್ಯವನ್ನು ವರ್ಣಿಸುವಲ್ಲಿ ನಮ್ಮ ಜಾನಪದ ಕವಿಗಳು ಅಷ್ಟು ನೈಪುಣ್ಯವನ್ನು ತೋರಿಸಿಲ್ಲ. ಇದು ಸಾಮಾನ್ಯವಾಗಿ ಎಲ್ಲ ಯುದ್ಧ ವರ್ಣನೆಗಳಿಗೂ ಅನ್ವಯಿಸುತ್ತದೆ. ಬಾಣಗಳ ಮಾಟದ ಶಕ್ತಿಯ ವರ್ಣನೆ ಕೆಲವೆಡೆ ಬರುತ್ತದೆ.

ಈ ಜಾನಪದ ಕತೆಗಳಲ್ಲಿ ಕವಿಗಳು ನೂತನ ಕಥನ ಕಲ್ಪನಾ ಚಮತ್ಕಾರಗಳನ್ನು ಹೆಣೆಯುವಲ್ಲಿಯೂ ಹಾಸ್ಯದೃಷ್ಟಿಯಿಂದ ಸ್ವಾರಸ್ಯವನ್ನುಂಟುಮಾಡುವಲ್ಲಿಯೂ ಹೆಚ್ಚು ಸಫಲರಾಗಿದ್ದಾರೆ. ಅದರಂತೆ ಜಾನಪದ ಜೀವನದ ಅನೇಕ ನಂಬಿಕೆಗಳನ್ನೂ ಆಚರಣೆ-ಸಂಪ್ರದಾಯಗಳನ್ನೂ ಈ ಪೌರಾಣಿಕ ವ್ಯಕ್ತಿಗಳ ಜೀವನಗಳ ಮೂಲಕ ಚಿತ್ರಿಸಿರುವುದು ವಿಶೇಷ ಕುತೂಹಲಕರವಾದ ಅಂಶವಾಗಿದೆ. ಗಂಡನ ಚಿತೆಯಲ್ಲಿ ಬಿದ್ದು ಸತ್ತಂಥ ಪ್ರಾಚೀನ ಪದ್ಧತಿಗಳೂ ಈ ಹಾಡುಗಳಲ್ಲಿರಬೇಕು.

ಈ ಜಾನಪದ ಪೌರಾಣಿಕ ಜಗತ್ತಿನಲ್ಲಿ ಅದಕ್ಕೇ ವಿಶಿಷ್ಟವಾದ ಘಟನಾವಳಿಗಳು ಸಂಭವಿಸುವವೆಂಬುದನ್ನು ಈ ಅಭ್ಯಾಸದಿಂದ ಕಂಡುಕೊಳ್ಳಬಹುದು.

ಆಧುನಿಕ ಗಣಿತದ ಮೇಲೆ ಮೂವರು ಐರೋಪ್ಯ ಗಣಿತಜ್ಞರು ಬೀರಿದ ಪ್ರಭಾವ

ಎಂ. ನಾಗರಾಜ್

"ಒಂದು ಜನಾಂಗದಲ್ಲಿನ ಗಣಿತದ ಮುನ್ನಡೆ ಆ ಜನಾಂಗದ ಸಂಸ್ಕೃತಿಯ ನಿಜ ಮಾಪಕ". ಸಮಸ್ತ ಮಾನವ ಜನಾಂಗದ ಇತಿಹಾಸ ಈ ಮಾತನ್ನು ನಿಜವೆಂದು ಸ್ಪಷ್ಟಪಡಿಸಿದೆ. ಇಂದು ಆಧುನಿಕ ಗಣಿತ ಯಾವ ಒಂದು ಜನಾಂಗದ ಸೊತ್ತೂ ಆಗಿರದೆ ಇಡೀ ಮಾನವ ಕುಲ ಬೆಳೆಸಿ ಸಲಹುತ್ತಿರುವ ಒಂದು ಅತ್ಯಂತ ಸುಂದರವಾದ ಹೂ ತೋಟದಂತಿದೆ. ಈ ಹೂ ತೋಟದ ಸೌಂದರ್ಯ ಬಾಹ್ಯಾಡಂಬರವಾದುದಲ್ಲ. ಅದು ಆಧ್ಯಾತ್ಮಿಕವಾದದ್ದು. ಈ ಅಪೂರ್ವ ಆಧ್ಯಾತ್ಮಿಕ ಸೌಂದರ್ಯಕ್ಕೆ ಆದಿಯಾಗಿರುವ ಕಾರಣಗಳು ಅನೇಕವಿವೆ. ಉದಾಹರಣೆಗೆ. ಅದರ ಪ್ರತಿಯೊಂದು ಭಾಗವೂ ಉಳಿದ ಭಾಗಗಳೊಡನೆ ಸಮ್ಮಿಳಿತಗೊಂಡು. ಅದು ಒಂದು ಅವರ್ಣನೀಯ ಸೌಂದರ್ಯಯುತ ಕಲಾಕೃತಿಯಂತಿದೆ. ಇದೂ ಅಲ್ಲದೆ ಅದು ಒಂದು ಸರ್ವ ವ್ಯಾಪ್ತಿಯುಳ್ಳ ಭಾಷೆಯೂ ಆಗಿದೆ. ವಿಜ್ಞಾನ ಜಗತ್ತಿನಲ್ಲಿ ಗಣಿತದ್ದು ಅಗ್ರಸ್ಥಾನ. ಏಕೆಂದರೆ ವಿಜ್ಞಾನಿಯ ಪಂಚೇಂದ್ರಿಯಗಳಿಗೆ ಗೋಚರವಾಗದ ಸತ್ಯವನ್ನು ಅವನ ಮನಸ್ಸು ಗಣಿತದ ಮೂಲಕ ಕಾಣಬಲ್ಲುದು. ಈ ಜಗತ್ತನ್ನು ಅರ್ಥಮಾಡಿಕೊಳ್ಳಲು ಹೊರಟು ಸತ್ಯ ಸಿದ್ಧರಾದ ನ್ಯೂಟನ್, ಐನ್‌ಸ್ಟೈನ್‌ರಂತಹ ವಿಜ್ಞಾನಿಗಳು ಪ್ರಥಮ ಶ್ರೇಣಿಯ ಗಣಿತಜ್ಞರಾಗಿದ್ದರು. ವಿಜ್ಞಾನಕ್ಕೆ ಮಾತ್ರವಲ್ಲದೆ ಮನುಷ್ಯನ ಪ್ರತಿಯೊಂದು ಪ್ರಯತ್ನಕ್ಕೂ ಗಣಿತದ ಅವಶ್ಯಕತೆ ಇರುವುದು ಇಂದು ಸರ್ವವೇದ್ಯವಾದ ವಿಷಯ. ಮಾನವ ಇರುವಿಕೆಯ ಅತ್ಯಂತ ಉನ್ನತ ಶಿಖರವಾದ ಆಧ್ಯಾತ್ಮಿಕ ಸತ್ಯಾನ್ವೇಷಣೆಗೇ ತಳಹದಿಯಾಗುವಂತಿರುವ ಈ ಭವ್ಯ ವೈಜ್ಞಾನಿಕ ಕಲಾಕೃತಿಯ ಇತಿಹಾಸ ಬಹಳ ದೊಡ್ಡದು ಮತ್ತು ಆಕರ್ಷಕವಾದದ್ದು. ಈ ಪುಟ್ಟ ಲೇಖನದಲ್ಲಿ ಈ ಇತಿಹಾಸದ. ಕಿರಿದಾದರೂ ಅತಿ ಪರಿಣಾಮಕಾರಿಯಾಗಿ ಮಾರ್ಪಟ್ಟ. ಒಂದು ಘಟನೆಯನ್ನು ನಿರೂಪಿಸಲು ಪ್ರಯತ್ನಿಸಿದ್ದೇನೆ.

ಈ ಘಟನೆ ಜರುಗಿದ್ದು 19ನೇ ಶತಮಾನದ ಯೂರೋಪು ಖಂಡದಲ್ಲಿ. ಇದಕ್ಕೆ ಕಾರಣರಾದವರು ಮೂವರು ಐರೋಪ್ಯ ಗಣಿತಜ್ಞರು. ಈ ಮೂವರ ಹೆಸರುಗಳು ಹೀಗಿವೆ: ಕಾರ್ಲ್ ಫ್ರಿಡರೀಚ್ ಗೌಸ್ (Carl Friederich Gauss) ಜೋಹನ್ ಬೋಲ್ಯಾಯಿದ್ ಬೋಲ್ಯ (Johann Bolayai De Bolya) ಮತ್ತು ನಿಕೊಲಾಯಸ್ ಲೊಬಚೇವ್‌ಸ್ಕಿ. (Nikolas Lobatschevsky). ಗಣಿತದ

ಇತಿಹಾಸದಲ್ಲಿ ಅತಿ ಶ್ರೇಷ್ಠರೆಂದು ಪರಿಗಣಿಸಲ್ಪಡುವ ಗಣಿತಜ್ಞರಲ್ಲಿ ಅಗ್ರನೆನಿಸಿಕೊಂಡಿರುವ ಗೌಸನು ಜರ್ಮನಿ ದೇಶದವನು. ಮೂರುವರ್ಷ ವಯಸ್ಸಿನವನಿದ್ದಾಗಲೆ ಗಣಿತದಲ್ಲಿನ ತನ್ನ ಪ್ರತಿಭೆಯನ್ನು ತೋರಿಸಿದ್ದ. ಗ್ಯೋಟಿಂಗನ್ (Gottingen) ವಿಶ್ವವಿದ್ಯಾಲಯದಲ್ಲಿ ಬಹಳ ವರ್ಷ ಮಹೋಪಾಧ್ಯಾಯನಾಗಿದ್ದು, ಗಣಿತ. ಭೌತಶಾಸ್ತ್ರ ಮತ್ತು ಖಗೋಳ ಶಾಸ್ತ್ರಗಗಳಿಗೆ ಆಧಾರ ಭೂತವಾದ ಅನೇಕ ತತ್ವಗಳನ್ನು ಸಾರಿದ. ಗೌಸನ ಆಪ್ತ ಗೆಳೆಯರಲ್ಲೊಬ್ಬನಾದ ವುಲ್ಫ್‌ಗಾಂಗ್ ಬೋಲ್ಯಾಯಿ (Wolfgang Bolyai) ಹಂಗರಿ ದೇಶದಲ್ಲಿ ಗಣಿತದ ಪ್ರಾಧ್ಯಾಪಕನಾಗಿದ್ದ. ಅವನ ಮಗನೇ ಯೋಹಾನ್. ಯೋಹಾನನು ಹಂಗರಿಯ ಭೂ ಸೈನ್ಯದಲ್ಲಿ ಒಬ್ಬ ಹುದ್ದೆದಾರನಾಗಿದ್ದ. ರಷ್ಯದೇಶದವನಾಗಿದ್ದ ಲೊಬಚೇವ್‌ಸ್ಕಿ. ಆ ದೇಶದ ಕಜಾನ್ ವಿಶ್ವ ವಿದ್ಯಾಲಯದ ಗಣಿತ ವಿಭಾಗದಲ್ಲಿ ಪ್ರಾಧ್ಯಾಪಕನಾಗಿದ್ದ. ಈ ಮೂವರು ಪರಸ್ಪರ ಸಂಪರ್ಕವಿಲ್ಲದಂತೆ ಗಣಿತದ ಒಂದು ಮೂಲ ಸತ್ವವನ್ನು ಕಂಡುಹಿಡಿದರು. ಮೊದಮೊದಲು ಈ ಘಟನೆಗೆ ಗಣಿತಜ್ಞರು ಪ್ರಾಮುಖ್ಯತೆಯನ್ನು ಕೊಡಲಿಲ್ಲ. ಆದರೆ ಕಾಲ ಸರಿದಂತೆ ಈ ಘಟನೆ ಗಣಿತದ ಮೇಲೆ ಅತಿ ಪ್ರಬಲವಾದ ಪರಿಣಾಮವನ್ನುಂಟುಮಾಡಿತು. ಇದು ಗಣಿತದ ಮುನ್ನಡೆಯ ಮಾರ್ಗವನ್ನೇ ಬದಲಿಸಿತು ಎಂದರೆ ಅತಿಶಯೋಕ್ತಿಯಾಗಲಾರದು. ಈ ಘಟನೆಯ ನಿರೂಪಣೆಯೇ ಈ ಲೇಖನದ ಗುರಿ.

ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದೆ ಗ್ರೀಸ್ ದೇಶದ ಅಥೆನ್ಸ್ (Athens) ನಗರದಲ್ಲಿ ಪ್ಲೇಟೋ ಎಂಬ ತತ್ವಜ್ಞಾನಿ ಇದ್ದ. ಅವನ ಶಿಷ್ಯವೃಂದಕ್ಕೆ ಸೇರಿದ್ದವರಲ್ಲಿ ಅರಿಸ್ಟಾಟಲನು (Aristotle) ಅತ್ಯಂತ ಪ್ರತಿಭಾವಂತನೆಂದು ಪರಿಗಣಿಸಲ್ಪಟ್ಟಿದ್ದನು. ತನ್ನ ಗುರುವಿನಂತೆಯೇ ಅರಿಸ್ಟಾಟಲನೂ ಒಬ್ಬ ಶ್ರೇಷ್ಠ ತತ್ವಜ್ಞಾನಿಯಾಗಿದ್ದ. ಗುರು ಶಿಷ್ಯರಿಬ್ಬರೂ ಸೇರಿ **"ಮೂಲತತ್ವದತ್ತ ವಿಧಾನ"** (Axiomatic Method) ವೆಂಬ ತಾರ್ಕಿಕ ಮಾರ್ಗವೊಂದನ್ನು ಪ್ರತಿಪಾದಿಸಿದರು. ಎರಡು ಸಾವಿರ ವರ್ಷಗಳ ನಂತರ ಇಂದಿಗೂ ವಿಜ್ಞಾನ ರಂಗದಲ್ಲಿ ಈ ವಿಧಾನವೊಂದೇ ದೃಢ ಮಾರ್ಗವೆಂದು ಪರಿಗಣಿಸಲ್ಪಟ್ಟಿದೆ. ತತ್ವಜ್ಞಾನದ ಶೈಲಿಯಲ್ಲಿದ್ದ ಈ ವಿಧಾನವನ್ನು ವಿಜ್ಞಾನ ರಂಗಕ್ಕೆ ಹೇಗೆ ಅಳವಡಿಸಲಾಯಿತು? ಈ ಅಳವಡನೆಯ ಕರ್ತೃ ಯಾರು?

ಪ್ಲೇಟೊ–ಅರಿಸ್ಟಾಟಲರ ಕಾಲಕ್ಕಾಗಲೇ ಗ್ರೀಕ್ ತತ್ವಜ್ಞಾನಿಗಳು ಜ್ಯಾಮಿತಿಯ ಅನೇಕ ತತ್ವಗಳನ್ನು ಸಾರಿದ್ದರು. ಈ ತತ್ವಗಳೆಲ್ಲವೂ ಭೂಮಾಪನ. ಬಿಲ್ಲು ಮುಂತಾದ ದೈನಿಕ ಕಾರ್ಯಗಳ ಸನ್ನಿವೇಶದಲ್ಲಿ ಕಂಡುಹಿಡಿಯಲ್ಪಟ್ಟಿದ್ದವು. ಈ ತತ್ವಗಳೆಲ್ಲವೂ ಬಿಡಿಬಿಡಿಯಾಗಿದ್ದು. ಹೊಸತತ್ವಗಳಿಗೆ ಕಾರಕಗಳಾಗಲು ಅಶಕ್ತವಾಗಿದ್ದವು.

"ಮೂಲ ತತ್ವ ದತ್ತ ವಿಧಾನ" ವನ್ನು ಚೆನ್ನಾಗಿ ಮನನ ಮಾಡಿಕೊಂಡಿದ್ದವರಲ್ಲಿ ಅಲೆಕ್ಸಾಂಡ್ರಿಯ (Alexandria) ನಗರದ ಯೂಕ್ಲಿಡ್ (Euclid) ಎಂಬ

ತತ್ವಜ್ಞಾನಿಯೂ ಒಬ್ಬ. ತಾನು ಕಲಿತಿದ್ದ "ಮೂಲ ತತ್ವ ದತ್ತ ವಿಧಾನವನ್ನು" ಉಪಯೋಗಿಸಿಕೊಂಡು. ತನ್ನ ಕಾಲದವರೆಗೆ ಗೊತ್ತಿದ್ದ ಜ್ಯಾಮಿತಿಯ ತತ್ವಗಳೆಲ್ಲವನ್ನೂ ಸೇರಿಸಿ ತಾರ್ಕಿಕ ಸರಣಿಯೊಂದನ್ನು ಆತ ನಿರ್ಮಿಸಿದ. ಈ ಸರಣಿಯಿಂದಾಗಿ ಅನೇಕ ಹೊಸತತ್ವಗಳು ಜ್ಯಾಮಿತಿಯಲ್ಲಿ ಹೊರಬಂದವು. ಯೂಕ್ಲಿಡನು ನಿರ್ಮಿಸಿದ ಈ ಭವ್ಯ ಕೃತಿಯೇ ಪ್ರತಿಯೊಬ್ಬ ಹೈಸ್ಕೂಲ್ ವಿದ್ಯಾರ್ಥಿಗೂ ಗೊತ್ತಿರುವ "ಯೂಕ್ಲಿಡನ ಜ್ಯಾಮಿತಿ" (Euclidean Geometry).

ಮೊದಲು ಯೂಕ್ಲಿಡನ ಈ ಸೃಷ್ಟಿಯ ಸೂಕ್ಷ್ಮ ಪರಿಚಯ ಮಾಡಿಕೊಳ್ಳೋಣ. ಪ್ರತಿಯೊಬ್ಬ ಹೈಸ್ಕೂಲ್ ವಿದ್ಯಾರ್ಥಿಗೂ ಗೊತ್ತಿರುವಂತೆ ಜ್ಯಾಮಿತಿಯಲ್ಲಿ ಬಿಂದು, ಸರಳರೇಖೆ ಮುಂತಾದ ಭಾವನೆಗಳು ಪ್ರಾಧಾನ್ಯತೆಯನ್ನು ಪಡೆದಿವೆ. "ದೂಲ ದತ್ತ ವಿಧಾನ"ದ ಪ್ರಕಾಶನಕ್ಕೆ ಮೊದಲು ಇಂತಹ ಭಾವನೆಗಳು ಭಾವನಾತ್ಮಕವೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಉದಾಹರಣೆಗೆ. ಸರಳರೇಖೆ ಎಂದರೆ ಭೂಮಿಯ ಮೇಲೆ ಎಳೆದ ಒಂದು ರೇಖೆಯೆಂದು ಪರಿಗಣಿಸಲ್ಪಡಲಾಗುತ್ತಿತ್ತು. ಪ್ರಥಮತಃ ಪ್ಲೇಟೋ ಇಂತಹ ಭಾವನೆಗಳು ಭಾವನಾತ್ಮಕ ಮಾತ್ರವೆಂದೂ, ಈ ಭಾವನೆಗಳಿಗೆ ಕೊಡಲ್ಪಟ್ಟ ವಾಸ್ತವಿಕ ವಿವರಣೆಗಳು ಪ್ರಾಸಂಗಿಕ ಮಾತ್ರವೆಂದೂ ಸಾರಿದ. ಈ ಸಾರಿಕೆ "ಮೂಲ ದತ್ತ ವಿಧಾನ"ದ ಮೊದಲ ಹಂತವೇ ಆಯಿತು. ಈ ಭಾವನೆಗಳಿಗನ್ವಯಿಸುವ ಕೆಲವು ತತ್ವಗಳನ್ನು ಮೂಲವಾಗಿ — ಎಂದರೆ. ಈ ಮೂಲತತ್ವ (axiom) ಗಳನ್ನು ಮತ್ತಾವ ತತ್ವಗಳ ಅನುಮಿತಿಯಾಗಿ ನಿಗಮನ ಮಾಡಲಾಗದಂತೆ – ತೆಗೆದುಕೊಳ್ಳುವುದು ಎರಡನೆಯ ಹಂತ. ಭಾವನೆಗಳ ಮತ್ತು ಅವುಗಳಿಗೆ ಅನ್ವಯಿಸುವ ಮೂಲ ತತ್ವಗಳ ಸರಣಿಯಿಂದ ಬೇರೆ ತತ್ವಗಳನ್ನು ಅನುಮಿತಿಗಳಾಗಿ ನಿಗಮನ ಮಾಡುವುದು ಈ ವಿಧಾನದ ಕೊನೆಯ ಹಂತ.

ಯೂಕ್ಲಿಡನು ಈ ವಿಧಾನದ ಮೇರೆಗೆ ಅವನ ಕಾಲದವರೆಗೆ ಗೊತ್ತಿದ್ದ ಜ್ಯಾಮಿತಿಯ ತತ್ವಗಳೆಲ್ಲವನ್ನೂ ಒಂದು ತಾರ್ಕಿಕ ಸರಣಿಯಂತೆ ಜೋಡಿಸಿದ. ಬಿಂದು, ಸರಳರೇಖೆ. ಕೋನ ಮುಂತಾದ ಭಾವನೆಗಳಿಗನ್ವಯಿಸುವಂತೆ ಐದು ಮೂಲ ತತ್ವಗಳನ್ನು ಪ್ರತಿಪಾದಿಸಿ. ಮಿಕ್ಕೆಲ್ಲ ತತ್ವಗಳನ್ನು ಇವುಗಳ ಅನುಮಿತಿಗಳಂತೆ ನಿಗಮನ ಮಾಡಿದ.

ಹೀಗೆ ರಚಿಸಲ್ಪಟ್ಟ ಜ್ಯಾಮಿತಿಯು ಬಹುಬೇಗ ಜನಪ್ರಿಯವಾಯಿತು. ಅಂತೆಯೇ ಅನುಮಾನಾಸ್ಪದವೂ ಆಯಿತು. ಜನರಲ್ಲಿ ಯೂಕ್ಲಿಡನ ಜ್ಯಾಮಿತಿಯ ಬಗೆಗೆ ಕೊಂಚ ಅಸಮಂಜಿಕೆ ಹುಟ್ಟಲು ಕಾರಣ ಹೀಗಿದೆ. ಯೂಕ್ಲಿಡನ ಮೂಲ ತತ್ವಗಳಲ್ಲಿ ಐದನೆಯದು ಹೀಗಿದೆ.

"L ಎಂಬುದು ಯಾವುದೇ ಆದ ಒಂದು ಸರಳರೇಖೆಯಾಗಿರಲಿ. P ಎಂಬುದು L ಒಡನೆ ಅಪಾತವಾಗದ ಯಾವುದೇ ಒಂದು ಬಿಂದುವಾದರೆ, P ಒಡನೆ ಅಪಾತವಾಗಿಯೂ L ಗೆ ಸಮಾನಾಂತರವಾಗಿಯೂ ಇರುವ ಏಕೈಕ ರೇಖೆಯೊಂದು ಇದೆ."

ಈ ಮೂಲತತ್ವ ಯೂಕ್ಲಿಡನು ಆರಿಸಿಕೊಂಡಿದ್ದ ಮಿಕ್ಕ ನಾಲ್ಕು ಮೂಲತತ್ವಗಳ ಅನುಮಿತಿಯೆಂಬ ನಂಬಿಕೆ ಯೂಕ್ಲಿಡನ ಕಾಲಕ್ಕಾಗಲೇ ಜನರಲ್ಲಿ ಇತ್ತು. ಯೂಕ್ಲಿಡನೂ ಸಹ ಇದನ್ನು ಮೊದಲ ನಾಲ್ಕು ಮೂಲ ತತ್ವಗಳ ಅನುಮಿತಿಯಂತೆ ನಿಗಮನ ಮಾಡಲು ಬಹಳ ಪ್ರಯತ್ನಪಟ್ಟನಂತೆ. ಅವನ ಈ ಎಲ್ಲ ಪ್ರಯತ್ನಗಳು ನಿಷ್ಫಲವಾದಾಗ ಈ ತತ್ವವನ್ನು ಐದನೆಯ ಮೂಲ ತತ್ವವಾಗಿ ಆರಿಸಿಕೊಂಡನೆಂಬ ಪ್ರತೀತಿ ಇದೆ. ಆದರೆ ಜನರ ಮನಸ್ಸಿನಲ್ಲಿ ಈ ತತ್ವ ಯೂಕ್ಲಿಡನ ಮಿಕ್ಕ ನಾಲ್ಕು ತತ್ವಗಳ ಅನುಮಿತಿಯೆಂಬ ಭಾವನೆ ದೃಢವಾಗಿ ಬೇರೂರಿತ್ತು. ಇದರಿಂದಾಗಿ ಜನರಲ್ಲಿ ಯೂಕ್ಲಿಡನ ಜ್ಯಾಮಿತಿಯ ಬಗೆಗೆ ಸ್ವಲ್ಪ ಅಪನಂಬಿಕೆ ಬಂದುದು ಸಹಜವೇ ಸರಿ. ಈ ಅಪನಂಬಿಕೆಯನ್ನು ಹೋಗಲಾಡಿಸಲು ಇದ್ದುದೊಂದೇ ಮಾರ್ಗ. ಯೂಕ್ಲಿಡನ ಐದನೆ ಮೂಲ ತತ್ವ ಮಿಕ್ಕ ನಾಲ್ಕು ಮೂಲ ತತ್ವಗಳ ಅನುಮಿತಿ ಅಲ್ಲ ಎಂದು ತೋರಿಸುವುದು. ಆದರೆ ಯೂಕ್ಲಿಡನ ಸಮಕಾಲೀನರಾದ ಮತ್ತು ಅವರ ನಂತರ ಬಂದ ಎಲ್ಲ ಗಣಿತಜ್ಞರೂ ಈ ಮಾರ್ಗದಲ್ಲಿ ಹೋಗದೆ. ಅದರ ವ್ಯತಿರಿಕ್ತ ಮಾರ್ಗದಲ್ಲಿ ಹೋದರು. ಅಂದರೆ, ಎಲ್ಲರೂ ಯೂಕ್ಲಿಡನ ಆಯ್ದ ಐದನೆ ಮೂಲತತ್ವ ಮಿಕ್ಕ ನಾಲ್ಕರ ಅನುಮಿತಿಯೆಂದೂ ಆದ್ದರಿಂದ ಯೂಕ್ಲಿಡನು ತನ್ನ ಮೂಲ ತತ್ವಗಳ ಆಯ್ಕೆಯಲ್ಲಿ ತಪ್ಪು ಮಾಡಿದ್ದನೆಂದೂ ತೋರಿಸಹೊರಟರು. ಈ ವ್ಯಸನದಲ್ಲಿಯೇ ಅನೇಕಾನೇಕ ಗಣಿತಜ್ಞರು ತಮ್ಮ ಜೀವನವನ್ನೆಲ್ಲಾ ಕಳೆದರು. ಎರಡು ಸಾವಿರ ವರ್ಷಗಳ ನಂತರವೂ ಯಾವೊಬ್ಬ ಗಣಿತಜ್ಞನೂ ಈ ಕಾರ್ಯದಲ್ಲಿ ಸಫಲನಾಗಲಿಲ್ಲ. ಹೀಗೆ ಇದು ಒಂದು ಜಟಿಲವಾದ ಮತ್ತು ಅತ್ಯಂತ ನಿರಾಶಾದಾಯಕವಾದ ಸಮಸ್ಯೆಯಾಗಿ ಪರಿಣಮಿಸಿತು. ಈ ಸಮಸ್ಯೆ ಎಷ್ಟು ನಿರಾಶಾದಾಯಕವಾಗಿತ್ತೆಂಬ ವಿಷಯವನ್ನು ನಾವು ವುಲ್ಫ್‌ಗಾಂಗ್ ಬೋಲ್ಯಾಯಿಯು ತನ್ನ ಮಗ ಯೋಹಾನನಿಗೆ ಬರೆದ ಪತ್ರ ಒಂದರಿಂದಲೇ ತಿಳಿಯಬಹುದು. ಅವನು ಈ ಸಮಸ್ಯೆಯ ಬಗೆಗೆ ಬರೆಯುತ್ತ, ಅದು ತನ್ನ ಜೀವನವನ್ನು ಸಂಪೂರ್ಣ ನಾಶಗೊಳಿಸಿತೆಂದೂ, ಆದ್ದರಿಂದ ಯೋಹಾನನು ಅದನ್ನು ಬಿಡಿಸುವ ಗೋಜಿಗೇ ಹೋಗಬಾರದೆಂದೂ ಹೃದಯವಿದ್ರಾವಕವಾಗಿ ಹೇಳುತ್ತಾನೆ. ಆದರೆ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿದವರಲ್ಲಿ ಯೋಹಾನನೂ ಒಬ್ಬನು ಎಂಬ ವಿಷಯ ಇಲ್ಲಿ ಸ್ವಲ್ಪ ಕೌತುಕವಾಗಿಯೇ ಕಾಣುತ್ತದೆ. ತನ್ನ ತಂದೆಗೆ ಉತ್ತರ ಬರೆಯುತ್ತ, ಯೋಹಾನನು ತಾನು ಕಂಡು ಹಿಡಿದಿದ್ದ (ಸಮಸ್ಯೆಯ) ಪರಿಹಾರವನ್ನು ವಿವರಿಸುತ್ತಾನೆ.

ಯೋಹಾನನ ಪ್ರತಿಪಾದನೆ ಹೀಗಿದೆ. ಯೂಕ್ಲಿಡ್‌ನ ಪಂಚಮ ಮೂಲ ತತ್ವವು ಮಿಕ್ಕ ನಾಲ್ಕು ಮೂಲತತ್ವಗಳ ಅನುಮಿತಿಯಲ್ಲ. ಅಂದರೆ.ಯೂಕ್ಲಿಡನ ಪಂಚಮೂಲ ತತ್ವಗಳು ಸ್ವಾವಲಂಬಿಗಳಾದ ಐದು ತತ್ವಗಳು. ಆದ್ದರಿಂದ ಯೂಕ್ಲಿಡನು ತನ್ನ ಪಂಚ ಮೂಲ ತತ್ವಗಳ ಆಯ್ಕೆಯಲ್ಲಿ ತಪ್ಪೇನೂ ಮಾಡಿಲ್ಲ. ಮತ್ತು ಯೂಕ್ಲಿಡನ ಜ್ಯಾಮಿತಿ "ಮೂಲ ತತ್ವ ದತ್ತ ವಿಧಾನ" ದ ಮೇರೆಗೆ ಯುಕ್ತ ರೀತಿಯಲ್ಲಿ ಕಟ್ಟಲ್ಪಟ್ಟ

ಒಂದು ತಾರ್ಕಿಕ ಸರಣಿಯೇ ಸರಿ. ಕ್ರಿ. ಶ. 1827 ರಲ್ಲಿ ಯೋಹಾನನು ಈ ನಿರ್ಧಾರಕ್ಕೆ ಬಂದಿದ್ದನು. ಆದರೆ ಈ ಪ್ರತಿಪಾದನೆಯು ಪ್ರಕಾಶನವಾದದ್ದು 1872 ರಲ್ಲಿ.

ಇದೇ ನಿರ್ಧಾರಕ್ಕೆ ರಷ್ಯದ ಲೊಬಾಚೇವ್ಸ್ಕಿಯೂ ಸಹ (ಯೊಹಾನ್‌ಬೋಲ್ಯಾಯಿಯ ಸಂಪರ್ಕವಿಲ್ಲದೆ) 1826 ರಲ್ಲಿ ಬಂದಿದ್ದನು. ಲೊಬಾಚೇವ್ಸ್ಕಿಯ ಪ್ರತಿಪಾದನೆ ಪ್ರಕಟಗೊಂಡಿದ್ದು 1828 ರಲ್ಲಿ. ಇದಕ್ಕೆ ಮುಂಚೆಯೇ, ಅಂದರೆ 1816ರಲ್ಲಾಗಲೇ ಗೌಸನು ಈ ನಿರ್ಧಾರಕ್ಕೆ ಬಂದಿದ್ದನೆಂಬ ವಿಷಯ ಬೆಳಕಿಗೆ ಬಂದಿದೆ. ಆದರೆ ಗೌಸನು ತನ್ನ ಸಾಮಾನ್ಯ ಗುಣಕ್ಕನುಸಾರವಾಗಿ, ಗಣಿತದಲ್ಲಿ ತಾನು ನಿಗಮನ ಮಾಡಿದ್ದ ಅನೇಕ ಅನುಮಿತಿಗಳಂತೆ ಈ ಪ್ರತಿಪಾದನೆಯನ್ನು ಪ್ರಕಟಿಸಿರಲಿಲ್ಲ.

ಈ ಪ್ರತಿಪಾದನೆಯನ್ನು ದೃಢಪಡಿಸುವ ಮಾರ್ಗ ಯಾವುದು? ಈ ಪ್ರಶ್ನೆಯ ಉತ್ತರ ಮತ್ತೊಂದು ಪ್ರಶ್ನೆಯಲ್ಲಿ ಅಡಗಿದೆ. ಯೂಕ್ಲಿಡನ ಮೊದಲ ನಾಲ್ಕು ಮೂಲತತ್ತ್ವಗಳಿಗೆ ಸರಿಹೊಂದುವಂತಿದ್ದು, ಅತನ ಪಂಚಮ ಮೂಲತತ್ತ್ವವನ್ನು ವಿರೋಧಿಸುವ ಒಂದು ಜ್ಯಾಮಿತಿ ಇರಲು ಸಾಧ್ಯವೇ? ಇಂತಹ ಜ್ಯಾಮಿತಿ ಇರಲು ಸಾಧ್ಯವೆಂದು ನಾವು ಸಾಧಿಸಬಲ್ಲವರಾದರೆ ನಮ್ಮ ಮೊದಲ ಪ್ರಶ್ನೆಯನ್ನು ಉತ್ತರಿಸಿದಂತಾಗುತ್ತದೆ. ಈ ಸಾಧನೆಗೆ ನಾವು ಮುಖ್ಯವಾಗಿ ಮಾಡಬೇಕಾದುದು ಹೀಗಿದೆ : ಯೂಕ್ಲಿಡನ ನಾಲ್ಕು ಮೂಲತತ್ತ್ವಗಳಿಗನುಗುಣವಾಗಿರುವ ಮತ್ತು ಅವನ ಪಂಚಮ ಮೂಲತತ್ತ್ವವನ್ನು ವಿರೋಧಿಸುವ ಒಂದು ಜ್ಯಾಮಿತಿಯನ್ನು ನಿರ್ಮಾಣ ಮಾಡಬೇಕು. ಇಂತಹ ನಿರ್ಮಾಣದ ಉದಾಹರಣೆಗಳಾಗಿ ಎರಡು ಜ್ಯಾಮಿತಿಗಳನ್ನು ಕೊಡಲಾಗಿದೆ.

1. ಗೌಸನ ಎಲಿಪ್ಟಿಕ್ ಜ್ಯಾಮಿತಿ (Gauss's Elliptic Geometry): ಒಂದು ಗೋಳವನ್ನು ತೆಗೆದುಕೊಳ್ಳೋಣ. ಗೋಳದ ಯಾವದೇ ಬಿಂದುವಿಗೆ ಅಭಿಪಾದವಾದ (antipodal) ಒಂದು ಬಿಂದುವಿರುತ್ತದೆ. ಇಂತಹ ಪ್ರತಿಯೊಂದು ಅಭಿಪಾದ ಬಿಂದು ದ್ವಯವನ್ನು (antipodal pair of points) ಒಂದೇ "ಬಿಂದು"ವಾಗಿ ಪರಿಗಣಿಸೋಣ. ಗೋಳದ ಮೇಲೆ ಎಳೆಯಲ್ಪಟ್ಟ ಪ್ರತಿಯೊಂದು ಮಹಾವೃತ್ತ (Great circle) ವನ್ನು "ಸರಳರೇಖೆಯೆಂದು ತೆಗೆದುಕೊಳ್ಳೋಣ. ಹೀಗೆ ನಿರ್ಮಿಸಲ್ಪಟ್ಟ "ಬಿಂದು"ಗಳ ಮತ್ತು "ಸರಳರೇಖೆ"ಗಳ ಎರಡು ವ್ಯೂಹಗಳು ಯೂಕ್ಲಿಡನ ಮೊದಲ ನಾಲ್ಕು ಮೂಲ ತತ್ತ್ವಗಳನ್ನು ಅನುಸರಿಸುತ್ತವೆ. ಆದರೆ ಪಂಚಮ ಮೂಲತತ್ತ್ವವನ್ನು ವಿರೋಧಿಸುತ್ತವೆ. ಏಕೆಂದರೆ ಗೋಳದ ಮೇಲೆ ಎಳೆದ ಯಾವುದಾದರೂ ಎರಡು ಮಹಾ ವೃತ್ತಗಳು ಅಂದರೆ ನಮ್ಮ ಹೊಸ ಜ್ಯಾಮಿತಿಯ ಎರಡು "ಸರಳರೇಖೆಗಳು" ಒಂದು ಅಭಿಪಾದ ಬಿಂದುದ್ವಯದಲ್ಲಿ ಅಂದರೆ ಹೊಸ ಜ್ಯಾಮಿತಿಯ ಒಂದು "ಬಿಂದು"ವಿನಲ್ಲಿ ಛೇದಿಸುತ್ತವೆ. ಆದ್ದರಿಂದ ಈ ಹೊಸ ಜ್ಯಾಮಿತಿಯಲ್ಲಿ ಒಂದು ಬಿಂದುವಿನಲ್ಲಿ ಪಾತವಾಗಿರುವ ಮತ್ತು ಈ ಬಿಂದುವಿನಲ್ಲಿ

ಪಾತವಾಗದಿರುವ ಯಾವುದೇ "ಸರಳ ರೇಖೆಗೆ" ಸಮಾನಾಂತರವಾಗಿರುವ ಯಾವ "ಸರಳರೇಖೆ"ಯೂ ಇಲ್ಲ.

2. ಬೋಲ್ಯಾಯಿ – ಲೋಬಾಚೇವ್ಸ್ಕಿಯರ ಹೈಪರ್ಬೋಲಿಕ್ ಜಾಮಿತಿ (Bolyai-Lobatschevsky's hyperbolic Geometry): ಸಮತಲದಲ್ಲಿ ಒಂದು ವೃತ್ತವನ್ನು ತೆಗೆದುಕೊಳ್ಳೋಣ. "ಬಿಂದು"ಗಳಾಗಿ ವೃತ್ತದ ಒಳಗೆ ಮಾತ್ರವಿರುವ ಸಮತಲದ ಬಿಂದುಗಳನ್ನು ತೆಗೆದುಕೊಳ್ಳೋಣ. ತುದಿಬಿಂದು ಗಳನ್ನು (end points) ತೆಗೆಯಲಾದ ವೃತ್ತದ ಪ್ರತಿಯೊಂದು ಜ್ಯಾವನ್ನು (chord) "ಸರಳರೇಖೆ"ಯಾಗಿ ತೆಗೆದುಕೊಳ್ಳೋಣ. ಹೀಗೆ ರಚಿಸಲ್ಪಟ್ಟ "ಬಿಂದು" ಮತ್ತು "ಸರಳರೇಖೆ" ವ್ಯೂಹಗಳು ಯೂಕ್ಲಿಡನ ಮೊದಲ ನಾಲ್ಕು ಮೂಲ ತತ್ತ್ವ ಗಳನ್ನನುಸರಿಸುತ್ತವೆ. ಪಂಚಮತತ್ತ್ವ ಇಲ್ಲಿ ನಿಜವಾಗುವುದಿಲ್ಲ. ಏಕೆಂದರೆ (ಚಿತ್ರ 1): P ಒಂದು "ಬಿಂದು" ಆಗಿರಲಿ. P ನಲ್ಲಿ ಅಪಾತವಾಗದಿರುವ L ಯಾವುದೇ ಒಂದು "ಸರಳರೇಖೆ"ಯಾಗಿರಲಿ. L ನ್ನು ಛೇದಿಸುವಂತೆ P ನಲ್ಲಿ ಹಾದು ಹೋಗುವ ರೇಖೆ ಗಳು ಅಸಂಖ್ಯಾತವಾಗಿವೆ.

ಬೋಲ್ಯಾಯಿ, ಲೋಬಾಚೇವ್ಸ್ಕಿ ಮತ್ತು ಗೌಸರ ಈ ಪ್ರತಿಪಾದನೆಯನ್ನು ಗಣಿತಜ್ಞರು ಮೊದಮೊದಲು ತಿರಸ್ಕರಿಸಿದರು. ಅಷ್ಟೇ ಅಲ್ಲದೆ ಈ ಪ್ರತಿಪಾದನೆ ಯನ್ನು ಪ್ರಕಟಪಡಿಸಿದ್ದ ಬೋಲ್ಯಾಯಿ ಮತ್ತು ಲೋಬಾಚೇವ್ಸ್ಕಿ ಗಣಿತಜ್ಞರ ಅಪ ಹಾಸ್ಯಕ್ಕೀಡಾದರು. ಹೀಗಾಗುವುದೆಂದು ಪ್ರಾಯಶಃ ತಿಳಿದಿದ್ದ ಗೌಸನು ಈ ಪ್ರತಿ ಪಾದನೆಯ ಪ್ರಕಾಶನದ ಗೋಜಿಗೇ ಹೋಗಲಿಲ್ಲ.

ಆದರೆ ಕಾಲಕ್ರಮೇಣ ಈ ಪ್ರತಿಪಾದನೆಯ ಮಹತ್ವದ ಅರಿವು ಆಯಿತು. ಈ ಅರಿವಿಗೆ ಕಾರಣನಾದವನೆಂದರೆ ಜರ್ಮನಿ ದೇಶದ. ಗೌಸನ ಅನಂತರ ಬಂದು ಇಡೀ ಗಣಿತದಲ್ಲೇ ಒಂದು ದೊಡ್ಡ ಆಂದೋಳನವನ್ನುಂಟು ಮಾಡಿದ ಬೆರ್ನಾರ್ಡ್ ರೀಮಾನ್ (Bernard Riemam) ಮಹಾಶಯ. ತನ್ನ ಸಂಶೋಧನೆಗಳಿಂದ ಬೋಲ್ಯಾಯಿ. ಲೋಬಾಚೇವ್ಸಿ ಮತ್ತು ಗೌಸರ ಪ್ರತಿಪಾದನೆಯನ್ನು ಸತ್ಯ ವೆಂದು ಎತ್ತಿಹಿಡಿದುದಲ್ಲದೆ. ಗಣಿತಜ್ಞರು ಸಾಗುತ್ತಿದ್ದ ಹಾದಿಯನ್ನೇ ಈತನು ಬದಲಿ ಸಿದನು. ರೀಮಾನನ ಕಾಲದವರೆಗೆ ಗಣಿತ ಬಹುತೇಕ ಸ್ವಯಂ ಪ್ರಕಾಶವಾದ (intuitio-nism) ದ ಪರಿಯಂತೆ ಬೆಳೆಯುತ್ತಿತ್ತು. ರೀಮಾನ್. ಅವನ ನಂತರ ಬಂದ ಡೇವಿಡ್ ಹಿಲ್ಬರ್ಟ್ ಮತ್ತು ಫೀಲಿಕ್ಸ್ ಕ್ಲೈನ್ (Bernard Rieman, David Hilbert and Felix Klein) ಎಂಬ ಮತ್ತಿಬ್ಬರು ಜರ್ಮನ್ ಗಣಿತಜ್ಞರು ಗಣಿತ ವನ್ನು ಪೂರ್ಣವಾಗಿ "ಮೂಲ ತತ್ತ್ವದತ್ತ" ಮಾರ್ಗಕ್ಕೆ ತಂದರು. ಇಂದು ಗಣಿತದ ಯಾವುದೇ ಭಾಗವಾದರೂ ಈ ತಾರ್ಕಿಕ ಮಾರ್ಗಕ್ಕನುಗುಣವಾಗಿಯೇ ಇದೆ.

ಒಬ್ಬನು ತಪ್ಪಿತಸ್ಥನೆಂದು ಹೇಳುವುದು ಬಹಳ ಸುಲಭ. ಆದರೆ ಆತ ತಪ್ಪಿತಸ್ಥ ನಲ್ಲವೆಂದು ಪ್ರಮಾಣಮಾಡುವುದು ಬಹಳ ಕಷ್ಟದ ಕೆಲಸ. ಯೂಕ್ಲಿಡನು ಮತ್ತು ಅವನ ಜ್ಯಾಮಿತಿಯೇ ಇದಕ್ಕೆ ನಿದರ್ಶನ. ಗೌಸ್, ಬೋಲ್ಯಾಯಿ ಮತ್ತು ಲೋಬಾಚೇವ್ಸ್ಕಿ, ಈ ಮೂವರು ಯೂಕ್ಲಿಡನು ತನ್ನ ಮೂಲ ತತ್ವಗಳ ಆಯ್ಕೆಯಲ್ಲಿ ತಪ್ಪು ಮಾಡಿರಲಿಲ್ಲವೆಂದೂ, ಅವನ ಜ್ಯಾಮಿತಿಯು ನಿಜಕ್ಕೂ ಒಂದು ಅತ್ಯುನ್ನತ ಮಟ್ಟದ ಕಲಾಕೃತಿಯೆಂದೂ ಸಾರಿದುದಲ್ಲದೆ ಯೂಕ್ಲಿಡನ ಮಹತ್ವವನ್ನು ಹೊರಗೆಡವಿದರು. ಇದರಿಂದಾಗಿ ಗಣಿತದ ಇಡೀ ರೂಪರೇಖೆಗಳೇ ಬದಲಿಸಿದವು. ಅಷ್ಟೇ ಅಲ್ಲದೆ ಇಡೀ ವಿಜ್ಞಾನ ಜಗತ್ತಿನಲ್ಲಿಯೇ ಆಗಲಿ ತತ್ವಜ್ಞಾನದ ಜಗತ್ತಿನಲ್ಲಿಯೇ ಆಗಲಿ ಗಣಿತ ಅತ್ಯಂತ ಶ್ರೇಷ್ಠ ಸ್ಥಾನವನ್ನು ಪಡೆಯಿತು.

ಕೆಳದಿ ನಾಯಕರು ಮತ್ತು ಶೃಂಗೇರಿ ಗುರುಗಳು

ಸದ್ಯೋಜಾತ ಸ್ವಾಮಿಜಿ

ಶೃಂಗೇರಿಯ ಅದ್ವೈತ ಮಠವು ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಇಂದಿನವರೆಗೂ ಈ ಮಠದ ಗುರುಗಳು ಸಮಾಜಕ್ಕೆ ಬಹುಮುಖಿ ಸೇವೆಯನ್ನು ಸಲ್ಲಿಸುತ್ತ ಬಂದಿದ್ದಾರೆ. ಮಠಗಳೆಂದರೆ 'ಛಾತ್ರಾದಿ ನಿಲಯ' ಅರ್ಥಾತ್ ಧರ್ಮಶಾಲೆಗಳೆಂದು ಅಮರಸಿಂಹನು 'ಅಮರಕೋಶ'ದಲ್ಲಿ ತಿಳಿಸಿದ್ದಾನೆ. ಅಷ್ಟೇ ಅಲ್ಲದೆ ಮಠಗಳು ಅನ್ನದಾನ, ವಿದ್ಯಾದಾನ, ವಸ್ತ್ರದಾನ, ಔಷಧಿದಾನಗಳನ್ನೂ ಮಾಡಿವೆ. ಈ ರೀತಿ ಸಮಾಜೋದ್ಧಾರದ ಕೆಲಸಗಳನ್ನು ಮಾಡುತ್ತ ಕಾಲಕಾಲಕ್ಕೆ ಅನೇಕ ರಾಜಮನೆತನಗಳ ಅರಸರುಗಳಿಂದ ಮನ್ನಣೆಯನ್ನು ಪಡೆದ ಉಲ್ಲೇಖಗಳು ಶಾಸನಗಳಿಂದ, ಆ ಕಾಲದ ಸಾಹಿತ್ಯದಿಂದ ತಿಳಿದು ಬರುತ್ತದೆ. ಶೃಂಗೇರಿ ಮಠವು ಸಹ ಅನೇಕ ರಾಜಮನೆತನಗಳಿಂದ ಗೌರವಿಸಲ್ಪಟ್ಟಿದೆ. ಹಿಂದೂ ಧರ್ಮದ ರಕ್ಷಣೆಗಾಗಿಯೆ ರೂಪುಗೊಂಡ ವಿಜಯನಗರ ಸಾಮ್ರಾಜ್ಯವು ವಿದ್ಯಾರಣ್ಯರ ಅನುಗ್ರಹದ ಮೇರೆಗೆ ಸ್ಥಾಪಿಸಲ್ಪಟ್ಟಿತೆಂದು ಅನೇಕ ಐತಿಹಾಸಿಕ ಆಧಾರಗಳಿಂದ ತಿಳಿದು ಬರುತ್ತದೆ. ವಿದ್ಯಾರಣ್ಯರು ಶೃಂಗೇರಿ ಮಠದ ಗುರುಗಳಾಗಿದ್ದರು. ವಿದ್ಯಾಶಂಕರ ತೀರ್ಥರ ಕಾಲದಿಂದ ವಿಶೇಷವಾಗಿ ಪ್ರಾರಂಭವಾದ ಮಠದ ಸ್ಥಾನಮಾನಗಳನ್ನು ಕಾಪಾಡುವ ಹೊಣೆಯನ್ನು ವಿಜಯನಗರ ಅರಸರು ಹೊತ್ತರು. ಇದಕ್ಕೆ ಅವರು ಹಾಕಿಕೊಟ್ಟ ಅನೇಕ ದಾನ–ದತ್ತಿಗಳೇ ಸಾಕ್ಷಿ. ಅನಂತರ ಬಂದ ಕೆಳದಿ ನಾಯಕರು ತಮ್ಮ ವಿಜಯನಗರದ ಹಿರಿಯ ಅರಸರು ಹಾಕಿಕೊಟ್ಟ ಸರ್ವಧರ್ಮ ಸಮನ್ವಯದ ಧೋರಣೆಯನ್ನು ಅನುಸರಿಸಿದರು. ಕೆಳದಿ ಅರಸರು ವೀರಶೈವ ಧರ್ಮಾವಲಂಬಿಗಳಾದರೂ[1]. ಶೃಂಗೇರಿ ಮಠದ ಬಗ್ಗೆ ತೋರಿದ ಗೌರವ – ನಿಷ್ಠೆ ಪ್ರಶಂಸನೀಯವಾಗಿವೆ.

ಕೆಳದಿಯ ರಾಜಮನೆತನದ ಆಳ್ವಿಕೆಯು ಕ್ರಿ. ಶ. 1500 – 1763 ರ ವರೆಗೂ ಇದ್ದಿತು. ಅವರು ಮೊದಲು ಕೆಳದಿಯನ್ನು ರಾಜಧಾನಿಯನ್ನಾಗಿ ಅನಂತರ ಇಕ್ಕೇರಿ. ಬಿದನೂರು, ಭುವನಗಿರಿ ದುರ್ಗಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಆಳಿದರು. ಇವರ ಆಳ್ವಿಕೆಯಲ್ಲಿ ಎಲ್ಲ ಧರ್ಮಗಳೂ ಸಮಾನವಾಗಿ ಬಾಳಲು ಅವಕಾಶ ಮಾಡಿಕೊಟ್ಟರು. ಶೈವ – ವೀರಶೈವ ಧರ್ಮಗಳು ವಿಶೇಷವಾಗಿ ಮನ್ನಣೆ ಪಡೆದವು.

---

[1] **ಕೆಳದಿ ನೃಪ ವಿಜಯಂ, ಅಶ್ವಾಸ 1, 54**

ಈ ಧರ್ಮಗಳ ಧರ್ಮಸಂಸ್ಥೆಗಳಲ್ಲೊಂದಾದ ಮಠಗಳು ಬಹು ಪ್ರಾಮುಖ್ಯತೆಯನ್ನು ಪಡೆದವು. ಶೃಂಗೇರಿ ಮಠವು ನಾಯಕರ ಆಳ್ವಿಕೆಯಲ್ಲಿ ಹೊಸರೂಪವನ್ನು ಪಡೆಯಿತು. ನಾಯಕರ ಮತ್ತು ಶೃಂಗೇರಿ ಗುರುಗಳ ಮಧುರ ಸಂಬಂಧವನ್ನು ಅರಿಯಲು ಅನೇಕ ಆಧಾರಗಳಿವೆ. ಅವುಗಳಲ್ಲಿ ತಾಮ್ರ ಮತ್ತು ಶಿಲಾಶಾಸನಗಳು. ಬಿನ್ನಪ ಪತ್ರಗಳು. ಕಡತಗಳು ಬಹು ಮುಖ್ಯವು. ಇವುಗಳಲ್ಲದೆ ಲಕ್ಷ್ಮಣಶಾಸ್ತ್ರಿಗಳ 'ಗುರುವಂಶ ಕಾವ್ಯ'. ಲಿಂಗಣ್ಣ ಕವಿಯು 'ಕೆಳದಿ ನೃಪವಿಜಯಂ'. ಬಸವಪ್ಪನಾಯಕನ 'ಶಿವತತ್ವ ರತ್ನಾಕರ' ಗ್ರಂಥಗಳು ಈ ಬಗ್ಗೆ ವಿಶೇಷ ಮಾಹಿತಿಗಳನ್ನು ದೊರಕಿಸುತ್ತವೆ.

ಮೊದಲನೆ ವೆಂಕಟಪ್ಪನಾಯಕ (1586–1629) – ಶೃಂಗೇರಿ ಮಠ

ಸದಾಶಿವನಾಯಕನ ಕಾಲದಲ್ಲಿ (1540 – 1565) ಮಠದೊಡನೆಯ ಸಂಬಂಧ ಪ್ರಾರಂಭವಾಯಿತು.[2] ಆದಾಗ್ಯೂ ಮೊದಲನೆ ವೆಂಕಟಪ್ಪನಾಯಕನ ಕಾಲದಲ್ಲಿ ಪರಸ್ಪರ ಸೌಹಾರ್ದತೆ ಬೆಳೆಯಿತಲ್ಲದೆ. ಆತ್ಮೀಯ ಭಾವನೆಯು ಗಾಢವಾಯಿತು. ಈತನು ಅಂದಿನ ಶೃಂಗೇರಿ ಮಠದ ಗುರುಗಳಾಗಿದ್ದ ಶ್ರೀ ನರಸಿಂಹ ಭಾರತಿ(1599–1622) ಗಳನ್ನು ರಾಜಧಾನಿಗೆ ಆಮಂತ್ರಿಸಿ ಗೌರವಿಸಿದನು. ವೆಂಕಟಪ್ಪ ನಾಯಕನು ಶೃಂಗೇರಿ ಮಠವನ್ನು ವಿಸ್ತರಿಸಿದ್ದಲ್ಲದೆ. ಅಗ್ರಹಾರವನ್ನು ಸ್ಥಾಪಿಸಿ. ಐವತ್ತು ಪಗೋಡಗಳಿಗಿಂತಲೂ ಹೆಚ್ಚಿನ ಉತ್ಪತ್ತಿಯ ಮುಕ್ಕರನಾಡಿನ ಆಸ್ತಿಯನ್ನು ದಾನವಾಗಿ ಕೊಟ್ಟನು.[3] ಮಠದ ಆಸ್ತಿಯನ್ನು ಅತಿಕ್ರಮಿಸಿದ ಇತರರನ್ನು ಸದೆಬಡಿದು ಉತ್ಪನ್ನವನ್ನು ಸುವ್ಯವಸ್ಥಿತಗೊಳಿಸಿದನು.[4] ಇನ್ನೂ ಅನೇಕ ಧಾರ್ಮಿಕ ಕಾರ್ಯಗಳನ್ನು ಪ್ರೋತ್ಸಾಹಿಸಿದ್ದಲ್ಲದೆ. ಅನೇಕಸಾರಿ ಶೃಂಗೇರಿ ಗುರುಗಳನ್ನು ರಾಜಧಾನಿಗೆ ಆಹ್ವಾನಿಸಿ ಗೌರವಿಸಿದನು. ಅನೇಕ ಧಾರ್ಮಿಕ ಸಿದ್ಧಾಂತಗಳ ಮೇಲೆ ಚರ್ಚೆಗಳನ್ನು ಏರ್ಪಡಿಸಿ ಅದರಲ್ಲಿ ಗೆದ್ದ ಪಂಡಿತರನ್ನು ಸನ್ಮಾನಿಸಿದನು. ಈತನು 'ವಿಶಿಷ್ಟವೈದಿಕಾದ್ವೈತ ಸಿದ್ಧಾಂತ ಸ್ಥಾಪನಾಚಾರ್ಯ' ಎಂಬ ವಿಶೇಷ ಬಿರುದನ್ನು ಪಡೆದನು. ಈತನಿಗೆ ಶೃಂಗೇರಿ ಮಠವನ್ನು ಜೀರ್ಣೋದ್ಧಾರ ಮಾಡಿದ ಕೀರ್ತಿ ಸಲ್ಲುತ್ತದೆ.

ವೀರಭದ್ರನಾಯಕ (1629–1645)

ವೆಂಕಟಪ್ಪನಾಯಕನ ಕಾಲದಲ್ಲಿ ಕಳಸದ ಭೈರರಸನು ಕೆಳದಿ ರಾಜ್ಯದ ಕೆಲ ಭಾಗವನ್ನು ಆಕ್ರಮಿಸುತ್ತಾನೆ. ಅದರಲ್ಲಿ ಶೃಂಗೇರಿಯು ಸೇರಿರುತ್ತದೆ. ಈತನು ಮಠವನ್ನು ಅನೇಕ ಬಾರಿ ಲೂಟಿ ಮಾಡುತ್ತಾನೆ. ವೆಂಕಟಪ್ಪನಾಯಕನ ನಂತರ ಪಟ್ಟಕ್ಕೆ ಬಂದ ವೀರಭದ್ರನಾಯಕನು ಶೃಂಗೇರಿ ಗುರುಗಳಾದ ಸಚ್ಚಿದಾನಂದ ಭಾರತಿಗಳ

---

2 Ibid, ಆಶ್ವಾಸ 1, 58

3 EC VI, Sg 5, MAR, 1928 PP. 15 ff and Sg.R. 11

4 ಕೆಳದಿ ನೃಪವಿಜಯಂ, ಆಶ್ವಾಸ 5, 74

(1622–63) ಆಜ್ಞೆಯ ಮೇರೆಗೆ ಭೈರರಸನನ್ನು ಸೋಲಿಸಿದ್ದಲ್ಲದೆ, ಮಠದ ಎಲ್ಲಾ ಆಸ್ತಿಯನ್ನು ಹಿಂತಿರುಗಿ ಕೊಡಿಸಿ, ಮಠದ ರಕ್ಷಣೆಯ ಭಾರವನ್ನು ನಾಯಕನು ಹೊರುತ್ತಾನೆ.[5] ನಾಯಕನು ಗುರುಗಳ ಆಶಯದ ಮೇರೆಗೆ ಶೃಂಗೇರಿಯನ್ನು ಸಂದರ್ಶಿಸಿದಾಗ ಮಾಸಪ್ಪೊಟಿ ವೆಂಕಣ್ಣನು ಪುಟ್ಟಗುಪ್ಪೆಯ ಸಮೀಪ ನದಿಯ ದಂಡೆಯ ಮೇಲೆ ಕಟ್ಟಿಸಿದ ಮಠವನ್ನು ಗುರುಗಳಿಗೆ ಅರ್ಪಿಸಿದನು. ಇದೇ ಸಂದರ್ಭದಲ್ಲಿ ನಾಯಕನು ಚಾವಡಿಸೆಟ್ಟಿಕೊಪ್ಪ ದಾನವನ್ನು ಮತ್ತು ಅನ್ನ ಛತ್ರದ ಬಗ್ಗೆ ಒಂದು ವೃತ್ತಿಯನ್ನು ಸ್ಥಿರೀಕರಿಸಿ. ಗೋರುಗಡೆ ಗ್ರಾಮವನ್ನು ಗುರುಗಳಿಗೆ ದಾನವನ್ನಾಗಿ[6] ಕೊಟ್ಟನು. ತೀರ್ಥಹಳ್ಳಿಯ ಸ್ವಾಮಿಗಳು ಅನಧಿಕೃತವಾಗಿ ಬಿರುದುಗಳನ್ನು ದುರುಪಯೋಗಮಾಡಿಕೊಳ್ಳುತ್ತಿರುವರೆಂದು ಶೃಂಗೇರಿ ಗುರುಗಳಿಂದ ತಿಳಿದ ವೀರಭದ್ರನಾಯಕನು ಅದನ್ನು ನಿಲ್ಲಿಸಿದ್ದಲ್ಲದೆ ಶೃಂಗೇರಿ ಗುರುಗಳಿಗೆ ಇತರ ಸನ್ಯಾಸಿಗಳು ವಿಧೇಯತೆಯನ್ನು ತೋರಿಸಲು ಶೃಂಗೇರಿ ಗುರುಗಳಿಗೆ ಅಧಿಕಾರವಿದೆಯೆಂದು ಲಿಖಿತ ಮೂಲಕ ತಿಳಿಸಿದನು. ಇದಕ್ಕಾಗಿ ನಾಯಕನವರೆಗೂ ದೂರುಹೋಗಲು ಕಾರಣವಿಲ್ಲವೆಂದು ಸ್ಪಷ್ಟಪಡಿಸಿದನು.[7] ಕೂಡ್ಲಿ ಮಠದ ಸ್ವಾಮಿಗಳು ಹರಕೆರೆ ಮತ್ತು ಮಂಡಲಿ ಗ್ರಾಮಗಳನ್ನು ತಮ್ಮ ಅಧಿಕಾರಕ್ಕೆ ತೆಗೆದುಕೊಳ್ಳಲು ಬಿಜಾಪುರದ ಅಧಿಕಾರಿಗಳ ಮುಖಾಂತರ ಪ್ರಯತ್ನಿಸಿದರು. ಇದನ್ನು ತಿಳಿದ ನಾಯಕನು ಬಿಜಾಪುರದ ಅಧಿಕಾರಿಗಳಿಗೆ ಓಲೆ ಬರೆದು ಶೃಂಗೇರಿ ಗುರುಗಳ ಹಕ್ಕಿಗೆ ಭಂಗ ತರಬಾರದೆಂದು ವಿವರಿಸಿದನು.[8] ಈ ರೀತಿ ವೀರಭದ್ರನಾಯಕನು ಮಠದ ಸರ್ವತೋಮುಖದ ಪ್ರಗತಿಗಾಗಿ ಶ್ರಮಿಸಿ ಗುರುಗಳ ಕರುಣೆಗೆ ಪಾತ್ರನಾದನು.

ಶಿವಪ್ಪನಾಯಕ 1646–1661

ಈತನು ಮಠಕ್ಕೆ ಸಲ್ಲಿಸಿದ ಸೇವೆ ಅಪಾರ. ಈತನು ಮಠದ ಭೂಮಿಯನ್ನು ಸುವ್ಯವಸ್ಥಿತಗೊಳಿಸಿ. ಅದರ ಆದಾಯವು ಹೆಚ್ಚುವಂತೆ ಮಾಡಿದನು. ನಾಯಕನು ಗುರುಗಳ ಅಪ್ಪಣೆ ಮೇರೆಗೆ ಮಠದ ಆಸ್ತಿಯನ್ನು ಅಪಹರಿಸಿದವರ ಮತ್ತು ಗೇಣಿ ಕೊಡದೆ ಇದ್ದ ಮಂಗಳೂರು ಸೀಮೆಯವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಂಡನು. ಅವರನ್ನು ಕರೆಯಿಸಿ, ವಿಚಾರಿಸಿ ಯಥಾಸ್ಥಿತಿಯಲ್ಲಿ ಹಿಂದಿನ ಗೇಣಿಯನ್ನು ಕೊಡುವಂತೆ

---

5 MAR, 1928, P. 18
[ಕೆಳದಿ ನೃಪವಿಜಯದಲ್ಲಿ ಮಠದ ಮೇಲಿನ ಆಕ್ರಮಣ ವೆಂಕಟಪ್ಪನ ಕಾಲದಲ್ಲಿ ಎಂದೂ, ಗುರುವಂಶ ಕಾವ್ಯದಲ್ಲಿ ವೀರಭದ್ರನಾಯಕನ ಕಾಲದಲ್ಲಿ ಎಂದೂ ವಿವರಿಸಲಾಗಿದೆ. ಕಾರ್ಕಳದ ಅರಸರು ಮಠದ ಬಗ್ಗೆ ಗೌರವ ತೋರಿಸಿದ ಉಲ್ಲೇಖಗಳಿವೆ. ಆದಾಗ್ಯೂ ಈ ಘಟನೆಯನ್ನು ತಳ್ಳಿಹಾಕುವಂತಿಲ್ಲ.]

6 MAR, 1933, No. 28.

7 Ibid, 1916, p. 65.

8 Ibid. ,, ,,

ಮಾಡಿ ಇದೇ ರೀತಿ ಮುಂದೂ ನಡೆಯಬೇಕೆಂದು ಕಟ್ಟಪ್ಪಣೆ ಮಾಡಿಸಿದನು.[9] ಹಿಂದೆ ಪರಿಹರನು ಮಠದ ಧರ್ಮಕ್ಕೋಸ್ಕರ ಬಿಟ್ಟುಕೊಟ್ಟ ಸೀಮೆಯಲ್ಲಿ ತತ್ಕಾಲಾನು ಗುಣವಾಗಿ ಅವಶ್ಯಕತೆ ಕಂಡುಬಂದಂತೆ ಶಿಸ್ತನ್ನು ಏರ್ಪಡಿಸಿದನು.[10] ಕಾರಕಳದ ಹೋಬಳಿ ವಕ್ಕಲು ಬಿಟ್ಟು ಶೃಂಗೇರಿಗೆ ಹೋದವರನ್ನೆಲ್ಲಾ ಕರೆತರಿಸತಕ್ಕದೆಂದು ಆಜ್ಞೆ ಹೊರಡಿಸಿದನು.[11] ಶೃಂಗೇರಿ ಗುರುಗಳು ಮಠದ ಧರ್ಮಕ್ಕೆ ಕೆಲವು ಪೂರ್ವ ಪ್ರಮಾಣದ ಗ್ರಾಮಗಳ ಉತ್ತಾರ ವಿಷಯ ಬರೆಸಿದ ಆಶೀರ್ವಾದ ಓಲೆಯ ಮೇಲೆ ಹೊಳೆಹೊನ್ನೂರು ಮತ್ತು ಇತರ ಪ್ರಾಂತಗಳಿಂದ ಬರುವ 133 ಪಗೋಡಗಳಿಗಿಂತಲೂ ಹೆಚ್ಚು ಮೌಲ್ಯವನ್ನು ಕಟ್ಟು ಮಾಡಿಸಿ ಶಿವಾರ್ಪಿತವಾಗಿ ಮಠಕ್ಕೆ ದಾನಕೊಟ್ಟನು.[12]

ಇಮ್ಮಡಿ ಭದ್ರಪ್ಪನಾಯಕ (1662 – 1664)

ಭದ್ರಪ್ಪ ನಾಯಕನು ತನ್ನ ಪೂರ್ವಜರಂತೆ ಶೃಂಗೇರಿ ಮಠದ ಬಗ್ಗೆ ಅತೀವ ಗೌರವವನ್ನು ಹೊಂದಿದ್ದನು. ಮೊದಲೇ ರದ್ದಾಗಿ ರಾಜ್ಯಕ್ಕೆ ವಾಪಸು ಬಂದಿದ್ದ ಸುಮಾರು ನಾಲ್ಕುನೂರ ಅರವತ್ತು ಪಗೋಡ ಮೌಲ್ಯದ ಕೆರೆಹಳ್ಳಿ ಮತ್ತು ಗವತೂರು ಗ್ರಾಮ ಗಳನ್ನು ಮಠಕ್ಕೆ ತಿರುಗಿ ಕೊಡುವಂತೆ ಆದೇಶ ನೀಡಿದನು.[13] ಈತನು ಶೃಂಗೇರಿ ಮತ್ತು ಸುತ್ತಮುತ್ತಲಿನ ಕ್ಷೇತ್ರಗಳನ್ನು ಸಂದರ್ಶಿಸಿ, ಅಲ್ಲಿಯ ದೇವಸ್ಥಾನಗಳ ಪೂಜೆಯ ನಿಮಿತ್ತ ಭೂಸ್ವಾಸ್ಥೆಗಳನ್ನು ದಾನವಾಗಿ ಬಿಟ್ಟು ನಿರಂತರವಾಗಿ ಅದರ ಉಪಯೋಗ ಆಗುವಹಾಗೆ ಕಟ್ಟು ಮಾಡಿದನು.[14].

ಸೋಮಶೇಖರನಾಯಕ (1664 – 1675)

ಮತ್ತು

ರಾಣಿ ಚೆನ್ನಮ್ಮಾಜಿ (1671 – 1696) .

ಸೋಮಶೇಖರನಾಯಕನು ಸಹ ತನ್ನ ಅತ್ಯಂತ ಗೌರವ, ಭಕ್ತಿಯ ಸಂಕೇತವಾಗಿ ಅನೇಕ ಬಿನ್ನಹ ಪತ್ರಗಳನ್ನು ಗುರುಗಳಿಗೆ ಬಿನ್ನವಿಸಿಕೊಂಡಿದ್ದಾನೆ. ಶೃಂಗೇರಿ ಗುರುಗಳಿಗೆ ಬಿನ್ನಹ ಪೂರ್ವಕ ಅರಿಕೆಮಾಡಿಕೊಂಡು. ಮಠದ ವಿಚಾರವೇನಿದ್ದರೂ ಗುರುಗಳೇ ವಿಚಾರಿಸಿ ತಪ್ಪಿತಸ್ಥರಿಗೆ ಬುದ್ಧಿಯ ಹೇಳಿಸಿ, ಹೊರಡಿಸುವಂಥವರನ್ನು ಹೊರಡಿಸಿ, ಅಪ್ಪಂಥಾ ಮನುಷ್ಯರ ಬದುಕಿಸಿ ಕಟ್ಟುಮಾಡಿಸಬೇಕಾಗಿ ಎಂದು ಬರೆದಿದ್ದ.[15] ಅದೇ

---

9 Sg. R. 13

10 Ibid 12

11 Ibid 14

12 Ibid, 15

13 Ibid, 16, MAR 1916, p 67

14 ಕೆಳದಿ ನೃಪವಿಜಯಂ, ಆಶ್ವಾಸ 8, 34

15 Sg. R. 17

ಗುರುಗಳಿಗೆ ದೀಪಾವಳಿ ಹಬ್ಬದ ಸಂಬಂಧ ಉಡುಗರೆ ಕಳುಹಿಸಿದ್ದುದು ಅವರ ಬಗ್ಗೆ ಆತನಿಗಿದ್ದ ಅತೀವ ಭಕ್ತಿಯ ಸಂಕೇತ.[16] ಮರೆಹಳ್ಳಿ ಗ್ರಾಮದಲ್ಲಿ ಪ್ರಾಕು ಬಿಟ್ಟಿದ್ದ 300 ವರಹದ ಮೌಲ್ಯದ ಆಸ್ತಿಯನ್ನು ಚಂದ್ರಮೌಳೀಶ್ವರ[17] ಹಾಗೂ ಶಾರದಾಂಬಾ ದೇವರ ಪೂಜೆಗೋಸ್ಕರ ದಾನವನ್ನು ದೃಢೀಕರಿಸಿದನು. ಪತಿಯ ಧಾರ್ಮಿಕ ಧೋರಣೆ ಯನ್ನು ಅನುಸರಿಸಿದ ರಾಣಿ ಚೆನ್ನಮ್ಮಾಜಿಯು ಶೃಂಗೇರಿ ಮಠಕ್ಕೆ ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾಳೆ. ಮಠಕ್ಕೆ ಸರ್ವಮಾನ್ಯವಾಗಿ ಮುಕ್ಕರನಾಡಿನಲ್ಲಿ ಬಿಟ್ಟ ಗ್ರಾಮಗಳಿಂದ ಹಣಕಾಸು ವಸೂಲು ಮಾಡಲಾಗುತ್ತದೆಂಬ ವಿಷಯ ತಿಳಿದ ಕೂಡಲೆ ಅದನ್ನು ರದ್ದುಪಡಿಸುವ ಆಜ್ಞೆಯನ್ನು ಹೊರಡಿಸಿದಳು. ಧರ್ಮದ ವಿಷಯದಲ್ಲಿ ಆ ರೀತಿ ಆಗಬಾರದೆಂದು ಕಟ್ಟಪ್ಪಣೆ ಮಾಡಿದಳಲ್ಲದೆ ಆ ಗ್ರಾಮಗಳು ನಿರುಪದ್ರವದಲ್ಲಿ ನಡೆವ ರೀತಿ ಮಾಡಿಸಿದಳು.[18] ಅಷ್ಟಲ್ಲದೆ ಮಠದ ಧರ್ಮಕ್ಕೆ ತಂದಂತಹ ಜಿನಸಿಗೆ ಸುಂಕ ಕೇಳದ ರೀತಿ ಕಟ್ಟು ಮಾಡಿಸಿ. ಮಠದ ಉಪಯೋಗದ ಬಗ್ಗೆ ಕೊಂಡು ಕೊಂಡ ಸಾಮಾನುಗಳ ಮೇಲೆ ಸುಂಕವನ್ನು ವಸೂಲು ಮಾಡಬಾರದೆಂಬುದಾಗಿ ತನ್ನ ಅಧಿಕಾರಿ ಗಳಿಗೆ ತಿಳಿಸಿದಳು.[19] ರಾಣಿಯು ತನ್ನ ದತ್ತು ಪುತ್ರ ಬಸವಪ್ಪನಾಯಕನಿಗೆ ನೀಡಿದ ಉಪದೇಶದಲ್ಲಿ ಶೃಂಗೇರಿ ಮಠದ ಅದ್ವೈತ ಸಿದ್ಧಾಂತದ ಸತ್ಯವನ್ನು ಸಾಧಿಸು ಎಂದು ಹೇಳಿದ ಮಾತುಗಳು ಆಕೆಯ ಶೃಂಗೇರಿ ಗುರುಗಳ ಬಗ್ಗೆ ಇದ್ದ ಅಚಲ ಭಕ್ತಿಯ ಕುರುಹು.

ಮೊದಲನೆ ಬಸವಪ್ಪನಾಯಕ (1696 – 1714).

'ಶಿವತತ್ವ ರತ್ನಾಕರ' ಎಂಬ ಉದ್ಗ್ರಂಥದ ಕರ್ತೃವಾದ ಬಸವಪ್ಪನಾಯಕನು ಸಹ ತನ್ನ ತಾಯಿಯು ಹಾಕಿಕೊಟ್ಟ ಸನ್ಮಾರ್ಗದಲ್ಲೇ ನಡೆದನು. ಈತನು ಸ್ವತಃ ದೊಡ್ಡ ವಿದ್ವಾಂಸನಾಗಿದ್ದು, ಅನೇಕ ಕವಿಗಳಿಗೆ ಪ್ರೋತ್ಸಾಹವಿತ್ತನು. ಶೃಂಗೇರಿ ಮಠದ ಬಗ್ಗೆ ಬಹು ಗೌರವದಿಂದ ನಡೆದುಕೊಂಡನು. ತನ್ನ ಗ್ರಂಥದಲ್ಲಿ ಮಠದ ಬಗ್ಗೆ ಇದ್ದ ತಮ್ಮ ಮನೆತನದ ಸಂಬಂಧವನ್ನು ವಿವರಿಸಿದ್ದಾನೆ. ಶೃಂಗೇರಿ ಗುರುಗಳಿಂದ ಆಚಾರ. ವಿಚಾರ ಮಠಕ್ಕೆ ಬಾಹ್ಯ ಮರ್ಯಾದೆ ಮುಂತಾಗಿ ನಡೆವಂತಹವರನ್ನು. ಅವರ ಬಗೆಯವರು ಬಂದು ಹೇಳಿದಲ್ಲಿ ಹಾಗಿದ್ದವರ ಕರೆಸಿ. ಅವರು ನಿಯಮ ಮಾಡಿದ ಪ್ರಕಾರಕ್ಕೆ ನಡೆದು ಕೊಳ್ಳುವಹಾಗೆ ಕಟ್ಟು ಮಾಡಿಸುವುದಾಗಿ ತನ್ನ ಅಧಿಕಾರಿಗಳಿಗೆ ಅನೇಕ ನಿರೂಪ ಓಲೆಗಳನ್ನು ಹೊರಡಿಸಿದನು.[20]

---

16 Sg. R. 19

17 Ibid 18

18 Ibid, 20

19 Ibid, 21

20 Ibid, 22, 23, 24 25, 26

ಇಮ್ಮಡಿ ಸೋಮಶೇಖರನಾಯಕ (1714 – 1739)

ಶೃಂಗೇರಿ ಗುರುಗಳಾಗಿದ್ದ ಸಚ್ಚಿದಾನಂದ ಭಾರತಿಗಳು ಬಿದನೂರಿಗೆ ದಯಮಾಡಿಸಿದಾಗ ಈತನು ತನ್ನ ತಾಯಿಯು ಶೃಂಗೇರಿಯಲ್ಲಿಯ ದೇವಸ್ಥಾನಗಳಲ್ಲಿ ದೀಪಗಳ ಬಗ್ಗೆ ಬಿಟ್ಟುಕೊಟ್ಟ ದತ್ತಿಯನ್ನು ದೃಢೀಕರಿಸಿದನು.[21] ನಾಯಕನು ಮಠದ ಆಜ್ಞೆಗಳು ದೂರದಲ್ಲಿರುವ ಹಳ್ಳಿಗಳಲ್ಲಿ ಆಚರಣೆಗೆ ಬರುವಂತೆ ಸಹಾಯಮಾಡಿ. ಶೃಂಗೇರಿ ಮಠದಿಂದ ಬರುವ ಜಿನಸಿಗೆ ನವರಾತ್ರಿ ಉತ್ಸವದಲ್ಲಿ ಸ್ಥಳ–ಪರಸ್ಥಳದವರು ಕೊಡುವ ತೆರಿಗೆ ಸುಂಕವನ್ನು ಶಾರದಾಮ್ಮನವರ ಸೇವೆಗೆ ಶಿವಾರ್ಪಿತವಾಗಿ ಬಿಟ್ಟು ಕೊಟ್ಟನು.[22]

ರಾಣಿ ವೀರಮ್ಮಾಜಿ (1757 – 1763).

ಇಮ್ಮಡಿ ಸೋಮಶೇಖರನ ನಂತರ ಆಳಿದ ಇಮ್ಮಡಿ ಬಸವಪ್ಪನಾಯಕ (1739 – 1755) ಚೆನ್ನಬಸವಪ್ಪನಾಯಕ (1755 – 1757)ರು ಸಹ ಶೃಂಗೇರಿ ಮಠದ ಸಂಬಂಧ ಉದಾರ ಬುದ್ಧಿಯಿಂದ ನಡೆದು ಕೊಂಡರು. ರಾಣಿ ವೀರಮ್ಮಾಜಿಯು ಶೃಂಗೇರಿ ಮಠಾಧಿಪತಿಗಳಾಗಿದ್ದ ಅಭಿನವ ಸಚ್ಚಿದಾನಂದ ಭಾರತಿಗಳನ್ನು ರಾಜಧಾನಿಗೆ ದಯಮಾಡಿಸಿಕೊಂಡು ಅವರನ್ನು ಸತ್ಕರಿಸಿ ಸ್ಫಟಿಕಲಿಂಗ, ರತ್ನ ಖಚಿತ ಕೃಷ್ಣನ ವಿಗ್ರಹ ಮತ್ತು ಮುನ್ನೂರು ಪಗೋಡಗಳ ಬೆಲೆಯ ಆಸ್ತಿಯನ್ನು ಅರ್ಪಿಸಿದಳು.[23]

ಈ ರೀತಿ ಸುಮಾರು ಎರಡು ಶತಮಾನಗಳ ಕಾಲ ಕೆಳದಿ ನಾಯಕರ ಮತ್ತು ಶೃಂಗೇರಿ ಮಠದ ಸಂಬಂಧ ಅನ್ಯೋನ್ಯವಾಗಿ ಬೆಳೆದುಕೊಂಡು ಬಂದಿತು. ನಾಯಕರು ವೀರಶೈವರಾದರೂ. ಈ ಶೈವ ಮಠಕ್ಕೆ ಸಲ್ಲಿಸಿದ ಸೇವೆ ಮತ್ತು ಕೊಟ್ಟ ದಾನ ದತ್ತಿಗಳಿಂದ ಅವರ ಧರ್ಮ ವಿಶಾಲತೆಯ ಗುಣಗಳನ್ನು ಕಾಣಬಹುದು. ಅಷ್ಟೇ ರೀತಿಯಿಂದಲೂ ಮಠದ ಗುರುಗಳು ನಾಯಕರ ಬಗ್ಗೆ ಅಭಿಮಾನದಿಂದ ನಡೆದು ಕೊಂಡಿದ್ದಾರೆ. ಆಗಿಂದಾಗ್ಗೆ ರಾಜಧಾನಿಗೆ ಆಗಮಿಸಿ ಅವರಿಗೆ ಧಾರ್ಮಿಕ ಬೋಧೆಯನ್ನು ನೀಡಿದ್ದಾರೆ. ಗುರುಗಳ ಮತ್ತು ನಾಯಕರ ಸಂಬಂಧದ ಅವಲಂಬನೆ ಮತ್ತು ಅನ್ಯೋನ್ಯತೆಯ ಬಗ್ಗೆ ಅನೇಕ ಉದಾಹರಣೆಗಳಿವೆ. ಇಮ್ಮಡಿ ಬಸವಪ್ಪನಾಯಕನಿಗೆ ಶೃಂಗೇರಿ ಗುರುಗಳಾಗಿದ್ದ ಸಚ್ಚಿದಾನಂದ ಭಾರತಿ (1705 – 1741) ಗಳು ಬರೆದ ಓಲೆಯಲ್ಲಿ ತಮ್ಮ ಅನಾರೋಗ್ಯದ ಬಗ್ಗೆ ಬರೆದು ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವಂತೆ ಬರೆದಿದ್ದಾರೆ. ಇದು ಧಾರ್ಮಿಕ ರಾಜಕೀಯ ಕ್ಷೇತ್ರಗಳ ಸುಮಧುರ ಸಂಬಂಧದ ಅವಲಂಬನೆಯ ಅವಶ್ಯಕತೆಯನ್ನು ವ್ಯಕ್ತಪಡಿಸುತ್ತದೆ. ಒಟ್ಟಾಗಿ ಕೆಳದಿ ನಾಯಕರು ಶೃಂಗೇರಿ ಮಠಕ್ಕೆ ಸಲ್ಲಿಸಿದ ಸಕಾಲಿಕ ಸೇವೆ ಮಠದ ಮತ್ತು ಧಾರ್ಮಿಕ ಇತಿಹಾಸದಲ್ಲಿ ಬಹು ಪ್ರಾಮುಖ್ಯತೆಯನ್ನು ಪಡೆದಿದೆ.

---

21 Ibid, 27, MAR, 1916, P. 68

22 Sg.R. Nos. 28, 29

23 ಕೆಳದಿನೃಪ ವಿಜಯಂ, ಆಶ್ವಾಸ 12, 5

ಸೌರ ವಿದ್ಯುತ್ಕೋಶಗಳು
(ಸೋಲಾರ್ ಬ್ಯಾಟರಿಗಳು)

ಕೆ. ನಾಗರಾಜನ್

ಖಗೋಳ ವಿಜ್ಞಾನಿಗಳು ಅಂತರಿಕ್ಷದಲ್ಲಿ ರಾಕೆಟ್ ಅಥವಾ ಗಗನ ನೌಕೆಗಳನ್ನು ಹಾರಿಸಿ, ಸಂಶೋಧನೆಗಳನ್ನು ನಡೆಸುತ್ತಿರುವುದು ಸರ್ವರಿಗೂ ವೇದ್ಯವಾದ ವಿಷಯವೇ. ಭೂಮಿಯ ಹೊರ ವಲಯದಿಂದ ಸಾವಿರಾರು ಮೈಲಿಗಳ ದೂರ ಸಂಚರಿಸುವ ಈ ರಾಕೆಟ್‌ಗಳಲ್ಲಿ ಜೋಡಿಸಿರುವ ಅನೇಕ ಯಂತ್ರಗಳು ಕೆಲಸ ಮಾಡಲು ವಿದ್ಯುಚ್ಛಕ್ತಿಯ ನೆರವು ಅತ್ಯವಶ್ಯಕ. ಈ ರಾಕೆಟ್‌ಗಳಲ್ಲಿ ಬೇಕಾಗುವ ವಿದ್ಯುಚ್ಛಕ್ತಿಯನ್ನು ಹೇಗೆ ಪಡೆಯುತ್ತಾರೆ ಎಂಬುದು ಕುತೂಹಲಕಾರಿಯಾದ ಪ್ರಶ್ನೆ. ಇವಕ್ಕಾಗಿ ವಿಜ್ಞಾನಿಗಳು ಅನೇಕ ರೀತಿಯ ವಿದ್ಯುತ್ಕೋಶಗಳನ್ನು ಬಳಸುತ್ತಾರೆ. ಕೆಲವು ವಿದ್ಯುತ್ಕೋಶಗಳಲ್ಲಿ ಅನೇಕ ರಾಸಾಯನಿಕ ವಸ್ತುಗಳನ್ನೂ ಇನ್ನು ಕೆಲವು ಕೋಶಗಳಲ್ಲಿ ಒಂದು ಮೂಲ ವಸ್ತುವಿನ ಸಮಸ್ಥಾನಿ(ಐಸೋ ಟೋಪು)ಗಳನ್ನೂ ಉಪಯೋಗಿಸುತ್ತಾರೆ. ಆದರೆ ದಿನವಿಡೀ ಸೂರ್ಯನಿಂದ ಹೊರಚೆಲ್ಲುತ್ತಿರುವ ಶಕ್ತಿಯನ್ನು ಉಪಯೋಗಿಸಿ ಕೊಂಡು ವಿದ್ಯುತ್ತನ್ನು ಪಡೆಯುವ ವಿಧಾನವನ್ನು ಮೊಟ್ಟಮೊದಲಿಗೆ ಅಮೆರಿಕಾದ ಬೆಲ್ ಟೆಲಿಫೋನ್ ಪ್ರಯೋಗ ಶಾಲೆಯ ವಿಜ್ಞಾನಿಗಳು ಇತ್ತೀಚೆಗೆ ಅಂದರೆ ಸುಮಾರು 1954 ರಲ್ಲಿ ಕಂಡುಹಿಡಿದರು. ಈ ಕೋಶಗಳೇ "ಸೌರ ವಿದ್ಯುತ್ಕೋಶ" ಅಥವಾ "ಸೋಲಾರ್ ಬ್ಯಾಟರಿಗಳು" ಎಂದು ಪ್ರಸಿದ್ಧಿ ಪಡೆದಿವೆ.

ಈ ಸೌರ ವಿದ್ಯುತ್ಕೋಶಗಳನ್ನು ರಾಕೆಟ್‌ಗಳ ಹೊರ ಗೋಡೆಗಳ ಮೇಲೆ ಜೋಡಿಸಿ, ಸೂರ್ಯನ ಕಿರಣಗಳು ಅವುಗಳ ಮೇಲೆ ಬಿದ್ದಾಗ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಒಳಗಿನ ಕೆಲಸ ಕಾರ್ಯಗಳಿಗೆ ವಿನಿಯೋಗಿಸುತ್ತಾರೆ. ಈ ಸೌರ ವಿದ್ಯುತ್ಕೋಶಗಳನ್ನು ವಿಶೇಷವಾಗಿ ಖಂಡ ವಿದ್ಯುದ್ವಾಹಕಗಳು ಅಥವಾ ಸೆಮಿ ಕಂಡಕ್ಟರುಗಳೆಂಬ ವಸ್ತುಗಳಿಂದ ತಯಾರಿಸುತ್ತಾರೆ.

ವಿದ್ಯುತ್‌ಪ್ರವಾಹನಿರೋಧಕಶಕ್ತಿಯು (Resistance) ಕೆಲವು ವಸ್ತುಗಳು ಅಂದರೆ ವಿದ್ಯುದ್ವಾಹಕ (Conductors) ಗಳಲ್ಲಿ ಕಡಿಮೆಯಾಗಿಯೂ. ವಿದ್ಯುತ್ ನಿರೋಧಕ (Insulator) ಗಳಲ್ಲಿ ಹೆಚ್ಚಾಗಿಯೂ ಇರುತ್ತದೆ. ಈ ನಿರೋಧ ಶಕ್ತಿಯು ಅಷ್ಟು ಹೆಚ್ಚೂ ಇಲ್ಲದ. ಅಷ್ಟು ಕಡಿಮೆಯೂ ಇಲ್ಲದ ವಸ್ತುಗಳಿಗೆ

ಖಂಡ ವಿದ್ಯುದ್ವಾಹಕ (Semi Conductors) ಗಳು ಎನ್ನುತ್ತಾರೆ. ಮುಖ್ಯವಾಗಿ ಸಿಲಿಕಾನ್, ಜೆರ್ಮೇನಿಯಂ, ತಾಮ್ರದ ಆಕ್ಸೈಡ್ ಮುಂತಾದುವು ಈ ಜಾತಿಗೆ ಸೇರಿದ ವಸ್ತುಗಳು.

ಸಾಮಾನ್ಯವಾಗಿ ಈ ಖಂಡ ವಿದ್ಯುದ್ವಾಹಕಗಳಲ್ಲಿ ಋಣ ವಿದ್ಯುತ್ತನ್ನು ಪಡೆದಿರುವ ಎಲೆಕ್ಟ್ರಾನುಗಳೂ ಮತ್ತು ಧನ ವಿದ್ಯುತ್ತನ್ನು ಪಡೆದಿರುವ ರಂಧ್ರ (Holes) ಅಥವಾ ಹೋಲ್‌ಗಳೂ ವಿದ್ಯುತ್ ಪ್ರವಾಹಕ್ಕೆ ಕಾರಣವಾಗುತ್ತವೆ. ಎಲೆಕ್ಟ್ರಾನ್‌ಗಳು ತಮ್ಮ ಸ್ಥಳದಿಂದ ಹೊರಬಂದಾಗ ಉಂಟಾದ ಖಾಲಿ ಸ್ಥಳಗಳಿಗೆ ರಂಧ್ರ ಅಥವಾ ಹೋಲ್ ಗಳೆನ್ನುತ್ತಾರೆ. ಇವುಗಳನ್ನು ಧನವಿದ್ಯುತ್ (Positive Charge) ಪಡೆದಿರುವ ಕಣ ಗಳೆಂದು ಕರೆಯಬಹುದು. ಖಂಡವಿದ್ಯುದ್ವಾಹಕಗಳಲ್ಲಿ ಎರಡು ವಿಧಗಳಿವೆ. ಅವು ಯಾವು ವೆಂದರೆ n-ರೀತಿಯ ಸೆಮಿಕಂಡಕ್ಟರುಗಳು ಮತ್ತು p-ರೀತಿಯ ಸೆಮಿಕಂಡಕ್ಟರುಗಳು ಎಂದು. ಮೊದಲನೆ ರೀತಿಯ ವಸ್ತುಗಳಲ್ಲಿ ಎಲೆಕ್ಟ್ರಾನ್‌ಗಳಿಂದಲೇ ಪ್ರಮುಖವಾಗಿ ವಿದ್ಯುತ್ ಪ್ರವಾಹವುಂಟಾಗುತ್ತದೆ. ಎರಡನೇ ರೀತಿಯ ವಸ್ತುಗಳಲ್ಲಿ ರಂಧ್ರಗಳಿಂದ ವಿದ್ಯುತ್ ಪ್ರವಾಹವುಂಟಾಗುತ್ತದೆ.

ರಂಜಕ, ಆಂಟಿಮನಿ, ಆರ್ಸೆನಿಕ್ ಮುಂತಾದ ವಸ್ತುಗಳ ಅಣುಗಳನ್ನು ಶುದ್ಧ ಸಿಲಿಕಾನ್ ಅಥವಾ ಜೆರ್ಮೇನಿಯಂ ಅಣುಗಳಿಗೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸಿದರೆ n-ರೀತಿಯ ಖಂಡವಿದ್ಯುದ್ವಾಹಕಗಳುಂಟಾಗುತ್ತವೆ. ಅದೇ ರೀತಿಯಲ್ಲಿ ಬೋರಾನ್, ಅಲ್ಯುಮಿನಿಯಂ ಮುಂತಾದ ವಸ್ತುಗಳನ್ನು ಶುದ್ಧ ಸಿಲಿಕಾನ್‌ಗೆ ಬೆರಸುವುದರಿಂದ— p-ರೀತಿಯ ಖಂಡವಿದ್ಯುದ್ವಾಹಕಗಳನ್ನು ಪಡೆಯಬಹುದು. n-ರೀತಿಯ ಖಂಡ ವಿದ್ಯುದ್ವಾಹಕಗಳಲ್ಲಿ ಎಲೆಕ್ಟ್ರಾನ್‌ಗಳು ಹೆಚ್ಚಾಗಿಯೂ, p-ರೀತಿಯವುಗಳಲ್ಲಿ ರಂಧ್ರಗಳು ಹೆಚ್ಚಾಗಿಯೂ ಇರುತ್ತವೆ. ಈ 'p ಮತ್ತು n ರೀತಿಯ ಖಂಡವಿದ್ಯುದ್ವಾಹಕಗಳನ್ನು ಒಂದನ್ನೊಂದು ಕೂಡಿಸಿದಾಗ, p-n ಸಂಧಿ' ಅಥವಾ p-n Junction ಉತ್ಪತ್ತಿಯಾಗುತ್ತದೆ. ಈ p-n Junction ನ್ನು ತಯಾರಿಸಲು ಅನೇಕ ವಿಧಾನಗಳಿವೆ. ಸೌರ ವಿದ್ಯುತ್ಕೋಶಗಳ ತಯಾರಿಕೆಯಲ್ಲಿ ಈ 'p-n ಸಂಧಿ'ಗಳು ಉನ್ನತ ಪಾತ್ರ ವಹಿಸುತ್ತವೆ.

ಈ ಎರಡು ರೀತಿಯ ಖಂಡವಾಹಕಗಳನ್ನು ಒಂದನ್ನೊಂದು ಜೋಡಿಸಿದಾಗ, ಎಲೆಕ್ಟ್ರಾನ್‌ಗಳು n-ಖಂಡವಾಹಕ (n type semi conductor) ದಿಂದ p-ಖಂಡ ವಾಹಕದ ಕಡೆಗೂ, ಮತ್ತು ರಂಧ್ರಗಳು p-ಕಡೆಯಿಂದ n-ಕಡೆಗೂ ಚಲಿಸಲು ಪ್ರಾರಂಭಿಸುತ್ತವೆ.

ನಂತರ ಈ ಎರಡು ವಾಹಕಗಳ ಮಧ್ಯೆ, ಎಲೆಕ್ಟ್ರಾನ್ ಮತ್ತು ರಂಧ್ರಗಳಿಂದ ಕೂಡಿದ ಒಂದು ಗೋಡೆ (Barrier) ನಿರ್ಮಿತವಾಗಿ, ಮುಂದೆ ಉಂಟಾಗ

ಬಹುದಾದ ಕಣಗಳ ಚಲನೆಯನ್ನು ತಡೆಗಟ್ಟುತ್ತದೆ. ಇದನ್ನು p-n ಸಂಧಿ (p-n Junction ಎಂದು ಕರೆಯುತ್ತಾರೆ. ಇಂತಹ ಒಂದು p-n ಸಂಧಿ (p-n Junction) ಯ ಮೇಲೆ ಸೂರ್ಯನ ಕಿರಣಗಳು ಬಿದ್ದಲ್ಲಿ ಸೂರ್ಯನ ಕಿರಣಗಳಲ್ಲಿ ಅಡಗಿರುವ ಶಕ್ತಿಯನ್ನು ಉಪಯೋಗಿಸಿಕೊಂಡು ಎಲೆಕ್ಟ್ರಾನ್ ಮತ್ತು ರಂಧ್ರಗಳು ಚಲಿಸುವುದರ ಮೂಲಕ ವಿದ್ಯುತ್ ಪ್ರವಾಹವುಂಟಾಗುತ್ತದೆ. p ಮತ್ತು n —ಖಂಡವಿದ್ಯುದ್ವಾಹಕಗಳಿಗೆ ವಿದ್ಯುತ್ ಸಾಗಿಸುವ ತಂತಿ (Electrode) ಗಳನ್ನು ಬಂಧಿಸಿ ವಿದ್ಯುತ್ತನ್ನು ಬೇಕಾದ ಯಂತ್ರಗಳಿಗೆ ಸಾಗಿಸಬಹುದು. ಇದು ಸೌರ ವಿದ್ಯುತ್ಕೋಶಗಳು ಕೆಲಸ ಮಾಡುವ ಸೂಕ್ಷ್ಮ ಪರಿಚಯ.

ಆದರ ಈ ಸೌರ ವಿದ್ಯುತ್ಕೋಶಗಳ ಒಂದು ನ್ಯೂನತೆಯೆಂದರೆ, ಇವುಗಳಿಂದ ಉತ್ಪತ್ತಿಯಾಗುವ ಶಕ್ತಿಯ ಪ್ರಮಾಣ ಅತ್ಯಂತ ಕಡಿಮೆ. ಒಂದು ಚ. ಸೆಂ ಮೀ. ಅಗಲದ ಒಂದು ಕೋಶವು ಕೇವಲ 10–12 ಮಿಲಿ ವ್ಯಾಟ್‌ಗಳಷ್ಟು ಶಕ್ತಿಯನ್ನು ಮಾತ್ರ ನೀಡಬಲ್ಲದು. ಆದರೂ ನೂರಾರು ಕೋಶಗಳನ್ನು ಒಂದೇ ಶ್ರೇಣಿ (Series) ಯಲ್ಲಿ ಸೇರಿಸಿ, ಹೆಚ್ಚು ಶಕ್ತಿಯನ್ನು ಪಡೆಯಬಹುದು. ಸಿಲಿಕಾನ್‌ನಿಂದ ತಯಾರಿಸಲ್ಪಟ್ಟ ಒಂದು ಸೌರ ವಿದ್ಯುತ್ಕೋಶದ ವಿಸ್ತಾರವು 1 ಅಥವಾ 2 ಚ. ಸೆಂ ಮೀ ಗಳಷ್ಟು ಮಾತ್ರ ಇದ್ದು ಅದರ ತೂಕ ಕೇವಲ 2—3 ಗ್ರಾಂಗಳಷ್ಟು ಕಡಿಮೆ ಇರುವುದರಿಂದ ಇವುಗಳನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ಯಲು ಬಹಳ ಅನುಕೂಲವಾಗುವುದು. ಇದರ ಇನ್ನೊಂದು ನ್ಯೂನತೆಯೆಂದರೆ ಇದು ಹಗಲಿನಲ್ಲಿ ಸೂರ್ಯನ ಬೆಳಕಿರುವಾಗ ಮಾತ್ರ ಕಾರ್ಯ ನಿರ್ವಹಿಸಿ, ರಾತ್ರಿವೇಳೆ ತಟಸ್ಥವಾಗಿರುವುದು. ಆದುದರಿಂದ ಇವುಗಳನ್ನು ರಾಕೆಟ್‌ಗಳಲ್ಲಿ ಉಪಯೋಗಿಸುವ ಇತರ ರಾಸಾಯನಿಕ ಬ್ಯಾಟರಿಗಳನ್ನು ಛಾರ್ಜ್‌ಮಾಡಲು ವಿಶೇಷವಾಗಿ ಉಪಯೋಗಿಸುತ್ತಾರೆ.

ಒಂದು ಸಿಲಿಕಾನ್ ನಿಂದ ತಯಾರಿಸಿದ ಸೌರ ವಿದ್ಯುತ್ಕೋಶವನ್ನು ನಿರ್ಮಿಸಬೇಕಾದರೆ ಬಹಳ ಹಣ ಬೇಕಾಗುವುದು. ಒಂದು ವ್ಯಾಟ್ ಶಕ್ತಿಯನ್ನು ಕೊಡಬಲ್ಲ ಒಂದು ಕೋಶದ ತಯಾರಿಕೆಗೆ ಸುಮಾರು ಮೂರು ಅಥವಾ ನಾಲ್ಕು ನೂರು ಅಮೆರಿಕನ್ ಡಾಲರ್‌ಗಳಷ್ಟು ಹಣ ಬೇಕಾಗುವುದು ಎಂಬುದಾಗಿ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಕಾರಣ ಅವುಗಳನ್ನು ತಯಾರಿಸುವ ವಿಧಾನ ಅತ್ಯಂತ ಕ್ಲಿಷ್ಟವಾದುದು.

ಆದ್ದರಿಂದ ಈ ಸೌರವಿದ್ಯುತ್ಕೋಶಗಳನ್ನು ಅಡಿಗೆ ಮಾಡುವುದು. ನೀರು ಕಾಯಿಸುವುದು. ಫ್ಯಾನ್ ತಿರುಗಿಸುವುದು ಮುಂತಾದ ಗೃಹಕೃತ್ಯದ ಕೆಲಸಗಳಿಗೆ ಉಪಯೋಗಿಸುವುದು ಹಿತಕರವಲ್ಲ. ಆದರೆ ವಿಜ್ಞಾನಿಗಳ ನಿರಂತರ ಪರಿಶ್ರಮದಿಂದಾಗಿ ಆ ಕಾಲವೂ ಅತ್ಯಂತ ಸನ್ನಿಹಿತವಾಗುತ್ತಿದೆ ಎಂದರೆ ತಪ್ಪಾಗಲಾರದು.

ಶಾಸನದಲ್ಲಿ ಮಂತ್ರಿ ಬಸವಣ್ಣ

ಜಿ. ಎಸ್. ಗಾಯಿ ಮತ್ತು ಮಾಧವ ಕಟ್ಟಿ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ತಂಬೂರು ಎಂಬ ಗ್ರಾಮದಲ್ಲಿ ಕೆಲವು ವರ್ಷಗಳ ಹಿಂದೆ ದೊರೆತ ಶಿಲಾಶಾಸನವೊಂದರಲ್ಲಿ ಬಸವಣ್ಣನೆಂಬ ಮಂತ್ರಿಯ ಉಲ್ಲೇಖವಿದೆ.[1] ಶಾಸನದ ಮೇಲ್ಭಾಗವು ಒಡೆದುಹೋದುದರಿಂದ ತ್ರುಟಿತವಾಗಿದ್ದು ಪ್ರಸ್ತುತ ಭಾಗದಲ್ಲಿ ಆಳುವ ರಾಜನ ಹೆಸರಾಗಲೀ ತೇದಿಯ ವಿವರಗಳಾಗಲೀ ದೊರಕುವದಿಲ್ಲ. ಆದರೂ ಲಿಪಿಶಾಸ್ತ್ರದ ಆಧಾರದಿಂದ ಈ ಶಾಸನವು ಕ್ರಿ.ಶ. 12 ನೆಯ ಶತಮಾನದ್ದೆಂದು ಹೇಳಬಹುದು. ಶಾಸನದ ಪ್ರಸ್ತುತ ಭಾಗದಲ್ಲಿ ಪದ್ಮಾವತಿಯೆಂಬ ವಾರಾಂಗನೆಯು ತಂಬೂರಿನ ನಕರ ಜಿನಾಲಯದಲ್ಲಿ ವಾಸವಾಗಿದ್ದ ಋಷಿಯರ ಆಹಾರ ದಾನಕ್ಕೆಂದು ಮಾದಿರಾಜಯ್ಯ - ದಂಡನಾಯಕ ಮತ್ತು ನರಸಿಂಹ - ದಂಡನಾಯಕ ಇವರಿಗೆ ಪಾದಪೂಜೆ ಸಲ್ಲಿಸಿ ಭೂಮಿಯನ್ನು ಪಡೆದು ದಾನಮಾಡಿದಳೆಂದು ಹೇಳಿದೆ. ಅಂದರೆ ತಾನು ದಾನಮಾಡುವ ಭೂಮಿಯನ್ನು ಊರಿನ ಅಧಿಕಾರಿಗಳಾದ ಮಾದಿರಾಜಯ್ಯ ಹಾಗೂ ನರಸಿಂಹ ದಂಡನಾಯಕರಿಂದ ಕ್ರಯ ಕೊಟ್ಟು ಪಡೆದಳೆಂದು ತಿಳಿಯುವದು. ಮುಂದೆ ದಾನರಕ್ಷಣೆಯ ಬಗ್ಗೆ ಸಾಮಾನ್ಯವಾಗಿ ಶಾಸನಗಳ ಕೊನೆಗೆ ಬರುವ ಎರಡು ಶ್ಲೋಕಗಳಿವೆ. ತರುವಾಯ ಅದೇ ತಂಬೂರಿನ ನಕರ ಜಿನಾಲಯಕ್ಕೆ ಬಿಟ್ಟ ಬೇರೆ ವೃತ್ತಿಯ ವಿವರಣೆಯಿದೆ. ಅದರಲ್ಲಿ ಮಂತ್ರಿ ಭೂಷಣ ಬಸವಣ್ಣನೆಂಬಾತನು ಆ ನಕರ ಜಿನಾಲಯದ ದಾನ ಶಾಲೆ ಮತ್ತು ಕವಿತೆಗಳಿಗಾಗಿ[2] ಅಂದರೆ ಕವಿತಾವಾಚನದ ಏರ್ಪಾಟಿಗಾಗಿ ೮೦ ಕೈನೀಳದ ನೆಲವನ್ನು ಆ ಜಿನಾಲಯದ ಬಸದಿಗಾಗಿ ೧ ತೆಲ್ಲಿಗ ಮನೆ (ಗಾಣ) ಯನ್ನೂ ಅಲ್ಲಿಯ ದೇವರ ನಂದಾದೀವಿಗೆಗಾಗಿ ೧ ತೆಲ್ಲಿಗ ಮನೆಯನ್ನೂ ದಾನಮಾಡಿದನೆಂದು ಹೇಳಿದೆ. ಶಾಸನವು ಬಸವಣ್ಣನನ್ನು ಮಂತ್ರಿ ಭೂಷಣ ಬಸವಣ್ಣ, ಸಂಧಿವಿಗ್ರಹಿ ಬಸವಣ್ಣ. ಸಂಧಿವಿಗ್ರಹಿ ಬಸವಯ್ಯ ಮತ್ತು ಮಂತ್ರಿ ಮಕುಟರತ್ನ ಬಸವನೆಂದು ಕರೆಯುವದಲ್ಲದೆ ಅವನು ಅಕಳಂಕ ಚಾರುಚರಿತ ಹಾಗೂ ಪ್ರಕಟಯಶನಾಗಿದ್ದನೆಂದೂ ಹೇಳಿದೆ. ಆತನನ್ನು ಕುರಿತು ಬರೆದ ಶಾಸನ ಪಾಠವು ಇಂತಿದೆ :

---

1 ಈ ಶಾಸನವನ್ನು Annual Report on Indian Epigraphy, 1964-65, No. B 404 ಎಂದು ನಮೂದಿಸಲಾಗಿದೆ.

2 ಕವಿಲೆ ಶಬ್ದವನ್ನು ಶಾಸನಕಾರನು ಕವಿತೆ ಎಂದು ತಪ್ಪಾಗಿ ಬರೆದಿರಬಹುದು. ಹಾಗಾದಲ್ಲಿ ಜಿನಾಲಯದ ಹಸುಗಳಿಗಾಗಿ ಎಂದು ಅರ್ಥ ಮಾಡಿಕೊಳ್ಳಬೇಕು.

ಬಸದಿಯ ತೆ[ಂ[ಕಣಕೇರಿಯ
ನೆಸೆಯಲ್ಕಂ ಮಂತ್ರಿಭೂಪಣಂ ಬಸವಣ್ಣಂ ।
ವಸುಧೆ ಶಶಿಸೂರ್ಯ್ಯ ಕುಳಗಿರಿ
ಯೆಸೆದಿರ್ಪ್ಪಿನ ಕೊಟ್ಟನೊ [ನ್ದು] ಸದ್ಭಕ್ತಿಯೊಳಂ ॥

ಅನ್ತು ಸಂಧಿವಿಗ್ರಹಿ ಬಸವಣ್ಣಂ ನಕರಜಿನಾಲಯಕ್ಕೆ ನಕರಜಿನಾಲಯದ ತೆಂಕ ಲೆಂಭತ್ತು ಕೆಯಿ ನೀಳದ ನೆಲನುಮಂ ದಾನಶಾಲೆಗಂ ಕವಿತೆಗಳಿಗಂ ಸರ್ವ್ವಭಾಧಾ ಪರಿ ಹಾರವಾಗಿಯಾಚಂದ್ರಾರ್ಕಂಬರಂ ಬಿಟ್ಟ ॥

ಅಕಳಂಕ ಚಾರುಚರಿತಂ
ಪ್ರಕಟಯಶಂ ಮಂತ್ರಿಮಕುಟರತ್ನಂ ಬಸವಂ ।
ನಕರ ಜಿನಾಲಯ ಬಸದಿಗೆ
ಸುಕರತೆ [ಯಿಂ] ಬಿಟ್ಟನೊ [ಂ][1] ನ್ದು ತೇಲಿಗ ಮನೆಯಂ ॥

ಅನ್ತು ಸಂಧಿವಿಗ್ರಹಿ ಬಸವಯ್ಯನಜೂಪೆಯ ತಿಪ್ಪಣನ ಮನೆಯಿಂ ಹಡುವ ಲಿಪ್ಪತ್ತು ಕಯಿ ನೀಳದ ತೇಲಿಗಮನೆಯಂ ನಕರಜಿನಾಲಯದ ದೇವರ ನಂದಾದೀವಿಗೆ ನಡೆವಂತಾಗಿ ಬಿಟ್ಟದಾ ತೆಲ್ಲಿಗ ಮನೆಯ ತಳಸಾರಿಗೆ ಬೀರವಣಮಂ ಸುಂಕಾಧಿಕಾರಿ ಪಾಮಯ್ಯಂ [ಆಚಂ] ದ್ರಾರ್ಕಂಬರಂ ಸರ್ವ್ವಭಾಧಾ ಪರಿಹಾರವಾಗಿ ಬಿಟ್ಟ ॥

ಮೇಲೆ ಹೇಳಿದಂತೆ ಶಾಸನದ ಕಾಲ ಕ್ರಿ.ಶ. 12ನೆಯ ಶತಮಾನ. ಅದರಲ್ಲಿ ಉಕ್ತರಾದ ಮಾದಿರಾಜಯ್ಯ ಮತ್ತು ನರಸಿಂಹ ದಂಡನಾಯಕರು ತಂಬೂರು ತಾಲೂಕಿ ನಲ್ಲಿ ದೊರೆತ ಬೇರೆ ಕೆಲವು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದಾರೆ.[2] ಅವುಗಳ ಆಧಾರ ದಿಂದ ಮಾದಿರಾಜಯ್ಯ ದಂಡನಾಯಕನು ಕ್ರಿ.ಶ. 1125ರಿಂದ 1150ರ ಅವಧಿ ಯಲ್ಲಿ ತಂಬೂರು ಮತ್ತು ಅದರ ಸುತ್ತಲಿನ ಪ್ರದೇಶವನ್ನಾಳುತ್ತಿದ್ದನೆಂದು ತಿಳಿಯುವದು. ತಂಬೂರಿನಲ್ಲಿಯೇ ದೊರೆತ ಒಂದು ಶಾಸನದ[3] ಪ್ರಕಾರ ಮಾದಿರಾಜಯ್ಯನು ತನ್ನ ಮಗನಾದ ನಾರಸಿಂಗದೇವನ ಪರೋಕ್ಷವಿನಯಾರ್ಥಕ್ಕಾಗಿ ಭೂಮಿಯನ್ನು ದಾನ ಮಾಡಿದನೆಂದು ಹೇಳಿದೆ. ಈ ಶಾಸನದ ತೇದಿಯು ಶಕೆ 1066 ಅಥವಾ ಕ್ರಿ.ಶ.1144. ಇದರಲ್ಲಿ ಉಲ್ಲೇಖಿಸಲ್ಪಟ್ಟ ನಾರಸಿಂಗದೇವನೂ ಹಾಗೂ ನಮ್ಮ ಪ್ರಸ್ತುತ ಶಾಸನ ದಲ್ಲಿಯ ನರಸಿಂಹ ದಂಡನಾಯಕನೂ ಒಬ್ಬನೇ ಆಗಿದ್ದು ಅವನು ಮಾದಿರಾಜಯ್ಯ ದಂಡನಾಯಕನ ಮಗನೆಂದು ಹೇಳಬಹುದು. ಆದುದರಿಂದ ನಮ್ಮ ಶಾಸನದ ಕಾಲಕ್ಕೆ

---

1 ಈ ಅನುಸ್ವಾರವು ಅನಾವಶ್ಯವಾಗಿದೆ.

2 Annual Rep. Ind. Ep., 1964-65, B. Nos. 402-05 : Ibid., 1965-66, B. Nos. 385, 408, 411.

3 Ibid., 1964-65, B No. 405.

ನರಸಿಂಹನು ಜೀವಿಸಿದ್ದುದರಿಂದ ಅದು ಕ್ರಿ.ಶ. 1144 ಕ್ಕಿಂತ ಮುಂಚಿನ ಕಾಲದ್ದೆಂದು ಊಹಿಸಬಹುದು. ಆಗ ತಂದೆ-ಮಕ್ಕಳಿಬ್ಬರೂ ತಂಬೂರಿನ ಆಡಳಿತವನ್ನು ವಹಿಸಿ ಕೊಂಡಿದ್ದರೆಂದು ತಿಳಿಯುವದು.

ಇನ್ನು ಪ್ರಸ್ತುತ ಶಾಸನದ ಕೊನೆಗೆ ಉಲ್ಲೇಖಿಸಲ್ಪಟ್ಟ ಮಂತ್ರಿ ಬಸವಣ್ಣನ ಕುರಿತು ತಂಬೂರಿನಲ್ಲಾಗಲೀ ಬೇರೆ ಕಡೆಯಲ್ಲಾಗಲೀ ದೊರೆತ ಈ ಕಾಲದ ಶಾಸನ ಗಳಿಂದ ಯಾವ ವಿವರವೂ ತಿಳಿದಿಲ್ಲ. ಬಸವಣ್ಣನ ಬಗ್ಗೆ ಹೇಳುವ ಶಾಸನದ ಕಾಲವೂ ಮೂಲ ಶಾಸನದ ಕಾಲದ್ದೇ ಇರುವದರಿಂದ ಆತನು ಕ್ರಿ.ಶ. 1140 ರ ಸುಮಾರಿಗೆ ಮಂತ್ರಿಯಾಗಿದ್ದನೆಂದು ಹೇಳಬಹುದು. ಆದುದರಿಂದ ಬಸವಣ್ಣನೆಂಬ ಮಂತ್ರಿಯು ಅತ್ಯಂತ ಪ್ರಾಚೀನವಾದ ಶಾಸನಸ್ಥ ಉಲ್ಲೇಖವು ಪ್ರಸ್ತುತ ಶಾಸನದಲ್ಲಿ ದೊರಕುತ್ತದೆ. ಈ ಶಾಸನದ ಕಾಲಕ್ಕೆ ಕಲ್ಯಾಣ ಚಾಳುಕ್ಯರ 2 ನೆಯ ಜಗದೇಕಮಲ್ಲನು ರಾಜನಾಗಿದ್ದ ನೆಂದೂ ಅವನ ಕೈಕೆಳಗೆ ಕಳುಚುರ್ಯ ಬಿಜ್ಜಳನು ಮಾಂಡಲಿಕನಾಗಿದ್ದನೆಂದೂ ಆ ಕಾಲದ ಇತಿಹಾಸದ ಅವಲೋಕನದಿಂದ ತಿಳಿಯುವದು. ಈ ಬಿಜ್ಜಳನನ್ನು ಮಹಾ ಮಂಡಳೇಶ್ವರ ತರಿಕಾಡ ಬಿಜ್ಜಳನೆಂದು ಉಲ್ಲೇಖಿಸಿರುವ ಕ್ರಿ.ಶ. 1136 ರ ಶಾಸನವು [1] ಇದೇ ತಂಬೂರಿನಲ್ಲಿಯೇ ಕೆಲವು ವರ್ಷಗಳ ಹಿಂದೆ ದೊರಕಿದೆ. ಮತ್ತು ವೀರಶೈವ ಮತ ಪ್ರವರ್ತಕನಾದ ಸುಪ್ರಸಿದ್ಧ ಬಸವಣ್ಣನು ಇದೇ ಬಿಜ್ಜಳನ ಕೈಕೆಳಗೆ ಭಂಡಾರಿಯೂ ಮಂತ್ರಿಯೂ ಆಗಿದ್ದನೆಂಬ ವಿಷಯವು ಎಲ್ಲರಿಗೂ ಗೊತ್ತಿದೆ. ಆದುದರಿಂದ ಪ್ರಸ್ತುತ ಶಾಸನದಲ್ಲಿ ಉಕ್ತವಾದ ಮಂತ್ರಿ ಬಸವಣ್ಣನೂ ಬಿಜ್ಜಳನ ಮಂತ್ರಿ ಬಸವಣ್ಣನೂ ಒಬ್ಬನೇ ವ್ಯಕ್ತಿಯಾಗಿದ್ದನೇ ಎಂಬುದು ವಿಚಾರಣೀಯ. ಆದರೂ ಹೆಚ್ಚಿನ ಆಧಾರಗಳು ದೊರ ಕುವವರಗೆ ಈ ವ್ಯಕ್ತಿ ಸಮಾನತೆಯ ಕುರಿತು ನಿಷ್ಕರ್ಷೆಯಾಗಿ ಹೇಳುವಂತಿಲ್ಲ.

1 The Journal of Karnatak University, Social Sciences, Vol. II, Pp. 48-49.

ಅಂತರಾಳದ್ದು

ಜಯಸುದರ್ಶನ

ಭೂಮಿಗೆ ಬೀಳುವ ಸುಖ ನಿನಗೆ ಗೊತ್ತ ?
ಕೆಳಗೆ ಹರಿವ ನೀರಿನ ರೇಖೆ, ಹಸಿರು, ಮನೆಗಳು, ತಲೆಯೆತ್ತದೆ
ಮೇಯುವ ದನಗಳು ಹಿಗ್ಗುವ ಸುಖ
ನನ್ನ ಕಣ್ಣಿನಲಿ ಅರಳುವ ಮೊಗ್ಗುಗಳು
ಹೂವಾಗಿ ಉರುಳುವ ಸುಖ
ನೆಲಕೆ ಬೀಳುವ ಮುಂಚೆ ಶಿಖರ ಹತ್ತಬೇಕು
ಉಸಿರು ತೇಕುಹತ್ತಿ ಇನ್ನು ಸಾಕೆನಿಸಬೇಕು
ನಿರಾಳ ಅಲ್ಲಿ ನಿಂತು ಕೆಳಗೆ ವ್ಯರ್ಥವನ್ನೆಲ್ಲ ನೋಡಬೇಕು
ಕಣ್ಣುಮುಚ್ಚದೆ ಹಾರಿಕೊಳ್ಳಬೇಕು ಅಂತರಾಳಕ್ಕೆ.

ಅಹ, ಮೈಯನಪ್ಪಿಕೊಳ್ಳಲು ಧಾವಿಸುವ ಮಣ್ಣಿನ ಸ್ವಾರ್ಥವೆ
ಹಸಿರು–ಹೂವಿನಲಿ, ಹರಿವ ನೀರಲ್ಲಿ. ನನ್ನ ಪಕ್ಕವೆ ಹಾರಿದ
ಹಕ್ಕಿನ ಕಣ್ಣಲ್ಲಿ ಹೊಳೆವ ಬದುಕಿನಲಿ ಸೆರೆಯಾಗಿರುವ
ಸಾವಿನ ಭಯವೆ.

ನನ್ನ ಹೃದಯದಲಿ ಕುಳಿತಿದ್ದ ಸಾವಿರ ಬಯಕೆ ಚಾಚುತ್ತೆ ಕಾಲು.
ನನ್ನೊಂಟಿತನದ ಕ್ಷಣ ಅಂತರಾಳದ ಖಾಲಿಯಲಿ ಹಿಗ್ಗಿದ ನಿರ್ಲಿಪ್ತ,
ಕೆಳಗೆ ಮೋಹಿಸುತ್ತಿರುವ ಬದುಕು ತಪ್ತ.
ಕೋಡುಗಲ್ಲಿನ ಶಿಖರದ ಸ್ಪರ್ಶ ಪಾದಕ್ಕಿನ್ನೂ ಮೆತ್ತಿದ ವಾಸನೆ
ಕಿವಿಯಲ್ಲಿ ಮೊರೆವ ಗಾಳಿಯಲಿ ಹತ್ತಿಕ್ಕಲಾಗದ ಊಹೆ
ಗಂಟಲಲ್ಲಿ ಚಡಪಡಿಸುತ್ತಿರುವ ಜೀವ.
ಬೀಳುವ ಮುಂಚೆ ಕಾಲು ಹಿಡಿದೆಳೆವ ಬದುಕಿನ ಭಯ
ಅಹಹಾ. ಅಂತರಾಳದಲಿ ವಿಮೋಚನೆಯ ಸುಖ
ಯಾರಿಗೆ ಬೇಕು ನೆಲ, ಸ್ವರ್ಗ–ನರಕ?

ಎಲ್ಲಿತ್ತು ಈ ಅನುಭವ ಇಲ್ಲಿಯವರೆಗೆ
ಎಲ್ಲಿತ್ತು ಈ ಅನಿಸಿಕೆ ಮನಸಿನ ಗೂಢ ಮೂಲೆಯಲಿ
ಸುರುಳಿ ಸುತ್ತಿ
ಎಲ್ಲಿತ್ತು ಸಾವು ಹೀಗೆ ಜೀವನವ ಮೋಹಿಸುವ ಅಂತಿಮ
ಸುಖದ ಸ್ವಪ್ನ
ಎಲ್ಲಿತ್ತು ಮೂಳೆ ದೇಹದಲ್ಲೀಗ ಹುಚ್ಚೆದ್ದಿರುವ
ಬದುಕಿನ ಬಯಕೆ
ಎಲ್ಲಿತ್ತು ನನ್ನ ಸುತ್ತಲು ಹಿಗ್ಗುತ್ತಿರುವ ಬದುಕು
ಇರವು, ಇರವಿನ ಸುಖ
ಸಾಯದೆ ಬದುಕಿನ ಮಜ
ತಿಳಿಯದೆನ್ನುತ್ತಿರುವ ಈ ಒಂದೆ ಬಾರಿಯೆನಿಸುವ ಅನಿಸಿಕೆ?

ಅಂತರಾಳದಲಿ ಇಟ್ಟ ಹೆಜ್ಜೆ ಹಿಂತೆಗೆದುಕೊಳ್ಳುವಂತಿರಲಿಲ್ಲ
ಹಾಗಿದ್ದರೆ ಬದುಕು ಹೀಗೆ ಹಿಂದಿಲ್ಲದ ಹಾಗೆ ಬೇರೆ ಮನ್ವಂತರವ
ಪಡೆಯುವಂತಿರಲಿಲ್ಲ
ನನ್ನ ಅರ್ಥವಿದ್ದಿರದ ಬದುಕಿಗೆ ಸಾವಿನ ಬರೆ ಮೋಹ ಅರ್ಥ ಕೊಡುತ್ತಿರಲಿಲ್ಲ
ನಾನು ಮಾತ್ರ ಇರುತ್ತಿದ್ದೆ ಸಾವಿನ ಬದನಿಕೆ ಮೊಳೆತ ಮುದಿ ಮರ
ಗೂಬೆ ಕೂಗಿದಾಗೆಲ್ಲ ಬೆಚ್ಚಿ ಬೀಳುವ ರೆಂಬೆ – ಕೊಂಬೆ.

ಅಂತರಾಳದ ಸುಖ ಬೇಕಾದರೆ ಅಲ್ಲಿ ನೆಲೆ ಇಲ್ಲದ ಕಡೆ
ಕಾಲಿಕ್ಕಬೇಕು
ಬದುಕು–ಸಾವುಗಳ ಮೋಹವನು, ದ್ವಂದ್ವವನು ತೊರೆಯಬೇಕು
ಅನಿಸಿದ್ದು ಅಲ್ಲಿದ್ದಾಗಲೇ
ಬೇರೆ ಅನಿಸಿಕೆಗಳಿಗೆಲ್ಲ ಮನಸು ಸತ್ತು
ಪ್ರಜ್ಞೆಯೊಂದೇ ರೆಪ್ಪೆ ಕಳಚಿ
ಕಣ್ಣು ತೆರೆದಾಗಲೇ .
ಕಾಲ ಕೆಳಗೆ ಎಂದೋ ಸತ್ತಿರುವ ಸಾವು. ಹೃದಯ ಬಡಿತದಲಿ
ಹೊಚ್ಚ ಬದುಕಿನ ಶ್ರದ್ಧೆ ;
ಬೇಡವೆನಿಸಿದಷ್ಟೂ ಮುಗಿ ಬೀಳುತ್ತಿರುವ ನೆನ್ನೆ–ನಾಳೆಗಳ ಸಾವಿರದ ಕಾಲ.

ಶಿಖರ ಹತ್ತುವೆನೆ?
ಬದುಕನ್ನು ಪ್ರೀತಿಸದೆ ಸುಮ್ಮನೆ ಉಸಿರಾಡಿಸುವ ಸಾವಿನ ಭೀತಿ
ದಾರಿಯಲಿ ಕಾಲು ಜಾರುವ ಆತ್ಮವಂಚನೆಯ ಭಯ

ಬದುಕಲಾಗದ. ಸಾವಿಗಂಜುವ. ಇದ್ದಲ್ಲೇ ಸಾವಿರ ಬಾರಿ ಸತ್ತಿರುವ
ಜೀವ ದೇಹಕ್ಕೆ ಕಚ್ಚಿಕೊಂಡು ಕಾಲ ಹಾಕುವ ಬಸವನ ಹುಳ.

ಗೊತ್ತಿದ್ದದ್ದೆ. ಬದುಕನ್ನು ಪ್ರೀತಿಸುವವರೆಗೆ ಶಿಖರ ಹತ್ತಲಾರೆ
ಅಂತರಾಳದಲಿ ನಿಂತು ಬದುಕನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಲಾರೆ
ಸಾವಿನ ಬಿಡುಗಡೆಯ ಪಡೆದು ಸುಖಿಸಲಾರೆ
ಗೆಳೆಯ,
ಅಂತರಾಳದ ಸುಖ ಸಖ್ಯಕ್ಕೆ ಅಂಗೈಯ ತುಂಬ ಬೆವರುವ ಉಸಿರಾಡಿಸುವ
ಗಾಳಿ
ಮಣ್ಣಿನ ವಾಸನೆಗೆ ಸುಳ್ಳೇ ಮೈ ಮರೆತ ಪುಕ್ಕಲುತನದ ಠೀವಿ
ತೆವಳುವ ನೆಲಕ್ಕೇ ಅಂಟಿಕೊಳ್ಳುವ ಇರವು
ಒಳಗೆ ಹೊಗೆಯೆದ್ದ ಸಾಚತನವಿರದ ಬಯಕೆ.
ಅಂತರಾಳದಲಿ ತೇಲುವ ಸುಖದ, ಸುಖ–ದುಃಖ, ಬದುಕು–ಸಾವುಗಳು
ಬೇರೆಯೆನಿಸದ
ಅನುಭವಕ್ಕೆ ಹಾತೊರೆದಾಗೆಲ್ಲ ನೆಲಕಚ್ಚಿದ ದೇಹ ಮಣ್ಣಾಗುವ
ನೆನಪು ಎದೆ ನಡುಗಿಸುತ್ತೆ
ಮೂಳೆ ದೇಹ ನನ್ನೊಂದೆ ಆಸ್ತಿಯಾಗಿ ಕಾಣುತ್ತೆ
ಬಸವನ ಹುಳ ಚಿಪ್ಪಿನೊಳಗೆ ಹುದುಗಿ ಬ್ರಹ್ಮಾಂಡ ಕಾಣುವ
ತಪಸ್ಸು ಮಾಡುತ್ತೆ
ಬದುಕದ ಬದುಕಿಗೆ
ಸಾವಿರದ ಸಾವಿಗೆ.

ಇಂಥ ಸ್ಥಿತಿಯಲ್ಲಿ ಅಂತರಾಳದಲಿ ತೇಲುವ ಸುಖದ
ಭ್ರಮೆಯೊಂದೆ ಆಗೀಗ ಹೊರಗೆ ತಲೆಹಾಕುವ ಧೈರ್ಯ
ನನ್ನ ಅನಿಸಿಕೆಯೆಲ್ಲ ಮೂಡಿದ್ದೆ ಬಿಸಿಲು ಕಾಯಿಸಿಕೊಳ್ಳುತ್ತಿದ್ದಾಗ
ಒಳಗೆ ನುಸುಳುವ ಮುನ್ನ ಹದ್ದು ಎರಗಿ ಕಚ್ಚಿಕೊಂಡು ಹೋದದ್ದು
ಗೊತ್ತಾಗುವಷ್ಟರಲಿ ನಾನು ಇದ್ದದ್ದೆ
ನೆನಪಾಗಲಿಲ್ಲ, ಶಿಖರ. ನೆಲ, ಹಸಿರು. ಅಂಟು. ಚಿಪ್ಪು ಎಲ್ಲ
ಮರೆಯಾಗಿ
ಅಂತರಾಳದಲಿ
ಮೈತಳೆದ ಮುಗ್ಧ ಬೆರಗು

ಕನ್ನಡ 'ಶುಕಸಪ್ತತಿ' ಯ ಪೀಠಿಕಾವತರಣ (ಪರಿಚಯ)

'ಶುಕಸಪ್ತತಿ'ಯನ್ನು ಕನ್ನಡದಲ್ಲಿ ಅನುವಾದಿಸಿದ ಮೂವರು ಕವಿಗಳಲ್ಲಿ ಕೆಳದಿ ಮನೆತನದ 1ನೆಯ ಬಸವರಾಜನ ಮಂತ್ರಿಯಾದ ಶರಜಾ ನಾಗಪ್ಪಯ್ಯನೊಬ್ಬನು. (ಈ ಬಗೆಗೆ ತುಸ ಸೂಚನೆ 'ಸಾಧನೆ'ಯ 1–1ರಲ್ಲಿ ಪ್ರಕಟವಾಗಿದೆ). ಇವನು ಕನ್ನಡಿಸಿದನೆನ್ನುವ ಸಂಸ್ಕೃತ ಭಾಷೆಯ ಒಂದು ಪ್ರತಿ ಮದ್ರಾಸ್ ಸರಕಾರದ ಪ್ರಾಚ್ಯ ಪುಸ್ತಕಾಲಯದಲ್ಲಿದೆಯೆಂದು ತಿಳಿದು. ಅದರ ಕೆಲವು ಸಂಧಿಗಳನ್ನು ನಕಲುಮಾಡಿಸಿ ತರಿಸಿದೆನು. ಪ್ರಸ್ತುತ ಆ ಸಂಸ್ಕೃತ ಪ್ರತಿಯಲ್ಲಿರುವ ಪೀಠಿಕಾವತರಣ (ಮೊದಲ ಸಂಧಿಯ ವಿಚಾರ) ಇಲ್ಲಿ ಸಂಗ್ರಹಿಸಲಾಗಿದೆ; ಕನ್ನಡ ಕವಿ ಶರಜಾ ನಾಗಮಂತ್ರಿಯು ಅದನ್ನು ಹೇಗೆ ಕನ್ನಡಿಸಿದ್ದಾನೆಂದು ಕೆಲವೆಡೆಯ ಉದಾಹರಣೆಗಳೊಂದಿಗೆ ಪರಿಚಯಿಸಲಾಗಿದೆ :

ಪೂರ್ವಕಾಲದಲ್ಲಿ ದೇವೇಂದ್ರನು ದೇವತಾಗಣಗಳಿಂದ ಕೂಡಿ, ಸುಧರ್ಮ ಸಭೆಯಲ್ಲಿ ನಾರದನನ್ನು ಪ್ರಶ್ನಿಸಿದನು – ಪರತತ್ವವೇತ್ತನೂ, ತತ್ಪ್ರತಿಬೋಧಕನೂ ಲೋಕದಲ್ಲಿರುವನಾದರೆ, ನೀನು ಆ ಪರಮ ರಹಸ್ಯವನ್ನು ಹೇಳಲರ್ಹನಾಗಿರುವಿಯೆಂದು. 'ಶುಕನೇ ಇವೆರಡನ್ನೂ ಬಲ್ಲನು; ಬೇರೊಬ್ಬನನ್ನು ನಾನರಿಯೆ: ಸ್ವಯಂ ತತ್ವಾರ್ಥಗಳನ್ನು ಬಲ್ಲವನು. ಪರನಿಗೆ ಬೋಧಿಸಲು ದಕ್ಷನು (ಅವನು)'– ಎಂದು ನಾರದನು ಹೇಳಿದನು. ಇದನ್ನು ಆ ಸಭೆಯಲ್ಲಿದ್ದ ವಹ್ನಿಯು ಕೇಳಿ ಆಗಲೇ ಮರುನುಡಿದನು—"ಆತ ತಾನೇನೋ ತಿಳಿದವ. ವಿರಾಗಿ–ಪರನಿಗೆ ಬೋಧಕನಾದ ವಕ್ತಾರನಲ್ಲ. ತಾನು ತಿಳಿದವನು. ಬೇರೆಯವರಿಗೆ ಹೇಳಲು ವಿಚಕ್ಷಣನಿಲ್ಲ"ವೆಂದು. ಹೀಗೆ ಉಭಯರಲ್ಲಿ ಮಹತ್ಸಂವಾದವಾದುದು. ಇದನ್ನು ಕೇಳಿದ ದೇವಗಣವು – ಇಂದ್ರನು ಕೂಡ – ಅಂತರ್ಧಾನವಾದುದು !

ವಹ್ನಿಯು ಭೂಲೋಕದಲ್ಲಿ ಕ್ಷತ್ರಿಯ ಕುಲದಲ್ಲಿ ರಾಜನಾಗಿ ಜನಿಸಿದನು. ನಾರದನು ಇದೆಲ್ಲವನ್ನೂ ಅಮಿತ ತೇಜೋವಂತನಾದ ಶುಕನಿಗೆ ಅರುಹಿದನು: ಅಗ್ನಿಯ ಬೋಧನೆಗೆ ತಿಳುಹಿದನು. ಅಂತೆ, ಶುಕನು ಶೂದ್ರನೊಬ್ಬನ ಗೃಹದಲ್ಲಿ ಶುಕವಾಗಿ (ಗಿಳಿಯಾಗಿ) ಜನಿಸಿದನು.

ಎಲೈ ರಾಜನೇ ! ಪವಿತ್ರವೂ, ಪಾಪ ನಾಶಕವೂ, ಸನಾತನವೂ, ಇತರ ಪುರಾಣಗಳಲ್ಲಿ ಹೇಳಿದುದೂ, ವಹ್ನಿರಾಜನಿಗೆ ಶುಕ ಹೇಳಿದುದೂ ಆದ ಈ ಕತೆಯನ್ನು

ಕೇಳು. (ಇನ್ನು ವಜ್ರಿರಾಯನ – ತತ್ಸೇವಕನ – ವಿಚಾರ ವಿವರಿಸಲು ತೊಡಗಿದೆ: ಹಾಗಾದರೆ 'ರಾಜನ್!' ಎಂದು ಸಂಬೋಧಿಸಿ ಹೇಳಿದುದು ಯಾರು–ಯಾರನ್ನು ಎಂದು ನಮಗೆ ತಿಳಿದಿಲ್ಲವಿಲ್ಲಿ ! ಈ ಎಪ್ಪತ್ತು ಕತೆಗಳ ಕೊನೆಗೇ ಈ ಬಗೆಗೆ ಪರಿಶೀಲಿಸ ಬೇಕಾದೀತು).

"ಅಸ್ತಿ ಭೂಮಂಡಲೇ ರಾಜಾ ಸರ್ವಶಾಸ್ತ್ರಾರ್ಥ ತತ್ತ್ವವಿತ್ ।
ಸರ್ವಜ್ಞ ಕುಶಲೋ ದಕ್ಷೋ ನೀತಿಶಾಸ್ತ್ರಾರ್ಥ ಪಾರಗಃ ॥
ಸದಾ ವಿದ್ವಜ್ಜನಾಸೇವೀ ಯಾಯಜೂತೋ ಮಹಾಮತಿಃ ।
ವಿಷ್ಣುಪ್ರಿಯ ಕಥಾಸೇವೀ ವಿಷ್ಣುಧ್ಯಾನ ಪರಾಯಣಃ ॥
ಶಸ್ತ್ರಾಸ್ತ್ರ ಕುಶಲೋ ಧನ್ವೀ ರಾಜಧರ್ಮ ಪರಾಯಣಃ ।
ದುಷ್ಟನಿಗ್ರಹ ವಾನ್ನಿತ್ಯಂ ಶಿಷ್ಟಪಾಲನ ಕೃತ್ತಥಾ ॥
ಪರಸ್ತ್ರೀಷು ಪರಸ್ವೇಷು ಅಂಧವತ್ ಪಂಗುವತ್ ದೃಢಃ ।
ಪ್ರಾತಃಸ್ನಾಯಿ ನಿತ್ಯಹೋಮಿ ಭಕ್ತಃ ಶಿವ ಮುಕುಂದಯೋಃ ॥
ಪರಮಂಡಲ ಭೇತ್ತಾ ಚಾಪರ ವರ್ಮ ಪ್ರಭೇದನಃ ।
ಷಡ್ಗುಣೇಷು ಪ್ರಯೋಕ್ತಾಚ ತತ್ಸಿದ್ಧಿಮನುಪಾಲಯನ್ ॥
ಪ್ರಾಲೇಯಾದ್ರಿ ಸಮೋ ಧೈರ್ಯೇ ಧರ್ಮಾ ಧರ್ಮ ಸಮೋ ನೃಪಃ ।
ಏಕ ಪತ್ನೀ ವ್ರತೋ ನಿತ್ಯಂ ಸರ್ವದಾ ಸತ್ಯಸಂಗರಃ ॥

ಇವನಿಗೊಬ್ಬ ದೂತನಿದ್ದನು (ಭೃತ್ಯ ಲಕ್ಷಣಗಳು ಆತನಲ್ಲಿ ತುಂಬಿದ ರೀತಿ ವಿವರಿಸಿದೆ). ಅವನಲ್ಲಿ ಇದ್ದ ಗಿಳಿಯು 'ಅತೀತಾನಾಗತ' ಗಳನ್ನು ಚೆನ್ನಾಗಿ ತಿಳಿದುದು. ಅದು ದಿನಾಲೂ ತನ್ನ ಸ್ವಾಮಿಯನ್ನು ತಕ್ಕಂತೆ ಬೋಧಿಸುತಿತ್ತು. ದ್ವಿಜನಾದ ಗುರುವು ಶಿಷ್ಯನನ್ನು ಹೇಗೋ ಹಾಗೆ. ದೂತನು ದಿನಾಲೂ ರಾಜಾಣತಿಯಂತೆ ಇದ್ದನು. ಹೀಗೆ ಹನ್ನೆರಡು ವರ್ಷ ಕಳೆದುದು.!

ರಾಜನು ಪ್ರತಿ ಸಂಜೆಗೆ ದೂತರನ್ನು ನಿಯೋಜಿಸಿ. ಪೌರರ ಎಲ್ಲಾ ಕೆಲಸ –ಮಾತು ಗಳನ್ನೂ ಅರಿಯುತ್ತಿದ್ದನು. ಆವೊಬ್ಬನು ಧರ್ಮಾತೀತನಾದರೆ. ಅವನು ಶಿಕ್ಷಾರ್ಹ ನೆಂದು ಅವರನ್ನು ಕಳುಹುತ್ತಿದ್ದನು. ಜಗೆಲ್ಲಾ ತಿಳಿಯುತ್ತಿದ್ದನು. ದೂತನೊಬ್ಬನು ಬಂದು ಅದೊಂದು ವಿಶೇಷವನ್ನುಸುರಿದನು – 'ದೇವದಾಸನ ಹೆಂಡತಿಯು ಸೌಂದರ್ಯ ದಲ್ಲಿ ಕಮಲೆಯಂತೆಯೂ, ಗುಣದಲ್ಲಿ ಗೌರಿಯಂತೆಯೂ. ಶಾಸ್ತ್ರದಲ್ಲಿ ಸರಸ್ವತಿ ಯಂತೆಯೂ. ಪತಿ ಪಾದಾರ್ಪಿತೇಕ್ಷಣಳೂ ಆಗಿರುವಳು. ಆಕೆ ಸುಕೇಶಿ. ಸ್ನಿಗ್ಧದಶನೆ. ಸುಸ್ತನಿ, ಸುಮುಖಿಯು: ಸಣ್ಣನಡು ಹಾಗೂ ವಿಶಾಲ ಸೊಂಟವುಳ್ಳವಳು: ನಿಮ್ನ ನಾಭಿ ಹಾಗೂ ಸುಭಾಷಿಣಿಯು (ಅವಳ ಅಂಗಾಂಗಗಳ ಹೆಸರಿಕೆ ಬಣ್ಣನೆಯಿದೆ). ಪತಿವ್ರತೆಯರಲ್ಲಿ ಆಕೆ ಅಗ್ರಗಾಮಿನಿಯಾಗಿದ್ದಾಳೆ. ತನ್ನಲ್ಲಿರುವ ಶುಕವನ್ನು ಮಾತ್ರ ಒಮ್ಮೊಮ್ಮೆ ಮಾತಾಡಿಸುವಳು: ಅಲ್ಲಿ ದಾಸದಾಸಿಯರಿಲ್ಲ. ಇಂತಹ ಸ್ತ್ರೀಯು ನಿನ್ನ

ಪುರವಲ್ಲಿರುವಳೆಂದು; ಶುಭವೋ ಅಶುಭವೋ ಕಂಡುದೆಲ್ಲವನ್ನು ದೂತನು ರಾಜನಿಗರು-ಹುವಂತೆ ಹೇಳಿದನು.

> "ಘ್ರಾಣೈಃ ಪಶ್ಯಂತಿ ಪಶವಃ ಶಾಸ್ತ್ರೈಃ ಪಶ್ಯಂತಿ ಭೂಸುರಾಃ ।
> ಚಾರೈಃ ಪಶ್ಯಂತಿ ರಾಜಾನಃ ಚಕ್ಷುರ್ಭ್ಯಾಮಿತರೇ ಜನಾಃ"

ಹೀಗೆಂದು ಆ ಚಾರನು ಮರಳಲು; ವಹ್ನಿರಾಜನು ವಿಚಾರಕ್ಕೊಳಗಾದನು; ಆಕೆಯಲ್ಲಿ ಕಾವಮಾರ್ತನಾಗಿ, ಏನಾದರೂ ಉಪಾಯ ಮಾಡುವೆನೆಂದು ಬಗೆದನು. ಇದೀಗ ಬೇರೆ ಬೇರೆ ಕೆಲಸಕ್ಕೆ ಕೆಲವರನ್ನು ಚಾರರನ್ನು ನಿಯೋಜಿಸುವನು; ದೇವದಾಸನನ್ನು ಏಳು ಕಡಲಾಚೆಗೆ ಸಾಗಿ, 70 ದಿನ ತಪಸ್ಸು ಮಾಡಿ ಮಣಿ ಪಡೆದು ಬರಲು ಕಳುಹುವೆವೆಂದು ನಿರ್ಧರಿಸಿದನು.

ದೇವದಾಸನು ಆ ತರದ ರಾಜಾಜ್ಞೆಯಂತೆ ಹೊರಡುವನು. ಶುಕವು ಅವನಿಗೆ ಧೈರ್ಯ ಹೇಳಿತು. ತನ್ನ ಏಳುಗರಿಗಳಿಂದ 7 ಕಡಲನ್ನು ಸುಲಭವಾಗಿ ದಾಟಿ, 70 ದಿನಗಳಲ್ಲಿ ಮರಳಲು ಸಹಕರಿಸಿತು. ಮನೆಯೊಡತಿ ದಿನಾಲೂ ಗೌರಿಯುಪಾ-ಸನೆಗೆಳಸುವಳು. ಆಗ ರಾಜನಿಂದ 70 ದಿನದಲ್ಲಿ ಆಕೆಗೇನೂ ತೊಂದರೆಯಾಗದಂತೆ, ಗಿಳಿಯು ದಿನಕ್ಕೊಂದು ಕತೆ ಹೇಳುತ್ತಿರುವುದು. ಹೀಗೆ 84 ಶ್ಲೋಕಗಳಲ್ಲಿ ಪೀಠಿಕೆ ಹೇಳಲಾಗಿದೆ.

ಕನ್ನಡದಲ್ಲಿ ಭಾಮಿನೀ ಷಟ್ಪದಿ ರೂಪ ಪದ್ಯಗಳಲ್ಲಿ ಅನುವಾದಿಸಿದ ಈ ಮೇಲಿನ ಕಥಾಭಾಗವು 27 ಪದ್ಯಗಳಲ್ಲಿ ನಿರೂಪಿತವಾಗಿದೆ. ಆದರೂ ಅಲ್ಲಲ್ಲಿ ಮೂಲದ ವಿಷಯಕ್ಕಿಂತ ಹೆಚ್ಚು ಸೊಗಸಿನ ರೀತಿಯಲ್ಲಿದೆ. ಕೆಲವೆಡೆ ಸಣ್ಣಿಸಿದ್ದರೂ, ವಿಶೇಷ ಲೋಪ ಗಳಿಲ್ಲದಂತೆ ಸಾಗಿದೆಯೆಂದು ಹೇಳಲಡ್ಡಿಯಿಲ್ಲ. ಈ ಬಗೆಗೆ ಕೆಲವು ಸಂದರ್ಭಗಳು ಎತ್ತಿಬರೆದಿವೆ : ಮೂಲ ಸಂಸ್ಕೃತ ಪ್ರತಿ ಅಚ್ಚಾಗಿದ್ದರೆ. ವಾಚಕರು ಉಭಯ ಕೃತಿಗಳ ವಿಮರ್ಶೆಗೆಳಸಬಹುದು. (ಉತ್ತರ ಭಾರತದಲ್ಲಿ ಹೆಚ್ಚು ಪ್ರಸಾರವಿರುವ 'ಶೃಂಗಾರ ಶುಕ ಸಪ್ತತಿ' ಯೆಂಬುದು ತಂಜಾಪೂರ "ಸರಸ್ವತೀ ಮಹಲ್' ಲೈಬ್ರೆರಿಯಲ್ಲೂ, ಪುಣೆಯ ಭಾಂಡಾರ್ಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯಲ್ಲೂ ಹಸ್ತ ಪ್ರತಿಯಾಗಿದೆ ಕಾಶೀ ಶಹರಿನ ಮೋತಿಲಾಲ ಬನಾರಸಿದಾಸರಲ್ಲಿದು ಇತ್ತೀಚೆಗೆ ಅಚ್ಚಾಗಿದೆ. ಕನ್ನಡದ ಉಳಿದೆರಡು ಅನುವಾದಗಳು ದಕ್ಷಿಣ ಭಾರತ ಪ್ರತಿಯನ್ನು ಅವಲಂಬಿಸಿವೆಯೋ. ಉತ್ತರಭಾರತ ಪ್ರತಿಯನ್ನು ಆಧರಿಸಿವೆಯೋ ಎಂಬುದು ಅವುಗಳ ಮುದ್ರಣಾನಂತರ ತಿಳಿಯಬರಬೇಕಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಯಲ್ಲಿ ಇವುಗಳೆಲ್ಲವೂ ಹಸ್ತ ಪ್ರತಿಯಾಗಿರಬೇಕು: ಕವಿಚರಿತೆಯಲ್ಲಿ ಮೂವರು ಕವಿಗಳ ಕೃತಿಗಳ ಹೆಸರು ಮಾತ್ರ ಹೇಳಿವೆಯಲ್ಲದೆ. ಅವುಗಳ ಕುರಿತು ಹೆಚ್ಚಿನ ವಿವರವಿಲ್ಲ.

ಸದ್ಯಃ ಪದ್ಯರೂಪದ ಶರಜಾ ನಾಗಪ್ಪಯ್ಯನ ಕೃತಿ ದಕ್ಷಿಣ ಭಾರತ ಪ್ರತಿಯನುಸಾರ ಬರೆದುದೆಂಬುದು ಮಾತ್ರ ಇಲ್ಲಿ ವೇದ್ಯವಾಗುತ್ತದೆ):

ಪರಮ ವೈಭವದಿಂದಲಿಂದ್ರನು
ಸುರರ ಸಮ್ಮೇಳದಲಿ ಕುಳಿತಿರೆ
ತ್ವರಿತದಲಿ ನಾರದನು ಬರಲಿದಿರೆದ್ದು ಭಕ್ತಿಯಲಿ ॥
ಕರೆದು ಪೀಠವನಿತ್ತು ಪಿರಿದುಪ
ಚರಿಸಿ, ನಾ ಕೃತ ಕೃತ್ಯನಾದೆನು
ದರುಶನವಿದೆಲ್ಲರಿಗೆ ದುರ್ಲಭವೆಂದು ಮನ್ನಿಸಿದ ॥

ನಾರದನನ್ನು ಇಂದ್ರನು ಸಭೆಯಲ್ಲಿ ಪ್ರಶ್ನಿಸಿದನೆಂಬ ಒಂದು ಮಾತಿಗೆ ಮೊದಲು ಉಪಚಾರ ಹಾಗೂ ಸ್ವಯಂ ಕೃತಕೃತ್ಯತೆಯ ವಿಜ್ಞಾಪನೆ ಹಾಗೂ ತತ್ಕಾರಣಗಳ ಬಿತ್ತರಿಕೆಯು ಈ ಕಾವ್ಯಾದಿಯಲ್ಲಿದ್ದು ಈ ಕವಿಯ ಕೌಶಲವನ್ನು ಸೂಚಿಸುತ್ತದೆ.

ಮರಳಿ ನಾರದ ಮುನಿಪನಿಂದ್ರನ
ಸಿರಿಮೊಗವನೀಕ್ಷಿಸುತ ನಿನ್ನಂ
ತರಿತವರ್ಗಳ ಕಾಣೆ, ಬಹುಲೋಕವನು ತಿರುಗಿದೆನು ॥
ಅರಸುತನ ಸಾಮಾನ್ಯವೇ ? ಸುರ
ರರಿಗಳನು ಸಂಹರಿಸಿ ಸತ್ಪ್ರೋ
ತ್ಕರದಿ ತ್ರಿಜಗವನಾಳೆನುತ ಹರಸಿದನು ಕರುಣದಲಿ ॥

ಇಲ್ಲಿ ಇಂದ್ರನ ಉಪಚಾರಕ್ಕೆ ಪ್ರತಿಯಾಗಿ ನಾರದನಾಡುವುದು ಉಚಿತವದೆ: "ನಿನ್ನಂತ-ರಿತವರ್ಗಳ ಕಾಣೆ, ಅರಸುತನ ಸಾಮಾನ್ಯವೇ? ಸತ್ಪ್ರೋತ್ಕರದಿ ತ್ರಿಜಗವನಾಳು" ಎಂಬೀ ವಚನ ತ್ರಯವು ಸರಸಸಲ್ಲಾಪದಂತಿದೆ.

ಸಕಲ ಧರ್ಮರಹಸ್ಯದಿರವನು
ಪ್ರಕಟದಿಂ ಕೇಳಿಹೆನು, ತತ್ತ್ವದ
ಸುಖದ ಸಾರವ ಕೇಳಬೇಕೆಂಬಿಚ್ಛೆಯುದ ಮನಕೆ ॥
ನಿಕರವಾಗಿದೆಯದರ ಬಗೆಯನು
ಯುಕುತಿಯಿಂ ಹೇಳುವರದಾರೆನೆ,
'ಶುಕ ಹೊರತು ಮತ್ತಾರಿಗೂ ಸಾಧ್ಯಾಂಶವಲ್ಲೆಂದ' ॥

ಇಂದ್ರನ ಪ್ರಶ್ನೆ ಹಾಗೂ ನಾರದನ ಪಡಿನುಡಿ ಕ್ರಮಿಕವಾಗಿದೆಯಿಲ್ಲಿ. ಅಗ್ನಿಯು ಅದನ್ನು ಆಕ್ಷೇಪಿಸಿದನು, 'ಸುರಪತಿ ಸಾನುರಾಗದೊಳಾ ಪ್ರಸಂಗವನಾಗ ನಿಲಿಸಿದನು'.

ಸಭೆಯನ್ನೆ ಇಂದ್ರನು ಮುಗಿಸಿದನು. 'ಉಭಯರಲ್ಲಿ ಮಹತ್ಸಂವಾದ'ದ ಸೂಚನೆ ಯೇನೋ ಮೂಲದಲ್ಲಿದೆ; ಇಲ್ಲಿ ಆ ಬಗೆತವೇ ನಿಲ್ಲಿಸಲಾಗಿತ್ತು.

ಆ ಪರೀಕ್ಷೆಗಾಗಿ ವಹ್ನಿ, ಇಂದ್ರ, ಶಚಿಯರು ಮತ್ತು ಶುಕನು ಭೂಲೋಕದಲ್ಲಿ ಜನಿಸಿದರು. ಆ ವಹ್ನಿರಾಯನ ವರ್ಣನೆ ಕನ್ನಡದಲ್ಲೂ ಕಡಿಮೆಯಾಗಿಲ್ಲ; ಸಂಸ್ಕೃತದ ಛಾಯಾನುವಾದವಲ್ಲ:

"ಕ್ಷತ್ರಿಯರ ಕುಲದಲ್ಲಿ ಜನಿಸಿ ವಿ
ಚಿತ್ರ ಮಹಿಮೆಯ ಮೆರೆದ ವಹ್ನಿ ಧ
ರಿತ್ರಿಯೊಡೆಯನ ಗುಣಗಳನು ವಿವರಿಸಲಸಾಧ್ಯವದು ॥
ಗಾತ್ರದಲಿ ದೃಢತರನು ನಿರುಪಮ
ಪುತ್ರವಂತನು ಸರ್ವಜನ ಸ
ನ್ಮಿತ್ರನುರು ಸರ್ವಜ್ಞನುತ್ತಮನಧಿಕ ಕೋವಿದನು ॥

ವಸುಮತೀ ವಧುಗೊಳ್ಳಿದನು ಶೋ
ಭಿಸುತಿಹುದು ವರ್ಣಾಶ್ರಮಂಗಳು
ಮುಸುಕಿಕೊಂಡಿಹುದಗ್ನಿಹೋತ್ರ ಜ್ವಾಲೆ ದೆಸೆದೆಸೆಗೆ ॥
ಅಸಮ ಸತ್ಪುರುಷರನು ದುರ್ಜನ
ವಿಸರ ನಿಂದಿಸದಿಹುದು. ಧರ್ಮದಿ
ವಸುವನೂ ವಸುವಿಂದ ಧರ್ಮವ ಗಳಿಸಿಕೊಂಡಿಹನು ॥

ಅನವರತ ಧರಿಸಿಹನು ಧನುವನು
ಅನುಪಮನು ಶರವಿದ್ಯೆಯಲಿ ವಾ
ಹನ ತುರಗದೇರಾಟದಲಿ (ಸು) ಸಮರ್ಥನಾಗಿಪನು ॥
ಮನವಿಹುದು ನೃಪಧರ್ಮದಲಿ ಬಹು
ಜನರ ಪೊರೆವನು ಮೇರುಧೈರ್ಯನು
ವಿನಯಗುಣ ಸಂಪನ್ನನೆನಿಸಿ ವಿರಾಜಿಸುತ್ತಿಹನು ॥

ಸಂಸ್ಕೃತ ಪ್ರತಿಗಿಂತ ಹೆಚ್ಚಿನ ಶೋಭೆಯೊದಗುವಂತೆ ಕನ್ನಡ ಕಾವ್ಯದಲ್ಲಿ ಕವಿ ಸ್ವಾಶ್ರಿತ ರಾಜನನ್ನು ಎಂಬಂತೆ – ವಸು ರಾಜನನ್ನು ಇಲ್ಲಿ ಹೊಗಳಿದುದು ಉಲ್ಲೇಖ್ಯವಿದೆ. 'ಧರ್ಮದಿಂ ವಸುವನು ವಸುವಿಂದ ಧರ್ಮವ ಗಳಿಸಿಕೊಂಡಿಹನು' ಎಂಬಲ್ಲಿ ಅನ್ಯೋನ್ಯ ವಿನಿಯೋಗದ ಸತ್ಫಲವು ಸಾರ್ವತ್ರಿಕವಾಗಿ ಸಾರಿದಂತಿದೆ ! ಶುಕನ ಮತ್ತು ದೇವದಾಸನ ಪ್ರಸ್ತಾಪದಲ್ಲಿ ಮೂಲದಲ್ಲಿರುವ ವಿಷಯಗಳೆಲ್ಲಾ ಇಲ್ಲಿ ಹೇಳಿಲ್ಲ ; ಎರಡು ಪದ್ಯಗಳಲ್ಲಿ ಸಾದಾರೀತಿಯಲ್ಲಿದೆ, ಅದರಲ್ಲೊಂದು :

ಒಡೆಯುನರಮನೆಯಲ್ಲಿ ನಿರಂತರ
ನಡೆವ ವೃತ್ತಾಂತಗಳೊಳೊಂದನು
ಬಿಡದೆ ಶುಕಗರುಹುತ್ತಲಾ ಶುಕನಿಂದ ಬುದ್ಧಿಯನು ॥
ದೃಢಮನದಿ ತಿಳಿವುತ್ತ ಪ್ರೀತಿಯೊ
ಳಡಿಗಡಿಗೆ ಬೇಕಾದ ಫಲವನು
ಕೊಡುತ ಬಹುದಿನ ಸಾಕಿಕೊಂಡಿರುತಿರ್ದನಾ ಭೃತ್ಯ ॥

ರಾಜನ ಮನೆಯಲ್ಲಿ ನಡೆವ ವೃತ್ತಾಂತಗಳೆಲ್ಲಾ ದಿನಾಲೂ ಅರುಹುವ ಓನ್ನೆಲೆಯು ಈ ಮುಂದಿನ ಕಥನಕ್ಕೆ ತಕ್ಕಂತಿದೆ. ರಾಜಾಜ್ಞೆಯಂತೆ ರಾತ್ರಿ ಸಂಚಾರ ಮಾಡಿ ಬರುತ್ತಿದ್ದ ಭೃತ್ಯರಲ್ಲೊಬ್ಬನು ದೇವದಾಸನ ಹೆಂಡತಿಯ ಸೌಂದರ್ಯಾದಿ ವಿವರಿಸಿದನು; ಮತ್ತು —"ರಾಜೇಂದ್ರ ನಿನಗಾ ಯುವತಿ ತಕ್ಕವಳಲ್ಲದನ್ಯರ ಹವಣೆ, ಕಂಡದರಲ್ಲಿ ಕಾಣೆನು ದಿಟವಿದೀಗೆಂದ" ಮಾತು ಕನ್ನಡದಲ್ಲಿ ಹೆಚ್ಚಿದೆ; ಚಾರನ ಮಾತಿನಿಂದಲೇ ರಾಜನಲ್ಲಿ ಕಾಮುಕತೆಯೊದಗಿ ರಾಜನು ಆಕೆಯನ್ನು ಸ್ವಾಧೀನ ಪಡೆಯಲುಜ್ಜುಗಿಸುವಲ್ಲಿ ಪೀಠಿಕೆಯಾಗಿದೆ.

ಆ ದೂತನಾಡಿದ ಆಕೆಯ ರೂಪಾದಿಗಳ ವರ್ಣನೆ ತುಸ ಮೂಲದಂತಿದೆ:

ರೂಪಿನಲಿ ಹರಿಪತ್ನಿ, ಗುಣದ
ಲ್ಲಾ ಪಿನಾಕಿಯ ರಾಣಿ, ಶಾಸ್ತ್ರಕ
ಲಾಪದಲ್ಲಜನರಸಿ, ರಾಕಾಚಂದ್ರ ಸದೃಶಮುಖಿ ॥
ಚಾಪಲಾಂಬಕಿ ಚಾರುನಾಸೆ ಮ
ಹಾ ಪಯೋಧರೆ ಮಂದಗಾಮಿನಿ
ಕೋಪನಾಮಣಿ ಕೋಮಲಾಂಗಿಯೆನುತ್ತ ಸೂಚಿಸಿದ ॥

ಮೂಲದ ಸೂಕ್ತಿಯು ಚೆಲುವಾಗಿ ಕನ್ನಡಿಸಲ್ಪಟ್ಟಿದೆ:

ಪಶುಗಳಾಘ್ರಾಣದಲಿ ತಿಳಿವವು,
ಅಸಮ ಶಾಸ್ತ್ರದಿ ವಿಬುಧರರಿವರು
ಕುಶಲ ಬುದ್ಧಿಯನುಳ್ಳ ಚರರಿಂ ಬಲ್ಲರೆನಿಸುವರು ॥
ವಸುಮತೀಶರು, ಮಿಕ್ಕವರ್ಗಳು
ಸಸಿನದಿಂ ಕಂಡಲ್ಲದರಿಯರು,
ಪುಸಿಯದಲ್ಲೆಲೆ ಭೂಪ ಮಂಚಿಸದುಸುರ್ವೆ ನಾನೆಂದ ॥

ದೆ ವದಾಸನನ್ನು ದೂರಕ್ಕೆ ಕಳುಹುವಂತೆ, ಆಕೆಯನ್ನು ಮತ್ತೆ ವಶೀಕರಿಸುವಂತೆ ವಹ್ನಿರಾಯನು ಮುಂದಾಗಿ ನಿರ್ಧರಿಸಿದ ವಚನಗಳು ಮೂಲದಲ್ಲಿ ಮತ್ತೊಮ್ಮೆ ಆತನಿಗೆನ್ನುವಲ್ಲಿಯೂ ಇವು ಪೌರಾಣಿಕವಾಗಿ ಸಾಧುವಾಗಿದೆ : ಕನ್ನಡದಲ್ಲಿ ಆ

ದ್ವಿರುಕ್ತಿಯಿಲ್ಲ ! ಆತನೊಡನೆ ಸಮಜಾಯಿಸುವ ರೀತಿ ಕನ್ನಡದಲ್ಲಿ ಹೆಚ್ಚಾಗಿ, ಸೊಗಸಿದೆ:

ಬಾರೆಲವೊ ಬಾ ದೇವದಾಸನೆ
ಯಾರ ಸಲಹಿದಡೇನು, ಸಮಯಕೆ
ಜಾರಿ ಹೋಹರು, ಏನ ಕೊಟ್ಟರು ಮರಳಿ ಬಯಸುವರು ॥
ಹೀರಿ ಹಿಪ್ಪೆಯ ಮಾಡಿ ಕಣ್ಣಲಿ
ನೀರ ಸುರಿಸುವರವರದಂತಿರ
ಲೂರಿಹುದು ನಿನ್ನಲ್ಲಿ ಮನ, ಎಣೆಯಾರು ನಿನಗೆಂದ ॥

ನಾನು ಬೆಸಸಿದ ಕಾರಿಯಕ್ಕನು
ಮಾನಿಸದೆ ನೀನೈದಿ ವಸ್ತುವ
ಸಾನು ಕೂಲಿಸಿಕೊಂಡು ಬಂದಿಷ್ಟವನು ಸಲಿಸಿದೆಡೆ ॥
ಏನು ಬೇಕದನೀವೆ, ತಪ್ಪುವ
ಹೀನ ಗುಣವೆನಗಿಲ್ಲ, ಬದುಕಿಗೆ
ನೀನೆನಿಸಿ ನಾ ನಡೆಸಿಕೊಂಬೆನು, ನಂಬಿ ನೋಡೆಂದ ॥

ಇನಿತು ಪರಿಯಲಿ ರಾಯನಾಡಿದ
ಘನದ ನುಡಿಗುತ್ತರವನೀಯದೆ
ವಿನಮಿತನು ತಾನಾಗಿ, ಬೆಸಸಾ ಊಳಿಗವನೆನಲು ॥

ರಾಜನ ಅನುನಯದಿಂದ ದೇವದಾಸನು ತಾನಾಗಿ 'ಬೆಸಸಾ ಊಳಿಗವ'ನೆನ್ನುವಂತೆ ಇಲ್ಲಿ ಹೇಳಿಸಿದ ರೀತಿ ರಾಜನೀತಿಯ ಚಮತ್ಕಾರದಿಂದ ಒಡಗೂಡಿದೆ. ಈ ಚಮತ್ಕೃತಿ ಮೂಲದಲ್ಲಿ ಹಾಗೆ ಹೇಳಿಸಿಲ್ಲ. (ಸಪ್ತ ಸಮುದ್ರದಾಚೆಯ ಚಂದ್ರಿಕಾಗಿರಿಗೆ ಹೋಗುವುದಾಗಲೀ. ಅಲ್ಲಿ ಎಪ್ಪತ್ತು ದಿನ ತಪಸ್ಸಿಂದ ದೇವರನ್ನು ಒಲಿಸಿ ಮಣಿಯನ್ನು ಪಡೆಯುವುದಾಗಲೀ. ಅಲ್ಲಿಂದ ಮರಳಿ ಬರುವುದಾಗಲೀ. ಅಸಾಧ್ಯವಾದ ಕಾರ್ಯವಾದುದರಿಂದಲೇ ಈ ಕೆಲಸಕ್ಕೆ ದೇವದಾಸನನ್ನು ಕಳುಹಿದರೆ, ಆತ ಮರಳುವಂತಿಲ್ಲ; ಆಮರಣಪರ್ಯಂತ ಆತನ ಪತ್ನಿ ತನಗೆ ಸೇರುವಳೆಂಬ ಹವಣಿಕೆಯೇ ಈ ಪರ್ಯಾಯದ ಆಣತಿಯ ಕಾರಣವಾಗಿರಬೇಕು. ಪರಂತು, ದೇವದಾಸನ ಮನೆಯಲ್ಲಿರುವ ಶುಕನು ತನ್ನೇಳು ಗರಿಗಳನ್ನು ಕಟ್ಟಿಕೊಂಡು ಸಪ್ತ ಸಮುದ್ರವನ್ನು ಅನಾಯಾಸವಾಗಿ ದಾಟಲು ಸಹಕರಿಸಿತು. ಮನೆಯಲ್ಲಿ ಆ ಎಪ್ಪತ್ತು ದಿನಪಿಡಿ ಅದಾರಿಂದಲೂ ಅದೇನೂ ತೊಂದರೆಯಾಗದಂತೆ ಶುಕವು ಜಾಗರೂಕತೆಯಿಂದಿತ್ತು ಎಂಬುದೇ ದೈವಿಕವಾಗಿರುವ ಈ ಕಥನದ ತಿರುಳಾಗಿದೆ! ಎಪ್ಪತ್ತು ಕತೆಗಳ ನೆವದಿಂದ, ಲೌಕಿಕ–ಅಲೌಕಿಕ ಸುಖಾಧಿಕ್ಯವೊದಗಲು ಅವನೂ ಪತಿವ್ರತೆಯರನ್ನು ಕೆಡಿಸಲಾಗದೆಂಬುದು ಇಲ್ಲಿ ಸಾರಿದೆ!)

ದೇವದಾಸನು ಸಪ್ತ ಸಮುದ್ರಗಳ ಲಂಘನದ ಬಗೆಗೆ ಶಂಕಿಸುವ ಪದ್ಯ ಕನ್ನಡ ಕವಿಯ ಕಾಣ್ಕೆಯಾಗಿದೆ:

ಶರಧಿಯೇಳನು ದಾಟಿ ಮಿಗೆ ದಶ
ಶಿರನ ನಗರವ ಪೊಕ್ಕು, ಸೀತೆಯ
ಪರಿಯನರಿದೈದುವಡೆ ಶ್ರಮವೆಂತಾಯ್ತು ಮಾರುತಿಗೆ ॥
ಭರದಿ ಸಪ್ತ ಸಮುದ್ರಗಳನು-
ತ್ತರಿಸಲಾಪನೆ, ಚಂದ್ರಿಕಾಗಿರಿ
ಯಿರವ ಬಲ್ಲವರಾರು, ಸೇವೆಯ ಕಷ್ಟ ಕೇಳೆಂದ ॥

ದೇವದಾಸನು ಶುಕನಿಂದ ಗರಿ ಪಡೆದು, ಸತಿಯ ಬಳಿಗೈದಿ ತಿಳಿಹುವುದು ಇಲ್ಲಿ ಸಮುಚಿತವಾಗಿ ನಿರೂಪಿಸಲಾಗಿದೆ; ಮೂಲದಲ್ಲಿಲ್ಲದ ಈ ಸಂದರ್ಭದ ಅವಶ್ಯಕತೆಯಿದೆ; ಆಕೆ, 'ಕಂಬನಿಯ ಮಿಡಿವುತ ಕಳುಹಿದಳು ಪತಿಯ'. ದೇವದಾಸನು ಹೊರಟಾಗ ಶುಭ ಶಕುನಗಳಾದುವು; ವಾಚಕ ಮಹೋದಯರು ಈ ಘಟನೆ ಶುಭ ಕಾರಕವಾಗಿದೆಯೆಂದು ತಿಳಿವಂತಿದೆ! ದೇವದಾಸ ಚಂದ್ರಿಕಾಗಿರಿಗೆ ತಲುಪಿ, ತಪಸ್ಸಿಗೆಳಸಿದನು; ಊರಲ್ಲಿ ಆತನ ಪತ್ನಿ "ಗೌರಿಯ ನೋನುತಿರ್ದಳು ತನ್ನ ಮನೆಯೊಳಗೆ".

ಈ ಪೀಠಿಕಾವತರಣದಲ್ಲಿ, ಕನ್ನಡದ ಕವಿ ಶರಜಾ ನಾಗಮಂತ್ರೀಶನು ಕೈಗೊಂಡ ಕಾವ್ಯರಚನೆಯಲ್ಲಿ ಮೂಲಕ್ಕಿಂತ ಅದೆಷ್ಟು ಸೊಗಸಾಗಿ ವರ್ಣನೆಗೊಳಿಸಿದ್ದಾನೆಯೆಂಬುದು 'ಸ್ಥಾಲೀಪುಲಾಕ ನ್ಯಾಯ'ದಂತೆ ತಿಳಿಯುಬರುತ್ತದೆ. ಅಂತೆ, ಈ ಮೇಲಿನ ಕಥನ ಗಳಲ್ಲೂ ಕೇವಲ ಪುರಾಣವಲ್ಲದೆಯೂ, ಸುರಸತೆಯೊದಗುವಂತೆಯೂ ಅಲ್ಲಲ್ಲಿಗೆ ಸಮುಚಿತವಾಗುವ ವಿಚಾರಗಳನ್ನು ವರ್ಣನೆಗಳನ್ನು ಸಂವಾದಗಳನ್ನು ಸಮನ್ವಯಿಸಿದೆ ಯೆಂಬುದಕ್ಕೆ ಈ ಮೊದಲ ಸಂಧಿಯೇ ಉದಾಹರಣವು! ಇದನ್ನು ಕನ್ನಡದ ರಸಿಕರು "ಓದಿಸಿ ಕೇಳಿ ಮಿಗೆ ಮನ್ನಿಸುವರು" ಎಂಬ ಕವಿಭಣಿತಿ ಸಾರ್ಥಕ ವಾಗಲಿ! ಇತಿ ಶಮ್!

•

ಕೆ. ವೆಂಕಟರಾಯಾಚಾರ್ಯ

2 ನಂದಿಧ್ವಜ

ವೀರಶೈವರು ಶಿವಪರವಾದ ಉತ್ಸವಗಳನ್ನು ನಡೆಸುವಲ್ಲಿ ನಂದಿ ಧ್ವಜವನ್ನು ಹೊರಡಿಸುವ ಸಂಪ್ರದಾಯ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಈ ಧ್ವಜದ ಅರ್ಥವೇನು? ಈ ಸಂಪ್ರದಾಯ ಎಂದಿನಿಂದ ನಡೆದುಕೊಂಡು ಬಂದಿದೆ ? ಎಂಬೆಲ್ಲ ಅಂಶಗಳು ಕಾಲದ ತೆರೆಯ ಮರೆಯಲ್ಲಿವೆ. ಈ ಅಂಶಗಳನ್ನು ವಿಚಾರಮಾಡಿ ಮಂಡಿಸುವ ಉದ್ದೇಶವನ್ನು ಈ ಲೇಖನದಲ್ಲಿ ಇಟ್ಟುಕೊಳ್ಳಲಾಗಿದೆ.

ನಂದಿಧ್ವಜ, ನಂದಿಕಂಬ, ನಂದಿಕೋಲು ಎಂದು ಇದನ್ನು ಕರೆದಿರುವುದುಂಟು. 'ನಂದಿಧ್ವಜ' ಎಂದಾಗ ಫಾ। ಕಿಟಲ್‌ರವರು A banner with a bull on it ಎಂದೂ, ನಂದಿಕಂಬ ಎಂದಾಗ A large bamboo pole with a metal nandi attached to its middle and a vyasahasta on its top ಎಂದೂ ಅರ್ಥ ಹೇಳಿದ್ದಾರೆ. ನಂದಿಕೋಲು ಎಂಬ ಶಬ್ದವನ್ನು ಕಿಟಲ್‌ರವರು ಬಹುಶಃ ಗಮನಿಸಿರಲಾರರು.

'ನಂದಿಧ್ವಜ' – 'ನಂದಿಕೋಲು' ಈ ಎರಡು ಶಬ್ದಗಳ ಮೂಲರೂಪ 'ನನ್ದಿ'. 'ನನ್ದಿ' ಶಬ್ದಕ್ಕೆ Joy, delight, welfare, happy, ಎಂಬ ಅರ್ಥಗಳಲ್ಲದೆ, ಶಿವನ ಸೇವಕ, ಶಿವನ ವಾಹನ ಎಂದೂ ಅರ್ಥವಾಗುತ್ತದೆ. ಅಂದರೆ ನಂದಿಧ್ವಜ ಶಿವನ ವಾಹನನಾದ 'ನಂದಿ'ಗೆ ಸಂಬಂಧಿಸಿದ್ದು ಎಂದು ಸ್ಪಷ್ಟವಾಗುತ್ತದೆ.

ನಂದಿ ಅಥವಾ ವೃಷಭನ ಕಲ್ಪನೆ ವೀರಶೈವರಲ್ಲಿ ಪ್ರಾಚೀನವಾದುದು. ನಂದಿ ವೃಷಭ ಧರ್ಮಸಂಕೇತವಾಗಿಯೂ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಶಿವನು ತನ್ನನ್ನು 'ವೃಷಧ್ವಜ'ನೆಂದು ಕರೆದುಕೊಂಡಿದ್ದಾನೆ.—

"ಅತ್ರಾಪಿ ಸ್ವಯಮೇವಾಹಂ ವೃಷಧ್ವಜ ಇತಿಸ್ಮೃತಃ
ಸಾನ್ನಿಧ್ಯಂ ಕೃತವಾನ್ದೇವಿ ಸದಾಽಹಂ ದೃಶ್ಯತೇ ತ್ವಯಾ" [1]

(ವೃಷಭವೇ ಧ್ವಜದಲ್ಲಿ ಗುರುತಾಗಿ ಉಳ್ಳ, ಧರ್ಮವೇ ಬಾವುಟವಾಗಿ ಉಳ್ಳ' ಎಂಬ ಅರ್ಥದಲ್ಲಿ ವೃಷಧ್ವಜನೆಂದು ಕರೆಯಲ್ಪಡುತ್ತಾ ನಾನೇ ವಾಸವಾಗಿದ್ದೇನೆ.) ಎಂದು ಶಿವನು ತನ್ನ ಸತಿಗೆ ಹೇಳುವಲ್ಲಿ ಈ ಅಂಶ ವ್ಯಕ್ತವಾಗುತ್ತದೆ. ಇದರಿಂದ ಶಿವನು ತನ್ನ ಧರ್ಮ ಧ್ವಜವಾಗಿ ನಂದಿಯನ್ನು (ವೃಷಭನನ್ನು) ಬಳಸಿಕೊಂಡನೆಂಬುದು ಸ್ಪಷ್ಟವಾಗುತ್ತದೆ.

---

1 'ಲಿಂಗಮಹಾ ಪುರಾಣ' (ಅರಮನೆಯ ಪ್ರಕಟಣೆಗಳು) ಪೂರ್ವಭಾಗ, ಅಧ್ಯಾಯ 92

ನಂದೀಶ್ವರ – ವೃಷಭನ ಬಗೆಗೆ ಅನೇಕ ಕತೆಗಳು ಪ್ರಚಲಿತವಿವೆ: ಇವನನ್ನು ದ್ವಿತೀಯ ಶಂಭು ಎಂಬುದಾಗಿ ವೀರಶೈವರು ಗೌರವಿಸುವರು. ಶಿವನ ವಾಹನ ವಾಗಿದ್ದರೂ ಭಕ್ತಶಿರೋಮಣಿ. ಮಹಾಶೂರ. ರಾವಣನಿಗೆ ಇವನು ಶಾಪವಿತ್ತನಂತೆ. ತ್ರಿಪುರದಹನ ಸಂದರ್ಭದಲ್ಲಿ ನೆಲದಲ್ಲಿ ಹೂತುಹೋದ ರಥವನ್ನು ಮೇಲೆತ್ತಲು ಸಾಧ್ಯವಾದುದು ಇವನಿಂದಲೇ. ದಕ್ಷಬ್ರಹ್ಮ ಶಿವನ ವಿರೋಧವಾಗಿ ಯಾಗ ಮಾಡಿ ದಾಗ ಇವನು ಆ ಯಾಗಶಾಲೆಯಲ್ಲಿ ದಕ್ಷಬ್ರಹ್ಮನನ್ನು ಹೀಯಾಳಿಸಿದನೆಂದು ತಿಳಿದು ಬರುತ್ತದೆ. ಈ ನಂದಿಯೇ ಬಸವನಾಗಿ ಭೂಲೋಕದಲ್ಲಿ ಅವತರಿಸಿ ಧರ್ಮವನ್ನು ಉದ್ಧರಿಸಿದನೆಂದು ಅನೇಕ ಕಥೆಗಳು ಈತನ ಬಗೆಗೆ ಇವೆ. ಶಿವದೇವಾಲಯಗಳಲ್ಲಿ ಶಿವನ ಮುಂದೆ ಈತನ ವಿಗ್ರಹ ಇದ್ದೇ ಇರುತ್ತದೆ. "ಈರಣ್ಣನ ಮುಂದೆ ಬಸವಣ್ಣ" ಎಂಬ ಗಾದೆಯೂ ಆಗಿದೆ. ಇವೆಲ್ಲವನ್ನೂ ಗಮನಿಸಿದಾಗ ಶಿವನ ಧರ್ಮ ಸಂಕೇತ ವಾಗಿಯೂ ಧ್ವಜವಾಗಿಯೂ ಈ ನಂದಿ ವಿಗ್ರಹ ಬಳಕೆಯಲ್ಲಿತ್ತೆಂದು ತಿಳಿಯಬಹುದು. ಇದನ್ನು ಸ್ಪಷ್ಟೀಕರಿಸುವಂತೆ ವಿರೂಪಾಕ್ಷ ಪಂಡಿತನು "ನಂದೀಶ ನೀಂ ಪೆರನೆ ನಮ್ಮಂತ-ರಂಗದೊಳಿರ್ಪ ನಿರ್ಮಲಿನ ಧರ್ಮಸ್ವರೂಪಂ ದ್ವಿತೀಯ ಶಂಭು"[2] ಎಂದು ತನ್ನ ಕಾವ್ಯದಲ್ಲಿ ಹೇಳಿದ್ದಾನೆ.

"ಪ್ರಾಚೀನ ಈಜಿಪ್ಟ್‌ನಲ್ಲಿ ವೃಷಭ ಧ್ವಜವಿದೆ. ಇದು ಪೂರ್ವದೇಶದಿಂದ ಎಂದರೆ ಹಿಂದೂಸ್ಥಾನದಿಂದ ಬಂದುದು"[3] ಎಂದು ಎಚ್. ಫ್ರಾಂಕ್‌ಫೋರ್ಟರ ಅಭಿಪ್ರಾಯ ಎಂದು ಶಂ. ಬಾ. ಜೋಶಿ ತಿಳಿಸುತ್ತಾರೆ. "ದೇವಾಂಗ ಪುರಾಣದಲ್ಲಿ ದೇವಾಂಗರನ್ನು ನಂದಿ ಧ್ವಜರೆಂದು ಹೇಳಿದೆ. ನಂದಿಧ್ವಜವಿರುವುದರಿಂದ ಈ ಸಮಾಜವು ಶಿವೋಪಾಸಕರದೆಂದು ಅರ್ಥವಾಗುವುದು"[4] ಎಂದು ಇದೇ ಲೇಖಕರು ಅಭಿಪ್ರಾಯ ಪಡುತ್ತಾರೆ. ಇದರಿಂದ ನಮಗೆ ತಿಳಿಯುವ ಅಂಶಗಳೆಂದರೆ ನಂದಿಧ್ವಜದ ಕಲ್ಪನೆ ಅತಿ ಪ್ರಾಚೀನವೂ. ಒಂದು ಪಂಗಡದ ಹೆಸರಾಗಿಯೂ ಬಳಕೆಯಾಗುತ್ತಿದೆ ಎಂಬುವು.

ತ.ಸು.ಶಾಮರಾಯರು "ನಂದಿಕೋಲು" ಬಗೆಗೆ ವಿವರಣೆ ನೀಡುತ್ತಾ "ಲೋಕ ಮಯನೆಂಬ ರಕ್ಕಸ ಲೋಕ ಕಂಟಕನಾಗಿರಲು ಶಿವನು ಅವನನ್ನು ಕೊಂದು ಅವನ ಎಲುಬುಗಳನ್ನು ಕೋಲುಮಾಡಿಕೊಂಡು ಮಾಂಸಖಂಡಗಳನ್ನು ಗೆಜ್ಜೆಗಳಾಗಿಸಿ. ಚರ್ಮ ವನ್ನು ಬಾವುಟವನ್ನಾಗಿಮಾಡಿ, ನಂದಿಕೋಲನ್ನು ಸೃಷ್ಟಿಮಾಡಿದನು. ಆ ರಕ್ಕಸನ ತಂಗಿ ಮೇಲೆ ಬೀಳಲು ಅವಳನ್ನೂ ಕೊಂದು ಆ ಕೋಲಿನ ಪಕ್ಕದ ತಲೆಯನ್ನು ಸೃಷ್ಟಿಸಿದ"[5] ಎಂಬ ವಿವರಣೆ ನೀಡುತ್ತಾರೆ. ಇದಕ್ಕೆ ಅವರು ಅನುಭವಶಿಖಾಮಣಿ

---

[2] ಚನ್ನಬಸವ ಪುರಾಣ ; ಕಾಂಡ : 1 ; ಸಂಧಿ : 2 ; ಪದ್ಯ : 21.

[3] ಕರ್ಣಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಪು. 49

[4] ಅದೇ, ಪು. 20

[5] ತ. ಸು. ಶಾಮರಾಯ : ಶಿವಶರಣಕಥಾರತ್ನಕೋಶ.

(ಹಸ್ತಪ್ರತಿ: XI 2–18) ಎಂಬ ಕೃತಿಯನ್ನು ಆಧಾರವಾಗಿ ಇತ್ತಿದ್ದಾರೆ. ಇವರು ಕೊಡುವ ವಿವರಣೆಗೂ ನಂದಿಧ್ವಜದ ಕಲ್ಪನೆಯಲ್ಲಿ ಇರುವ ವಿವರಗಳಿಗೂ ಏನೇನೂ ಸಂಬಂಧವಿಲ್ಲ. ಹಾಗೆ ನೋಡಿದರೆ ನಂದಿಧ್ವಜ. ನಂದಿಕೋಲು ಬೇರೆ ಬೇರೆ ಇರಬಹುದೆಂಬ ಅನುಮಾನ ಬರುತ್ತದೆ.

ತುಮಕೂರು. ಬೆಂಗಳೂರು ಜಿಲ್ಲೆಗಳಲ್ಲಿ ನಂದಿಧ್ವಜ ವಿಶೇಷವಾಗಿ ಬಳಕೆಯಲ್ಲಿದೆ. ಈ ಸ್ಥಳಗಳಲ್ಲಿ ನಂದಿಧ್ವಜ ಎಂದು ಕರೆಯುವರೇ ಹೊರತು ನಂದಿಕೋಲು ಎನ್ನುವುದಿಲ್ಲ. ನಂದಿಧ್ವಜದ ವಿವರಗಳು ಈ ರೀತಿ ಇವೆ. "ಅದರಲ್ಲಿ ಬಳಕೆಯಾಗುವ ವಸ್ತುಗಳು ಹರಡೆ. ಪಾವು. ಪಂಚರಂಗಿ. ಚಾಮರ. ಹಲಗೆ. ಪಟ, ಜಾಲರಿಗಳು. ಈ ಹರಡೆಗಳು ಹದಿನೆಂಟು. ಇವು ಹದಿನೆಂಟು ರಾಕ್ಷಸರ ತಲೆಗಳು, ಪಾವುಗಳು ಅವರ ಕಂಠಗಳು, ಪಂಚರಂಗಿ ವ್ಯಾಸನತೋಳು. ಚಾಮರ ವ್ಯಾಸನ ಗಡ್ಡ, ಹಲಗೆ ರಾಕ್ಷಸರ ನಾಲಗೆ, ಈ ನಾಲಗೆಯ ಮೇಲೆ ನಂದಿ ನಾಟ್ಯ ಮಾಡುವನೆಂದೂ, ಪಟವು ರಾಕ್ಷಸರ ಚರ್ಮ"[6] ಎಂದೂ ವಿವರಣೆ ದೊರೆಯುತ್ತದೆ. ತುದಿಯಲ್ಲಿ ಕಲಶವೊಂದಿರುತ್ತದೆ. ಬಹುಶಃ ಇದು ವಿಜಯದ ಸಂಕೇತವಿರಬಹುದು. ಇಲ್ಲಿ ರಾಕ್ಷಸರಾರು ? ಹದಿನೆಂಟು ಜನರೇ ರಾಕ್ಷಸರೇನು? ಇವರನ್ನು ಸಂಹರಿಸಿದ ನಂದೀಶನು ಇವರ ತಲೆಗಳನ್ನು ಗಳುವೊಂದಕ್ಕೆ ಏರಿಸಿದ್ದೇಕೆ? ವ್ಯಾಸನ ತೋಳು, ಗಡ್ಡಗಳ ಬಳಕೆ ಇಲ್ಲೇಕಾಯ್ತು? ಎಂಬೆಲ್ಲ ಸಮಸ್ಯೆಗಳು ಹುಟ್ಟುತ್ತವೆ.

ನಂದಿಧ್ವಜಕ್ಕೂ ವ್ಯಾಸನ ತೋಳಿಗೂ ಹೆಚ್ಚು ಸಂಪರ್ಕವಿದೆ. ಈ ಅಂಶ ವ್ಯಾಸ ಪ್ರಣೀತ ಪುರಾಣಗಳಿಂದ ವ್ಯಕ್ತವಾಗುತ್ತದೆ. ಮಹಾಪ್ರಾಜ್ಞನಾದ ವ್ಯಾಸನು ಮಹಾಭಾರತವನ್ನು ಬರೆದಾದ ಮೇಲೆ ಭೂಮಿಯೆಲ್ಲವನ್ನೂ ಸುತ್ತಿದ. ಕೊನೆಗೆ ನೈಮಿಷಾರಣ್ಯವನ್ನು ಪ್ರವೇಶಿಸಿದನು. ಅಲ್ಲಿ ಋಷಿಗಳು ಶಿವನೇ ಶ್ರೇಷ್ಠನೆಂದೂ ಮುಕ್ತಿಪ್ರದನೆಂದೂ ಆರಾಧಿಸುತ್ತಿದ್ದರು. ವ್ಯಾಸನು ಆಗ ಆ ಋಷಿಗಳನ್ನು ಕುರಿತು ತನ್ನ ಮುಂಬೆರಳನ್ನು ಮೇಲೆ ಎತ್ತಿ ಅಚ್ಯುತನಿಗಿಂತ ಉತ್ತಮನಾದ ದೇವರಿಲ್ಲ ಎಂದು ಹೇಳಿದನು. (ಶ್ಲೋಕ 11 ರಿಂದ 23ರ ವರೆಗೆ). ಆಗ ಋಷಿಗಳು ನೀನು ಕಾಶಿಯಲ್ಲಿ ಈ ಮಾತನ್ನು ಹೇಳು ನಾವು ನಂಬುವವು ಎಂದು ತಿಳಿಸಿದರು. ವ್ಯಾಸನು ಕಾಶಿಗೆ ಹೋಗಿ ಸ್ನಾನಾಹ್ನಿಕಗಳನ್ನು ಮುಗಿಸಿ ಹರಿಯನ್ನು ಸ್ತುತಿಸುತ್ತಾ (ಶ್ಲೋಕ 30 ರಿಂದ 39ರ ವರೆಗೆ) ವಿಶ್ವೇಶ್ವರ ದೇವಸ್ಥಾನವನ್ನು ಹೊಕ್ಕನು. ಅಲ್ಲಿಯೂ ಆತನು

"ಪರಿನಿರ್ಮಥ್ಯ ವಾಗ್ಜಾಲಂ ಸುನಿಶ್ಚಿತ್ಯಾ ಸಕೃದ್ಬಹೂ
ಇದಮೇಕಂ ಪರಿಜ್ಞಾತಂ ಸೇವ್ಯಃ ಸರ್ವೇಶ್ವರೋ ಹರಿಃ"

---

6 ಈ ವಿವರಣೆ ಇತ್ತವರು ನನ್ನ ಪೂಜ್ಯ ತಂದೆಯವರು.

ಎಂದು ಎತ್ತರದ ಧ್ವನಿಯಲ್ಲಿ ತನ್ನ ತೋಳುಗಳನ್ನು ಮೇಲೆತ್ತಿ ಹೇಳಿದನು. ಇದರಿಂದ ಕ್ರುದ್ಧನಾದ ನಂದೀಶ್ವರನು ಅವನು ಮೇಲೆ ಎತ್ತಿದ್ದ ಬಾಹುಗಳನ್ನೂ ನಾಲಗೆಯನ್ನು ಸ್ತಂಭಿಸಿದನು. ವ್ಯಾಸ ತಾನು ಏನೂ ಮಾಡಲಾರದವನಾಗಿ ಕಳವಳಗೊಂಡಿರಲು ವಿಷ್ಣುವು ವ್ಯಾಸನಿಗೆ ಕಾಣಿಸಿಕೊಂಡು, 'ನಿನ್ನ ಅಪರಾಧದಿಂದಾಗಿ ನನಗೂ ಉಳಿಗಾಲ ವಿಲ್ಲ. ವಿಶ್ವಕ್ಕೆಲ್ಲಾ ವಿಶ್ವೇಶ್ವರನೇ ಅಧಿಕನು. ಅವನಿಗೆ ಸಮಾನರು ಬೇರೆ ಯಾರೂ ಇಲ್ಲ... ಶಿವನೇ ಸರ್ವೋತ್ತಮ ಎಂದು ಹಾಡು' ಎಂದು ಬುದ್ಧಿ ಹೇಳಿದನು. ವ್ಯಾಸನು ತನಗೆ ಉಂಟಾಗಿರುವ ದುರವಸ್ಥೆಯನ್ನು ತಿಳಿಸಿದನು. ವಿಷ್ಣುವು ಕರುಣಿಸಿ ಅವನನ್ನು ಸ್ಪರ್ಶಿಸಲು ಆತನಿಗೆ ಮಾತನಾಡಲು ಸಾಧ್ಯವಾಯಿತು. ಆಗ ವ್ಯಾಸ ಮತ್ತೆ ತನ್ನ ಬಲತೋಳನ್ನು ಮೇಲಕ್ಕೆತ್ತಿಕೊಂಡು —

"ಏಕೋ ರುದ್ರೋ ನ ದ್ವಿತೀಯೋ ಯತಸ್ತ
ದ್ಬ್ರಹ್ಮೈವೈಕಂ ನೇಹ ನಾನಾಸ್ತಿ ಕಿಂಚಿತ್
ಯದ್ಯಪ್ಯನಃ ಕೋऽಪಿ ವಾ ಕುತ್ರ ಚಿದ್ವಾ
ವ್ಯಾಚಷ್ಟಾಂ ತದ್ಯಸ್ಯ ಶಕ್ತಿರ್ಮದಗ್ರೇ"

ಎಂದು ಉಚ್ಚಸ್ವರದಲ್ಲಿ ಕೂಗಿ ಹೇಳಿದನು. ಶಿವನು ಸಂಪ್ರೀತನಾಗಿ ನಂದಿಯನ್ನು ನೋಡಲು, ನಂದಿ ಕರುಣಿಸಿ ವಿಮುಕ್ತಿಗೊಳಿಸಿದನು.[7] ಈ ಕಥೆಯು ಶಂಕರ ಸಂಹಿತೆ, ಭಾಗ–6; ಅಧ್ಯಾಯ 77ರಲ್ಲಿಯೂ ಬರುತ್ತದೆ. ಇದನ್ನು ಕುರಿತು ಗಳಗನಾಥರು ತಮ್ಮ 'ಶ್ರೀ ಶೈವ ಸುಧಾರ್ಣವ' ಎಂಬ ಕೃತಿಯಲ್ಲಿ ವಿಚಾರಮಾಡುತ್ತಾ "ವ್ಯಾಸನ ಭುಜ ಸ್ತಂಭನದಿಂದ ಶಿವ ಸರ್ವೋತ್ತಮತ್ವಕ್ಕೆ ದೃಢತೆ ಬಂದದ್ದರಿಂದಲೇ ಎಷ್ಟೋ ಶೈವರು ಆ ಕಾರಣವನ್ನೇ ಶಿವ ಸರ್ವೋತ್ತಮತ್ವದ ಸಾಕ್ಷಿಯೆಂದು ತಿಳಿದು ವ್ಯಾಸನ ತೋಳನ್ನು ಮೆರೆಸುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ"[8] ಎಂದು ಹೇಳುತ್ತಾರೆ.

ಈ ಅಂಶಗಳನ್ನು ಗಮನಿಸಿದಾಗ ಬಹುಶಃ ವೀರಶೈವರು ತಮ್ಮ ಧರ್ಮದ ಶ್ರೇಷ್ಠತೆಯನ್ನು ಮೆರೆಸಲು ಈ ವ್ಯಾಸ ತೋಳನ್ನು ಶೈವ ಧರ್ಮದ ಪ್ರತೀಕನೆನಿಸಿದ ನಂದಿಯೊಂದಿಗೆ ಮೆರೆಸಲು ಪ್ರಾರಂಭಿಸಿರಬೇಕು. ಈ ಸಂಪ್ರದಾಯ ಎಂದಿನಿಂದ ಆರಂಭವಾಯಿತೆಂದು ಖಚಿತವಾಗಿ ಏನನ್ನೂ ಹೇಳುವಂತಿಲ್ಲ.

---

[7] ಸ್ಕಾಂದ ಮಹಾಪುರಾಣ ಭಾಗ 4; ಕಾಶೀಖಂಡ; ಅಧ್ಯಾಯ: 95; ಪುಟ 872. ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ (ಅರಮನೆ ಪ್ರಕಟಣೆಗಳು.)

[8] ಶ್ರೀ ಗಳಗನಾಥರು ಮತ್ತು ಮಲ್ಲಾರಿ ದೀಕ್ಷಿತ ಚಿಂತಾಮಣಿ ಕಕ್ಕನವರು–ಶ್ರೀ ಶೈವ ಸುಧಾರ್ಣವ. ಪು; 291–302. (ಗಳಗನಾಥ ಗ್ರಂಥಮಾಲೆ. 1923.)

ಉತ್ತರ ಕರ್ನಾಟಕದಲ್ಲಿ ಈ ಧ್ವಜ ವಿಶೇಷವನ್ನು 'ನಂದಿಕೋಲು' ಎಂದೇ ಜನ ಸಾಮಾನ್ಯರು ಕರೆಯುತ್ತಿದ್ದಾರೆ. 'ನಂದಿಧ್ವಜ' ಎಂಬುದು ಕಾವ್ಯಮಯ ಭಾಷೆ ಎಂದು ಅಭಿಪ್ರಾಯ ಆ ಕಡೆ ಇದ್ದಂತೆ ಕಂಡು ಬರುತ್ತಿದೆ. ಆ ಕಡೆಯಲ್ಲಿ ಬಳಕೆಯಲ್ಲಿರುವ ನಂದಿಕೋಲಿನ ವಿವರ ಈ ರೀತಿ ಇದೆ. 'ನಂದಿಕೋಲು' ಒಂದು ಸುದೀರ್ಘವಾದ ಬಿದುರಿನ ಕೋಲು. ಅದರ ಮಧ್ಯಭಾಗಕ್ಕೆ ನಂದಿ ವಿಗ್ರಹ ಕಟ್ಟುತ್ತಾರೆ. ಕೋಲಿಗೆ ಅರಿವೆ ಸುತ್ತಿ ತುದಿಗೆ ಚುಂಗ ಬಿಡುತ್ತಾರೆ. ಮೇಲೆ ಕಳಸ ಕೂಡಿಸುತ್ತಾರೆ. ಅದನ್ನು ಜಾತ್ರಾ ಪ್ರಸಂಗದಲ್ಲಿ ಎತ್ತಿ ಹಿಡಿದು ನರ್ತನ ಮಾಡುತ್ತಾರೆ. ಇದಕ್ಕೆ ನುದಿಧ್ವಜ ಎನ್ನಬಹುದೇನೋ. ಆದರೆ ಜನಬಳಕೆಯಲ್ಲಿ ಅಂದರೆ ಸಾಮಾನ್ಯರ ಬಾಯಲ್ಲಿ ಆ ಪದ (ನಂದಿಧ್ವಜ) ವಿಲ್ಲ. ನಂದಿಕೋಲಿನ ತುದಿಗೆ ಬಿಟ್ಟ ಚುಂಗದಲ್ಲಿ ನಂದಿ ಚಿತ್ರ ವಿರುವುದಿಲ್ಲ. ಮಧ್ಯಭಾಗಕ್ಕೆ ಮಾತ್ರ ವಿಗ್ರಹ (ಲೋಹ) ಕಟ್ಟಿರುತ್ತಾರೆ."[9]. ಈ ವಿವರಣೆಗೂ ಮೇಲೆ ಹೇಳಿದ ನಂದಿಧ್ವಜದ ವಿವರಣೆಗೂ ಕೆಲವು ವ್ಯತ್ಯಾಸಗಳು – ಅಂದರೆ ಹರಡೆ, ಪಾವು, ಪಟ ಇತ್ಯಾದಿಗಳ ವಿವರಣೆ ಇಲ್ಲ — ಕಂಡು ಬರುತ್ತವೆ ಯಾದರೂ ನಂದಿ ವಿಗ್ರಹ ಈ ಕೋಲಿ (ಧ್ವಜ) ನಲ್ಲಿ ಇರುತ್ತದೆ ಎಂಬ ಅಂಶ ಗಮನಾರ್ಹವಾದುದು. ಶ್ರೀ ತ. ಸು. ಶಾಮರಾಯರು ಇತ್ತ ನಂದಿಕೋಲಿನ ವಿವರಣೆಗೂ ಈ ನಂದಿಕೋಲು ವಿವರಣೆಗೂ ವ್ಯತ್ಯಾಸವಿದೆ. ಅಂದರೆ ಪ್ರಾದೇಶಿಕ ವಾಗಿ ಈ ಧ್ವಜದ ರೂಪುರೇಷೆ ಬದಲಾಗುತ್ತದೆ ಎಂದು ಊಹಿಸಲು ಅವಕಾಶವಿದೆ.

'ನಂದಿಧ್ವಜದ ಬಗೆಗೆ ಐತಿಹಾಸಿಕವಾಗಿ ಯಾವ ಆಧಾರವೂ ಖಚಿತವಾಗಿ ಕಂಡು ಬಂದಂತಿಲ್ಲ. 12ನೇ ಶತಮಾನಕ್ಕೆ ಹಿಂದೆ ಪಂಚಾಚಾರ್ಯ ಪರಂಪರೆಯುವರು ಉಪ ಯೋಗಿಸುತ್ತಿದ್ದುದರ ಬಗೆಗೆ ಮಾಹಿತಿಗಳು ದೊರೆಯಲಾರವೆಂದು ಕಾಣುತ್ತದೆ. ಬಸವಣ್ಣನವರ ಕಾಲದಲ್ಲಿ ಎಲ್ಲಾ ಕೋಮಿನವರು ಲಿಂಗಾಂಗಿಗಳೇ ಆಗಿರಬೇಕೆಂಬ ನಿಯಮದಿಂದಾಗಿ ವೀರಶೈವ ಮತವು ವಿಸ್ತಾರ ಹೊಂದಿತು. ಸಾಮಾಜಿಕ ಸುಧಾರಣೆ ಆ ಕಾಲದಲ್ಲಿ ಅತ್ಯಗತ್ಯವಾಗಿತ್ತು. ಅಂತೆಯೇ ಒಳಪಂಗಡಗಳ ಭೇದವಿಲ್ಲದೆ ಗ್ರಾಮ ಗ್ರಾಮಗಳಲ್ಲಿ ಎಲ್ಲಾ ದೈವಿಕ ಹಾಗೂ ಧಾರ್ಮಿಕ ಕಾರ್ಯಗಳು ಸೂಕ್ತವಾಗಿ ನಡೆಯ ಲೆಂಬ ದೃಷ್ಟಿಯಿಂದ, ಶಿವನ ವಾಹನನಾದ ಶ್ರೀ ವೃಷಭನು ಅಗ್ರಮಾನ್ಯನಾಗಿರುವುದರಿಂದ ಮತ್ತು ಶಿವನನ್ನು ವೀರಶೈವರು ಅಭೇದ ರೂಪದಿಂದ ಪೂಜಿಸುವ ನಿಮಿತ್ತ, ನಂದಿಧ್ವಜ ವನ್ನು ನಿರ್ಮಾಣಮಾಡಿಸಿ ಅದರಡಿಯಲ್ಲಿ 9 ಅಥವಾ 18ಫಣ[10] ದವರು (ಒಳಪಂಗಡ ಗಳು) ಒಂದಾಗಿ ಸಮಾಜ ಹಾಗೂ ವೀರಶೈವ ತತ್ವದ ಏಳ್ಗೆಗಾಗಿ ದುಡಿಯುವ ಸಂಕಲ್ಪ

---

9 ಈ ವಿವರಣೆಯನ್ನು 25–11–71 ರಂದು ಮಿತ್ರರಾದ, ಡಾ| ಎಂ. ಎಂ. ಕಲ್ಬುರ್ಗಿಯವರು ನನಗೆ ಬರೆದ ಪತ್ರದಿಂದ ಉದ್ಧರಿಸಿದ್ದೇನೆ.

10 ಫಣ: ಹೆಡೆ., ಒಂದೇ ಜಾತಿಯ ಒಳಪಂಗಡ.

ತೊಟ್ಟರೆಂದು ತಿಳಿದು ಬರುತ್ತದೆ.[11] ಈ ಹೇಳಿಕೆಯಲ್ಲಿ ಲಿಂಗಾಂಗಿಗಳೆಲ್ಲರೂ ಒಂದು ಗುಂಪಾಗಬೇಕೆಂಬ ಅಭಿಪ್ರಾಯದಿಂದ ಇಂತಹ ಹೆಗ್ಗುರುತುಗಳನ್ನು ಮಾಡಿಕೊಂಡ ರೆಂಬುದು ಬಳಿಕೆಗೆ ಬಂದಿತೆಂಬ ಅಭಿಪ್ರಾಯವೂ ಇದೆ. ಆದರೆ ಇದೇ ಕಡೆಯ ತೀರ್ಮಾನವಲ್ಲ. ನಂದಿಧ್ವಜದ ಕಲ್ಪನೆ ಹಿಂದಿನಿಂದಲೂ ಇದ್ದು ಬಹುಶಃ 12ನೇ ಶತಮಾನದ ಅನಂತರ ಹೆಚ್ಚು ಪ್ರಚಲಿತವಾಯಿತೆಂದು ಭಾವಿಸಬಹುದು.

'ನಂದಿಕೋಲು' ಎಂಬ ಆಯುಧವಿರುವುದಾಗಿ ಗುಬ್ಬಿಯ ಶಾಸನದಲ್ಲಿ ತಿಳಿಯು ತ್ತದೆ. "ಅನ್ನಿಜ ಸುಲದಿ ಕಂಬು ಕಂಟಿ ಕುಲಿಶಾ ವನ ಶ್ರಿತ್ರಾ ನಂದಿಕೋಲು ಸಂಗ ಮೇಶ್ವರನುಡಿಗೆ ಸಬಳ ಶಾಶ್ವಿಕ ಸಯಲ್ಲಿ ಕತ್ತಿ ತೆಡಾಯುಖಿಡಲ್ಲಿತೆಯಲ್ಲಿ ಬಿಲ್ಲು ನಾರಾಚ ಗದೆ ಸೂಲ್ಲಿ ಚಕ್ರವಂಕಿ ಚೂರ್ರಿ ಜಯುಬಾಡಿ ಶೃಂಗಾರ ತೊಡ ಪೂಸಂಣ ಚಂದ್ರಾಯುಧಾ ಚಿಲುತಲಿ ಮೊದಲಾದ ಬತ್ತೀಶಾಯುಧ"[12] ಎಂಬಲ್ಲಿ. ಬತ್ತೀಸ ಆಯುಧಗಳಲ್ಲಿ 'ನಂದಿಕೋಲು' ಒಂದು ಎಂದು ತಿಳಿಯುತ್ತದೆ. ಆದರೆ ಈ ಆಯುಧದ ರೂಪು ರೇಷೆ ಏನೂ ಪತ್ತೆ ಇಲ್ಲ.

'ನಂದಿಕೋಲ' ಎಂಬ ಅಡ್ಡ ಹೆಸರಿನ ಜಂಗಮ ಕುಟುಂಬವೂ ಉತ್ತರ ಕರ್ಣಾಟಕದಲ್ಲಿ ಇದ್ದಂತೆ ತಿಳಿಯುತ್ತದೆ[13]. ಗದಗ್ ಪ್ರದೇಶದಲ್ಲಿ ನಂದಿಕೋಲ ಮಠ ಎಂಬ ಮಠವೊಂದು ಇದೆಯಂತೆ. ವೀರಭದ್ರನ ಪೂಜಾರಿಗಳನ್ನು ನಂದಿಕೋಲ ರೆಂದು ಕರೆಯುವ ವಾಡಿಕೆ ಆ ಕಡೆಯಲ್ಲಿದೆ ಎಂದು ತಿಳಿದು ಬಂತು.[14]

ಕನ್ನಡಿಗರಲ್ಲಿ ಅದರಲ್ಲೂ ವೀರಶೈವರಲ್ಲಿ ಕುಣಿಯುವುದು. ಹಾಡುವುದು. ವಾದ್ಯ ಬಾರಿಸುವುದು ಭಕ್ತಿ ಅರ್ಪಣೆಯ ಒಂದು ವಿಧವುಂಟು. ಈ ಅಂಶವನ್ನು ಕುಂಬಾರ ಗುಂಡಯ್ಯ, ಮಲ್ಹಣ. ಕಕ್ಕಯ್ಯ ಮೊದಲಾದವರ ಕಥೆ. ಜೀವನ ವಿಧಾನದಿಂದ ತಿಳಿಯ ಬಹುದು. ಜಾತ್ರೆ ಮಹೋತ್ಸವಗಳಲ್ಲಿ ಸಂಬಾಳ. ಜೈಯಾಕದ ಮೇಳದೊಡನೆ. ನಂದಿಕೋಲನ್ನು ಹೊತ್ತು ಹಾ! ಹಾ! ವೀರ ಹಾ! ಹಾ! ಶರಭ! ಕಡೆ ಮಹಾರುದ್ರ! ಎಂದು ನಂದಿ ಕುಣಿಯುವರು ಎಂಬ ಅಂಶ. ಡಾ। ಜಿ.ಎಸ್. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತಗಳು' ಎಂಬ ಕೃತಿಯಿಂದ ತಿಳಿದು ಬರುತ್ತದೆ.

---

[11] ಪ್ರೊ। ಎಂ. ಜಿ. ನಂಜುಂಡಾರಾಧ್ಯರ ಈ ಅಭಿಪ್ರಾಯವನ್ನು ವಿದ್ವಾನ್. ಬಿ. ರಾಜಶೇಖ ರಯ್ಯನವರು, 3-11-71 ರಂದು ನನಗೆ ಬರೆದ ಪತ್ರದಲ್ಲಿ ಬರೆದು ತಿಳಿಸಿ ಉಪಕಾರ ಮಾಡಿದ್ದಾರೆ.

[12] ಎಪಿಗ್ರಾಫಿಯಾ ಕರ್ಣಾಟಿಕ. ಸಂ. xvi ಪು. 37, ಗುಬ್ಬಿ. 74.

[13] ಡಾ। ಎೀ. ಎಂ. ಕಲ್ಬುರ್ಗಿಯವರ ಪತ್ರದಿಂದ ಈ ಅಂಶ ತಿಳಿದುಬಂತು.

[14] ಮಿತ್ರರಾದ ಕೆ. ಟಿ. ಬಳ್ಳಾರಿ. ಕನ್ನಡ ಅಧ್ಯಾಪಕರು ಮಹಾರಾಣಿಯವರ ಕಾಲೇಜು ಬೆಂಗಳೂರು – ಇವರಿಂದ ತಿಳಿದ ಸಂಗತಿ.

ಈ ಎಲ್ಲಾ ಅಂಶಗಳನ್ನೂ ಗಮನಿಸಿದ ಮೇಲೆ ಈ ರೀತಿ ತೀರ್ಮಾನಕ್ಕೆ ಬರಬಹುದು.

1) 'ನಂದಿ' ಅಥವಾ 'ವೃಷಭ' ಶಿವನ ವಾಹನ, ದ್ವಿತೀಯ ಶಂಭು, ಶೈವಧರ್ಮದ ಪ್ರತೀಕ. ಮಹಾಶೂರ.

2) ಶಿವನು ತನ್ನ ಧರ್ಮದ ಸಂಕೇತವಾಗಿ ನಂದಿಯ ಚಿತ್ರವನ್ನು ಧ್ವಜವನ್ನಾಗಿ ಸ್ವೀಕರಿಸಿದ.

3) ಈ ಧ್ವಜವನ್ನು ವೀರಶೈವರು ಧರ್ಮದ ಪ್ರತಿಷ್ಠೆಗಾಗಿ ಬಳಸುತ್ತಿದ್ದಾರೆ.

4) ವ್ಯಾಸ ಮಹರ್ಷಿ ಶಿವ ಸರ್ವೋತ್ತಮತ್ವವನ್ನು ಸಾರಿದ ಕಾರಣದಿಂದ ಈ ಧ್ವಜದಲ್ಲಿ ವ್ಯಾಸ ತೋಳನ್ನು ಮೆರೆಸುತ್ತಾರೆ. ವಿಷ್ಣು ಶ್ರೇಷ್ಠನೆಂದು ತನ್ನ ಭುಜವನ್ನು ಮೇಲೆತ್ತಿದಾಗ ಆ ಭುಜವನ್ನು ನಂದಿಯು ಕತ್ತರಿಸಿದನೆಂದು

ಪರಮ ಕಾಶಿಯೊಳೆ ವೇದವ್ಯಾಸನಕ್ಕರಿಂ
ಹರಿಯಲ್ಲದಿಲ್ಲೆಂದು ಕೈಯ್ಯೆತ್ತಲಾ ತೋಳ
ನಿರದೆ ನಂದೀಶ್ವರಂ ಮುರಿಯನೆ ... ...[15]

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ.

5) ಶಿವದೇವಾಲಯದಲ್ಲಿ ಶಿವನ ಎದುರು ನಂದಿ ವಿಗ್ರಹ ಇದ್ದೇ ಇರುತ್ತದೆ. ಇದರಿಂದ ನಂದಿ ಶಿವನ ವಾಹನ. ಧರ್ಮದ ಸಂಕೇತ ಎಂದೂ ತಿಳಿಯುತ್ತದೆ. ಈ ಧರ್ಮಸಂಕೇತವೆನಿಸಿರುವ, ಶಿವದೇವಾಲಯಗಳಲ್ಲಿ ಶಿವನ ಮುಂದೆ ಇರುವ ಈ ನಂದಿಯನ್ನು ಶಿವ ಪರವಾದ ಉತ್ಸವಗಳಲ್ಲಿಯೂ ಮೆರೆಸಬೇಕೆಂಬ ಭಾವನೆ ಯಾರೋ ಒಬ್ಬ ಜಾಣನಿಗೆ ಒಂದು ಕಾಲಕ್ಕೆ ಬಂದಿರಬೇಕು. ಆದುದರಿಂದ ನಂದಿಯನ್ನು ಶಿವನ ಉತ್ಸವಗಳಲ್ಲಿ ಕೊಂಡೊಯ್ಯುವ ಪದ್ಧತಿ ರೂಢಿಗೆ ಬಂದಿರಬೇಕು. ನಂಧಿಧ್ವಜವನ್ನು ಈ ರೀತಿಯಲ್ಲಿ ಅಂದರೆ ಉದ್ದನೆಯದಾದ ಒಂದು ಬಿದುರುಗಣೆ; ಅದರ ಮಧ್ಯದಲ್ಲಿ ವೃಷಭ ವಿಗ್ರಹವನ್ನು ನಿಲ್ಲಿಸಲು ಅನುಕೂಲವಾಗುವಂತಹ ಹಲಗೆ; ಇದಕ್ಕೆ ಸೌಂದರ್ಯವನ್ನು ತಂದು ಕೊಡಲು ಬಣ್ಣದ (ಸಾಮಾನ್ಯವಾಗಿ ಕೆಂಪು. ಕೇಸರಿ ನೀಲಿ ಇತ್ಯಾದಿ) ಬಟ್ಟೆಯನ್ನೂ ಸುತ್ತುವರು. ಜಾಲರಿ. ಕುಚ್ಚು ಮೊದಲಾದುವನ್ನು ಹಾಕುವರು. ಇವುಗಳನ್ನು ಉಪಯೋಗಿಸುವುದೇಕೆ ಎಂದಾಗ ಅದಕ್ಕೆ ಹೊಂದಿಕೊಳ್ಳುವಂತೆ ಕಥೆಗಳು ಹುಟ್ಟಿಬಂದಿರಬೇಕು. ಅಂತೂ ವ್ಯಾಸ ಹಸ್ತ ಶಿವಪಾರಮ್ಯವನ್ನು ಸೂಚಿಸುವ ಸಂಕೇತ ಎಂದು ಈಗಾಗಲೇ ಕಂಡುದಾಗಿದೆ.

ಹೀಗೆ ನಂದಿಧ್ವಜದ ಬಗೆಗೆ ಯಾವ ಆಧಾರಪೂರ್ಣ ಮಾಹಿತಿಯೂ ದೊರೆಯದಿರುವುದರಿಂದ ಇದರ ಬಗೆಗೆ ಯಾವ ನಿರ್ಧಾರಕ್ಕೂ ಬರಲಾಗುತ್ತಿಲ್ಲ. ಇದರ ಕಾಲ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಅಂತೂ ಇದು ಧರ್ಮದ ಔನ್ನತ್ಯವನ್ನು ಸಾರುವ ಸಾಂಕೇತಿಕ ಧ್ವಜವೆಂದು ಇಟ್ಟುಕೊಳ್ಳಬಹುದು.

ಆರ್. ರಾಚಪ್ಪ

---

15 ಚನ್ನಬಸವ ಪುರಾಣ, ಕಾಂಡ : 4, ಸಂಧಿ : 52, ಪದ್ಯ, 13.

3 ಶಾಸನಗಳಲ್ಲಿ ಎರಡು ಅಪೂರ್ವ ಛಂದಸ್ಸುಗಳು

ಕನ್ನಡ ಕವಿತೆಯಲ್ಲಿ ಕನ್ನಡ ದೇಸೀ ಛಂದಸ್ಸು ಸು. ಕ್ರಿ. ಶ. 700ರಷ್ಟು ಪೂರ್ವದಲ್ಲಿಯೆ ಬಳಕೆಯಲ್ಲಿದ್ದುದು ಬಾದಾಮಿಯ ಶಾಸನದಿಂದ ಸುವಿದಿತ[1]. ಆ ತ್ರಿಪದಿ, 'ಕನ್ನಡ ವೃತ್ತಗಳ ಗಾಯಿತ್ರಿ' ಎಂದೂ ಸುಪ್ರಸಿದ್ಧ[2]. ಅದು 'ಏಳೆ' ಎಂಬ ಇನ್ನೊಂದು ಛಂದಸ್ಸಿನಿಂದ ರೂಪುಗೊಂಡಿರಬೇಕೆಂದು ಒಂದು ಅಭಿಪ್ರಾಯ.[3] ಆದರೆ 'ಏಳೆ' ತ್ರಿಪದೀ ಛಂದಸ್ಸಿನ ನ್ಯೂನರೂಪ ಎಂದಿದ್ದಾನೆ ಜಯಕೀರ್ತಿ. ಅವನ ಪ್ರಕಾರ ತ್ರಿಪದಿಯು ನಾಲ್ಕು ಪಾದಗಳಿಂದ ಕೂಡಿದುದರಲ್ಲಿ ಮೂರನೆಯ ಪಾದವನ್ನು ಕೈಬಿಡಬೇಕು. ಎಂದರೆ ರೂಢಿಯ ತ್ರಿಪದಿಯ ಮೂರು ಪಾದಗಳಲ್ಲಿ 2ನೆಯ ಪಾದವನ್ನು ಬಿಟ್ಟರೆ 'ಏಳೆ'. ಆದರೂ ಏಳೆಯನ್ನು ಮೂರು ಪಾದಗಳಲ್ಲಿ ಬರೆಯಬೇಕೇನೊ? ಏಕೆಂದರೆ ನಾಗವರ್ಮ, ಜಯಕೀರ್ತಿ ಮತ್ತು ಶಾರ್ಙ್ಗದೇವ ಏಳೆಗೆ ಮೂರು ಪಾದವೆಂದು ನಿರೂಪಿಸಿದ್ದಾರೆ :

ನಾಗವರ್ಮ :	ಭುಜಯುಗಪಕ್ಷ ಪುರಗಣ	ರು. ರು.
	ವ್ರಜದೊಳಾಜಿಜಿತೊಳಕ್ಕು	ವಿ. ವಿ.
	ಮಜಗಣೇಟಿತಿಗಿಭಗತೀ ॥ 4	ವಿ.ರು.ಅಥವಾ ವಿ.ಬ್ರ.ಬ್ರ.?
ಜಯಕೀರ್ತಿ :	ತ್ರಿಪದೀ ತೃತಿಯಾಂ ಹ್ರಾ	ಬ್ರ.ವಿ.
	ವಪಮುಂಚ್ಯತ್ಯೇಲೇತಿ	ವಿ. ವಿ.
	ಸುಪಠಿತಾ ಗೇಯ ವಿದಜನ್ಯೈ ॥ 5	ವಿ. ಬ್ರ. ವಿ
ಶಾರ್ಙ್ಗದೇವ:	ಪಂಚಕಾಮಾ ರತಿಶ್ಚೈಕಾ ಕಾಮೋಂತೇ ಚರಣತ್ರಯೇ ।	
	ಪ್ರತ್ಯೇಕಂ ತಾಸು ಚೇದೇ ತಾಶ್ಛಂದ ಸ್ವತ್ಯೋಖಿಲಾ ಮತಾ ॥	
	ಗಣಾದೇರ್ನ್ಯೂನತಾಧಿಕ್ಯಾದೇಲಾಭಾಸಾ ಇಮಾ ಮತಾಃ । 6	

ಶಾರ್ಙ್ಗದೇವನು 5 ಕಾಮ (ವಿಷ್ಣು) 1 ರತಿ (ಬ್ರಹ್ಮ) ಮತ್ತು 1 ಕಾಮಗಣವೆಂದೂ 3 ಚರಣವೆಂದೂ ಹೇಳಿದ ಸ್ಪಷ್ಟತೆ ನಾಗವರ್ಮನಲ್ಲಾಗಲೀ ಜಯಕೀರ್ತಿ

---

1 Ind. Ant. vol. x—61

2 ಪ್ರೊ। ದ. ರಾ. ಬೇಂದ್ರೆ : ಗರತಿಯ ಹಾಡು, ಪರಿಚಯ – ಪುಟ XII.

3 ಬಿ. ರಾಮಸ್ವಾಮಿ : ಕರ್ಣಾಟ(ಕ) ವಿಷಯ (ಭಾಷಾ) ಜಾತಿ ಛಂದೋವಿಚಾರ – ತಾವರೆ–ಉಸ್ಮಾನಿಯಾ ವಿಶ್ವವಿದ್ಯಾಲಯದ ಪತ್ರಿಕೆ 1961. ಪುಟ 44.

4 ನಾಗವರ್ಮ 'ಛಂದೋಂಬುಧಿ' (ಸಂ. ಎಚ್. ಎಸ್. ರಾಮಸ್ವಾಮಿ ಅಯ್ಯಂಗಾರ್) ಪುಟ 67 (2 ನೆಯ ಮುದ್ರಣ)

5 ಪ್ರೊ। ಎಚ್. ಡಿ. ವೇಲಣಕರ್ : ಜಯದಾಮನ್, ಪುಟ 68

6 ಅದೇ ಗ್ರಂಥ ಅಡಿ ಟಿಪ್ಪಣಿ 1

ಯಲ್ಲಾಗಲೀ ಇಲ್ಲ. ಸೂರಿಗಳಿಂದ ಪರಿಷ್ಕೃತವಾದ ನಾಗವರ್ಮನ ಲಕ್ಷಣದಲ್ಲಿ ಕೇವಲ 7 ಗಣಗಳು–ಏಳೆಗೆ; ಅದರಲ್ಲಿ 6ನೆಯ ಗಣವು ಬ್ರಹ್ಮಗಣವಾಗಿರುತ್ತದೆ :

ಭುಜ ಪಕ್ಷ ಪುರಗಣ ವ್ರಜದೊಳಾಜಿಜಿ³ಳಕ್ಕು
ಮಜಗಣಮೇಳೆಗಿಭಗತೀ [7] ॥

ಈ ಲಕ್ಷಣ ಪದ್ಯದಿಂದ ನಮಗೆ ಏಳೆಯಲ್ಲಿ ಇರುವ ಏಳುಗಣಗಳಲ್ಲಿ 6ನೆಯ ಗಣವನ್ನು ಬಿಟ್ಟರೆ ಮಿಕ್ಕಿನ 6 ಗಣಗಳು ಹೇಗಾದರೂ ಇರಬಹುದು. ತ್ರಿಪದಿಯ ಹಾಗೆ ನಿಶ್ಚಿತವಾಗಿ ವಿಷ್ಣುಗಣಗಳೇ ಇರಬೇಕೆಂದಿಲ್ಲ. [8] ತ್ರಿಪದಿಯಲ್ಲಿ ಬರುವ ಪುನರಾವರ್ತನೆ 'ಏಳೆ' ಛಂದಸ್ಸಿನಲ್ಲಿ ಇಲ್ಲ. ಜಯಕೀರ್ತಿಯ ಲಕ್ಷಣ ಪದ್ಯದಲ್ಲಿ ಏಳೆಯ ಮೊದಲನೆಯ ಗಣವು ವಿಷ್ಣುಗಣವಾಗಿರದೆ ಅದು ಬ್ರಹ್ಮಗಣ (ರತಿಗಣ) ವಾಗಿದೆ. ವಿಷ್ಣುವಿಗೆ ಪ್ರತಿಯಾಗಿ ಬ್ರಹ್ಮ ಇಲ್ಲವೇ ರುದ್ರಗಣ ಬರಬಹುದು [9] ಎಂಬ ಪದ್ಧತಿಯನ್ನು ಮನದಂದರೆ ಜಯಕೀರ್ತಿ ಹಾಗೂ ನಾಗವರ್ಮ ಇವರ ಏಳೆಯ ಲಕ್ಷಣ ಒಂದೇ ರೀತಿಯದು ಎಂಬುದರಲ್ಲಿ ಸಂಶಯವಿಲ್ಲ. ಶಾರ್ಙ್ಗದೇವನು ಏಳೆಗೆ ಖಚಿತ ಲಕ್ಷಣ ಹೇಳಿದರೂ ಅದು ತನ್ನ ಮೂಲ ಅನಿಶ್ಚಿತ ರೂಪದಲ್ಲಿಯೇ ಹರಿದುಕೊಂಡು ಬಂದಂತೆ ತೋರುತ್ತದೆ ನಮಗೆ 17ನೆಯ ಶತಮಾನದ ಶಾಸನವೊಂದರಿಂದ. ಅದು ಸದ್ಯ ಉಪಲಬ್ಧವಾದ, ಶಾಸನದಲ್ಲಿ ಕಂಡರಿಸಲಾದ, ಅಂಶಗಣದ ಮೊದಲನೆಯ ಏಳೆ [10].

ಏಳೆ ಡಾ. ಎಂ. ಚಿದಾನಂದಮೂರ್ತಿಗಳು ಹೇಳುವಂತೆ "ಲಕ್ಷಣ ಗ್ರಂಥಗಳಲ್ಲಿ ಮಾತ್ರ ದೊರಕುವುದೇ ವಿನಾ ಅದರ ಪ್ರಯೋಗಗಳು ಯಾವ ಕನ್ನಡ ಕಾವ್ಯಗಳಲ್ಲೂ

---

7 (a) ಬಿ. ರಾಮಸ್ವಾಮಿಯವರ ಮೇಲಿನ ಲೇಖನ, ಪುಟ 43
(b) ಕನ್ನಡ ಛಂದಸ್ಸು (ಟಿ. ವಿ, ವೆಂಕಟಾಚಲಶಾಸ್ತ್ರೀ.) ಪುಟ 20

8 ನಾಗವರ್ಮ I –– ಛಂದೋಂಬುಧಿ (ಸಂ. ಎಚ್. ಎಸ್. ರಾ. ಅಯ್ಯಂಗಾರ್

ಬಿಸರುಹೋದ್ಭವಗಣಂ ರಸದಶಸ್ಥಾನದೊಳ್
ಬಿಸರುಹ ನೇತ್ರಗಣಮೆ ಬರ್ಕುಟಿ³ದವು
ಬಿಸರುಹ ನೇತ್ರೇ ತ್ರಿಪದಿಗೆ ॥ – ಪುಟ 66 (ಎರಡನೆಯ ಮುದ್ರಣ)

9 (a) ಕನ್ನಡ ಕೈಪಿಡಿ ಭಾಗ 1 – ಪೊನ್ನನ ತ್ರಿಪದಿ :

ಸಹಕಾರಾ । ಸಾರನೋ ॥ ಕಹದಮ । ದಪಿಕನಿ (ವಿ.ವಿ.ವಿ.ವಿ.)
ವಹ ಭಾಷ । ಣಂಗ । ಳುಮೆಸೆದುವು । ಕಿನ್ನರ (ವಿ.ಬ್ರ.ರು ಬ್ರ)
ಕುಹರಣ । ದೊಡನೆ । ಸೆಣಸುತ್ತಂ ॥ (ವಿ.ಬ್ರ.ವಿ.)
–– ಪುಟ 126 (4 ನೆಯ ಮುದ್ರಣ)

(b) ಡಾ। ಚಿದಾನಂದಮೂರ್ತಿ :

ಸಾಧುಗೆ । ಸಾಧು । ಮಾಧುರ್ಯಂಗೆ । ಮಾಧುರ್ಯಂ । (ವಿ.ಬ್ರ.ರು.ವಿ.)
.........ಇತ್ಯಾದಿ ––(ಸಂಶೋಧನ ತರಂಗ 1, ಪುಟ 208)

10 Ep. Car. vol I (Coorg Inscriptions) Insp. No. 73 (Rice Edition)

ಕಾಣಿಸುವುದಿಲ್ಲ" [11]. ಇದನ್ನು ಮನದಂದರೆ ಏಳೆಯ ಲಕ್ಷ್ಯಗಳನ್ನು ಹುಡುಕಲು ಜಾನಪದ ಗೀತೆಗಳಲ್ಲಿಯೆ ಕಣ್ಣಾಡಿಸಬೇಕಾಗುತ್ತದೆ. ಶಾಸನದಲ್ಲಿ 'ಏಳೆ' ಇರುವುದನ್ನು ಇದುವರೆಗೆ ಯಾರೂ ಗಮನಕ್ಕೆ ತಂದಂತಿಲ್ಲ. ಈ ಸಂಶೋಧನೆಯಲ್ಲಿ ಅದನ್ನು ಗುರುತಿಸುವುದೇ ಉದ್ದೇಶ. ರೈಸರು ಎ.ಪಿ.ಕ. ಸಂಪುಟ 1ರಲ್ಲಿ ಸು.ಕ್ರಿ. ಶ. 1700 ಎಂಬ ಕಾಲಮಾನವನ್ನು ಪ್ರಶ್ನಾರ್ಥಕ ಚಿಹ್ನೆಯಿಂದ ಸೂಚಿಸಿ ಕೊಡಗಿನ ಹತ್ತು ಗಟ್ಟಿನ ನಾಡಿನ ಬಾಳೆಲೆಗ್ರಾಮ ದೇವಸ್ಥಾನದ ಗೋಡೆಯಮೇಲೆ ಇರುವ ಶಾಸನ ವೊಂದನ್ನು ಪ್ರಕಟಿಸಿದ್ದಾರೆ (ಶಾಸನ ಸಂಖ್ಯೆ 23). ಅದು ಮೂರು ಪಾದಗಳಲ್ಲಿಯೇ ಇದೆ :

ಪಡುಬರ ಜೋ। ಗಿ ಸಿಲಾಗೋಲಾ
ಪಡುವರಾ। ಯಾಶಿಲಾ
ಪಡುಬರ। ಜೋಗಿ। ನಮಃ ॥

ಇದರ ಪ್ರಸ್ತಾರ — ರು. ರು.
ವಿ. ವಿ.
ವಿ. ಬ್ರ ಬ್ರ (?)

ಏಳೆಯ ಸ್ಥೂಲ ಲಕ್ಷಣಕ್ಕೆ ಇದು ಸರಿಹೋಗುತ್ತದೆ. ಇದರಲ್ಲಿ ಒಟ್ಟು ಏಳು ಗಣ ಗಳು ಇವೆ. ಕೊನೆಯ ಪಾದದಲ್ಲಿ ಕೊನೆಯ ಗಣ '।' ಅಂಶಗಣದ ರೀತ್ಯಾ ಬ್ರಹ್ಮ ಗಣವಲ್ಲ. ಒಂದು ಲಘುವಿನಿಂದ ಅಂಶಗಣ ಹೊರಡುವುದಿಲ್ಲ. ಬಾದಾಮಿ ಶಾಸನದ ಪದ್ಯ:

ಒಳ್ಳಿತ್ತು। ಕೆಯ್ವೋರಾರ್। ಪೊಲ್ಲದು। ಮದರಂತೆ
ಬಲ್ಲಿತ್ತು। ಕಲಿಗೆ। ವಿಪರೀತಾ। ಪುರಾಕೃತ (?)
ಮಿಲ್ಲಿಸಂ। ಧಿಕ್ಕು। ಮದು ಬಂದು ॥ [12] ಎಂಬುದರಲ್ಲಿ 'ಪುರಾಕೃತ'

ಇದು ಅಂಶಗಣಕ್ಕೆ ಸರಿಹೋಗುವುದಿಲ್ಲ. ಇವುಗಳನ್ನು ಅಪವಾದವೆಂದು ಹೇಳ ಬಹುದು. ಹಾಗೆಯೆ 'ನಮಃ' ಕೂಡ ಅಪವಾದವೆಂದು ಹೇಳಬಹುದು. ಕಾರಣ, ಈ ಶಾಸನ ಒಂದು ಸಣ್ಣ ದೋಷದಿಂದ ಕೂಡಿದ 'ಏಳೆ' ಎಂದರೆ ತಪ್ಪಾಗಲಿಕ್ಕಿಲ್ಲ.

ಕನ್ನಡ ಲಕ್ಷಣ ಗ್ರಂಥಗಳಲ್ಲಿ ಅಂಶಗಣದ ಒಂದೇ 'ಏಳೆ' ಇದ್ದರೆ ಸಂಸ್ಕೃತ ಲಕ್ಷಣ ಗ್ರಂಥ ಸಂಗೀತ ರತ್ನಾಕರದಲ್ಲಿ ಏಳೆಯದೊಂದು ದೊಡ್ಡ ಪ್ರಪಂಚ ನಮಗೆ ಗೋಚರ ವಾಗುತ್ತದೆ. [13] 'ಮಾನಸೋಲ್ಲಾಸ' ಗ್ರಂಥದಲ್ಲಿ ಗಣೈಲಾ. ಮಾತ್ರೈಲಾ ಮತ್ತು ವರ್ಣೈಲಾ

---

11 ಎಮ್. ಚಿದಾನಂದಮೂರ್ತಿ: ಸಂಶೋಧನ ತರಂಗ – ಭಾಗ 1. ಪುಟ 207

12 ಕನ್ನಡ ಕೈಪಿಡಿ 1 ಭಾಗ 1 ಪುಟ 128 (4ನೆಯ ಮುದ್ರಣ)

13 ಸಂಗೀತ ರತ್ನಾಕರ — ಅಧ್ಯಾಯ 4 (ಪ್ರಬಂಧಾಧ್ಯಾಯ)

ಎಂಬ ಮೂರು ಮುಖ್ಯ ಶೀರ್ಷಿಕೆಗಳಲ್ಲಿ ಹಲವು ಏಳೆಗಳನ್ನು ಹೇಳಿದೆ.[14] ಈ ಏಳೆಗಳಲ್ಲಿನ ಲಘುಗಳನ್ನು ದೀರ್ಘವಾಗಿ ಹೇಳುವುದುಂಟು. "ಪ್ರಯೋಗ್ಯೈಃ ಬಹುಲೈಃ ದೀರ್ಘೈಃ ಗಾಯಂತಿ" ಎಂಬ ಹೇಳಿಕೆಯೂ ಉಂಟು. ಮಾನಸೋಲ್ಲಾಸದ ಏಳೆಗಳಲ್ಲಿ 'ಮಾಲತೀ' ಎಂಬುದೊಂದು ವರ್ಣೈಲಾ. ಅದು "14 ಅಕ್ಷರಗಳುಳ್ಳ ಪದಗಳಿಂದಲೂ ಮೂರು ಪಾದಗಳಿಂದಲೂ ಕೂಡಿರುತ್ತದೆ"[15]. ಈ ಲಕ್ಷಣವನ್ನು ಗಮನದಲ್ಲಿಟ್ಟುಕೊಂಡರೆ ಶ್ರವಣಬೆಳ್ಗೊಳದ ಒಂದು ಶಾಸನವು ಬಹಳ ಗಮನಾರ್ಹವಾಗಿದೆ. ಅದೆಂದರೆ ಶ್ರವಣಬೆಳ್ಗೊಳದ ಶಿಲಾಲೇಖ 105 (Ep. Car. Vol II):

ಶ್ರೀ ಅಜ್ಞಾದಿ ನಾನಾನೇಕಂ ಗುಣ ಕೀರ್ತಿದೆನ್ನಾನ್
ತುಂಗೋಜ್ಜ ಭಕ್ತಿವಶದಿನ್ತೊಜಿ ದಿಲ್ಲಿ ದೇಹವ್
ಪೊಜ್ಗೊಳ್ವಿ ಚಿತ್ರಗಿರಿಕೂಟಮಯಂ ಕುಚೇಲವ್ ॥

ಇದರ ಪರಿಶೋಧಿತ ರೂಪ ಹೀಗಿರುತ್ತದೆ:

ಶ್ರೀ ಅಜ್ಞಾದಿನಾನಾನೇಕಂ ಗುಣ ಕೀರ್ತಿ ದೇ(ವ)ನ್ನಾನ್
ತುಜ್ಗೋಜ್ಜ ಭಕ್ತಿವಶದಿನ್ತೊ ಅದಿಲ್ಲಿ ದೇಹವ್
ಪೊಜ್ಗೊಳ್ವಿ ಚಿತ್ರಗಿರಿಕೂಟ ಮಯಂ ಕುಚೇಲವ್ ॥

ಇಲ್ಲಿ ಮೊದಲಿನ ಪಾದದಲ್ಲಿ ಇರುವ ಪದ ದೆನ್ನಾನ್ ಎಂದರೆ ಅರ್ಥ ಹೇಳಲು ಬರುವುದಿಲ್ಲ. 'ದೆನ್ನಾನ್' ಇದು ಒಂದು ಶಬ್ದವೇ? ವಿಚಾರಣೀಯ. ಕಾರಣ ಇದನ್ನು ಸ್ವಲ್ಪ ಮಾರ್ಪಡಿಸಿದರೆ ಇಲ್ಲಿನ ಪಾಠ ಮೇಲಿನ ಛಂದಸ್ಸಿನ ಲೆಕ್ಕಕ್ಕೆ ಸರಿ ಹೋಗುತ್ತದೆ. ಅರ್ಥಾತ್ ಇದು ವರ್ಣೈಲಾದಲ್ಲಿ 'ಮಾಲತೀ' ಆಗಬಹುದು. ಈಗ ಇರುವಂತೆಯೆ ಈ ಶಾಸನವನ್ನು ಪರಿಶೀಲಿಸಿದರೆ ಇದರ 2ನೆಯ ಹಾಗೂ 3ನೆಯ ಪಾದಗಳಲ್ಲಿ ವಸಂತ ತಿಲಕದ ಲಕ್ಷಣವಿದ್ದುದು ಗಮನಾರ್ಹ ವಿಷಯವೇ.[16] ಆದರೆ ವಸಂತ ತಿಲಕ ವೃತ್ತವೂ 14 ಅಕ್ಷರಗಳ ವೃತ್ತವೇ ಆದುದರಿಂದ, ಕರ್ಮ ಧರ್ಮ ಸಂಯೋಗದಿಂದ ಆ ಲಕ್ಷಣವೂ ಇಲ್ಲಿ ಹೊಂದಿಕೊಂಡು ಬಂದಿದೆಯೆಂದು ಸಮಾಧಾನ ಹೇಳಬಹುದು. ಮೊದಲನೆಯ ಪಾದ ವಸಂತ ತಿಲಕದ ಪ್ರಸ್ತಾರಕ್ಕೂ. ಪೂರ್ಣ ಕವಿತೆ ವಸಂತ ತಿಲಕದ ಬಂಧ ಮೈತ್ರಿಗೂ. ಲಯಕ್ಕೂ ಹೊಂದುವುದಿಲ್ಲ: ಕಾರಣ ಇದು ವಸಂತ ತಿಲಕದ ವಿಕೃತ ರೂಪವೆಂದು ಹೇಳಲು ಬರುವುದಿಲ್ಲ. ಈ ಶಾಸನದಲ್ಲಿ ನಾಲ್ಕು ಪಾದಗಳಿದ್ದವೆಂದು ಹೇಳಲು ಆಸ್ಪದವಿಲ್ಲ. ವಸಂತ ತಿಲಕಕ್ಕೆ ಒಂದೇ ಬಗೆಯ (ತಭಜಜ____)

---

14 ಡಾ| ಡಿ. ಎಲ್. ನರಸಿಂಹಾಚಾರ್ 'ಮಾನಸೋಲ್ಲಾಸದಲ್ಲಿ ಛಂದಸ್ಸು' - ಪ್ರ.ಕ. ಸಂ. 45-3

15 ಅದೇ ಪುಟ 67. ಅನೇಕ ಏಳೆಗಳಲ್ಲಿ ಮೂರು ಪಾದಗಳೆಂದು ಹೇಳಿದರೂ ಅಧಿಕ ಪಾದಗಳಿವೆಯೆಂಬುದು ಗಮನಾರ್ಹ. ಹಾಗೆಯೆ ವರ್ಣೈಲಾ ಎಂಬುದಕ್ಕೂ ಅಂಶಗಣಕ್ಕೂ ಏನೂ ಸಂಬಂಧವಿದ್ದಂತಿಲ್ಲ. ಈ ದಿಸೆಯಲ್ಲಿ ಸಂಶೋಧನೆ ಇನ್ನೂ ಆಗಬೇಕು.

16 ಇದರ ಕಡೆಗೆ ನನ್ನ ಗಮನ ಸೆಳೆದವರು ಶ್ರೀ ಟಿ. ವಿ. ವಿ. ಶಾಸ್ತ್ರಿಗಳು.

ನಾಲ್ಕು ಪಾದಗಳು ಇರಲೆಬೇಕೆಂಬ ನಿಯಮ ಜ್ಞಾಪಿಸಿಕೊಂಡರೆ ಇದು ವಸಂತ ತಿಲಕ ವೃತ್ತ ಆಗಲು ಸಾಧ್ಯವಿಲ್ಲ. ಲಿಪಿ ಶಾಸ್ತ್ರದ ಆಧಾರದ ಮೇಲೆ ದಿ। ರಾ. ನರಸಿಂಹಾ ಚಾರ್ಯರು ಇದರ ಕಾಲವನ್ನು ಸು. ಕ್ರಿ. ಶ. 700 ಎಂದು ಹೇಳಿದ್ದಾರೆ. ಅರ್ಥಾತ್ ಈ ಶಾಸನವೂ ಬಾದಾಮಿಯ ತ್ರಿಪದೀ ಶಾಸನದ ಸಮಕಾಲೀನ ಶಾಸನವಾಗುತ್ತದೆ. ಆದುದರಿಂದ ಏಲಾ ಛಂದಸ್ಸನ್ನೂ ಆ ಕಾಲದಲ್ಲಿ ಕ್ವಚಿತ್ತಾಗಿ ಬಳಸಲಾಗುತ್ತಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. [17]

ಸೀತಾರಾಮ ಜಾಗೀರ್‌ದಾರ್

---

17 ಈ ಲೇಖನವನ್ನು ಬರೆಯುವಲ್ಲಿ ಹಿರಿಯರಾದ ಡಾ, ಹಾ. ಮಾ. ನಾಯಕ. ಶ್ರೀ ಎಮ್. ಹನುಮಂತರಾವ್ ಹಾಗೂ ಶ್ರೀ ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ಇವರಿಗೆ ಋಣಿಯಾಗಿ ರುವೆ.

4 ಪಾರ್ವತೀಸ್ತುತಿ-ಕರ್ತೃತ್ವ ವಿಚಾರ

ಶ್ರೀ ಆರ್. ನರಸಿಂಹಾಚಾರ್ಯರ "ಕರ್ಣಾಟಕ ಕವಿಚರಿತೆ" ಯ ತೃತೀಯ ಸಂಪುಟ (1929) ಪುಟ 295ರಲ್ಲಿ 'ಪಾರ್ವತೀ ಸ್ತುತಿ (ವಾರ್ಧಕ ಷಟ್ಪದಿ) ಸು. 1650' ಎಂದು ಹೇಳಿ 'ಪರಮೇಶ್ವರಿಯ ಪುಣ್ಯನಾಮವನು......' ಎಂಬ ವಾರ್ಧಕ ಷಟ್ಪದಿಯ ಪದ್ಯಾರ್ಧವನ್ನು ಉದ್ಧರಿಸಿದ್ದಾರೆ. ಅಲ್ಲಿ ಕೃತಿಯ ಕರ್ತೃವಿನ ಬಗೆಗೆ ಏನನ್ನೂ ತಿಳಿಸಿಲ್ಲ.

ಮೇಲಿನ ಉಲ್ಲೇಖಿತಭಾಗ ನಿಜಗುಣ ಶಿವಯೋಗಿ (ಸು. 1500) ಗಳ "ಕೈವಲ್ಯ ಪದ್ಧತಿ"[1] ಯ ಶಿವಕಾರುಣ್ಯ ಸ್ಥಳದ 6ನೆಯ ಹಾಡಿನ ಪಲ್ಲವಿಯಾಗಿದೆ. ಆ ಕಾರಣವಾಗಿ ಮೇಲ್ಕಂಡ 'ಪಾರ್ವತೀ ಸ್ತುತಿ' ಪ್ರತ್ಯೇಕ ಕೃತಿಯಾಗಿರದೆ "ಕೈವಲ್ಯ ಪದ್ಧತಿ"ಗೆ ಸಂಬಂಧಿಸಿದ ಅಂಶತಃ ಭಾಗವಾಗಿದ್ದು ಅದರ ಕರ್ತೃತ್ವ ನಿಜಗುಣ ಶಿವ ಯೋಗಿಗಳಿಗೆ ಸಲ್ಲುತ್ತದೆ.

ಎಸ್. ಶಿವಣ್ಣ

---

1 ಶ್ರೀ ನಿಜಗುಣ ಶಿವಯೋಗೀಂದ್ರ ವಿರಚಿತ ಕೈವಲ್ಯ ಪದ್ಧತಿ. ಸಂಪಾದಕರು : ಮಲ್ಲಾಪುರ ವೀರಭದ್ರಪ್ಪ, ಪುಟ. 9 (1967)

ಸಂಪಾದಕೀಯ

ಇದು ಸಾಧನೆಯ ಎರಡನೆಯ ಸಂಪುಟ. ಕೇವಲ ಒಂದು ವರ್ಷದ ಅವಧಿಯಲ್ಲಿ ಈ ಪತ್ರಿಕೆ ಕನ್ನಡನಾಡಿನ ವಿಚಾರವಂತರ ಗಮನವನ್ನು ಸೆಳೆದಿದೆ ; ಮೆಚ್ಚುಗೆಯನ್ನು ಗಳಿಸಿಕೊಂಡಿದೆ. ಇದಕ್ಕೆ ಮುಖ್ಯ ಕಾರಣರಾದವರು, ನಮ್ಮ ಕರೆಗೆ ಓಗೊಟ್ಟು ಸಹಕರಿಸಿದ ಲೇಖಕರು ಮತ್ತು ಚಂದಾದಾರರು.

ಕಳೆದ ವರ್ಷ ಈ ಒಂದು ಪತ್ರಿಕೆಯನ್ನು ಪ್ರಾರಂಭಿಸುವ ಪ್ರಯತ್ನಗಳ ಹಿಂದೆ ಪ್ರೇರಣೆ ಹಾಗೂ ಪ್ರೋತ್ಸಾಹಗಳ ಬೆಂಬಲವಾಗಿದ್ದ ಮಾನ್ಯ ಉಪಕುಲಪತಿ ಶ್ರೀ ಟಿ. ಕೆ. ತುಕೋಳ್ ಅವರನ್ನು, ಅವರು ಅಧಿಕಾರದಿಂದ ವಿಶ್ರಾಂತರಾದ ಈ ಹೊತ್ತಿನಲ್ಲಿ ಕೃತಜ್ಞತೆಯಿಂದ ನೆನೆಯುತ್ತೇವೆ.

ಇದೀಗ ಬೆಂಗಳೂರು ವಿಶ್ವವಿದ್ಯಾಲಯದ ನೂತನ ಉಪಕುಲಪತಿಗಳಾಗಿ ಬಂದಿರುವ ಡಾ. ಎಚ್. ನರಸಿಂಹಯ್ಯನವರನ್ನು "ಸಾಧನೆ" ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ಇದುವರೆಗೂ "ಸಾಧನೆ"ಯ ಸಲಹಾ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿದ್ದ ಡಾ. ನರಸಿಂಹಯ್ಯನವರು, ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರುವ ಈ ಕಾಲದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕೈಕೊಳ್ಳುವ ಕನ್ನಡದ ಎಲ್ಲ ಕಾರ್ಯಗಳ ಹಿಂದೆ ಉಸಿರಾಗಿ, ಸ್ಫೂರ್ತಿಯಾಗಿ ಮಾರ್ಗದರ್ಶನ ನೀಡುವರೆಂಬ ಭರವಸೆ ಇದೆ.

ಕನ್ನಡದ ವಿದ್ವಾಂಸರಲ್ಲಿ ಒಬ್ಬರಾದ ಪ್ರೊ. ಎಸ್. ಎಸ್. ಭೂಸನೂರಮಠ ಅವರಿಗೆ, ಅವರ 'ಶೂನ್ಯ ಸಂಪಾದನೆಯ ಪರಾಮರ್ಶೆ' ಎಂಬ ತಾತ್ವಿಕ ಮಹತ್ವಪೂರ್ಣ ಸೃಜನಾತ್ಮಕ ವ್ಯಾಖ್ಯಾನ ಗ್ರಂಥಕ್ಕೆ, ಭಾರತ ಸರ್ಕಾರದ ಕೇಂದ್ರ ಅಕ್ಯಾಡೆಮಿಯ ಪ್ರಶಸ್ತಿ ದೊರೆತಿರುವುದು ಸಂತೋಷದ ಸಂಗತಿ. ಈ ಗೌರವವನ್ನು ಗಳಿಸಿಕೊಂಡ ಪ್ರೊ. ಭೂಸನೂರರಮಠ ಅವರನ್ನು "ಸಾಧನೆ" ಕನ್ನಡಿಗರ ಪರವಾಗಿ ಅಭಿನಂದಿಸುತ್ತದೆ.

**

ಈ ಸಂಚಿಕೆಯ ಲೇಖಕರು

ಕೆ. ಎಸ್. ನರಸಿಂಹಸ್ವಾಮಿ	397, ಒಂದನೆ ಬ್ಲಾಕ್ ಜಯನಗರ ಬೆಂಗಳೂರು–11.
ಜಿ. ಎಸ್. ಶಿವರುದ್ರಪ್ಪ	ಪ್ರಾಧ್ಯಾಪಕ ಮತ್ತು ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–9.
ಕೆ. ಎಸ್. ಲಕ್ಷ್ಮಣರಾವ್	ರೀಡರ್, ರಸಾಯನ ಶಾಸ್ತ್ರ ವಿಭಾಗ ಸರ್ಕಾರಿ ಕಾಲೇಜು, ಕೋಲಾರ,
ಎಂ. ಎ. ವ್ಯಾಸರಾವ್	ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಕೆಂಪೇಗೌಡ ರಸ್ತೆ, ಬೆಂಗಳೂರು–9
ಎನ್. ವಿ. ವಿಮಲ	ಸಂಶೋಧನ ಸಹಾಯಕಿ. ಕನ್ನಡ ಅಧ್ಯಯನಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-9
ಕೆ. ವಿರೂಪಾಕ್ಷಗೌಡ	ಹಗರಿ ಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲಾ.
ಎಂ. ಬಸವಣ್ಣ	ಮನಶ್ಶಾಸ್ತ್ರ ವಿಭಾಗ, ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ತಿರುಪತಿ.
ಎಸ್. ನಾಗರಾಜು	ಇಂಡಾಲಜಿ ವಿಭಾಗ ಮಾನಸಗಂಗೋತ್ರಿ, ಮೈಸೂರು–6
ಕೃಷ್ಣಪರಮೇಶ್ವರಭಟ್ಟ	ಸಹಾಯಕ ಸಂಶೋಧಕ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು–9
ವಿ. ಎಸ್. ಯಲವಿಗಿ	ಸಸ್ಯಶಾಸ್ತ್ರ ವಿಭಾಗ ಸೆಂಟ್ರಲ್ ಕಾಲೇಜ್ ಬೆಂಗಳೂರು

ವೇಣುಗೋಪಾಲ ಸೊರಬ	ಇಂಗ್ಲಿಷ್ ಅಧ್ಯಾಪಕರು ರೂರಲ್ ಕಾಲೇಜು ಕನಕಪುರ.
ಬಿ. ಎಸ್. ಚಂದ್ರಶೇಖರ	ಆಕಾಶವಾಣಿ ಬೆಂಗಳೂರು
ಎಂ. ಎಲ್. ಲಲಿತಮ್ಮ	ಅಧ್ಯಾಪಕಿ. ಕನ್ನಡ ವಿಭಾಗ, ವಿ. ಎಚ್. ಡಿ. ಇನ್‌ಸ್ಟಿಟ್ಯೂಟ್ ಆಫ್ ಹೋಮ್‌ಸೈನ್ಸ್ ಬೆಂಗಳೂರು–1
ಎನ್. ಪ್ರಭುಸ್ವಾಮಿ	ಅರ್ಥಶಾಸ್ತ್ರ ವಿಭಾಗ ಮಹಾರಾಜಾ ಕಾಲೆಜು ಮೈಸೂರು–5
ಎಲ್. ಆರ್. ಹೆಗಡೆ	ಕನ್ನಡ ವಿಭಾಗ, ಕೆನರಾ ಕಾಲೆಜ್ ಕುಮಟ ಉತ್ತರ ಕನ್ನಡ ಜಿಲ್ಲೆ.
ಎಂ. ನಾಗರಾಜ್	ಗಣಿತ ವಿಭಾಗ, ಸೆಂಟ್ರಲ್ ಕಾಲೇಜು ಬೆಂಗಳೂರು.
ಸದ್ಯೋಜಾತ ಸ್ವಾಮಿಜಿ	ಸಹಾಯಕ ಸಂಶೋಧಕ ಇತಿಹಾಸ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–3
ಕೆ. ನಾಗರಾಜನ್	ಅಧ್ಯಾಪಕರು, ಭೌತಶಾಸ್ತ್ರ ವಿಭಾಗ, ಸೇಂಟ್ ಜೋಸೆಫ್ಸ್ ಕಾಲೆಜ್ ಬೆಂಗಳೂರು–1
ಜಿ. ಎಸ್. ಗಾಯಿ	ಪ್ರಧಾನ ಶಾಸನಜ್ಞರು ಭಾರತ ಸರ್ಕಾರದ ಶಾಸನ ಕಛೇರಿ ಮೈಸೂರು–5
ಮಾಧವ ಕಟ್ಟಿ	ಶಾಸನಜ್ಞರು, ಭಾರತ ಸರ್ಕಾರದ ಶಾಸನ ಕಛೇರಿ ಮೈಸೂರು–5
'ಜಯಸುದರ್ಶನ'	ಜಿ. ಎಸ್. ಶಿವಪ್ರಕಾಶ್ 745, 37 A ಕ್ರಾಸ್, ನಾಲ್ಕನೆ ಬ್ಲಾಕ್ ಟಿ. ಜಯನಗರ ಬೆಂಗಳೂರು–11
ಕೆ. ವೆಂಕಟರಾಯಾಚಾರ್ಯ	ಸುರತ್ಕಲ್ ದ. ಕ.

ಆರ್. ರಾಚಪ್ಪ — ಕನ್ನಡ ವಿಭಾಗ ರೇಣುಕಾಚಾರ್ಯ ಕಾಲೇಜ್ ಬೆಂಗಳೂರು–9

ಸೀತಾರಾಮ ಜಾಗೀರ್‌ದಾರ್ — ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು–6

ಎಸ್. ಶಿವಣ್ಣ — ಸಹಾಯಕ ಸಂಶೋಧಕ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು–9

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಕೋ - ಆರ್ಡಿನೇಟರ್
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560001

ಈಸ್ಟರ್ನ್ ಪ್ರೆಸ್, ಬೆಂಗಳೂರು - 560